ಹುಬ್ಬಳ್ಳಿ
ಶುಕ್ರವಾರ, 27 ಫೆಬ್ರವರಿ 2026
ಸಂಪುಟ 15, ಸಂಚಿಕೆ 340, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹಿಂದು ಧರ್ಮಕ್ಕೆ ಮತಾಂತರವಲ್ಲ, ಘರ್‌ವಾಪ್ಸಿ!
• ಪುಟ 9

ಹುಬ್ಬಳ್ಳಿ
ಶುಕ್ರವಾರ, 27 ಫೆಬ್ರವರಿ 2026
ಸಂಪುಟ 15, ಸಂಚಿಕೆ 340, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಇಂದು ಭಾರತದ ವಾಯು ಶಕ್ತಿ ದರ್ಶನ | ೦೭
ಕಂಟೆಂಟ್ ಕ್ರಿಯೇಟರ್‌ಗಳಿಗೆ ಹಣ ಸಿಗಲಿ | ೦೭
ಭಾರತದ ಸೆಮಿಫೈನಲ್ ಹಾದಿ ಸುಗಮ | ೧೩

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಆರ್ದ್ರೆ

ದಿನದ ಮಾತು

ನಡೆಯೊಳಗೆ ನುಡಿ ತುಂಬಿ, ನುಡಿಯೊಳಗೆ ನಡೆ ತುಂಬಿ, ನಡೆನುಡಿ ಎರಡನು ಪರಿಪೂರ್ಣ ತುಂಬಿ.
▲ ಷಣ್ಮುಖ ಸ್ವಾಮಿ

ರಾಷ್ಟ್ರೋತ್ಥಾನ ಪರಿಷತ್ ಸಮಾಜ ಸೇವೆಗೆ 60ರ ಸಂಭ್ರಮ

ಲೇಖನ
◆ ರಾಜೇಶ್ ಪದ್ಮಾರ್
◆ ಪುಟ ೬

ಹಿಂದು ಧರ್ಮಕ್ಕೆ ಮತಾಂತರವಲ್ಲ, ಘರ್‌ವಾಪ್ಸಿ!

◆ **ತಿರುವನಂತಪುರ:** ಕೇರಳದಲ್ಲಿನ ಲವ್ ಜಿಹಾದ್ ಆರೋಪಗಳು ಮತ್ತು ದಿ ಕೇರಳ ಸ್ಟೋರಿ 2 ಚಿತ್ರ ಬಿಡುಗಡೆಯಾಗುವ ಹೊತ್ತಲ್ಲೇ, ಮತಾಂತರ ಕುರಿತಂತೆ ಹೊಸ ವಾದಗಳು ಸೃಷ್ಟಿಯಾಗಿದ್ದು, ಲವ್ ಜಿಹಾದ್ ಕುರಿತ ಆರೋಪಗಳೇ ತಪ್ಪು, ಹಿಂದುಗಳಾಗಿ ಮತಾಂತರವಾದವರೆ ಹೆಚ್ಚು ಎಂಬ ನರೇಟಿವ್ ಸೃಷ್ಟಿಸುವ ಪ್ರಯತ್ನ ಆರಂಭವಾಗಿದೆ.

ಕೇರಳ ಮೂಲದ ಆಂಗ್ಲ ವೆಬ್‌ಸೈಟ್‌ವೊಂದು, ಕೇರಳ ಗೆಜೆಟ್ ದಾಖಲೆಗಳನ್ನು ಮುಂದಿಟ್ಟುಕೊಂಡು, ಮತಾಂತರದ ಹೊಸ ವಾದ ಶುರು ಮಾಡಿದೆ. 10 ಸಾವಿರ ಪುಟಕ್ಕೂ ಹೆಚ್ಚು ಅಂಶಗಳಿರುವ ಗೆಜೆಟ್ ದಾಖಲೆ ಪರಿಶೀಲಿಸಿದರೆ, ಕ್ರೈಸ್ತ ಮತ್ತು ಮುಸ್ಲಿಮ್‌ಗಿಂತ ಹಿಂದು ಧರ್ಮಕ್ಕೇ ಹೆಚ್ಚು ಮಂದಿ ಮತಾಂತರಗೊಂಡಿದ್ದಾರೆ ಎಂದು ಇದು ವಾದ ಇರಿಸಿದೆ. ಅಂದರೆ, ದಲಿತ ಕ್ರೈಸ್ತರು ಮತ್ತು ದಲಿತ ಮುಸ್ಲಿಮರು, ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಯೋಜನ ಪಡೆಯುವ ಸಲುವಾಗಿ ಹಿಂದು ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಎಂಬುದು ಈ ವೆಬ್‌ಸೈಟ್‌ನವರ ವಾದ.

ಆದರೆ, ಇದು ಮತಾಂತರವೋ ಅಥವಾ ಘರ್‌ವಾಪ್ಸಿಯೋ ಎಂಬುದನ್ನು ಸಾಬೀತು ಮಾಡುವಲ್ಲಿ ಈ ವೆಬ್‌ಸೈಟ್ ವಿಫಲವಾಗಿದೆ. ಇದರ ಮೂಲಗಳನ್ನು ಕೆದಕಿದರೆ, ಇವರೆಲ್ಲರೂ ಈ ಹಿಂದೆ ಹಿಂದು ಧರ್ಮದಲ್ಲೇ ಇದ್ದು, ಉತ್ತಮ ಮತ್ತು ಜಾತಿರಹಿತ ಜೀವನಕ್ಕಾಗಿ ಕ್ರೈಸ್ತ ಮತ್ತು ಮುಸ್ಲಿಂ ಮತಕ್ಕೆ ಮತಾಂತರಗೊಂಡಿದ್ದವರು. ಆದರೆ, ಇಂದಿಗೂ ಅಂಥ ಯಾವುದೇ ಜಾತಿರಹಿತ ಸಮಾಜ ನಿರ್ಮಾಣವಾಗುವಲ್ಲಿ ವಿಫಲ ಮತ್ತು ಎಸ್‌ಸಿ ಮೀಸಲಾತಿಯನ್ನು ಪಡೆಯುವ ಉದ್ದೇಶದಿಂದ ಹಿಂದು ಧರ್ಮಕ್ಕೆ ಮರಳಿದ್ದಾರೆ. ➡ಪುಟ ೮



- ಕೇರಳ ಸ್ಟೋರಿ 2 ಸಂದರ್ಭದಲ್ಲೇ ಹೊಸ ಚರ್ಚೆ ಆರಂಭ
- ಕ್ರೈಸ್ತ, ಮುಸ್ಲಿಂಗಿಂತ ಹಿಂದು ಧರ್ಮಕ್ಕೇ ಹೆಚ್ಚು ಮತಾಂತರ
- ಕೇರಳ ಗೆಜೆಟ್ ದಾಖಲೆ ಮುಂದಿಟ್ಟು ಹೊಸ ವಾದ ಮಂಡನೆ
- ದಲಿತ ಕ್ರೈಸ್ತ, ದಲಿತ ಮುಸ್ಲಿಂರಿಂದ ಹಿಂದು ಧರ್ಮಕ್ಕೆ ಮತಾಂತರ ವಾದ
- ಇದು ಮತಾಂತರಕ್ಕಿಂತ ವಿಭಿನ್ನ, ಸ್ವಧರ್ಮಕ್ಕೆ ವಾಪಸ್

ದಿ ಕೇರಳ ಸ್ಟೋರಿ 2 ಬಿಡುಗಡೆಗೆ ಹೈ ತಡೆ

◆ **ತಿರುವನಂತಪುರಂ:** ದಿ ಕೇರಳ ಸ್ಟೋರಿ 2: ಗೋಸ್ ಬಿಯಾಂಡ್ ಚಿತ್ರದ ಬಿಡುಗಡೆಗೆ ಕೇರಳ ಹೈಕೋರ್ಟ್ ಗುರುವಾರ ಮಧ್ಯಂತರ ತಡೆ ನೀಡಿದೆ. ಶನಿವಾರ ಈ ಸಿನಿಮಾ ಬಿಡುಗಡೆಯಾಗಬೇಕಿತ್ತು. ಚಲನಚಿತ್ರಕ್ಕೆ ಪ್ರಮಾಣೀಕರಣವನ್ನು ನೀಡುವಾಗ ಸೆನ್ಸಾರ್ ಮಂಡಳಿಯು ಸರಿಯಾಗಿ ಯೋಚಿಸಿಲ್ಲ ಎಂದು ಮೇಲ್ನೋಟಕ್ಕೆ ತೋರುತ್ತದೆ ಎಂದು ನ್ಯಾಯಾಲಯವು ಗಮನಿಸಿದೆ. ➡ಪುಟ ೮



ಖಾಲಿ ಇರುವ ನೇರ ನೇಮಕ ಹುದ್ದೆಗಳ ಭರ್ತಿಗೆ ತಿಂಗಳಲ್ಲಿ ಪ್ರಕ್ರಿಯೆ

ನಿರುದ್ಯೋಗಿಗಳಿಗೆ ಸಿಹಿ

◆ **ಬೆಂಗಳೂರು:** ರಾಜ್ಯದಲ್ಲಿ ಒಟ್ಟು ಖಾಲಿ ಇರುವ ನೇರ ನೇಮಕಾತಿ ಹುದ್ದೆಗಳಲ್ಲಿ 56,432 ಹುದ್ದೆಗಳನ್ನು ಶೇ.50 ಮೀಸಲಾತಿ ಆಧಾರದಲ್ಲಿ ಮುಂದಿನ 30 ದಿನಗಳಲ್ಲಿ ಭರ್ತಿ ಮಾಡುವ ಪ್ರಕ್ರಿಯೆ ಪ್ರಾರಂಭಿಸಲು ಸಚಿವ ಸಂಪುಟ ಮಹತ್ವದ ನಿರ್ಣಯ ಕೈಗೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಪರಿಶಿಷ್ಟ ಜಾತಿ ಪಂಗಡದ ಮೀಸಲು ಪ್ರಮಾಣವನ್ನು ಶೇ.50ರಿಂದ ಶೇ.56ಕ್ಕೆ ಹೆಚ್ಚಿಸಿರುವುದನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದರ ಹಿನ್ನೆಲೆಯಲ್ಲಿ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ಮಾಡಲಾಯಿತು. ಹಲವು ಪ್ರಕರಣಗಳಲ್ಲಿ ಮೀಸಲು ಪ್ರಮಾಣ ಹೆಚ್ಚಿಸಿರುವುದಕ್ಕೆ ಕಳೆದ ನವೆಂಬರ್ 19ರಂದು ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ನ್ಯಾಯಾಲಯವು 2022ರ ಕಾಯ್ದೆಗೆ ತಡೆ ನೀಡಿದ್ದರಿಂದ 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮಗಳಿಗೆ ವಿವರಿಸಿದರು.

ಎಸ್ಸಿ-ಎಸ್ಟಿಗೆ ಶೇ.6 ಕಾಯ್ದಿರಿಸಲು ನಿರ್ಧಾರ: ನೇಮಕಾತಿ ಪ್ರಕ್ರಿಯೆಯನ್ನು ತುರ್ತಾಗಿ ಮುಂದುವರಿಸಬೇಕಾಗಿರುವುದರಿಂದ 2022ರ ಡಿಸೆಂಬರ್ 28ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ ಹೊಸ ನೇಮಕ ಅಧಿಸೂಚನೆ ಹೊರಡಿಸಲಾಗುತ್ತದೆ. ➡ಪುಟ ೮



- ನೇಮಕಾತಿ ನಡೆಯುವ ಹುದ್ದೆಗಳು 56,432
- ಆರ್ಥಿಕ ಇಲಾಖೆ ಅನುಮತಿಸಬೇಕಾದ ಹುದ್ದೆಗಳು 24,300
- 371 (ಜೆ) ವಿಧಿಯ ಪ್ರಕಾರ ಅನುಮತಿಸಬೇಕಾದ ಹುದ್ದೆಗಳು 32,132

ಒಳಮೀಸಲಾತಿ ಜಾರಿ: ರಾಜ್ಯಪಾಲರ ಅಂಕಿತ

◆ **ಬೆಂಗಳೂರು:** ಒಳಮೀಸಲಾತಿ (ಪರಿಶಿಷ್ಟ ಜಾತಿಗಳ (ಉಪ ವರ್ಗೀಕರಣ) ವಿಧೇಯಕ 2025ಕ್ಕೆ ಸ್ಪಷ್ಟೀಕರಣ ಕೇಳಿ ಎರಡು ಬಾರಿ ವಾಪಸ್ ಕಳಿಸಿದ್ದ ರಾಜ್ಯಪಾಲರು ಕೊನೆಗೂ ಸಹಿ ಹಾಕಿದ್ದು, ಬಹುದಿನಗಳಿಂದ ಕಾಯ್ದಿರಿಸಿದ್ದ ವಿಧೇಯಕಕ್ಕೆ ಅಂಗೀಕಾರ ದೊರೆತಿದೆ. ಸುಪ್ರೀಂಕೋರ್ಟ್ ಆದೇಶದಂತೆ ಒಳಮೀಸಲಾತಿ ಕಲ್ಪಿಸಲು ಬೆಳಗಾವಿ ಅಧಿವೇಶನದಲ್ಲಿ ಅಂಗೀಕಾರವಾಗಿದ್ದ ಮಸೂದೆಯನ್ನು ರಾಜ್ಯಪಾಲರ ಸಹಿಗಾಗಿ ಕಳುಹಿಸಿತ್ತು. ಸರ್ಕಾರದ ಈ ಮಸೂದೆಗೆ ಸಹಿ ಹಾಕದೇ ತಡೆಹಿಡಿದಿದ್ದರಿಂದ ಸರ್ಕಾರ, ರಾಜ್ಯಪಾಲರ ನಡುವೆ ತಿಕ್ಕಾಟಕ್ಕೆ ಕಾರಣವಾಗಿತ್ತು. ➡ಪುಟ ೮

> ಎಸ್‌ಸಿ ಮೀಸಲಾತಿಯನ್ನು ಶೇ. 15ರಿಂದ ಶೇ.17ಕ್ಕೆ ಮತ್ತು ಎಸ್‌ಟಿ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಜಾಸ್ತಿ ಮಾಡುವುದನ್ನು ಗಮನದಲ್ಲಿಟ್ಟುಕೊಂಡು, ಹೊಸ ನೇಮಕಾತಿ ಮಾಡಲಾಗುತ್ತದೆ. ಒಳಮೀಸಲಾತಿಯನ್ನು ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಲಾಗುತ್ತದೆ.
> ■ **ಎಚ್.ಕೆ. ಪಾಟೀಲ್**, ಕಾನೂನು ಸಚಿವ

ಪ್ರಧಾನಿ ಮೋದಿ ಇಸ್ರೇಲ್ ಪ್ರವಾಸ ಫಲಪ್ರದ

ರಕ್ಷಣಾ ಸಹಕಾರ ಸೇರಿ 17 ಒಪ್ಪಂದಗಳಿಗೆ ಸಹಿ

ಕ್ಷಿಪಣಿ, ಡ್ರೋನ್, ಅತ್ಯಾಧುನಿಕ ರಕ್ಷಣಾ ಉತ್ಪಾದನೆಗೆ ಬೆಂಬಲ

◆ **ಜೆರುಸಲೆಮ್:** ಪ್ರಧಾನಿ ನರೇಂದ್ರ ಮೋದಿ ಮತ್ತು ಇಸ್ರೇಲ್ ನಾಯಕರು ಗುರುವಾರ ರಕ್ಷಣಾ ಸಹಯೋಗ ಸೇರಿದಂತೆ 17 ಒಪ್ಪಂದ ಮತ್ತು ಒಡಂಬಡಿಕೆ ಪತ್ರಗಳಿಗೆ(ಎಂಒಯು) ಸಹಿ ಹಾಕಿದರು. ಪ್ರಧಾನಿ ಮೋದಿಯವರ ಎರಡು ದಿನಗಳ ಇಸ್ರೇಲ್ ಪ್ರವಾಸ ಐತಿಹಾಸಿಕ ಕ್ಷಣಗಳಿಂದ ಕೂಡಿದ್ದು, ಹಲವು ಒಪ್ಪಂದಗಳಿಗೆ ಸಹಿ ಮಾಡುವ ಮೂಲಕ ಫಲಪ್ರದವಾಗಿದೆ.

ಪ್ರಧಾನಿ ಮೋದಿ ಮತ್ತು ಇಸ್ರೇಲಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಉಪಸ್ಥಿತಿಯಲ್ಲಿ ರಕ್ಷಣಾ ಸಹಯೋಗ, ಕೃತಕ ಬುದ್ಧಿಮತ್ತೆ(ಎಐ), ಕೃಷಿ, ಸೈಬರ್ ಸುರಕ್ಷತೆ, ಫಿನ್‌ಟೆಕ್, ಕಾರ್ಮಿಕ, ಶಿಕ್ಷಣ, ಮೀನುಗಾರಿಕೆ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪರಸ್ಪರ ವಿವಿಧ ಲಾಭದಾಯಕ ಒಪ್ಪಂದಗಳಿಗೆ ಉಭಯ ದೇಶಗಳೂ ಸಹಿ ಹಾಕಿದವು. ಯುಪಿಐ, ಕೃಷಿ ಸಂಶೋಧನೆ, ಇಸ್ರೇಲ್ ವಾಣಿಜ್ಯ, ಸೇವಾ, ಉತ್ಪಾದನಾ , ಹೋಟೆಲ್ ಉದ್ಯಮ ವಲಯದಲ್ಲಿ ಭಾರತೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಹಲವು ಒಪ್ಪಂದಗಳು ಉಭಯ ರಾಷ್ಟ್ರಗಳು ಸಹಿ ಹಾಕಿವೆ. ➡ಪುಟ ೮



ಭಯೋತ್ಪಾದನೆಗೆ ಜಗತ್ತಲ್ಲಿಲ್ಲ ಜಾಗ

ಭಯೋತ್ಪಾದನೆಗೆ ಜಗತ್ತಲ್ಲಿ ಜಾಗ ಇಲ್ಲ ಎಂಬುದು ಭಾರತ-ಇಸ್ರೇಲ್‌ಗಳ ಸಮಾನ ನಿಲುವು. ಭಯೋತ್ಪಾದನೆ ಮತ್ತು ಇದರ ಬೆಂಬಲಿಗರನ್ನು ಮಟ್ಟ ಹಾಕುವಲ್ಲಿ ಉಭಯ ರಾಷ್ಟ್ರಗಳು ಹೆಗಲಿಗೆ ಹೆಗಲು ನೀಡಿ ಹೋರಾಡಲಿವೆ. ಭಯೋತ್ಪಾದನೆಯನ್ನು ಯಾವುದೇ ಸ್ವರೂಪ, ಯಾವುದೇ ಅಭಿವ್ಯಕ್ತಿಯಲ್ಲೂ ಒಪ್ಪಿಕೊಳ್ಳೋ ಪ್ರಶ್ನೆಯೇ ಇಲ್ಲವೆಂದು ಪ್ರಧಾನಿ ಮೋದಿ ಸಾರಿದ್ದಾರೆ.

ಕಿರುಸುದ್ದಿ

ಪಾಕ್ ಮೇಲೆ ಆಫ್ಘನ್ ಭಾರೀ ಗುಂಡಿನ ದಾಳಿ

◆ **ಕಾಬೂಲ್/ಇಸ್ಲಾಮಾಬಾದ್:** ಇತ್ತೀಚೆಗಷ್ಟೇ ಪಾಕಿಸ್ತಾನ ನಡೆಸಿದ ವಾಯುದಾಳಿಗಳಿಗೆ ಪ್ರತಿಯಾಗಿ ಅಫ್ಘಾನ್ ತಾಲಿಬಾನ್ ಪಡೆಗಳು ಗಡಿಭಾಗದಲ್ಲಿ ತೀವ್ರ ಪ್ರತಿದಾಳಿ ಆರಂಭಿಸಿರುವುದರಿಂದ ಖೈಬರ್ ಪಖ್ತುಂಖ್ವಾದಲ್ಲಿನ ಡ್ಯುರಂಡ್ ಗಡಿ ಪ್ರದೇಶ ಮತ್ತೊಮ್ಮೆ ಉದ್ವಿಗ್ನಗೊಂಡಿದೆ. ವಿವಾದಿತ ಡ್ಯುರಂಡ್ ರೇಖೆಯುದ್ದಕ್ಕೂ ಎರಡೂ ಪಾಳಯಗಳ ನಡುವೆ ಭಾರೀ ಗುಂಡಿನ ಚಕಮಕಿ ನಡೆಯುತ್ತಿದೆ. ಅಫ್ಘಾನ್ ತಾಲಿಬಾನ್ ವಕ್ತಾರ ಜಬೀಉಲ್ಲಾ ಮುಜಾಹಿದ್ ಈ ಬಗ್ಗೆ ಮಾಹಿತಿ ನೀಡಿದ್ದು, ಪಾಕಿಸ್ತಾನ ಸೇನೆಯ ದಾಳಿಗಳಿಗೆ ಪ್ರತಿಯಾಗಿ ಸೇನಾ ನೆಲೆಗಳು ಹಾಗೂ ತಪಾಸಣಾ ಚೌಕಿಗಳ ವಿರುದ್ಧ ವ್ಯಾಪಕ ದಾಳಿ ಆರಂಭಿಸಲಾಗಿದೆ ಎಂದು ತಿಳಿಸಿದ್ದಾರೆ. ಜಖಾ ಖೇಲ್ ಮಾರುಕಟ್ಟೆ ಸಮೀಪದ ಮಾರುಸರ ಹಾಗೂ ಶಾಹ್‌ಕೋಟ್ ಸರ ಪ್ರದೇಶಗಳಲ್ಲಿ ಅಫ್ಘಾನ್ ತಾಲಿಬಾನ್ ಪಡೆಗಳು ವಾಯುಸೇನೆ ಮತ್ತು ಸೇನಾಪಡೆಗಳ ಸಹಾಯದಿಂದ ಸಮನ್ವಿತ ದಾಳಿ ನಡೆಸಿವೆ. ಈ ದಾಳಿಯಲ್ಲಿ ಪಾಕಿಸ್ತಾನಕ್ಕೆ ಭಾರೀ ಹಾನಿಯಾಗಿದ್ದು, ಕನಿಷ್ಠ ಒಂಬತ್ತು ಪಾಕಿಸ್ತಾನಿ ಸೈನಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ ಎನ್ನಲಾಗಿದೆ. ➡ಪುಟ ೮

ಡಿಸೆಂಬರ್‌ಗೆ ದಾವಣಗೆರೆ-ಚಿತ್ರದುರ್ಗ ರೈಲು ಮಾರ್ಗ

◆ **ಚಿತ್ರದುರ್ಗ:** ದಾವಣಗೆರೆ-ಚಿತ್ರದುರ್ಗ ನಡುವಿನ ನೇರ ರೈಲ್ವೆ ಮಾರ್ಗ ಕಾಮಗಾರಿ 2027ರ ಜೂನ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಇದರ ಜತೆಗೆ 2027ರ ಡಿಸೆಂಬರ್ ಅಂತ್ಯದ ವೇಳೆಗೆ ದಾವಣಗೆರೆ - ಚಿತ್ರದುರ್ಗ - ತುಮಕೂರು, ರಾಯದುರ್ಗ - ತುಮಕೂರು, ಗದಗ-ವಾಡಿ ಸೇರಿದಂತೆ ಹಲವು ರೈಲ್ವೆ ಮಾರ್ಗಗಳನ್ನು ಪೂರ್ಣಗೊಳಿಸಿ ಜನರ ಸೇವೆಗೆ ಅನುವು ಮಾಡಿಕೊಡಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ವಿಮಾನ ಟಿಕೆಟ್ ಮರುಪಾವತಿ ನಿಯಮ ಪರಿಷ್ಕರಣೆ

◆ ಪುಟ ೦೭



ಭಾರತ-ಕೆನಡಾ ಸಂಬಂಧಕ್ಕೆ ಗ್ರೀನ್‌ಸಿಗ್ನಲ್

◆ ಪುಟ ೦೭
ಸುದ್ದಿ ಸಮಗ್ರ

ಬೆಂಗಳೂರು ವಿ.ವಿ.ಯಲ್ಲಿ ಆಡಳಿತದ ನಿರ್ಲಕ್ಷ್ಯ

ಒಂದೂವರೆ ವರ್ಷವಾದರೂ ವಿದ್ಯಾರ್ಥಿಗಳಿಗಿಲ್ಲ ಅಂಕಪಟ್ಟಿ

▶ ಚಂದನ್ ಲಕ್ಕೂರು

◆ **ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 2024ರಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಪೂರೈಸಿ ಹೊರಬಂದ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಈಗ ಅತಂತ್ರವಾಗಿದೆ. ಕೋರ್ಸ್ ಮುಗಿದು ಒಂದೂವರೆ ವರ್ಷ ಕಳೆದರೂ ಅಸಲಿ ಅಂಕಪಟ್ಟಿ ನೀಡದ ವಿವಿ ಧೋರಣೆ ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದೆ.

ದಿಗಂತ ವಿಶೇಷ


ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿನ ಎಡವಟ್ಟುಗಳು ಈಗ ವಿದ್ಯಾರ್ಥಿಗಳ ವೃತ್ತಿಜೀವನಕ್ಕೆ ಅಡ್ಡಗಾಲಾಗಿವೆ. ಕಳೆದ 2 ವರ್ಷಗಳಿಂದ ಸ್ನಾತಕೋತ್ತರ ಪದವಿ ಮುಗಿಸಿ ಹೊರಬಂದ ವಿದ್ಯಾರ್ಥಿಗಳಿಗೆ ಇನ್ನೂ ಅಸಲಿ ಅಂಕಪಟ್ಟಿ ಕೈಸೇರಿಲ್ಲ. ಸಾವಿರಾರು ವಿದ್ಯಾರ್ಥಿಗಳು ಅಂಕಪಟ್ಟಿ ಇಲ್ಲದೆ, ಕತ್ತಲಲ್ಲಿ ತಡಕಾಡುತ್ತಿದ್ದಾರೆ. ಡಿಜಿಟಲ್ ಇಂಡಿಯಾ ಕಾಲದಲ್ಲೂ ಕಾಗದದ ಅಂಕಪಟ್ಟಿ ಹೊರತುಪಡಿಸಿಯೂ, ಡಿಜಿ ಲಾಕರ್‌ನಲ್ಲೂ ಅಂಕಪಟ್ಟಿ ಲಭ್ಯವಿಲ್ಲದಿರುವುದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಮುಳುವಾಗಿದೆ. ಸ್ನಾತಕೋತ್ತರ ಪದವಿ ಅಂತಿಮ ವರ್ಷದಲ್ಲಿ ಪರೀಕ್ಷೆ ಹಣದ ಜತೆಗೆ ಅಂಕಪಟ್ಟಿ ನೀಡುತ್ತೇವೆಂದು ಹೆಚ್ಚಿನ ಹಣ ಕಟ್ಟಿಸಿಕೊಳ್ಳಲಾಗುತ್ತದೆ. ➡ಪುಟ ೮



- ಅನೇಕ ವಿ.ವಿ.ಗಳು ಪಿಎಚ್.ಡಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು, ಅಂಕಪಟ್ಟಿ ಇಲ್ಲದೆ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ
- ಖಾಸಗಿ ಕಂಪನಿಗಳಲ್ಲಿ ಕೆಲಸಕ್ಕೆ ಸೇರುವಾಗ ಮೂಲ ದಾಖಲೆ ಸಲ್ಲಿಸಲು ಸಾಧ್ಯವಾಗದೆ ಕೈತಪ್ಪುತ್ತಿದೆ ಉದ್ಯೋಗಾವಕಾಶ
- ವಿದೇಶಕ್ಕೆ ಹೋಗ ಬಯಸುವ ವಿದ್ಯಾರ್ಥಿಗಳ ಅಡ್ಮಿಷನ್ ಪ್ರಕ್ರಿಯೆ ಅರ್ಧಕ್ಕೆ ನಿಲ್ಲುತ್ತಿದೆ

ಎನ್‌ಸಿಇಆರ್‌ಟಿ 8ನೇ ತರಗತಿ ಪಠ್ಯಕ್ಕೆ ನಿಷೇಧ

◆ **ಹೊಸದಿಲ್ಲಿ:** ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ(ಎನ್‌ಸಿಇಆರ್‌ಟಿ) 8ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ನ್ಯಾಯಾಂಗದ ಭ್ರಷ್ಟಾಚಾರದ ಕುರಿತು ಅಪಮಾನಕಾರಿ ವಿಷಯವಿದೆ ಎಂದು ಹೇಳಿ, ಅದರ ಮುಂದಿನ ಮುದ್ರಣ, ಮರುಮುದ್ರಣ ಹಾಗೂ ಡಿಜಿಟಲ್ ಪ್ರಸಾರಕ್ಕೆ ಸುಪ್ರೀಂ ಕೋರ್ಟ್ ಗುರುವಾರ ಸಂಪೂರ್ಣ ನಿಷೇಧ ಹೇರಿದೆ. ಗುಂಡು ಹಾರಿಸಲಾಗಿದೆ, ನ್ಯಾಯಾಂಗ ಸಂಸ್ಥೆ ರಕ್ತಸ್ರಾವಗೊಳ್ಳುತ್ತಿದೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠ ಕಟುವಾಗಿ ಹೇಳಿದೆ. ➡ಪುಟ ೮




ಕ್ರಮ ಕೈಗೊಳ್ಳಲು ಮೋದಿ ನಿರ್ದೇಶನ ◆ ಪುಟ ೮

ನುಸುಳುಕೋರರನ್ನು ಓಡಿಸುವುದು ಖಚಿತ


◆ **ಅರಾರಿಯಾ:** ಮುಂಬರುವ ಪಶ್ಚಿಮಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯಗಳಿಸುವ ವಿಶ್ವಾಸ ವ್ಯಕ್ತಪಡಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಅಧಿಕಾರಕ್ಕೆ ಬಂದ ಕೂಡಲೇ ಪ್ರತಿ ಒಳನುಸುಳುಕೋರರನ್ನು ರಾಜ್ಯದಿಂದ ಹೊರದಬ್ಬುತ್ತೇವೆ ಎಂದಿದ್ದಾರೆ.

ಬಿಹಾರದ ಅರಾರಿಯಾ ಜಿಲ್ಲೆಯಲ್ಲಿ ಮಾತನಾಡಿರುವ ಶಾ, ರಾಷ್ಟ್ರೀಯ ಭದ್ರತೆಗೆ ಕೇವಲ ಬೆದರಿಕೆಯಷ್ಟೇ ಅಲ್ಲ, ಜನರ ಕಲ್ಯಾಣ ಪ್ರಯೋಜನಗಳನ್ನು ಸಹ ಪಡೆಯುವ ಪ್ರತಿಯೊಬ್ಬ ನುಸುಳುಕೋರರನ್ನು ದೇಶದಿಂದ ಹೊರಹಾಕುವುದು ಬಿಜೆಪಿ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದರು. ದೊಡ್ಡ ಪ್ರಮಾಣದಲ್ಲಿ ಒಳನುಸುಳುವಿಕೆ ಗಡಿ ಪ್ರದೇಶಗಳಲ್ಲಿ ಅತಿಕ್ರಮಣಗಳಿಗೆ ಕಾರಣವಾಗುತ್ತದೆ. ➡ಪುಟ ೮



ಗ್ರೇಡ್ ಆಧಾರಿತ ಡಿಎಲ್ ವ್ಯವಸ್ಥೆ ಶೀಘ್ರವೇ ಜಾರಿ

◆ **ಹೊಸದಿಲ್ಲಿ:** ರಸ್ತೆ ಸುರಕ್ಷತೆ ಸುಧಾರಿಸುವ ಮತ್ತು ಸಾವುಗಳನ್ನು ಕಡಿಮೆ ಮಾಡುವ ಗುರಿ ಹೊಂದಿರುವ ಗ್ರೇಡ್ ಆಧಾರಿತ ಚಾಲನಾ ಪರವಾನಗಿ ವ್ಯವಸ್ಥೆಯನ್ನು ಪರಿಚಯಿಸಲಾಗುವುದು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ರಾಜಧಾನಿಯಲ್ಲಿ ರಸ್ತೆ ಸುರಕ್ಷತೆ ಕುರಿತ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅವರು, ಕಳೆದ ವರ್ಷ ರಸ್ತೆ ಅಪಘಾತಗಳಲ್ಲಿ 1.8 ಲಕ್ಷ ಮಂದಿ ಮೃತರಾಗಿದ್ದಾರೆ. ➡ಪುಟ ೮



ಕಿರುಸುದ್ದಿ

ಕಾಂಗ್ರೆಸ್ ಕ್ಷಮೆ ಕೇಳಲಿ: ಕಾಟವೆ



ಹುಬ್ಬಳ್ಳಿ: ಹಿಮೋಫಿಲಿಯಾ ರೋಗಿಗಳಿಗೆ 'ರೋಗ ನಿರೋಧಕ ಚಿಕಿತ್ಸೆ' ಹಾಗೂ ಉಚಿತ 108 ಆಂಬ್ಯುಲೆನ್ಸ್ ಸೇವೆಗಳ ಉದ್ಘಾಟನಾ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಕನ್ನಡ ಭಾಷೆಯ ಜೊತೆಗೆ ಉರ್ದು ಭಾಷೆಯಲ್ಲೂ ಪ್ರಕಟಿಸಿರುವುದು ಅತ್ಯಂತ ಖಂಡನೀಯ ಎಂದು ಬಿಜೆಪಿ ಯುವ ಮುಖಂಡ ವೆಂಕಟೇಶ್ ಕಾಟವೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆ, ಕನ್ನಡವೇ ನಮ್ಮ ಅಸ್ತಿತ್ವದ ಗುರುತು. ಇಂತಹ ಸಂದರ್ಭದಲ್ಲಿ ಸರ್ಕಾರದ ಅಧಿಕೃತ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಕನ್ನಡಕ್ಕೆ ಸಮಪ್ರಾಮುಖ್ಯತೆ ನೀಡುವಂತೆ ಉರ್ದು ಭಾಷೆಯಲ್ಲೂ ಪ್ರಕಟಿಸುವುದು ರಾಜ್ಯದ ಭಾಷಾ ಸ್ವಾಭಿಮಾನಕ್ಕೆ ಧಕ್ಕೆ ತಂದಿರುವ ದುರದೃಷ್ಟಕರ ಘಟನೆ. ಕರ್ನಾಟಕದಲ್ಲಿ ಕನ್ನಡವನ್ನು ಕಡೆಗಣಿಸಿ, ಮತಬ್ಯಾಂಕ್ ರಾಜಕಾರಣಕ್ಕಾಗಿ ತುಷ್ಟೀಕರಣದ ರಾಜಕೀಯ ನಡೆಸುವುದು ಕಾಂಗ್ರೆಸ್ ಸರ್ಕಾರದ ನಿಜಸ್ವರೂಪವನ್ನು ಬಯಲಿಗೆಳೆಯುತ್ತದೆ ಎಂದು ಆರೋಪಿಸಿದ್ದಾರೆ. ರಾಜ್ಯ ಸರ್ಕಾರವು ಕನ್ನಡಿಗರ ಭಾವನೆಗಳಿಗೆ ಧಕ್ಕೆ ತರುವಂತಹ ನಿರ್ಧಾರಗಳನ್ನು ಕೈಬಿಡಬೇಕು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ ಅವರು ಉರ್ದುವನ್ನು ಒಂದು ಭಾಷೆ ಎಂದು ಹೇಳಿ ನೀಡಿರುವ ಹೇಳಿಕೆ ಬೇಜವಾಬ್ದಾರಿತನದ ಪರಾಕಾಷ್ಠೆ. ರಾಜ್ಯದ ಜನತೆಯ ಮನೋಭಾವನೆಗಳನ್ನು ಗೌರವಿಸದೇ ಮಾತನಾಡಿರುವುದು ಖಂಡನೀಯ. ತಕ್ಷಣವೇ ಅವರು ರಾಜ್ಯದ ಜನತೆಗೆ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ. ಕರ್ನಾಟಕದ ಸಂಸ್ಕೃತಿ, ಪರಂಪರೆ ಮತ್ತು ಭಾಷಾ ಗೌರವವನ್ನು ಕಾಯುವುದು ಸರ್ಕಾರದ ಕರ್ತವ್ಯ. ಕನ್ನಡಕ್ಕೆ ಪ್ರಥಮ ಆದ್ಯತೆ ನೀಡದ ಯಾವುದೇ ಕ್ರಮವನ್ನು ಬಿಜೆಪಿ ತೀವ್ರವಾಗಿ ವಿರೋಧಿಸುತ್ತದೆ ಎಂದರು. ಕನ್ನಡಿಗರ ಆತ್ಮಗೌರವದ ಹೋರಾಟದಲ್ಲಿ ಬಿಜೆಪಿ ಸದಾ ಮುಂಚೂಣಿಯಲ್ಲಿ ನಿಂತಿರುತ್ತದೆ ಎಂದಿದ್ದಾರೆ.

ಪುಣ್ಯಾರಾಧನೆ ಇಂದು

ಕುಂದಗೋಳ: ಪಟ್ಟಣದ ಶಿವಾನಂದ ಮಠದ ಸಂಸ್ಥಾಪಕ ತ್ರಿವಿಧ ದಾಸೋಹಿ, ಕೀರ್ತನ ಕೇಸರಿ ಲಿಂ. ಪ.ಪೂ. ಬಸವೇಶ್ವರ ಸ್ವಾಮೀಜಿಯ 41ನೇ ಪುಣ್ಯಾರಾಧನೆ ಹಾಗೂ ಜಗದ್ಗುರು ಶಿವಾನಂದ ವಿದ್ಯಾಪೀಠದ ಸಂಸ್ಥಾಪಕ ಲಿಂ. ಪ.ಪೂ. ಬಸವರಾಜ ಸ್ವಾಮೀಜಿಯ 19ನೇ, ಶಾಂತಯೋಗಿ ಬಸವೇಶ್ವರ ಸ್ವಾಮೀಜಿಯ 7ನೇ ಪುಣ್ಯಾರಾಧನೆ ಹಾಗೂ ಸಾಂಸ್ಕೃತಿಕ ಭವನದ ಉದ್ಘಾಟನಾ ಕಾರ್ಯಕ್ರಮ ಫೆ.27ರ ಬೆಳಗ್ಗೆ 11ಕ್ಕೆ ಜೆ.ಎಸ್.ಎಸ್ ವಿದ್ಯಾಪೀಠದ ಸಾಂಸ್ಕೃತಿಕ ಭವನದಲ್ಲಿ ನಡೆಯಲಿದೆ. ಸಾನ್ನಿಧ್ಯವನ್ನು ಶಿವಿರಕ್ತ ಮಠ ಮುಳ್ಳಳ್ಳಿ ಹಾಗೂ ಬೊಮ್ಮನಹಳ್ಳಿ ಮಠದ ವಯೋಗಿಶ್ವರ ಸ್ವಾಮೀಜಿ, ಕುಂದಗೋಳದ ಕಲ್ಯಾಣಪುರ ಮಠದ ಬಸವಣ್ಣಜ್ಜನವರು, ಅತ್ತಿಗೇರಿಯ ಶ್ರೀ ಗುರು ಮಲ್ಲಿಕಾರ್ಜುನ ಆಶ್ರಮ ಆದ್ವೈತಾನಂದ ಸ್ವಾಮೀಜಿ ವಹಿಸುವರು. ನೇತೃತ್ವವನ್ನು ಶಿವಾನಂದ ಮಠ ಹಾಗೂ ಕುಂದಗೋಳ ಫೋಡಗೇರಿ ಮಠದ ಮಲ್ಲಯ್ಯ ಸ್ವಾಮೀಜಿ, ಕುಂದಗೋಳ ಶಿವಾನಂದ ಮಠದ ಶಿವಾನಂದ ಸ್ವಾಮೀಜಿ, ಫಣಿಕೊಪ್ಪ ಪೂಜ್ಯರು ವಹಿಸುವರು. ಸಂಜೆ 5ಕ್ಕೆ ಶಾಲಾ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಜರುಗುವುದು ಎಂದು ತಿಳಿಸಿದ್ದಾರೆ.

ಇಂದು ಬೃಹತ್ ಸಮಾವೇಶ

ಹುಬ್ಬಳ್ಳಿ: ಜೆಡಿಎಸ್ ಬೆಳ್ಳಿ ಹಬ್ಬದ ಅಂಗವಾಗಿ ಫೆ.27ರಂದು ವಿಜಯಪುರದಲ್ಲಿ ಕಿತ್ತೂರು ಕರ್ನಾಟಕ ಭಾಗದ ಪದಾಧಿಕಾರಿಗಳ ಹಾಗೂ ಕಾರ್ಯಕರ್ತರ ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜೆಡಿಎಸ್ ಹುಬ್ಬಳ್ಳಿ-ಧಾರವಾಡ ಮಹಾನಗರ ಜಿಲ್ಲಾ ಘಟಕದ ಅಧ್ಯಕ್ಷ ಗುರುರಾಜ ಹುಣಶಿಮರದ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದ್ದು, ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲಾಗದೆ ಪರದಾಡುತ್ತಿದೆ. ಎರಡೂವರೆ ವರ್ಷದಲ್ಲಿ ಒಂದೇ ಒಂದು ಸರ್ಕಾರ ಉದ್ಯೋಗಿಗಳ ನೇಮಕಾತಿ ನಡೆದಿಲ್ಲ, ಧಾರವಾಡದಲ್ಲಿ ವಿದ್ಯಾರ್ಥಿಗಳು ಹಾಗೂ ಉದ್ಯೋಗಾಂಕ್ಷಿಗಳು ಧಂಗೆ ಎದ್ದಿದ್ದು, ಮುಂಬರುವ ದಿನಗಳಲ್ಲಿ ರಾಜ್ಯದಾದ್ಯಂತ ವ್ಯಾಪಿಸಿದರೂ ಅಚ್ಚರಿಯಿಲ್ಲ. ಮುಂಬರುವ ಬಜೆಟ್‌ನಲ್ಲಿ ಕನಿಷ್ಠ 1 ಲಕ್ಷ ಉದ್ಯೋಗ ಭರ್ತಿ ಹಾಗೂ ಧಾರವಾಡ ಜಿಲ್ಲೆಗೆ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಘೋಷಣೆ ಮಾಡಬೇಕು ಎಂದರು. ಮುಖಂಡರಾದ ವೀರಭದ್ರಪ್ಪ ಹಾಲಹರವಿ, ನವೀನಕುಮಾರ ಮಡಿವಾಳರ, ಬಾಪೂಸಾಬ್ ಮುದ್ಗಲ್, ಸಿದ್ದುಮಹಾಂತ ಒಡೆಯರ, ಶಂಕರ ಪವಾರ, ಶಾಬಾಜ್ ಇದ್ದರು.

ಕೊಲೆ ಆರೋಪಿಗಳ ಬಂಧನ

ಹುಬ್ಬಳ್ಳಿ: ಇಲ್ಲಿಯ ಗದಗ ರಸ್ತೆ ರಾಷ್ಟ್ರೀಯ ಹೆದ್ದಾರಿಯಲ್ಲಿ ತಾಲೂಕಿನ ಬಂಡಿವಾಡ ಗ್ರಾಮದ ಮಂಜುನಾಥ ಯಲ್ಲಪ್ಪ ಗಾಣಿಗೇರ(28) ಎಂಬುವರ ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ಗ್ರಾಮೀಣ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಬಂಡಿವಾಡ ಗ್ರಾಮದ ವಿಠ್ಠಲ್ ಸಾವಳಗಿ(45), ಅಡಿವೆಪ್ಪ ಗಾಮನಗಟ್ಟಿ(45) ಬಂಧಿತ ಆರೋಪಿಗಳು. ರಾಷ್ಟ್ರೀಯ ಹೆದ್ದಾರಿಯ ಐಟಿಸಿ ಗೋದಾಮಿನ ಬಳಿ ಬುಧವಾರ ಬೆಳಗ್ಗೆ ರಕ್ತದಿಂದ ಕೂಡಿದ ಚೀಲ ಗಮನಿಸಿದ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಗ್ರಾಮೀಣ ಠಾಣೆ ಇನ್‌ಸ್ಪೆಕ್ಟರ್ ಮುರುಗೇಶ ಚನ್ನಣ್ಣವರ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ, ಶವವನ್ನು ಕೆಎಂಸಿ-ಆರ್‌ಐ ಶವಾಗಾರಕ್ಕೆ ರವಾನಿಸಿದ್ದರು. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಆರೋಪಿಗಳ ಬಂಧಿಸಿದ್ದಾರೆ. ಕುಡಿದ ಮತ್ತಿನಲ್ಲಿ ನಡೆದ ಜಗಳದಿಂದ ಕೊಲೆ ನಡೆದಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.



ಧಾರವಾಡ: ಇಲ್ಲಿನ ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೊರಬ ಗ್ರಾಮದ ಕೃಷಿ ಸಮೃದ್ಧಿ ರೈತ ಉತ್ಪಾದಕರ ಕಂಪನಿಗೆ ಅತ್ಯುತ್ತಮ ರೈತ ಉತ್ಪಾದಕರ ಪ್ರಶಸ್ತಿ ಲಭಿಸಿದೆ. ಕಂಪನಿ ನಿರ್ದೇಶಕರು ಹಾಗೂ ಸಿಇಒ ಪ್ರಶಸ್ತಿ ಸ್ವೀಕರಿಸಿದರು.

ಸದೃಢ ದೇಹಕ್ಕೆ ಕ್ರೀಡೆ ಅವಶ್ಯ: ಸ್ವಾಮೀಜಿ

ಧಾರವಾಡ: ಕ್ರೀಡೆಯೂ ಒಂದು ಕಾಯಕವೇ. ಮೈಬಗ್ಗಿಸಿ ಮಣ್ಣಿನಲ್ಲಿ ಆಡುವ ಆಟವು ಕೇವಲ ಮನರಂಜನೆಯಲ್ಲ, ಬದಲಿಗೆ ಶರೀರ ದಂಡಿಸಿ, ಮನಸ್ಸನ್ನು ಹದಗೊಳಿಸುವ ಪ್ರಕ್ರಿಯೆ ಎಂದು ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ನಗರದ ಕರ್ನಾಟಕ ಕಾಲೇಜಿನ ಮೈದಾನದಲ್ಲಿ ಧಾರವಾಡ ಲೋಕಸಭಾ ಕ್ಷೇತ್ರದ ಸಂಸದ ಕ್ರೀಡಾ ಮಹೋತ್ಸವಕ್ಕೆ ಗುರುವಾರ ಕ್ರೀಡಾ ಜ್ಯೋತಿ ಬೆಳಗಿಸಿ ಚಾಲನೆ ನೀಡಿದ ಅವರು, ಯುವಕರಿಗೆ ಸದೃಢ ಕಾಯ ಹೊಂದಲು ಕ್ರೀಡೆ ಅಗತ್ಯವಾಗಿವೆ ಎಂದರು. ಬಸವಣ್ಣ ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯ ಎಂದಿದ್ದು, ಈ ದೇಹವೆಂಬ ದೇಗುಲ ಸುಸ್ಥಿತಿಯಲ್ಲಿ ಇರಲು ಕ್ರೀಡೆ ಮತ್ತು ವ್ಯಾಯಾಮ ಅಗತ್ಯವಿದೆ ಎಂದರು.

ಕ್ರೀಡೆಯಲ್ಲಿ ಗೆದ್ದಾಗ ಅಹಂ, ಸೋತಾಗ ನಿರಾಸೆ ಇರಬಾರದು. ಗೆಲವು ನಮಗೆ ಜವಾಬ್ದಾರಿ ಕಲಿಸಿದರೆ, ಸೋಲು ತಪ್ಪುಗಳು ತಿದ್ದಿಕೊಳ್ಳಲು ಅವಕಾಶ ನೀಡುತ್ತಿದೆ. ಸಮಾಜದಲ್ಲಿ ಭಾವೈಕತ್ಯೆ ಮೂಡಿಸಲು ಕ್ರೀಡೆಗಳು ಯೋಗ್ಯ ಸಾಧನಗಳು. ಕಬಡ್ಡಿ ಇರಲಿ, ವಾಲಿಬಾಲ್ ಇರಲಿ ಯಾವುದೇ ಕ್ರೀಡೆಯಲ್ಲೂ ಒಬ್ಬ ವ್ಯಕ್ತಿಯಿಂದ ಗೆಲುವು ಅಸಾಧ್ಯ. ಏಕೆಂದರೆ ಕ್ರೀಡೆಯಲ್ಲಿ ತಂಡ ಮುಖ್ಯ. ಬದುಕಿನಲ್ಲೂ ನಾವು ಎಲ್ಲರನ್ನೂ ಒಳಗೊಂಡು ಸಾಗುವುದನ್ನು ಕ್ರೀಡೆ ಕಲಿಸುತ್ತದೆ ಎಂದರು.

ಹು-ಧಾ ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ, ಗೋವಿಂದ ಜೋಶಿ, ಈರೇಶ ಅಂಚಟಗೇರಿ, ಶಿವು ಹಿರೇಮಠ, ಶಂಕರ ಶೇಳಕೆ, ಸುನೀಲ ಮೋರೆ, ರಾಜೇಶ್ವರಿ ಸಾಲಗಟ್ಟಿ, ರೂಪಾ ಚೌದರಿ, ಸರಸ್ವತಿ ದೊಡ್ಡಮನಿ ಇದ್ದರು.



ಧಾರವಾಡ: ನಗರದ ಕರ್ನಾಟಕ ಕಾಲೇಜಿನ ಮೈದಾನದಲ್ಲಿ ಧಾರವಾಡ ಲೋಕಸಭಾ ಕ್ಷೇತ್ರದ ಸಂಸದ ಕ್ರೀಡಾ ಮಹೋತ್ಸವಕ್ಕೆ ಗುರುವಾರ ಕ್ರೀಡಾ ಜ್ಯೋತಿ ಬೆಳಗಿಸಿ ಚಾಲನೆ ನೀಡಿದ ಮಲ್ಲಿಕಾರ್ಜುನ ಸ್ವಾಮೀಜಿ.

ಧಾರವಾಡ ತಾಲೂಕು ಕಸಾಪ ಸಮ್ಮೇಳನ | ಶಾಂತಿನಾಥ ದಿಬ್ಬದ ಅಭಿಮತ

ಪತ್ರಿಕೆ ಓದುವ ಗೀಳು ಹೆಚ್ಚಾಗಲಿ

ಧಾರವಾಡ: ಯುವಜನತೆ ಸಾಹಿತ್ಯದಿಂದ ದೂರ ಉಳಿಯುತ್ತಿದ್ದು, ಇದರಿಂದ ಕನ್ನಡ ಸಾಹಿತ್ಯ ಬಡವಾಗಿದೆ. ಯುವ ಸಮೂಹ ಸಾಹಿತ್ಯ ಹೆಚ್ಚೆಚ್ಚು ಓದುವ ಜೊತೆ ರಚಿಸಬೇಕು ಎಂದು ಸಾಹಿತಿ ಪ್ರೊ. ಶಾಂತಿನಾಥ ದಿಬ್ಬದ ಹೇಳಿದರು.

ಇಲ್ಲಿನ ಆಲೂರು ವೆಂಕಟರಾವ್ ಭವನದಲ್ಲಿ ಗುರುವಾರ ಹಮ್ಮಿಕೊಂಡ ಧಾರವಾಡ ತಾಲೂಕು 12ನೇ ಸಮ್ಮೇಳನ ಉದ್ಘಾಟಿಸಿದ ಅವರು, ಸರ್ವರಿಗೂ ಅರ್ಥವಾಗುವ ಸಾಹಿತ್ಯ ರಚಿಸಬೇಕು. ಸಾಹಿತ್ಯ ಸಮಾಜ ಒಡೆಯುವ ಕೆಲಸ ಮಾಡದೆ, ಒಗ್ಗೂಡಿಸುವ ಕೆಲಸ ಮಾಡಲಿ. ಯುವಜನತೆ ಪತ್ರಿಕೆ ಓದುವ ಗೀಳಿಗೆ ಬೀಳಬೇಕು ಎಂದರು.

ಕವಿವಿ ಕುಲಪತಿ ಡಾ. ಎ.ಎಂ.ಖಾನ್ ಅಧ್ಯಕ್ಷತೆ ವಹಿಸಿದ್ದರು. ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ, ಸಭಾನಾಯಕ ಈರೇಶ ಅಂಚಟಗೇರಿ ಮಾತನಾಡಿದರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಡಾ.ನಿತಿನ್ ಹತ್ತಿಕಾಳ, ಸಮ್ಮೇಳನ ಅಧ್ಯಕ್ಷ ಡಾ.ಚಂದ್ರಶೇಖರ ರೊಟ್ಟಿಗವಾಡ ಅವರಿಗೆ ಧ್ವಜ ಹಸ್ತಾಂತರಿಸಿದರು. ರಾಮಚಂದ್ರ ಕುಲರ್ಣಿ ಅವರ ಅನುಭೂತ ಅನವರತ ಪುಸ್ತಕ ಬಿಡುಗಡೆಗೊಂಡಿತು. ಮುರುಘಾಮಠ ಮಲ್ಲಿಕಾರ್ಜುನ ಶ್ರೀ ಸಾನ್ನಿಧ್ಯ ವಹಿಸಿದ್ದರು. ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ, ಪ್ರಮೀಳಾ ಜಕ್ಕಣ್ಣವರ ಅನೇಕರಿದ್ದರು. ಕವಿವಿ ಜಾನಪದ ವಿಭಾಗದ ಮುಖ್ಯಸ್ಥ ಡಾ. ವಿ.ಎಲ್.ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ-ಆರೋಗ್ಯ ಗೋಷ್ಠಿ ನಡೆಯಿತು. ಆಲೂರು ವೆಂಕಟರಾವ್ ಭವನದ ಆವರಣದಲ್ಲಿ ರಾಷ್ಟ್ರಧ್ವಜ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ, ನಾಡಧ್ವಜ ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಮತ್ತು ಪರಿಷತ್ ಧ್ವಜಾರೋಹಣ ತಾಲೂಕಾಧ್ಯಕ್ಷ ಮಹಾಂತೇಶ ನೆರಗಲ್ಲ ನೆರವೇರಿಸಿದರು.

- ಸಮ್ಮೇಳನದಲ್ಲಿ ರಾಜ್ಯದಲ್ಲಿ ಯಾವುದೇ ಮಾಧ್ಯಮದ ಶಾಲೆಯಾದರೂ ಏಳನೇ ತರಗತಿ ವರೆಗೂ ಕನ್ನಡ ಪ್ರಥಮ ಭಾಷೆಯಾಗಲಿ
- ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಶಿಕ್ಷಕರ ಹುದ್ದೆಗಳ ಖಾಲಿ ಬಿಡದೆ, ತುಂಬಬೇಕು
- ಕನ್ನಡ ಶಾಲೆಗಳನ್ನು ಮುಚ್ಚಬಾರದು
- ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಸಮರ್ಪಕ ಅನುಷ್ಠಾನ ಮಾಡುವ ನಿರ್ಣಯಗಳನ್ನು ಸಮ್ಮೇಳನದಲ್ಲಿ ಮಂಡಿಸಲಾಯಿತು.

ಸಾಹಿತ್ಯ ಜಾತಿ, ಧರ್ಮ ಮೀರಿ ಮಾನವೀಯತೆ ಎತ್ತಿಹಿಡಿಯುವ ಅಸ್ತ್ರವಾಗಿದೆ. ಯುವಜನಾಂಗ ಸಾಹಿತ್ಯದ ಜೊತೆ ಸಂವಿಧಾನ ಅಧ್ಯಯನ ಕೈಗೊಂಡು ಅರಿತು ನಡೆಯಬೇಕು.
■ ಎನ್.ಶಶಿಕುಮಾರ್, ಪೊಲೀಸ್ ಆಯುಕ್ತ



ಭವ್ಯ ಮೆರವಣಿಗೆ

ಸಮ್ಮೇಳನಾಧ್ಯಕ್ಷ ಡಾ. ಚಂದ್ರಶೇಖರ ರೊಟ್ಟಿಗವಾಡ ಅವರು ಕುಳ್ಳಿಸಿದ ಸಾರೋಟದ ಮೆರವಣಿಗೆಗೆ ಅಂಜುಮನ್ ಸಂಸ್ಥೆಯ ಅಧ್ಯಕ್ಷ ಇಸ್ಮಾಯಲ್ ತಮಟಗಾರ ಚಾಲನೆ ನೀಡಿದರು. ಜಗ್ಗಲಗಿ ಮೇಳ, ವಿದ್ಯಾರ್ಥಿಗಳ ನೃತ್ಯ ಮೆರವಣಿಗೆಗೆ ಮೆರಗು ತುಂಬಿದವು.



ಕನ್ನಡ ಆಡಳಿತ ಭಾಷೆ ಅಸಾಧ್ಯವೇ?

ಕರ್ನಾಟಕ ಸರ್ಕಾರದಲ್ಲಿ ಕನ್ನಡ ಆಡಳಿತ ಭಾಷೆ ಜಾರಿಗೆ ಬರುವುದು ಯಾವಾಗ? ಎಂದು ಪ್ರಶ್ನಿಸಿದ ಸಮ್ಮೇಳನಾಧ್ಯಕ್ಷ ಡಾ. ಚಂದ್ರಶೇಖರ ರೊಟ್ಟಿಗವಾಡ, ರಾಜ್ಯದ ಪ್ರತಿ ಕನ್ನಡಿಗ ಕನ್ನಡ ಓದು, ಮಾತನಾಡುವ ಮತ್ತು ಬರೆಯಲಿ ಎಂದರು. ಆಲೂರು ವೆಂಕಟರಾವ್ ಭವನದಲ್ಲಿ ನಡೆದ 12ನೇ ಸಮ್ಮೇಳನದ ಸರ್ವಾಧ್ಯಕ್ಷತೆ ಭಾಷಣ ಮಾಡಿದ ಅವರು, ಕರ್ನಾಟಕದಲ್ಲಿ ಕನ್ನಡವೇ ಅಗ್ರಸ್ಥಾನದಲ್ಲಿ ಇರಬೇಕು. ಕನ್ನಡವೂ ಕೂಡ ಅನ್ನದ ಭಾಷೆಯಾದ ಮಾತ್ರ ಕನ್ನಡಕ್ಕೆ ಉಳಿಗಾಲವಿದೆ ಎಂದರು. ಕರ್ನಾಟಕದ ಸಾಹಿತ್ಯ, ಸಂಸ್ಕೃತಿಯ ಪ್ರಗತಿ ಮತ್ತು ಹೋರಾಟದಲ್ಲಿ ಧಾರವಾಡ ಸಿಂಹಪಾಲು ಹೊಂದಿದೆ. 25 ಸಾವಿರ ಶಾಸನ ದೊರೆತಿವೆ. ಆರು ಅಖಿಲ ಭಾರತ ಸಮ್ಮೇಳನ ನಡೆದ ಪುಣ್ಯನೆಲದಲ್ಲಿ ಸಮ್ಮೇಳನಾಧ್ಯಕ್ಷ ಪಟ್ಟ ಲಭಿಸಿರುವುದು ಹರ್ಷ ವ್ಯಕ್ತಪಡಿಸಿದರು.

ಅಶಾಂತಿ ಸೃಷ್ಟಿಸುವವರ ವಿರುದ್ಧ ಕ್ರಮ

ಕುಂದಗೋಳ: ಹೋಳಿ ಹುಣ್ಣಿಮೆ ಹಾಗೂ ರಂಜಾನ್ ಹಬ್ಬಗಳ ಹಿನ್ನೆಲೆ ಪಟ್ಟಣದ ಭೂತೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಪೊಲೀಸ್ ಇಲಾಖೆ ಶಾಂತಿ ಸಭೆ ನಡೆಸಿತು.

ಈ ವೇಳೆ ಸಭೆಯಲ್ಲಿ ಸಿಪಿಐ ಶರಣಬಸಪ್ಪ ಸಂಗಳದ ಮಾತನಾಡಿ, ಹಬ್ಬದ ನೆಪದಲ್ಲಿ ಅಶಾಂತಿ ಸೃಷ್ಟಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಮಾರ್ಚ್ 3 ರಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪೂರ್ವಸಿದ್ಧತಾ ಪರೀಕ್ಷೆಗಳು ಆರಂಭವಾಗಲಿದ್ದು, ರಂಜಾನ್ ಪ್ರಯುಕ್ತ ಮಸೀದಿಗಳಿಗೆ ತೆರಳುವ ಭಕ್ತರಿಗೆ ತೊಂದರೆಯಾಗದಂತೆ ಸೌಹಾರ್ದದಿಂದ ಹಬ್ಬ ಆಚರಿಸುವಂತೆ ಯುವಕರಿಗೆ ಮನವಿ ಮಾಡಿದರು.

ಷರೀಪ ಜೋಗಮ್ಮನವರ ಮಾತನಾಡಿ, ಹಬ್ಬದ ದಿನ ಮದ್ಯ ಮಾರಾಟ ನಿಷೇಧ ಇದ್ದರೂ ಕಳ್ಳಮಾರ್ಗದಲ್ಲಿ ಸಾಗಾಟ ನಡೆಯುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಅಂಜುಮನ್ ಅಧ್ಯಕ್ಷ ಕೈಯಿಮ್ ನಾಲಬಂದ, ನಾಗರಾಜ ದೇಶಪಾಂಡೆ, ಶಂಕರಗೌಡ ಪಾಟೀಲ ಸೇರಿದಂತೆ ಹಲವರು ಶಾಂತಿಯುತ ಆಚರಣೆಗೆ ಭರವಸೆ ನೀಡಿದರು. ಲಕ್ಷ್ಮಣ ಚುಳಕಿ, ಶಂಕ್ರಣ್ಣ ಗೌರಿ, ಜಾಫರಸಾಬ್ ಕ್ಯಾಲಕೊಂಡ, ಪೊಲೀಸ್ ಇಲಾಖೆಯ ಸಿಬ್ಬಂದಿ ಅಜಯ್ ಚನ್ನಾಪೂರ, ದೇವೇಂದ್ರ ಆಲೂರ, ದಾದಾಪೀರ ಮಳಲಿ ಸೇರಿದಂತೆ ಸಿಬ್ಬಂದಿ, ವಿವಿಧ ಸಮುದಾಯಗಳ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.

ಬಣ್ಣ ಎರಚುವ ನೆಪದಲ್ಲಿ ಕಿರಿಕಿರಿ ಮಾಡುವುದು, ಬಲವಂತವಾಗಿ ಹಣ ಸಂಗ್ರಹಿಸುವುದು, ಗೂಂಡಾಗಿರಿ ನಡೆಸುವವರನ್ನು ಸಹಿಸಲಾಗುವುದಿಲ್ಲ.
■ ಶರಣಬಸಪ್ಪ ಸಂಗಳದ, ಸಿಪಿಐ

ಶಿಶುನಾಳ ಶರೀಫರ ನೆಲೆಯಾದ ಕುಂದಗೋಳವು ಭಾವೈಕ್ಯತೆಯ ತವರೂರು. ಯಾವುದೇ ಅಹಿತಕರ ಘಟನೆಗಳು ಘಟನೆಗಳು ನಡೆಯದಂತೆ ಸೌಹಾರ್ದತೆಯಿಂದ ಹಬ್ಬ ಆಚರಿಸೋಣ.
■ ಸೋಮರಾವ್ ದೇಸಾಯಿ, ರೈತ ಸಂಘದ ಪ್ರಮುಖ



ಕಲ್ಲು ತೂರಾಟ ಘಟನೆ ಖಂಡಿಸಿ ಪ್ರತಿಭಟನೆ

ಹುಬ್ಬಳ್ಳಿ: ಬಾಗಲಕೋಟೆಯಲ್ಲಿ ನಡೆದ ಛತ್ರಪತಿ ಶಿವಾಜಿ ಜಯಂತಿ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆಸಿದ ಘಟನೆಯನ್ನು ಖಂಡಿಸಿ, ಹಿಂದೂ ರಾಷ್ಟ್ರ ಸಮನ್ವಯ ಸಮಿತಿ ಹಾಗೂ ಶ್ರೀರಾಮ ಸೇನಾ ಮುಖ್ಯಸ್ಥ ಪ್ರಮೋದ ಮುತಾಲಿಕ್ ನೇತೃತ್ವದಲ್ಲಿ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ಇಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಸೇರಿದ ಶ್ರೀರಾಮ ಸೇನಾ ಕಾರ್ಯಕರ್ತರು ದುಷ್ಕರ್ಮಿಗಳನ್ನು ಕೂಡಲೇ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಮೋದ ಮುತಾಲಿಕ್, ಬಾಗಲಕೋಟೆಯಲ್ಲಿ ಘಟನೆ ಖಂಡಿಸಿ ಮಾಡುತ್ತಿರುವ ಪ್ರತಿಭಟನೆಗೆ ಬೆಂಬಲಿಸಿ ಇಲ್ಲಿ ಪ್ರತಿಭಟನೆ ಮಾಡಲಾಗುತ್ತಿದೆ. ಶಿವಾಜಿ ಮಹಾರಾಜರಿಗೆ ಅವಮಾನ ಮಾಡಿದ ಇಂತಹ ದುಷ್ಕರ್ಮಿಗಳನ್ನು ಹೀಗೆ ಕೈ ಬಿಟ್ಟರೆ ನಾಳೆ ಬಸವಣ್ಣ, ಅಂಬೇಡ್ಕರ್ ಸೇರಿದಂತೆ ಮಹಾನ್ ವ್ಯಕ್ತಿಗಳಿಗೆ ಅವಮಾನ ಮಾಡುತ್ತಾರೆ. ಗಲಭೆ ಮಾಡುವವರನ್ನು ಬಂಧನ ಮಾಡಬೇಕು ಎಂದು ಒತ್ತಾಯಿಸಿದರು.

ಶ್ರೀರಾಮ ಸೇನಾ ಗೌರವ ರಾಜ್ಯಾಧ್ಯಕ್ಷ ಸತ್ಯಪ್ರಮೋದ ತೀರ್ಥ ಸ್ವಾಮಿ, ಮಾತಾಜಿ, ಭಗತಸಿಂಗ್ ಯುವಕ ಮಂಡಳ ಅಧ್ಯಕ್ಷ ವಿಶಾಲ ಜಾಧವ, ಹಿಂದು ಜಾಗರಣ ವೇದಿಕೆ ಪ್ರಮುಖ ಶ್ರೀಧರ ಕುಲಕರ್ಣಿ, ಗುರು ಪಾಟೀಲ, ಮಂಜುನಾಥ ಕಾಟ್ಕರ್ ಸೇರಿದಂತೆ ಇತರರಿದ್ದರು.

ರಸ್ತೆ ತಡೆ

ಅಂಬೇಡ್ಕರ್ ವೃತ್ತದಲ್ಲಿ ಸೇರಿದ ನೂರಾರು ಶ್ರೀರಾಮ ಸೇನಾ ಕಾರ್ಯಕರ್ತರು ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು. ದುಷ್ಕರ್ಮಿಗಳನ್ನು ಕೂಡಲೇ ಗಡಿಪಾರು ಮಾಡಬೇಕು. ಕಠಿಣ ಕಾನೂನು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ಗ್ರಾಮದೇವಿ ಜಾತ್ರಾ ಮಹೋತ್ಸವಕ್ಕೆ ಚಾಲನೆ



ಮೆರವಣಿಗೆ

ಮೆರವಣಿಗೆಯಲ್ಲಿ ರಾಜ್ಯದ ವಿವಿಧ ಕಲಾತಂಡಗಳಾದ ಚಂಡಿವಾದ್ಯ, ವೀರಗಾಸೆ, ಗೊಂಬೆ ಕುಣಿತ, ಕರಡಿ ಕುಣಿತ, ಕರಡಿಮಜಲು, ಯಕ್ಷಗಾನದ ಗೊಂಬೆ ಭಾಗವಹಿಸಿದ್ದವು.

ದೇವಿಯರಿಗೆ ಪುಷ್ಪ ವೃಷ್ಟಿ

ತಾಲೂಕಿನಾದ್ಯಂತ ಸಾವಿರಾರು ಭಕ್ತರು ದೇವಿಯರಿಗೆ ಉದೋ ಉದೋ ಎನ್ನುತ್ತ ಪುಷ್ಪ ವೃಷ್ಟಿ ಮಾಡಿದರು. ಪಟ್ಟಣದ ಅಕ್ಕಿಓಣಿಯ ಚೌತಮನಿ ಕಟ್ಟೆಯ ಗ್ರಾಮದೇವಿ ಮಹಾ ಮಂಟಪದಲ್ಲಿ ದೇವಿಯರಾದ ದ್ಯಾಮವ್ವ, ದುರ್ಗವ್ವ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಯಿತು.

ಕಲಘಟಗಿ: ಮೂರು ವರ್ಷಕ್ಕೊಮ್ಮೆ ಜರಗುವ ಗ್ರಾಮದೇವಿ ಜಾತ್ರಾ ಮಹೋತ್ಸವಕ್ಕೆ ಶ್ರೀ ಗ್ರಾಮದೇವಿ ಟ್ರಸ್ಟ್ ಕಮಿಟಿ ಹಾಗೂ ಜಾತ್ರಾ ಉತ್ಸವ ಕಮಿಟಿಯ ಅಧ್ಯಕ್ಷರು ಚಾಲನೆ ನೀಡುವುದರೊಂದಿಗೆ 9 ದಿನಗಳ ಕಾಲ ನಡೆಯುವ ಜಾತ್ರೆ ಪ್ರಾರಂಭಗೊಂಡಿತು.

ಬೆಳಗ್ಗೆ ಗ್ರಾಮದೇವಿಯರಿಗೆ ಅಲಂಕಾರ, ಪುಷ್ಪಾರ್ಚನೆ ಪೂಜಾ ಕಾರ್ಯಕ್ರಮ ಜರಗುವುದರೊಂದಿಗೆ ಸಕಲ ಆಭರಣಗಳನ್ನು ದೇವಿಯರಿಗೆ ತೊಡಿಸುವುದರೊಂದಿಗೆ ದೇವಸ್ಥಾನದಿಂದ ಅಪಾರ ಪ್ರಮಾಣದ ಭಕ್ತರೊಂದಿಗೆ ಮೆರವಣಿಗೆಯೊಂದಿಗೆ ಚೌತಮನಿ ಕಟ್ಟಿಯಲ್ಲಿ ಪ್ರತಿಷ್ಠಾಪಿಸಲು ಆರಂಭಗೊಂಡಿತು ಪ್ರಮುಖ ಬೀದಿಗಳಲ್ಲಿ ದೇವಿಯರ ಸ್ವಾಗತಕ್ಕಾಗಿ ಭಕ್ತರು ಮನೆಮುಂದೆ ಬಣ್ಣ ಬಣ್ಣದ ರಂಗೋಲಿಗಳನ್ನು ಬಿಡಿಸಿದ್ದು ಮೆರವಣಿಗೆಯುದ್ದಕ್ಕೂ ಶೋಭೆತರುವಂತಾಗಿತ್ತು ಬಂದ ಭಕ್ತಾದಿಗಳಿಗೆ ಬಾಯಾರಿಕೆ ತಣಿಸಲು ಮಜ್ಜಿಗೆ, ಬಾದಾಮಿ ಹಾಲು, ತಂಪಾದ ನೀರಿನ ವ್ಯವಸ್ಥೆಗಳನ್ನು ಭಕ್ತಾದಿಗಳು ಮಾಡಿದ್ದರು. ಮೆರವಣಿಗೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಶ್ರೀಗ್ರಾಮ ದೇವಿ ಟ್ರಸ್ಟ್ ಕಮಿಟಿ ಅಧ್ಯಕ್ಷ ಶ್ರೀಕಾಂತ ಖಟಾವಕರ ಜಾತ್ರಾ ಉತ್ಸವ ಕಮೀಟಿ ಅಧ್ಯಕ್ಷ ಸುಧೀರ ಬೋಳಾರ, ಎಸ್.ಆರ್. ಪಾಟೀಲ, ಮಂಜುನಾಥ ಮುರಳ್ಳಿ, ಬಾಳು ಖಾನಾಪೂರ, ಶಶಿಧರ ನಿಂಬಣ್ಣವರ, ರಾಕೇಶ ಅಳಗವಾಡಿ, ಕುಮಾರ ಖಂಡೇಕರ, ಬಾಬಣ್ಣ ಅಂಚಟಗೇರಿ, ಗಂಗಪ್ಪ ಗೌಳಿ, ಪ್ರಮೋದ ಪಾಲ್ಕರ, ಬಸವರಾಜ ಹೊನ್ನಿಹಳ್ಳಿ, ವಾಸು ಲಮಾಣಿ, ಸಾಯಿನಾಥ ಯಲ್ಲಾಪೂರಕರ, ರಾಘವೇಂದ್ರ ಹುಲಿಹೊಂಡ, ಗಣೇಶ ಪಾಲಿಕಾರ, ಕಿರಣ ದೈವಜ್ಞ, ಮಹಾಂತೇಶ ವಿರಕ್ತಮಠ, ಲಕ್ಷ್ಮಣ ಲಮಾಣಿ, ಎಂ.ಆರ್. ತೋಟಗಂಟಿ, ಪರಶುರಾಮ ಹುಲಿಹೊಂಡ, ಮಂಜುನಾಥ ಮುರಳ್ಳಿ, ಉಮೇಶ ಜೋಶಿ ಬಸವರಾಜ ಬೆಗೊರಶೆಟ್ರ, ಸಂಜಯ ಚವ್ಹಾಣ ಇತರರಿದ್ದರು.

ಕರ್ತವ್ಯ ಲೋಪ: ದೂರು ದಾಖಲು



ನವಲಗುಂದ: ಅಂಗನವಾಡಿ ಕೇಂದ್ರಗಳ ಕುರಿತು ನಿರ್ಲಕ್ಷ್ಯ ವಹಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹಾಗೂ ಅಂಗನವಾಡಿ ಮೇಲ್ವಿಚಾರಕಿಯ ಮೇಲೆ ಕರ್ತವ್ಯಲೋಪ ಆರೋಪದಡಿ ಲೋಕಾಯುಕ್ತ ಪೊಲೀಸರಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ ಅವರು, ನವಲಗುಂದ ಹಾಗೂ ಅಣ್ಣಿಗೇರಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವಂತಹ ಸಾಕಷ್ಟು ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಸ್ವಚ್ಛತೆ ಇಲ್ಲದಿರುವುದರ ಜೊತೆಗೆ ಉತ್ತಮ ಕಟ್ಟಡವು ಸಹ ಇರುವುದಿಲ್ಲ, ಇವತ್ತಿಗೂ ದೇವಸ್ಥಾನದಲ್ಲಿ ಹಾಗೂ ಬಾಡಿಗೆ ಮನೆಗಳಲ್ಲಿ ಅಂಗನವಾಡಿ ಕೇಂದ್ರಗಳು ನಡೆಯುತ್ತಿವೆ ಎಂಬುದರ ಕುರಿತು ಸಮಗ್ರ ವರದಿಯೊಂದಿಗೆ ಲೋಕಾಯುಕ್ತ ಕಚೇರಿಗೆ ದೂರು ಸಲ್ಲಿಸಿದ್ದಾರೆ.

ಭೂಮಿ ಪ್ರಶಸ್ತಿ ಪ್ರದಾನ ನಾಳೆ



ನವಲಗುಂದ: ತಾಲೂಕಿನ ನಾಗನೂರು ಗ್ರಾಮದ ಯುವ ರೈತ ಡಾ. ಶೌಕತ್ ಅಲಿ. ಲಂಬೂನವರ ಅವರಿಗೆ 2025ನೇ ಸಾಲಿನ ಭೂಮಿ ಪ್ರಶಸ್ತಿ ಲಭಿಸಲಿದೆ. ಡಾ. ಶೌಕತ್ ಅಲಿ ಲಂಬೂನವರ ಅವರಿಗೆ ಸಹಜಾನಂದ ಕಂಪ್ಯೂಟರ್ ಆಧಾರಿತ ಗ್ರಾಮೀಣ ಶಿಕ್ಷಣ ಮತ್ತು ಅಭಿವೃದ್ಧಿ ಟ್ರಸ್ಟ್ ವತಿಯಿಂದ ನಮ್ಮ ರೈತರನ್ನು ಗೌರವಿಸುವ ಭೂಮಿ ಪ್ರಶಸ್ತಿಯ 2025ನೇ ಸಾಲಿನ ಎರಡು ಎಕರೆ ಜಮೀನಿನಲ್ಲಿ ನೈಸರ್ಗಿಕ ಸಹಜ ಕೃಷಿಯಲ್ಲಿಯ ಸಾಧನೆಗೆ ಧಾರವಾಡ ವಿಭಾಗದ ಪ್ರಶಸ್ತಿಗೆ ಸಂಸ್ಥೆವತಿಯಿಂದ ಆಯ್ಕೆ ಮಾಡಿದೆ. ಪ್ರಶಸ್ತಿ ಪ್ರದಾನವು ಫೆ.28 ರಂದು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಜರಗಲಿದೆ. ರೈತ ಡಾ. ಶೌಕತ್ ಅಲಿ ಲಂಬೂನವರ ಅವರು ಅಭಿಪ್ರಾಯಿಸಿ, ನೈಸರ್ಗಿಕ ಸಹಜ ಕೃಷಿಯ ಸಾಧನೆಗೆ ನನ್ನನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ ಸಂಸ್ಥೆಯ ಆಯ್ಕೆಯ ಸಮಿತಿಗೆ ಕೃತಜ್ಞತೆಗಳನ್ನು ತಿಳಿಸುತ್ತಾ ಕೃಷಿ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಲು ಸ್ಫೂರ್ತಿ ಬಂದಂತಾಗಿದೆ ಎಂದರು.

ಭಾರತೀಯರೆಂಬ ಭಾವನೆ ಮೂಡಲಿ



ಆಳ್ನಾವರ: ಜಾತಿ ವ್ಯವಸ್ಥೆಯನ್ನು ಮೀರಿ ನಾನೊಬ್ಬ ಭಾರತೀಯ ಎನ್ನುವ ಮನೋಭಾವನೆ ಎಲ್ಲರಲ್ಲಿ ಮೂಡಿದಾಗ ಮಾತ್ರ ಭವ್ಯ ಭಾರತ ನಿರ್ಮಾಣ ಮತ್ತು ಸಂವಿಧಾನ ಆಶೋತ್ತರಗಳು ಈಡೇರಲು ಸಾಧ್ಯ ಎಂದು ಕ.ವಿ.ವಿದ ಕಾನೂನು ವಿಭಾಗದ ಪ್ರೊ. ಎಂ. ವಿಶ್ವನಾಥ ಹೇಳಿದರು.

ಅವರು ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಡಾ.ಲೋಹಿತ ನಾಯ್ಕರ ಅವರು ಬರೆದಿರುವ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಪ್ರಕಟಿಸಿರುವ ಸಂವಿಧಾನ ಪುಸ್ತಕ ಬಿಡುಗಡೆ ಮತ್ತು ಪರಿಚಯ ಕಾರ್ಯಕ್ರಮದಲ್ಲಿ ಅವರು ಕೃತಿ ಬಿಡುಗಡೆ ಮಾಡಿ ಮಾತನಾಡಿದರು. ಕ.ವಿ.ವ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಂವಿಧಾನ ನಮ್ಮ ಬದುಕಿಗೊಂದು ದಾರಿ ತೋರಿಸುವ ಮಹಾನ್ ಗ್ರಂಥವಾಗಿದೆ ಎಂದರು. ಕೃತಿ ರಚನೆಕಾರ ಡಾ.ಲೋಹಿತ ನಾಯ್ಕರ ಮಾತನಾಡಿ, ಸಂವಿಧಾನದಿಂದ ವಿವಿಧತೆಯಲ್ಲೂ ಭಾರತ ಏಕತೆ ಕಾಣುತ್ತಿದೆ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲೆ ಡಾ. ಉಮಾ ಪೂಜಾರ ವಹಿಸಿದ್ದರು. ಪರಶುರಾಮ ಬೇಕನೆಕರ, ಅರ್ಜುನ ಅಪ್ಪೇಕರ, ಹಸನಅಲಿ ಶೇಖ, ಶಫಿಕ ಖತೀಬ, ರಮೇಶ ಕುನ್ನೂರಕರ, ಸತ್ತಾರ ಬಾತಖಂಡೆ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಅಶ್ವಿನಿ ನಿಪ್ಪಾಣಿ ಇನ್ನಿತರರಿದ್ದರು. ಅನಿಲ ಖಾತೆದಾರ ಸ್ವಾಗತಿಸಿದರು. ಸುಮಾ ಸಾವಂತ ಪುಸ್ತಕದ ಪರಿಚಯ ಮಾಡಿ ವಂದಿಸಿದರು. ವಿದ್ಯಾರ್ಥಿಗಳಿಗೆ ಉಚಿತವಾಗಿ ಸಂವಿಧಾನ ಪುಸ್ತಕಗಳನ್ನು ವಿತರಿಸಲಾಯಿತು.

ದರ ಏರಿಕೆ ಪ್ರಸ್ತಾವ ಇಲ್ಲ: ರವಿಕುಮಾರ

ಹುಬ್ಬಳ್ಳಿ: ರಾಜ್ಯದಲ್ಲಿರುವ ವಿದ್ಯುತ್ ಸರಬರಾಜು ಕಂಪನಿಗಳ ಹಣದ ಕೊರತೆಯಿದೆ. ವಿದ್ಯುತ್ ದರ ಹೆಚ್ಚಿಸುವ ಉದ್ದೇಶವಿಲ್ಲ, ನಮ್ಮ ಮುಂದೆ ದರ ಏರಿಕೆ ಪ್ರಸ್ತಾವ ಇಲ್ಲ ಎಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಮಂಡಳಿ ಆಯೋಗದ ಅಧ್ಯಕ್ಷ ಆರ್.ರವಿಕುಮಾರ ತಿಳಿಸಿದರು.

ಗೋಪನಕೊಪ್ಪದಲ್ಲಿರುವ ಹೆಸ್ಕಾಂ ನಿಗಮ ಕಚೇರಿಯಲ್ಲಿ ಗುರುವಾರ ನಡೆದ ಹೆಸ್ಕಾಂ ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ (2024-25) ಅರ್ಜಿ ಕುರಿತು ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ಸಾರ್ವಜನಿಕರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಈಗಾಗಲೇ ಮೂರು ವರ್ಷದ ಅವಧಿಗೆ ವಿದ್ಯುತ್ತರ ದರ ನಿಗದಿ ಮಾಡಲಾಗಿದೆ. ಹೀಗಾಗಿ ದರಪರಿಷ್ಕರಣೆ ಪ್ರಸ್ತಾವನೆಯಿಲ್ಲ ಎಂದರು. ವಿವಿಧೆಡೆಯಿಂದ ಆಗಮಿಸಿದ್ದ ರೈತರಾದ ಗುರುನಾಥಗೌಡ, ರುದ್ರಗೌಡ ಪಾಟೀಲ ಮಾತನಾಡಿ, ಕಲಘಟಗಿಯಲ್ಲಿ 72 ಗಂಟೆಯೊಳಗೆ ಪರಿವರ್ತಕ ಬದಲಾವಣೆ ಮಾಡುತ್ತಿಲ್ಲ, ಅನಧಿಕೃತ ಪಂಪಸೆಟ್ ಹೊಂದಿರುವ ರೈತರಿಗೆ ಹಣ ವಸೂಲು ಮಾಡುತ್ತಿದ್ದಾರೆ. ಇದರಿಂದ ಹೆಸ್ಕಾಂ ನಷ್ಟಕ್ಕೆ ಕಾರಣವಾಗಿದೆ. ಪ್ರಾಮಾಣಿಕವಾಗಿ ಬಳಕೆ ಶುಲ್ಕ ಪಾವತಿ ಮಾಡುತ್ತಿರುವ ಗ್ರಾಹಕರ ಮೇಲೆ ನಷ್ಟ ಹೇರಬಾರದು ಎಂದರು. ಹಿಂದಿನ ವರ್ಷ ಹೆಸ್ಕಾಂಗೆ ನೀಡಿದ್ದ ವೆಚ್ಚದ ಗುರಿಯು ನಿಗದಿಗಿಂತ 181 ಕೋಟಿ ರೂ. ಹೆಚ್ಚಾಗಿದ್ದು, ಇದನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಪ್ರಸ್ತಾಪಿಸಿದ್ದೇವೆ. ಇದರಿಂದ ವಿದ್ಯುತ್ ದರ ಹೆಚ್ಚಾಗುವುದಿಲ್ಲ, ಮುಂದಿನ ವರ್ಷದ ಗುರಿ ನೀಡುವಾಗ ಇದನ್ನು ಪರಿಗಣಿಸುವುದಾಗಿದೆ ಎಂದು ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ಎಂ.ಎಲ್. ವೈಶಾಲಿ ತಿಳಿಸಿದರು. ಕುಮಟಾದ ಆರವಿಂದ ಪೈ, ಕೆ.ಇ.ಆರ್.ಸಿ ಸದಸ್ಯ ಎಚ್.ಕೆ.ಜಗದೀಶ, ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ಎಂ.ಎಲ್. ವೈಶಾಲಿ, ತಾಂತ್ರಿಕ ನಿರ್ದೇಶಕ ಎಸ್.ಜಗದೀಶ, ಮುಖ್ಯ ಆರ್ಥಿಕ ಅಧಿಕಾರಿ ಆರ್.ಎನ್.ಸಬರದ ಸೇರಿದಂತೆ ಇನ್ನಿತರರಿದ್ದರು.



ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟನೆ



ಉಪ್ಪಿನಬೆಟಗೇರಿ: ಅಮ್ಮಿನಬಾವಿ ಗ್ರಾಮದ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಕನ್ನಡ ಸರಕಾರಿ ಶಾಲೆಯಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ ಜರುಗಿತು.

ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷ ಮಂಜುನಾಥ ಅಂಗಡಿ ಸಮ್ಮೇಳನ ಉದ್ಘಾಟಿಸಿದರು. ಎಸ್.ಡಿ.ಎಂ.ಸಿ. ಉಪಾಧ್ಯಕ್ಷೆ ದೀಪಾ ಸಿದ್ದಕ್ಕನವರ, ಸದಸ್ಯರುಗಳಾದ ವಿಶ್ವನಾಥ ದೇವರಮನಿ, ಪುಂಡಲೀಕ ವಿಠ್ಠೋಜಿ, ಮಂಜುನಾಥ ಪಾಲಕನವರ, ಸಂತೋಷ ನಾವಳ್ಳಿ, ಮಂಜುಳಾ ಸಿದ್ದಕ್ಕನವರ, ರತ್ನಾ ಅರಳಿಕಟ್ಟಿ, ಸವಿತಾ ಪಾಲಕನವರ, ದೀಪಾ ಇಂಚಗೇರಿಮಠ, ಯಲ್ಲವ್ವ ಗಿಡಮೂಲಿ ಹಾಗೂ ಗೀತಾ ಕಂಬಳಿ ಹಾಗೂ ಧಾರವಾಡ ತಾಲೂಕು ಟೀಚರ್ಸ್ ಸೊಸೈಟಿ ಅಧ್ಯಕ್ಷ ಶಂಕರಪ್ಪ ಘಟ್ಟಿ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಮುಖ್ಯೋಧ್ಯಾಪಕ ಶಾಮಸುಂದರ ದೇಸಾಯಿ, ಹಿರಿಯ ಶಿಕ್ಷಕಿ ಪ್ರೇಮಾ ಗುಡಿ, ಗೀತಾ ಉಳ್ಳಿಕಾಶಿ, ಅನುಪಮಾ ಹಳಕೊಪ್ಪ, ಖಾನಬಿ ಬಡೆಖಾನ್ನವರ, ಸುಜಾತಾ ಮುತಾಲಿಕದೇಸಾಯಿ ಹೊರಹೋಗುವ 8ನೇ ತರಗತಿ ವಿದ್ಯಾರ್ಥಿನಿಯರಿಗೆ ಸಲಹೆ ನೀಡಿ ಮಾತನಾಡಿದರು. ವಿದ್ಯಾರ್ಥಿನಿ ಅಶ್ವಿನಿ ಗೊಬ್ಬರಗುಂಪಿ, ಪ್ರತೀಕ್ಷಾ ಕಂಚಗಾರ ಹಾಗೂ ಕುಮಾರಿ ದಾಸನಕೊಪ್ಪ ಅನಿಸಿಕೆಗಳನ್ನು ಹಂಚಿಕೊಂಡರು. ದೈಹಿಕ ಶಿಕ್ಷಕ ಕೃಷ್ಣ ಬೊಂಗಾಳೆ ನಿರೂಪಿಸಿ, ವಂದಿಸಿದರು. ಬೇರೆ ಶಾಲೆಗೆ ವರ್ಗಾವಣೆಗೊಂಡ ಶಿಕ್ಷಕ ಗೂಡೂಸಾಬ ನದಾಫ್ ಹಾಗೂ ವಿದ್ಯಾರ್ಥಿನಿಯರಿಗೆ ಫುಟ್‌ಬಾಲ್ ತರಬೇತಿ ನೀಡುತ್ತಿರುವ ಎನ್‌ಬ್ಲಿಂಗ್ ಲೀಡರ್‌ಶಿಪ್ ಸಂಸ್ಥೆ ಮುಖ್ಯಸ್ಥ ಮಹಾದೇವ ಬಾರಾಟಕ್ಕೆ ಹಾಗೂ ಇತರೇ ಕೋಚರ್‌ಗಳನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಹಿಂದೂ ಬಂಧು ಸಮಾವೇಶ ಉದ್ಘಾಟನೆ

ಹುಬ್ಬಳ್ಳಿ: ದೇಶದ ಮಹಾಪುರುಷರ ಇತಿಹಾಸ ಅರಿಯದಿರುವುದು ದುರಂತವೇ ಸರಿ. ನಾವು ಓದಿದ ಪುಸ್ತಕಗಳು ನಿಜವಾದ ನಾಯಕರನ್ನು ಪರಿಚಯಿಸಲಿಲ್ಲ, ಮೊಘಲರ ಇತಿಹಾಸವನ್ನು ಮಾತ್ರ ಕಲಿಸಿದರು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಬೇಸರ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಪುಣ್ಯತಿಥಿ ನಿಮಿತ್ತ ಹಿಂದೂ ಶಕ್ತಿ ಸೇನಾ ವತಿಯಿಂದ ಇಲ್ಲಿಯ ಮೂರುಸಾವಿರ ಮಠದ ಶಾಲಾ ಮೈದಾನದಲ್ಲಿ ಗುರುವಾರ ಏರ್ಪಡಿಸಿದ್ದ ಹಿಂದೂ ಬಂಧು ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಮದರಸಗಳನ್ನು ನಿಷೇಧಿಸಬೇಕು. ರಾಜ್ಯ ಸರ್ಕಾರ ಮುಸ್ಲಿಮರ ಓಲೈಕೆಗಾಗಿ ಹೆಚ್ಚಿನ ಅನುದಾನ ನೀಡುತ್ತಿದೆ. ಹಿಂದೂಗಳನ್ನು ದುರ್ಬಲ ಮಾಡಲಾಗುತ್ತಿದೆ. ಮುಸ್ಲಿಮರನ್ನು ಹತ್ತಿಕ್ಕುವುದಕ್ಕೆ ನಮ್ಮಲ್ಲಿರುವುದು ಆರ್ಥಿಕವಾಗಿ ಅವರನ್ನು ಹಿಂದುಳಿಯುವಂತೆ ಮಾಡುವುದು. 2028ರಲ್ಲಿ ನಾವು ಅಧಿಕಾರಕ್ಕೆ ಬಂದರೆ ಹಿಂದೂಗಳಿಗೆ ಆಗುವ ಅವಮಾನವನ್ನು ತಡೆದು, ಸಂರಕ್ಷಿಸುತ್ತೇವೆ ಎಂದರು. ಕುಂದಗೋಳ ಕಲ್ಯಾಣಪುರ ಮಠದ ಅಭಿನವ ಬಸವಣ್ಣಜ್ಜನವರು ಸಾನ್ನಿಧ್ಯ ವಹಿಸಿದ್ದರು. ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ ಮುತಾಲಿಕ್ ಮಾತನಾಡಿದರು. ಮಲ್ಲಕಂಬ ಪ್ರದರ್ಶನ, ಕತ್ತಿವರಸೆ ಹಾಗೂ ಲಾಠಿ ಕಲೆ ಸೇರಿದಂತೆ ಇತರ ದೇಸಿ ಕಲೆಗಳ ಪ್ರದರ್ಶನ ಜರುಗಿತು. ಹಿಂದೂ ಶಕ್ತಿ ಸೇನಾ ಸಂಘಟನೆ ಉದ್ಘಾಟನೆ ಹಾಗೂ ಅಂತರ್ಜಾಲ ಲೋಕಾರ್ಪಣೆ ಮಾಡಲಾಯಿತು. ಸೇನಾ ಅಧ್ಯಕ್ಷ ಈರಣ್ಣ ಶಿರಗುಪ್ಪಿ, ಪ್ರಮುಖರಾದ ಸಾಯಿಕುಮಾರ ಸಂತಬಾ, ನಿತಿನ್ ನಾಶಿ, ರಾಜೀವ ಇನಾಂದಾರ, ಮಹೇಂದ್ರ ಗೀಣಿಮಾವ ಇತರರಿದ್ದರು. ಬೀರೇಶ ತಿರಕಪ್ಪನವರ ನಿರೂಪಿಸಿದರು.



ಪಂಕಾ ಮಸೀದಿ ಶಾಶ್ವತ ಸೀಲ್‌ಡೌನ್‌ಗೆ ಒತ್ತಾಯ

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆಯ ಮೇಲೆ ಪಂಕಾ ಮಸೀದಿಯಿಂದ ತೂರಿ ಬಂದ ಕಲ್ಲು, ಚಪ್ಪಲಿ ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಮಸೀದಿಯ ಮುಖ್ಯಸ್ಥರು, ಘಟನೆ ನಡೆಯುವ ಸಂದರ್ಭದಲ್ಲಿ ಮಸೀದಿಯಲ್ಲಿದ್ದವರನ್ನು ಬಂಧನ ಮಾಡಿ ಪ್ರಕರಣ ದಾಖಲಿಸಬೇಕು. ಪಂಕಾ ಮಸೀದಿಯನ್ನು ತಕ್ಷಣವೇ ಬಂದ್ ಮಾಡಬೇಕು. ಹದಿನೈದು ದಿನದಲ್ಲಿ ಈ ಬೇಡಿಕೆಗಳನ್ನು ಜಿಲ್ಲಾಡಳಿತ, ಪೊಲೀಸ್ ಇಲಾಖೆ ಈಡೇರಿಸಬೇಕು ಹಿಂದೂ ಸಂರಕ್ಷಣಾ ಸಮಿತಿ ಯಿಂದ ಗಡವು ನೀಡಿದೆ.



ಜಿಲ್ಲಾ ಆಡಳಿತ ಭವನ ಎದುರು ಬೃಹತ್ ಪ್ರತಿಭಟನೆ ನಡೆಸಿದ ಹಿಂದೂ ರಕ್ಷಣಾ ಸಮಿತಿಯವರು ಪಂಕಾ ಮಸೀದಿಯನ್ನು ಬಂದ್ ಮಾಡಬೇಕು. ಮತಾಂಧರನ್ನು ಬಂಧಿಸಿ ಪ್ರಕರಣ ದಾಖಲಿಸಬೇಕು ಎಂದು ಘೋಷಣೆಗಳನ್ನು ಕೂಗಿದರು. ಬೇಡಿಕೆಗಳ ಮನವಿಯನ್ನು ಜಿಲ್ಲಾಧಿಕಾರಿ ಸಂಗಪ್ಪನವರಿಗೆ ಮನವಿ ಸಲ್ಲಿಸಲಾಯಿತು.

ಹಿಂದೂ ಸಮಾಜದ ಮುಖಂಡ ರಾಜು ನಾಯ್ಕರ ಮಾತನಾಡಿ, ಬೈಕ್‌ಗಳ ಮೇಲೆ ಹೋಗುವಾಗ ಹೆಲ್ಮೆಟ್ ಇಲ್ಲದಿದ್ದರೆ, ಸೀಟ್ ಬೆಲ್ಟ್ ಹಾಕದಿದ್ದರೆ ಕ್ಯಾಮೆರಾ ಮೂಲಕ ದಂಡ ಹಾಕುವ ಪೊಲೀಸರು ಈಗ ಕಲ್ಲು, ಚಪ್ಪಲಿಯನ್ನು ಶಿವಾಜಿ ಮೆರವಣಿಗೆ ಮೇಲೆ ಎಸೆದಿದ್ದರು ಹಾಗೂ ಎಸ್ಪಿಯವರ ತಲೆಗೆ ಕಲ್ಲು ಬಿದ್ದರೂ ಏಕೆ ಕ್ರಮ ಕೈಗೊಳ್ಳುತ್ತಿಲ್ಲ. ಹಿಂದುಗಳ ಹೋರಾಟ ಮಾಡುತ್ತಾರೆಂದರೆ ಅಲ್ಲಲ್ಲಿ ಬ್ಯಾರಿಕೇಡ್ ಹಾಕಿ ಹಿಂದೂಗಳನ್ನು ಪ್ರತಿಭಟನೆಯಲ್ಲಿ ಭಾಗ ವಹಿಸದಂತೆ ತಡೆದರೆ ಇಲ್ಲಿಗೆ ಮುಗಿಯುವುದಿಲ್ಲ ಇನ್ನೂ ಪ್ರತಿಭಟನೆಯ ಸ್ಥಳ, ದಿನಾಂಕ ಹೇಳದೇ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.



ಚಿಕ್ಕೋಡಿ ತಾಲೂಕಿನ ಕೇರೂರ ಗ್ರಾಮದಲ್ಲಿ ಅರಣ್ಯ ಸಿದ್ದೇಶ್ವರ ಹಾಗೂ ಮಲಕಾರಿಸಿದ್ದೇಶ್ವರ ಜಾತ್ರೆ ಗುರುವಾರ ಸಂಪನ್ನಗೊಂಡಿತು. 30-40 ಟನ್‌ಗೂ ಹೆಚ್ಚು ಭಂಡಾರ ತೂರಿದ್ದರಿಂದ ಕೇರೂರ ಗ್ರಾಮದಾದ್ಯಂತ ಎಲ್ಲಿ ನೋಡಿದರೂ ಹಳದಿಮಯವಾಗಿರುವುದು ಕಂಡುಬಂತು.

ಮಕ್ಕಳಿಗೆ ಜಾಲತಾಣ ಬಳಕೆ ನಿಷೇಧಿಸಲು ಚಿಂತನೆ: ಮಧು

ಬೆಂಗಳೂರು: ಮಕ್ಕಳ ಹಿತದೃಷ್ಟಿಯಿಂದ 16 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸುವ ಕುರಿತು ರಾಜ್ಯ ಸರ್ಕಾರ ಚಿಂತನೆ ನಡೆಸಿದ್ದು, ಈ ನಿಟ್ಟಿನಲ್ಲಿ ಮಕ್ಕಳು, ಪೋಷಕರು ಮತ್ತು ತಜ್ಞರ ಅಭಿಪ್ರಾಯ ಪಡೆದು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚಿನ ವ್ಯವಸ್ಥೆಯಲ್ಲಿ ಮಗು ಅಳುತ್ತಿದೆ ಅಥವಾ ಮಗುವಿನ ಬೇಸರ ತಗ್ಗಿಸಲು ಪೋಷಕರೇ ಮೊಬೈಲ್ ಕೊಡುತ್ತಾರೆ. ಸಮಸ್ಯೆಯ ಮೂಲ ಇರುವುದೇ ಅಲ್ಲಿ, ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳಿಂದ ಮಕ್ಕಳು ದಾರಿ ತಪ್ಪುತ್ತಿದ್ದಾರೆ ಎಂಬುದು ಕೇವಲ ನಮ್ಮ ರಾಜ್ಯದ್ದಲ್ಲ, ಇಡೀ ದೇಶದ ಸಮಸ್ಯೆಯಾಗಿದೆ ಎಂದು ತಿಳಿಸಿದರು.

> ಸರ್ಕಾರದಿಂದ ಮೊಬೈಲ್ ಬಿಡಿ ಪುಸ್ತಕ ಹಿಡಿ ಆಂದೋಲನ

ಮೊಬೈಲ್ ಬಿಡಿ, ಪುಸ್ತಕ ಹಿಡಿ ಎಂಬ ಆಂದೋಲನದ ಬಗ್ಗೆ ಮುಖ್ಯಮಂತ್ರಿಗಳು ಈಗಾಗಲೇ ಎರಡ್ಮೂರು ಬಾರಿ ಎಚ್ಚರಿಸಿದ್ದಾರೆ. ಇದನ್ನು ಕೇವಲ ತರಗತಿಗಳಿಗೆ ಸೀಮಿತಗೊಳಿಸದೆ, ಒಂದು ಜವಾಬ್ದಾರಿಯುತ ತೀರ್ಮಾನವಾಗಿ ಜಾರಿಗೆ ತರಬೇಕಿದೆ. ಈ ಕುರಿತು ವಿಸ್ತೃತ ಚರ್ಚೆಯ ಅಗತ್ಯವಿದೆ ಎಂದು ಹೇಳಿದರು. ಮಕ್ಕಳ ಅಭಿಪ್ರಾಯವನ್ನು ಹೇಗೆ ಪಡೆಯಲಾಗುತ್ತದೆ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ಯಾವುದೇ ತೀರ್ಮಾನ ತೆಗೆದುಕೊಂಡರೂ, ಅದು ಮಕ್ಕಳ ಹಿತದೃಷ್ಟಿ ಯಿಂದಲೇ ಇರುತ್ತದೆ. ಕೇವಲ ಮಕ್ಕಳಷ್ಟೇ ಅಲ್ಲ, ಶಿಕ್ಷಕರು ಮತ್ತು ಪೋಷಕರ ಜತೆಗೂ ಚರ್ಚೆ ಮಾಡಬೇಕಿದೆ. ಸದ್ಯಕ್ಕೆ ಈ ವಿಚಾರ ಚರ್ಚೆಯ ಹಂತದಲ್ಲಿದ್ದು, ಮುಖ್ಯಮಂತ್ರಿಗಳ ಮಾರ್ಗದರ್ಶನದಲ್ಲಿ ಶೀಘ್ರವೇ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಕಿರುಸುದ್ದಿ

ಅಭಿವೃದ್ಧಿ ಕೆಲಸಗಳಿಗೆ ಅವಕಾಶ ಕಲ್ಪಿಸಲಿ

ಶಿವಮೊಗ್ಗ: ಕಾಂಗ್ರೆಸ್ ಹೈಕಮಾಂಡ್ ಬದುಕಿದ್ದರೆ ರಾಜ್ಯದಲ್ಲಿ ಅಧಿಕಾರಕ್ಕಾಗಿ ಉಂಟಾಗಿರುವ ಸಮಸ್ಯೆಯನ್ನು ಪರಿಹರಿಸಿ ಅಭಿವೃದ್ಧಿ ಕೆಲಸಗಳಿಗೆ ಅವಕಾಶ ಕಲ್ಪಿಸಲಿ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದರು. ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಧಿಕಾರಕ್ಕಾಗಿ ಕಾಂಗ್ರೆಸ್ ನಾಯಕರ ನಡುವೆ ನಡೆಯುತ್ತಿರುವ ಪೈಪೋಟಿ ನೋಡಿದರೆ ಹೈಕಮಾಂಡ್ ಜೀವಂತವಾಗಿಲ್ಲ ಎಂಬುದು ಗೊತ್ತಾಗುತ್ತದೆ. ಒಳ್ಳೆಯ ಆಡಳಿತ ನೀಡಲೆಂದು ಜನ 136 ಸ್ಥಾನಗಳನ್ನು ನೀಡಿದ್ದು, ಅದೇ ಜನ ಈಗ ಕಾಂಗ್ರೆಸ್‌ಗೆ ಯಕಾದ್ರೂ ಓಟ್ ಹಾಕಿದ್ದೇವೆಯೋ ಎಂದು ಬೈಯುತ್ತಿದ್ದಾರೆ ಎಂದರು. ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ನಡೆಯುತ್ತಿದ್ದ ಕಚ್ಚಾಟ ಬೇರೆ ಸಚಿವರಲ್ಲಿಯೂ ಆಸೆ ಹುಟ್ಟಿಸಿದೆ. ಹೀಗಾಗಿ ಗೃಹಸಚಿವ ಡಾ.ಜಿ. ಪರಮೇಶ್ವರ್, ಹಾಗೂ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕೂಡ ಸಿಎಂ ಆಗುವ ಇಂಗಿತ ವ್ಯಕ್ತಪಡಿಸುತ್ತಾ ಬೆಂಬಲಿಗ ಮೂಲಕ ಹೇಳಿಕೆ ಕೊಡಿಸುತ್ತಿದ್ದಾರೆ. ಇನ್ನೊಂದು ಕಡೆ 25 ಜನ ಅಹಿಂದ ಶಾಸಕರಿಗೆ ಮಂತ್ರಿ ಸ್ಥಾನ ನೀಡಬೇಕು. ಪರಿಪ್ರಸಾದ್‌ಗೆ ಗೃಹಸಚಿವ ಸ್ಥಾನ ನೀಡಬೇಕೆಂಬ ಒತ್ತಾಯ ಕೇಳಿ ಬರುತ್ತಿದೆ ಎಂದರು. ಸಿಎಂ ಆಕಾಂಕ್ಷಿಗಳು ವಿಧಾನಸೌಧದ ಮುಂದೆ ಧರಣಿ ಕುಳಿತರೆ ಆಗ ಹೈಕಮಾಂಡ್ ಎಚ್ಚರವಾಗಬಹುದು. ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬಹುದು. ಒಳಜಗಳದ ವಿಚಾರದಲ್ಲಿ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೂ ಕಿಮ್ಮತ್ ಇಲ್ಲದಂತಾಗಿದೆ ಎಂದರು.

ಬಿಜೆಪಿ ಪ್ರತಿಭಟನೆ ಯಾರ ವಿರುದ್ಧ?: ರಾಮಲಿಂಗಾರೆಡ್ಡಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುವ ಭರವಸೆ ನೀಡಿ, 40 ಲಕ್ಷ ಖಾಲಿ ಹುದ್ದೆಗಳ ಪೈಕಿ ಇಲ್ಲಿಯವರೆಗೆ ಕೇವಲ 7 ಲಕ್ಷ ಉದ್ಯೋಗ ನೀಡಲಾಗಿದೆ. ಹಾಗಾದರೆ ರಾಜ್ಯ ಬಿಜೆಪಿ ನಾಯಕರು ಪ್ರತಿಭಟನೆ ಮಾಡಬೇಕಾಗಿರುವುದು ಕೇಂದ್ರ ಸರ್ಕಾರದ ವಿರುದ್ಧವೇ ಅಥವಾ ರಾಜ್ಯ ಸರ್ಕಾರದ ವಿರುದ್ಧವೇ ಎನ್ನುವ ಗೊಂದಲದಲ್ಲಿ ಇದ್ದೀರಾ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರಶ್ನಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿರುವ ನಿಗಮ ಮಂಡಳಿಗಳಲ್ಲಿಯೇ 2 ಸಾವಿರ ನಿರ್ದೇಶಕರ ಹುದ್ದೆಗಳು ಖಾಲಿಯಿದ್ದು, ಆ ಖಾಲಿ ಹುದ್ದೆಗಳಿಗೆ ಬಿಜೆಪಿ ಕಾರ್ಯಕರ್ತರಿಗೆ ಹುದ್ದೆ ನೀಡಿಲ್ಲ, ಇನ್ನು ದೇಶದಲ್ಲಿರುವ ಇತರೆ ಬಿಜೆಪಿ ಕಾರ್ಯಕರ್ತರಿಗೆ ಇನ್ಯಾವ ನ್ಯಾಯ ಒದಗಿಸಲು ಸಾಧ್ಯ ಎಂದು ಹೇಳಿದರು. ಇನ್ನು ಆರ್ಥಿಕ ಇಲಾಖೆಯ 60 ಸಾವಿರ ಹುದ್ದೆಗಳ ಭರ್ತಿಗೆ ಅನುಮೋದನೆ ನೀಡಿದೆ. ಅವುಗಳು ಒಳ ಮೀಸಲಾತಿ ಸಮಸ್ಯೆಯಿಂದ ಬಾಕಿ ಆಗಿದ್ದು, ಆ ನಂತರ ನೇಮಕಾತಿ ಭರ್ತಿ ಆಗಲಿದೆ ಎಂದರು.



ರಾಜ್ಯ ಮಟ್ಟದ ಯೋಜನಾ ಸಭೆ

ಬೆಂಗಳೂರು: ಪಂಡಿತ್ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ 2026ರ ರಾಜ್ಯ ಮಟ್ಟದ ಯೋಜನಾ ಸಭೆ ನಗರದ ಸೌಟ್ಸ್ ಮತ್ತು ಗೈಡ್ಸ್ ಸಭಾಂಗಣದಲ್ಲಿ ಗುರುವಾರ ನಡೆಯಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಉಪಸ್ಥಿತಿಯಲ್ಲಿ ಯೋಜನಾ ಸಭೆಯನ್ನು ಉದ್ಘಾಟಿಸಿದರು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಉಸ್ತುವಾರಿ ಡಾ. ರಾಧಾ ಮೋಹನ್‌ದಾಸ್ ಅಗ್ರವಾಲ್, ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಇದ್ದರು.

ವಿದ್ಯಾರ್ಥಿಗಳಿಗೆ ಸಚಿವ ಮಧು ಬಂಗಾರಪ್ಪ ಕಿವಿಮಾತು

ತಂತ್ರಜ್ಞಾನ ಅರಿವು ಅಗತ್ಯ

ಬೆಂಗಳೂರು: ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ಇನ್ನೋವೇಟಿವ್ ಸಿಸ್ಟಮ್‌ಗಳ ಕಡೆಗೆ ಗಮನ ಹರಿಸಬೇಕು. ಜತೆಗೆ ನಿರಂತರ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಗುರುವಾರ ನಗರದ ಜವಾಹರಲಾಲ್ ನೆಹರು ತಾರಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಸರ್ ಸಿ.ವಿ. ರಾಮನ್ ಅವರ ರಾಮನ್ ಎಫೆಕ್ಟ್ ಸಂಶೋಧನೆಯ ಸ್ಮರಣಾರ್ಥ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ರಾಜ್ಯದ ಸರ್ಕಾರಿ ಶಾಲೆಗಳ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನ ಮತ್ತು ವಿಜ್ಞಾನದ ಅರಿವು ಮೂಡಿಸಲು ಶಾಲಾ ಶಿಕ್ಷಣ ಇಲಾಖೆಯು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯೊಂದಿಗೆ ಸದಾ ಕೈಜೋಡಿಸಲಿದೆ ಎಂದು ಭರವಸೆ ನೀಡಿದರು.

ಭಾರತದ ಸಂವಿಧಾನದ 51 (ಎಚ್) ವಿಧಿಯ ಆಶಯದಂತೆ ಪ್ರತಿಯೊಬ್ಬ ನಾಗರಿಕರಲ್ಲಿ, ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ, ವೈಚಾರಿಕತೆಯನ್ನು ಬೆಳೆಸುವುದು ನಮ್ಮ ಮೂಲಭೂತ ಕರ್ತವ್ಯವಾಗಿದೆ ಎಂದು ಪ್ರತಿಪಾದಿಸಿದರು. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್. ಬೋಸರಾಜು ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ತಂತ್ರಜ್ಞಾನದತ್ತ ಸೆಳೆಯಲು ರಾಜ್ಯಾದ್ಯಂತ ನೆಹರು ಸ್ಟೀಮ್ ಲ್ಯಾಬ್ ಹಾಗೂ ಇನ್ನೋವೇಶನ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಕೆಆರ್‌ಡಿಬಿ) ಸಹಯೋಗದೊಂದಿಗೆ, ಕಲ್ಯಾಣ ಕರ್ನಾಟಕ ಭಾಗದ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ (ಕೆಪಿಎಸ್) ನವೀನ ಮಾದರಿಯ ನೆಹರು ಸ್ಟೀಮ್ ಲ್ಯಾಬ್‌ಗಳನ್ನು ನಿರ್ಮಿಸಲಾಗುತ್ತಿದೆ ಎಂದರು. ಸಚಿವ ಪ್ರಿಯಾಂಕ್ ಖರ್ಗೆ, ಎ.ಎಸ್.ಕಿರಣ್ ಕುಮಾರ್, ಡಾ. ಮಂಜುಳಾ ಎನ್, ಸೇರಿದಂತೆ ಇತರರಿದ್ದರು.

ಸಾಮಾಜಿಕ ಜಾಲತಾಣದ ಬಗ್ಗೆ ಎಚ್ಚರವಿರಲಿ

ಇಂದಿನ ಯುವ ಪೀಳಿಗೆ ಅತೀ ಹೆಚ್ಚು ಸಾಮಾಜಿಕ ಜಾಲತಾಣದ ಬಳಕೆಯಲ್ಲಿ ಎಚ್ಚರಿಕೆ ವಹಿಸಬೇಕು. ಸಾಮಾಜಿಕ ಜಾಲತಾಣಗಳು ನಮ್ಮನ್ನು ದಾರಿತಪ್ಪಿಸದಂತೆ ನೋಡಿಕೊಳ್ಳಬೇಕು ಮತ್ತು ಅಲ್ಲಿ ಸಿಗುವ ಮಾಹಿತಿ ಸತ್ಯವೇ ಅಥವಾ ಸುಳ್ಳೇ ಎಂಬುದು ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಬೇಕು ಎಂದು ಮಧು ಬಂಗಾರಪ್ಪ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

> ವಿದ್ಯಾರ್ಥಿಗಳ ಮೊಬೈಲ್ ಬಳಕೆ ಕಡಿಮೆ ಮಾಡಬೇಕು. ಓದು ಹಾಗೂ ಕ್ರೀಡಾ ಚಟುವಟಿಕೆಗಳ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ತಮಗೆ ದೊರೆತಿರುವಂತಹ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ಹೊಸ ಅನ್ವೇಷಣೆಗಳ ಮಾಡಲು ಮುಂದಾಗಬೇಕು.
> ■ **ಡಾ.ಎಂ.ಸಿ. ಸುಧಾಕರ್,** ಉನ್ನತ ಶಿಕ್ಷಣ ಸಚಿವ

ಗಣಿ ಗುತ್ತಿಗೆದಾರರಿಂದ ರಾಜಧನ ವಸೂಲಿ ನಿಲ್ಲಿಸಿ

ಬೆಂಗಳೂರು: ಸರ್ಕಾರಕ್ಕೆ ಈಗಾಗಲೇ ರಾಜಧನ ಸಂಪೂರ್ಣವಾಗಿ ಸಂದಾಯವಾಗಿರುವ ಸಂದರ್ಭದಲ್ಲಿ ಮತ್ತೆ ಗಣಿ ಗುತ್ತಿಗೆದಾರರಿಂದ ರಾಜಧನ ವಸೂಲಿ ಮಾಡಲು ಮುಂದಾಗಿರುವುದು ಅನ್ಯಾಯಕರ ಹಾಗೂ ಕಾನೂನು ಬಾಹಿರ ಕ್ರಮವಾಗಿದ್ದು, ಇದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಕರ್ನಾಟಕ ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷ ಡಿ.ಸಿದ್ದರಾಜು ಮಾತನಾಡಿ, ಕಾಮಗಾರಿ ನಿರ್ವಹಣಾ ಇಲಾಖೆಗಳಲ್ಲಿ ರಾಜಧನವನ್ನು ಈಗಾಗಲೇ ಪಾವತಿಸಿಕೊಂಡು ಸರ್ಕಾರಕ್ಕೆ ಸಲ್ಲಿಸಲಾಗಿರುವುದರಿಂದ, ಅದೇ ರಾಜಧನವನ್ನು ಮತ್ತೆ ಗಣಿ ಗುತ್ತಿಗೆದಾರರಿಂದ ವಸೂಲಿ ಮಾಡಲು ಮುಂದಾಗಿರುವುದು ಸರಿಯಲ್ಲ. ಸರ್ಕಾರಕ್ಕೆ ಸಲ್ಲಿಸಬೇಕಾದ ರಾಜಧನ ಪೂರ್ಣವಾಗಿ ಸಂದಾಯವಾಗಿರುವ ಹಿನ್ನೆಲೆಯಲ್ಲಿ ಯಾವುದೇ ರೀತಿಯ ದ್ವಿತೀಯ ವಸೂಲಿ ನಡೆಯಬಾರದು ಎಂದು ಆಗ್ರಹಿಸಿದರು.

ಕೆಎಂಎಂಸಿಆರ್-1994 ನಿಯಮಗಳು ಪ್ರಸ್ತುತ ಕಾನೂನುಬದ್ಧ ಗಣಿಗಾರಿಕೆ ಚಟುವಟಿಕೆಗಳಿಗೆ ಪೂರಕವಾಗಿಲ್ಲ, ಆದ್ದರಿಂದ ಸಮಗ್ರ ಹಾಗೂ ಸಮರ್ಪಕ ತಿದ್ದುಪಡಿ ಮಾಡುವುದು ಅನಿವಾರ್ಯವಾಗಿದೆ. ಸರ್ಕಾರ ಕ್ಯಾಬಿನೆಟ್ ಉಪಸಮಿತಿಯ ತೀರ್ಮಾನದಂತೆ ಓಟಿಎಸ್ ಹೆಸರಿನಲ್ಲಿ ಮಾಲೀಕರ ಮೇಲೆ ಕೋಟ್ಯಾಂತರ ರೂಪಾಯಿ ದಂಡ ವಿಧಿಸಿರುವುದನ್ನು ಕರ್ನಾಟಕ ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ತೀವ್ರವಾಗಿ ಖಂಡಿಸುತ್ತದೆ ಎಂದು ಎಚ್ಚರಿಸಿದರು.

ಪಿಯು ಪ್ರಶ್ನೆಪತ್ರಿಕೆ ಮಾರಾಟ ಸುಳ್ಳು

ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ದ್ವಿತೀಯ ಪಿಯು ಪ್ರಶ್ನೆಪತ್ರಿಕೆ ಮಾರಾಟವಾಗುತ್ತಿದೆಎಂಬುದರಸಂಬಂಧ ಯಾವುದೇ ಪೂರಕ ದಾಖಲೆಗಳು ಲಭ್ಯವಿಲ್ಲ, ಇದು ಸುಳ್ಳು ಸುದ್ದಿ ಎಂದು ಕರ್ನಾಟಕ ಶಾಲಾ ಶಿಕ್ಷಣ ಮತ್ತು ಮೌಲ್ಯ ನಿರ್ಣಯ ಮಂಡಳಿ ಸ್ಪಷ್ಟಪಡಿಸಿದೆ.

ಇದು ವಿದ್ಯಾರ್ಥಿಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ದಾರಿ ತಪ್ಪಿಸುವ ಹುನ್ನಾರದ ಭಾಗವಾಗಿದ್ದು, ಈ ರೀತಿಯ ಸುಳ್ಳು ಸುದ್ದಿಯನ್ನು ಹರಡುವವರನ್ನು ಗುರುತಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಮಂಡಳಿಯ ಜಾಲತಾಣ kseab.karnataka.gov.inನಲ್ಲಿ ಮಕ್ಕಳ ಪರೀಕ್ಷೆ ಸಿದ್ಧತೆಗೆ ವಿದ್ಯಾರ್ಥಿಗಳ ಅಂಕಣದಲ್ಲಿ ಈಗಾಗಲೇ ಒದಗಿಸಲಾಗಿದೆ.

ಡಿಜಿಟಲ್ ರೂಪದಲ್ಲಿ ದೂರದರ್ಶನ

ಶಿವಮೊಗ್ಗ: ಆಕಾಶವಾಣಿ ಮತ್ತು ದೂರದರ್ಶನ ಸೇವೆಯನ್ನು ಡಿಜಿಟಲ್ ರೂಪದಲ್ಲಿಯೂ ನೀಡಲು ಮೇಲ್ದರ್ಜೆಗೆ ಏರಿಸಲಾಗುತ್ತಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ರಾಜ್ಯ ಖಾತೆ ಸಚಿವ ಡಾ.ಎಲ್. ಮುರುಗನ್ ತಿಳಿಸಿದರು.

ನಗರದ ಸಹ್ಯಾದ್ರಿ ಕಾಲೇಜು ಎದುರಿನ ದೂರದರ್ಶನ ಪ್ರಸರಣ ಕೇಂದ್ರದ ಆವರಣದಲ್ಲಿ ಗುರುವಾರ ಭದ್ರಾವತಿ ಆಕಾಶವಾಣಿ ಕೇಂದ್ರದ 10 ಕಿವಿ ಎಫ್ ಎಂ ಟ್ರಾನ್ಸ್‌ಮಿಟರ್ ವಿಸ್ತರಣಾ ಸೇವೆ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಆಕಾಶವಾಣಿ ಯಾವಾಗಲೂ ಸತ್ಯ ಮತ್ತು ಶುದ್ಧ ಸುದ್ದಿಗಳನ್ನು ನೀಡುತ್ತಾ ಬಂದಿದೆ. ಬ್ರೇಕಿಂಗ್ ಸುದ್ದಿಗಳ ಹಿಂದೆ ಬೀಳದೇಯೂ ಕೆಲಸ ಮಾಡುತ್ತಿದೆ.



2500 ಕೋಟಿ ಕಳೆದ ವರ್ಷ ಮೂಲ ಸೌಕರ್ಯಕ್ಕಾಗಿ ವೆಚ್ಚ ಮಾಡಲಾಗಿದೆ. ದಿನೇ ದಿನೇ ತಂತ್ರಜ್ಞಾನ ಬದಲಾಗುತ್ತಿದೆ. ಡಿಜಿಟಲ್ ತಂತ್ರಜ್ಞಾನಕ್ಕೆ ತಕ್ಕಂತೆ ಆಕಾಶವಾಣಿ ಮತ್ತು ದೂರದರ್ಶನದಲ್ಲಿಯೂ ಬದ ಲಾವಣೆಗಳು ಆಗುತ್ತಿವೆ ಎಂದರು.

ರಾಷ್ಟ್ರದ ಕಟ್ಟ ಕಡೆಯ ವ್ಯಕ್ತಿಯ ಅಭಿವೃದ್ಧಿ ಪ್ರಧಾನಿ ನರೇಂದ್ರ ಮೋದಿ ಅವರ ಕನಸು. ಅದಕ್ಕಾಗಿ ಸರ್ಕಾರ ಕೆಲಸ ಮಾಡುತ್ತಿದೆ. ಆಕಾಶವಾಣಿ ರಾಷ್ಟ್ರದ ಧ್ವನಿ ಆಗಿದೆ. ಮಾಹಿತಿ ನೀಡುವ ಜೊತೆಗೆ ಜನರನ್ನು ಬೆಸೆಯುತ್ತದೆ. ಈಗ ಎಲ್ಲರೂ ಕ್ರಿಯೇಟಿವ್ ಆಗಿದ್ದಾರೆ.

ಆಕಾಶ ವಾಣಿ ಕೂಡ ಇದಕ್ಕೆ ಹೊರತಾಗಿಲ್ಲ, 15,000 ಶಾಲೆಗಳಲ್ಲಿ ಕ್ರಿಯೇಟಿವ್ ಪ್ರಯೋಗಾಲಯ ಆರಂಭ ಮಾಡುವ ಘೋಷಣೆ ಬಜೆಟ್‌ನಲ್ಲಿ ಆಗಿದೆ ಎಂದರು. ಶಿವಮೊಗ್ಗ ಶಾಸಕ ಎಸ್.ಎನ್.ಚನ್ನಬಸಪ್ಪ, ಡಾ. ಧನಂಜಯ ಸರ್ಜಿ, ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಜಿಲ್ಲಾ ರಕ್ಷಣಾಧಿಕಾರಿ ಬಿ. ನಿಖಿಲ್, ಭದ್ರಾವತಿ ಆಕಾಶವಾಣಿ ಕೇಂದ್ರದ ನಿರ್ದೇಶಕ ಎಸ್.ಆರ್. ಭಟ್, ಆಕಾಶವಾಣಿ ದಕ್ಷಿಣ ವಲಯ ಅಪರ ನಿರ್ದೇಶಕಿ ಗೀತಾ ರಾಣಿ ಇನ್ನಿತರರು ಇದ್ದರು.

ಎಫ್‌ಎಂ ಕೇಂದ್ರ ವಿಸ್ತರಣೆ

ರಾಜ್ಯದಲ್ಲಿ ಅನೇಕ ಕಡೆ ಆಕಾಶವಾಣಿ ಕೇಂದ್ರ ಇದೆ. ಅವು ಎರಡು ರಾಜ್ಯಗಳಿಗೆ ಪ್ರಸಾರ ಆಗುತ್ತದೆ. ಭದ್ರಾವತಿ ಆಕಾಶವಾಣಿ ಕೇಂದ್ರ ಸಂಪೂರ್ಣ ಕನ್ನಡಿಗರಿಗೆ ಮಾತ್ರ ಕೇಳಿಸುತ್ತದೆ. 1987ರಲ್ಲಿ ಭದ್ರಾವತಿಯಲ್ಲಿ ಸ್ವಂತ ಸ್ಟುಡಿಯೋ ಆಗಿತ್ತು. 1994ರಲ್ಲಿ ಒಂದು ಕಿಲೋ ವ್ಯಾಟ್ ಎಫ್‌ಎಂ ಆರಂಭ ಮಾಡಿದ್ದರು. ಅದು ಇಲ್ಲಿಯೇ ಕೇಳಿಸುತ್ತಿರಲಿಲ್ಲ. ಯಡಿಯೂರಪ್ಪ ಅವರು ಸಂಸದರಾಗಿದ್ದಾಗ ಎಫ್‌ಎಂ ಕೇಂದ್ರದ ವಿಸ್ತರಣೆಗೆ ಮನವಿ ಸಲ್ಲಿಸಿದ್ದರು. ಅದೀಗ ಸಾಕಾರಗೊಂಡಿದೆ ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ಮುತ್ಯಾ ವಿರುದ್ಧ ಪೋಕ್ಸೋ ದೂರು

ಯಾದಗಿರಿ: ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತನೆ ಮಾಡಿದ ಹಿನ್ನೆಲೆಯಲ್ಲಿ ಜಿಲ್ಲೆಯ ಶಹಾಪುರ ತಾಲೂಕಿನ ಮಹಲರೋಜಾದ (ಚಾಂಗ್ ದೇವ್) ಯಮ ನೂರಪ್ಪ ದೇವಸ್ಥಾನದ ಪೀಠಾಧಿಪತಿ ಸ್ವಯಂ ದೇವ ಮಾನವ ಮಲ್ಲಿಕಾರ್ಜುನ ಮುತ್ಯಾನ ಮೇಲೆ ಪೋಕ್ಸೋ ಪ್ರಕರಣ ದಾಖಲಿಸಲಾಗಿದೆ.



ಮಲ್ಲಿಕಾರ್ಜುನ ಮುತ್ಯಾ ಮಠಕ್ಕೆ ಬರುವ ಭಕ್ತರ ಅಂತರಂಗದ ವಿಷಯಗಳನ್ನು ಹೇಳುತ್ತಾರೆ. ಇದರಿಂದ ಭಕ್ತರ ಸಮಸ್ಯೆಗಳು ದೂರವಾಗಿಸುತ್ತಾರೆ ಎಂಬ ನಂಬಿಕೆ ಇದೆ. ಹೀಗಾಗಿ ಮುತ್ಯಾ ಹೋದಲ್ಲೆಲ್ಲ ಭಕ್ತರು ಮುಗಿಬೀಳುತ್ತಾರೆ. ಮಾತ್ರವಲ್ಲ ಕರ್ನಾಟಕ ಸೇರಿ ನೆರೆಯ ತೆಲಂಗಾಣ, ಮಹಾರಾಷ್ಟ್ರ ರಾಜ್ಯದಲ್ಲಿ ಇವರ ಭಕ್ತರಿದ್ದಾರೆ ಆದರೆ, ಕಳೆದ ಕೆಲ ದಿನಗಳ ಹಿಂದೆ ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತನೆ ಮಾಡಿದ್ದ ವಿಡಿಯೋ ಬಗ್ಗೆ ಎಲ್ಲೆಡೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಅಪ್ರಾಪ್ತ ಬಾಲಕಿ ಪೋಷಕರು ಮಲ್ಲಿಕಾರ್ಜುನ ಮುತ್ಯಾ ಬೆಂಬಲಕ್ಕೆ ನಿಂತಿದ್ದಾರೆ. ಬಾಲಕಿ ಬರ್ತಡೇ ಇರೋದ್ರಿಂದ ನಾವು ಅಪ್ಪಾಜಿ ಮಠಕ್ಕೆ ಹೋಗಿದ್ದೇವು. ನಮ್ಮ ಕುಟುಂಬವೂ ಮಲ್ಲಿಕಾರ್ಜುನ ಮುತ್ಯಾ ಅವರ ಭಕ್ತರಾಗಿದ್ದೇವೆಂದು ತಿಳಿಸಿದ್ದಾರೆ.

ಸಮಾಜದ ಒಳಿತಿಗೆ ಸಂಕಲ್ಪ ಇರಲಿ

ಬೆಂಗಳೂರು: ನಮ್ಮ ನಾಡಿನ ಕೈಗಾರಿಕಾ ಮತ್ತು ವಾಣಿಜ್ಯ ಕ್ಷೇತ್ರವು ಕೇವಲ ಲಾಭದ ಉದ್ದೇಶ ಹೊಂದಿರದೆ, ಸಮಾಜದ ಒಳಿತನ್ನು ಸಾಧಿಸುವ ದೃಢ ಸಂಕಲ್ಪ ಹೊಂದಿರಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.



ನಗರದ ಖಾಸಗಿ ಹೊಟೇಲ್‌ನಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯ 50ನೇ ವರ್ಷದ ಸುವರ್ಣ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ನೂತನ ಲೋಗೋ ಅನಾವರಣಗೊಳಿಸಿ ಮಾತನಾಡಿದ ಅವರು. ಬಿಸಿಐಸಿಯ ಲಾಂಛನವು ಮೈಸೂರು ರಾಜಮನೆತನದ ಅಧಿಕೃತ ಚಿಹ್ನೆಯಾದ ಗಂಡಭೇರುಂಡದಿಂದ ಸ್ಫೂರ್ತಿ ಪಡೆದಿದೆ. ಗಂಡಭೇರುಂಡವು ಕೇವಲ ಒಂದು ಪಕ್ಷಿಯಲ್ಲ ಅದು ಅಸಾಧಾರಣ ಶಕ್ತಿಯ ಸಂಕೇತ. ವಿಷ್ಣು ಪುರಾಣದ ಕಥೆಯಂತೆ, ಇದು ಲೋಕಕಲ್ಯಾಣಕ್ಕಾಗಿ ಉದ್ಭವಿಸಿದ ಶಕ್ತಿ. ಒಂದು ಮುಖದಿಂದ ಒಳಿತನ್ನು, ಇನ್ನೊಂದು ಮುಖದಿಂದ ಕೆಡುಕನ್ನು ಸಮಾನವಾಗಿ ಎದುರಿಸುವ ಅದರ ಗುಣವು ನಮ್ಮ ಉದ್ಯಮ ಲೋಕಕ್ಕೆ ಮಾದರಿಯಾಗಲಿ ಎಂದು ತಿಳಿಸಿದರು.

ಪರಂಪರೆಯ ಮುಂದುವರಿಕೆ

ಮೈಸೂರು ಸಂಸ್ಥಾನದ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್. ಎಂ. ವಿಶ್ವೇಶ್ವರಯ್ಯ ಅವರು ಹಾಕಿಕೊಟ್ಟ ಕೈಗಾರಿಕಾ ಕ್ರಾಂತಿಯ ಅಡಿಪಾಯವನ್ನು ಹಾಕಿಕೊಟ್ಟಿದ್ದಾರೆ. ರಾಜ್ಯದ ಆರ್ಥಿಕ ಪ್ರಗತಿಗೆ ಅಂದು ಮೈಸೂರು ವಾಣಿಜ್ಯ ಮಂಡಳಿ ಯಾವ ರೀತಿ ಶ್ರಮಿಸಿತ್ತೋ, ಇಂದು ಬಿಸಿಐಸಿ ಕೂಡ ಅದೇ ಹಾದಿಯಲ್ಲಿ ಸಾಗುತ್ತಿದೆ. ಇದು ಕೇವಲ ಒಂದು ಸಂಘಟನೆಯಲ್ಲ, ಬದಲಾಗಿ ಸರ್ಕಾರದ ನೀತಿಗಳನ್ನು ರೂಪಿಸುವಲ್ಲಿ ಮತ್ತು ಉದ್ಯಮಿಗಳಿಗೆ ಸರಿಯಾದ ಮಾರ್ಗದರ್ಶನ ನೀಡುವಲ್ಲಿ ಪ್ರಮುಖ ಕೊಂಡಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಬಿಸಿಐಸಿ ಅಧ್ಯಕ್ಷ ಪ್ರಶಾಂತ್ ಗೋಖಲೆ, ಸಿ.ಎ. ರವಿ, ದೇವನಂದ್, ಆರ್. ಶ್ರೀನಿವಾಸನ್, ಪಂಕಜಮ್ ಶ್ರೀದೇವಿ, ಪ್ರಶಾಂತ ರೆಡ್ಡಿ ಉಪಸ್ಥಿತರಿದ್ದರು.

ವಿಕಸಿತ ಭಾರತದತ್ತ ಹೆಜ್ಜೆ

ಪ್ರಧಾನಮಂತ್ರಿಯವರ ವಿಕಸಿತ ಭಾರತದ ಕನಸನ್ನು ನನಸು ಮಾಡಲು ಕೈಗಾರಿಕಾ ಸಂಘಟನೆಗಳ ಪಾತ್ರ ದೊಡ್ಡದು. ನಮ್ಮ ದೇಶದ ಜನಸಂಖ್ಯಾ ಲಾಭವನ್ನು ಬಳಸಿಕೊಂಡು, ಸುಸ್ಥಿರ ಆರ್ಥಿಕತೆಯನ್ನು ಕಟ್ಟಬೇಕಿದೆ. ಉದ್ಯಮಗಳು ಕೇವಲ ವ್ಯಾಪಾರಕ್ಕೆ ಸೀಮಿತವಾಗದೆ, ಜನಸಾಮಾನ್ಯರ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು, ಎಂದು ಯದುವೀರ್ ಕರೆ ನೀಡಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರ ಆಯ್ಕೆ ಪ್ರಕ್ರಿಯೆಯಲ್ಲಿ ಉಂಟಾದ ಗೊಂದಲ

ನೇಮಕಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳಲ್ಲಿ ಆತಂಕ

ನಂದಿನಿ ಎನ್.

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಆಯ್ಕೆ ಪ್ರಕ್ರಿಯೆಯಲ್ಲಿ ಉಂಟಾದ ಗೊಂದಲವು ನೇಮಕಾತಿಗಾಗಿ ಕಾಯುತ್ತಿರುವ ಅಭ್ಯರ್ಥಿಗಳಲ್ಲಿ ಆತಂಕವನ್ನು ಸೃಷ್ಟಿಸಿದೆ.

ಅಂತಿಮ ಮೆರಿಟ್ ಪಟ್ಟಿ ಬಿಡುಗಡೆ ಮಾಡುವ ಸಂದರ್ಭದಲ್ಲಿ ಕಾಲೇಜು ಶಿಕ್ಷಣ ಇಲಾಖೆ (ಡಿಸಿಇ) ಮೆರಿಟ್‌ಗೆ ಅಗತ್ಯವಾದ ಪ್ರಾಮುಖ್ಯತೆ ನೀಡದೇ ಹೈದರಬಾದ್ ಕರ್ನಾಟಕ (ಎಚ್‌ಕೆ) ಹಾಗೂ ಹೈದರಾಬಾದ್-ಕರ್ನಾಟಕವಲ್ಲದ (ನಾನ್ ಎಚ್‌ಕೆ) ಎಂದು ಎರಡು ಪ್ರತ್ಯೇಕ ಪಟ್ಟಿಗಳನ್ನು ಪ್ರಕಟಿಸಿರುವುದು ವಿವಾದಕ್ಕೆ ಕಾರಣವಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್) ಮಾರ್ಗಸೂಚಿಗಳ ಪ್ರಕಾರ, ಒಂದೇ ನೇಮಕಾತಿ ಅಧಿಸೂಚನೆ, ಒಂದೇ ಪರೀಕ್ಷೆ ಮತ್ತು ಒಂದೇ ಆಯ್ಕೆ ಪ್ರಕ್ರಿಯೆ ಇದ್ದಲ್ಲಿ, ಹೆಚ್ಚಿನ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಥವಾ ಹೈದರಾಬಾದ್-ಕರ್ನಾಟಕ ಮೀಸಲಾತಿಗೆ ಸೇರಿದವರಾಗಿದ್ದರೂ, ಸಾಮಾನ್ಯ ಮೆರಿಟ್ ಅಡಿಯಲ್ಲಿ ಪರಿಗಣಿಸಬೇಕು ಎಂದು ಸ್ಪಷ್ಟಪಡಿಸಿದೆ.

ಆದಾಗ್ಯೂ, ಈ ನಿಯಮವನ್ನು ಕಡೆಗಣಿಸಿ ಕಾಲೇಜುಶಿಕ್ಷಣ ಇಲಾಖೆ ಎರಡು ಪ್ರತ್ಯೇಕ ಪಟ್ಟಿಗಳನ್ನು ಬಿಡುಗಡೆ ಮಾಡಿರುವುದರಿಂದ ಹೈದರಾಬಾದ್-ಕರ್ನಾಟಕ ಪ್ರದೇಶದ ಮೆರಿಟ್ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದಾಗಿ ಆರೋಪಿಸಲಾಗಿದೆ. ಈ ಕುರಿತು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಕೂಡ ಮೆರಿಟ್ ಆಧಾರಿತ ಏಕೀಕೃತ ಪಟ್ಟಿಯನ್ನು ಸಿದ್ಧಪಡಿಸುವುದರ ಅಗತ್ಯವನ್ನು ಒತ್ತಿ ಹೇಳಿರುವುದು ಗಮನಾರ್ಹವಾಗಿದೆ.

2 ಪ್ರತ್ಯೇಕ ಪಟ್ಟಿಗಳ ಬಿಡುಗಡೆಯ ಪರಿಣಾಮವಾಗಿ, ಹೈದರಾಬಾದ್-ಕರ್ನಾಟಕ ಮೀಸಲಾತಿಗೆ ಸೇರಿದ ಹಾಗೂ ಹೆಚ್ಚಿನ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಸಾಮಾನ್ಯ ಮೆರಿಟ್‌ನಲ್ಲಿ ಪರಿಗಣನೆಯಾಗದೆ, ತಮ್ಮ ನ್ಯಾಯಸಮ್ಮತ ಅವಕಾಶವನ್ನು ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗಿದೆ.

ಆದೇಶದಲ್ಲಿಯೂ ಎರಡು ಪ್ರತ್ಯೇಕ ಪಟ್ಟಿ ಬಿಡುಗಡೆ: 2025 ರ ಜೂ.3 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹೊರಡಿಸಿದ ಆದೇಶದಲ್ಲಿಯೂ ಅಭ್ಯರ್ಥಿಗಳ ಏಕೀಕೃತ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಬೇಕೆಂದು ಸ್ಪಷ್ಟವಾಗಿ ಸೂಚನೆ ನೀಡಲಾಗಿದೆ. ಆದರೆ, ಈ ಮಾರ್ಗಸೂಚಿಗಳನ್ನು ಅನುಸರಿಸದೇ ಕಾಲೇಜು ಶಿಕ್ಷಣ ಇಲಾಖೆ ಎರಡು ಪ್ರತ್ಯೇಕ ಪಟ್ಟಿಗಳನ್ನು ಬಿಡುಗಡೆ ಮಾಡಿರುವುದು ಅಭ್ಯರ್ಥಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

2022ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಗ್ರೇಡ್-1 ಪ್ರಾಂಶುಪಾಲರ ಖಾಲಿ ಹುದ್ದೆಗಳ ನೇರ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅಧಿಸೂಚನೆ ಹೊರಡಿಸಿತ್ತು. ಹಲವು ಕಾರಣಗಳಿಂದ ಈ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿತ್ತು.

ಇತ್ತೀಚೆಗೆ ಪ್ರಕ್ರಿಯೆಗೆ ವೇಗ ಸಿಕ್ಕಿದ್ದು ಅಭ್ಯರ್ಥಿಗಳಲ್ಲಿ ಆಶಾಭಾವನೆ ಮೂಡಿಸಿತ್ತು. ಆದರೆ, ಅಂತಿಮ ಪಟ್ಟಿಯ ಗೊಂದಲವು ಅವರ ಸಂತಸವನ್ನು ಕಮರಿಸಿದೆ.

ಹೈದರಾಬಾದ್-ಕರ್ನಾಟಕದ ಮೆರಿಟ್ ಅಭ್ಯರ್ಥಿಗಳಿಗೆ ಅನ್ಯಾಯ



ಹೆಚ್ಚುವರಿಯಾಗಿ ಎಚ್‌ಕೆ ಪ್ರದೇಶಕ್ಕೆ ಜಾಹೀರಾತು ಮಾಡಲಾದ 45 ಹುದ್ದೆಗಳಲ್ಲಿ ಕೇವಲ 36 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, ಇನ್ನೂ 9 ಹುದ್ದೆಗಳು ಖಾಲಿ ಉಳಿದಿವೆ. ಸರ್ಕಾರವು ಈ ಉಳಿದ 9 ಹುದ್ದೆಗಳನ್ನೂ ಭರ್ತಿ ಮಾಡಿದಲ್ಲಿ, ಉಳಿದ ಅರ್ಹ ಅಭ್ಯರ್ಥಿಗಳಿಗೆ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುವ ಅವಕಾಶ ಲಭಿಸಲಿದೆ. ಕಾಲೇಜು ಶಿಕ್ಷಣ ಇಲಾಖೆ ಬಿಡುಗಡೆ ಮಾಡಿದ ಎರಡು ಆಯ್ಕೆ ಪಟ್ಟಿಗಳಿಂದ ನಮ್ಮಂತಹ ಹೈದರಾಬಾದ್-ಕರ್ನಾಟಕದ ಮೆರಿಟ್ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಈ ನೇಮಕಾತಿಗಾಗಿ ನಾವು ಹಲವು ವರ್ಷಗಳಿಂದ ಕಾಯುತ್ತಿದ್ದೇವೆ. ಈಗ ಸಾಮಾನ್ಯ ಮೆರಿಟ್ ಪಟ್ಟಿಯಲ್ಲಿ ಹೈದರಾಬಾದ್-ಕರ್ನಾಟಕದ ಮೆರಿಟ್ ಅಭ್ಯರ್ಥಿಗಳನ್ನು ಪರಿಗಣಿಸದೇ ಇರುವುದು ನಮಗೆ ಅನ್ಯಾಯವಾಗಿದೆ ಎಂದು ನೊಂದ ಅಭ್ಯರ್ಥಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಉಳ್ಳವರು ಗ್ಯಾರಂಟಿ ತ್ಯಾಗ ಮಾಡಲಿ

> ಮಾಧ್ಯಮಗಳು ಯಾವುದನ್ನೂ ಸಹ ತಿರುಚುವುದು ಬೇಡ: ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು: ಸಿರಿವಂತರು ಗ್ಯಾರಂಟಿ ಯೋಜನೆಗಳನ್ನು ಬಿಟ್ಟು ಕೊಡುವುದರಲ್ಲಿ ತಪ್ಪೇನಿದೆ. ಸರ್ಕಾರಿ ನೌಕರರು, ದೊಡ್ಡ, ದೊಡ್ಡ ಐಟಿ ಕಂಪೆನಿಗಳಲ್ಲಿ ಕೆಲಸ ಮಾಡುತ್ತಾ ಇರುವವರು - ಹೀಗೆ ಬಹಳ ಜನ ನಮಗೆ ಗ್ಯಾರಂಟಿ ಯೋಜನೆಗಳು ಬೇಡ ಎಂದಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.



ಗುರುವಾರ ವಿಧಾನಸೌಧದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಸಿರಿವಂತರು ಗ್ಯಾರಂಟಿ ಯೋಜನೆಗಳ ಫಲಾನುಭವದಿಂದ ಹೊರಬರಲಿ ಎಂದು ಒಂದಷ್ಟು ಸಚಿವರು ಹೇಳುತ್ತಿದ್ದಾರೆ.

ಒಂದಷ್ಟು ಸಿರಿವಂತರು ನಮಗೆ ಅವಶ್ಯಕತೆ ಇಲ್ಲ ಎಂದಿದ್ದಾರೆ. 200 ಯೂನಿಟ್ ಉಚಿತ ವಿದ್ಯುತ್ ಬಗ್ಗೆಯೂ ಹೇಳಿದ್ದಾರೆ. ಅದಕ್ಕೆ ನಾವು ಆ ಬಗ್ಗೆ ವಿಮರ್ಶೆ ಮಾಡುತ್ತಿದ್ದೇವೆ ಎಂದು ಹೇಳಿದರು.

ಮಾಧ್ಯಮಗಳು ಯಾವುದನ್ನೂ ಸಹ ತಿರುಚುವುದು ಬೇಡ. ಯಾವ ಕಾರಣಕ್ಕೂ ಯಾವ ಗ್ಯಾರಂಟಿಗಳೂ ನಿಲ್ಲುವುದಿಲ್ಲ, ಎಷ್ಟೇ ಕಷ್ಟ ಇದ್ದರೂ ಸಹ ಗ್ಯಾರಂಟಿಗಳನ್ನು ಕೊಡುತ್ತಿದ್ದೇವೆ. ಗ್ಯಾರಂಟಿಯಿಂದ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ ಎನ್ನುವ ಸುಳ್ಳಿನ ಬಗ್ಗೆಯೂ ಸ್ಪಷ್ಟನೆ ನೀಡಿದ್ದೇನೆ. ಈ ಬಜೆಟ್‌ನಲ್ಲಿ ಒಳ್ಳೊಳ್ಳೆ ಅಭಿವೃದ್ಧಿ ಕೆಲಸಗಳನ್ನು ನಮ್ಮ ಸರ್ಕಾರ ಘೋಷಣೆ ಮಾಡುತ್ತದೆ ಎಂದು ಹೇಳಿದರು.

ಕೇಂದ್ರ ಬಿಜೆಪಿ ಸರ್ಕಾರ ರಾಜ್ಯಕ್ಕೆ ಯಾವುದೇ ರೀತಿಯಲ್ಲೂ ಸಹಾಯ ಮಾಡುತ್ತಿಲ್ಲ ಆದರೂ ನಾವು ಗ್ಯಾರಂಟಿ ಯೋಜನೆಗಳನ್ನು ನೀಡಿ ನಿಭಾಯಿಸುತ್ತಿದ್ದೇವೆ. ಸರ್ಕಾರವೂ ಸಹ ಅತ್ಯುತ್ತಮವಾಗಿ ಆಡಳಿತ ನಡೆಸಿಕೊಂಡು ಹೋಗುತ್ತಿದೆ. 21 ಕೋಟಿಯಷ್ಟು ಹಣ ಮೃತಪಟ್ಟಿರುವ ಮಹಿಳೆಯರ ಖಾತೆಗೆ ಹೋಗಿದೆ. ಇದರ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ ಎಂದು ಹೇಳಿದರು.

ಸಂಪಾದಕೀಯ

ತಪ್ಪಿತಸ್ಥರ ವಿರುದ್ಧ ಕ್ರಮ ಆಗಲಿ

ಶಿಕ್ಷಣ ವ್ಯವಸ್ಥೆ ಒಂದು ರಾಷ್ಟ್ರದ ಮನಸ್ಸನ್ನು ರೂಪಿಸುವ ಮಹತ್ತರ ಸಾಧನವಾಗಿದೆ. ಆದ್ದರಿಂದ ಪಠ್ಯಪುಸ್ತಕಗಳಲ್ಲಿ ಒಳಗೊಳ್ಳುವ ಪ್ರತಿಯೊಂದು ವಾಕ್ಯವೂ ಪರಿಶೀಲಿತ, ಸಮತೋಲನಯುತ ಹಾಗೂ ಜವಾಬ್ದಾರಿಯುತವಾಗಿರಬೇಕು. 8ನೇ ತರಗತಿಯ ಸಾಮಾಜಿಕ ವಿಜ್ಞಾನ ಪಠ್ಯಪುಸ್ತಕದ ಸುತ್ತ ಉದ್ಭವಿಸಿದ ವಿವಾದ ಇದೇ ಮೂಲಭೂತ ಪ್ರಶ್ನೆಯನ್ನು ಮತ್ತೆ ಮುಂದಿರಿಸಿದೆ. ನ್ಯಾಯಾಂಗದಂತಹ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡುವುದು ಅಗತ್ಯವೇ ಸರಿ. ಆದರೆ ಅದು ವಾಸ್ತವಾಧಾರಿತ, ಸಂದರ್ಭಸೂಕ್ತ ಮತ್ತು ಸಂವೇದನಾಶೀಲವಾಗಿರಬೇಕು.

ಪ್ರಶ್ನೆ ಕೇವಲ ಒಂದು ಅಧ್ಯಾಯದ ಬಗ್ಗೆ ಅಲ್ಲ, ಪ್ರಶ್ನೆ ಶಿಕ್ಷಣದ ದಿಕ್ಕಿನ ಬಗ್ಗೆ. ಯುವ ಮನಸ್ಸುಗಳಿಗೆ ಯಾವ ರೀತಿಯ ಸಂದೇಶವನ್ನು ನೀಡುತ್ತಿದ್ದೇವೆ? ಸಂಸ್ಥೆಗಳ ಮೇಲೆ ನಂಬಿಕೆಯನ್ನು ಬಲಪಡಿಸುವುದೇ, ಅಥವಾ ಸಂಶಯದ



ಬೀಜ ಬಿತ್ತುವುದೇ? ವಿಮರ್ಶಾತ್ಮಕ ಚಿಂತನೆ ಬೆಳೆಸುವುದು ಶಿಕ್ಷಣದ ಉದ್ದೇಶ. ಆದರೆ ಅದನ್ನು ನಿರ್ದಿಷ್ಟ ದೃಷ್ಟಿಕೋನದ ಮೂಲಕ ಒತ್ತಾಯಿಸುವುದು ಸೂಕ್ತವಲ್ಲ. ವಾಸ್ತವಗಳ ಸಮತೋಲನ, ವಿವರಣೆಗಳ ನಿಖರತೆ ಮತ್ತು ಪದಪ್ರಯೋಗದ ಜಾಣ್ಮೆ ಇಲ್ಲಿ ನಿರ್ಣಾಯಕ.

ಈ ವಿವಾದವು ಮತ್ತೊಂದು ಗಂಭೀರ ಅಂಶವನ್ನೂ ಬಹಿರಂಗಪಡಿಸಿದೆ ಪಠ್ಯ ವಿಷಯದ ಮೇಲ್ವಿಚಾರಣೆ. ಪರಿಶೀಲನಾ ವ್ಯವಸ್ಥೆಗಳು ಎಷ್ಟು ಕಟ್ಟುನಿಟ್ಟಾಗಿವೆ? ವಿಷಯ ರಚನೆ, ಸಂಪಾದನೆ, ಅಂತಿಮ ಅನುಮೋದನೆ ಪ್ರತಿಯೊಂದು ಹಂತವೂ ದೋಷರಹಿತವಾಗಿರಬೇಕಾದರೆ ಸಂಸ್ಥಾತ್ಮಕ ಜವಾಬ್ದಾರಿ ಸ್ಪಷ್ಟವಾಗಬೇಕು. ಶಿಕ್ಷಣದ ವೇದಿಕೆಯಲ್ಲಿ ಅನಿರೀಕ್ಷಿತ ತಪ್ಪುಗಳಿಗೆ ಅವಕಾಶ ಇರಬಾರದು.

ಶಾಲಾ ಪಠ್ಯಪುಸ್ತಕಗಳು ಕೇವಲ ಜ್ಞಾನ ನೀಡುವ ಸಾಧನಗಳಲ್ಲ; ಅವು ಮೌಲ್ಯಗಳ ಬೀಜ ಬಿತ್ತುವ ನೆಲ. ಆದ್ದರಿಂದ ಶಿಕ್ಷಣ ನೀತಿ ರೂಪಿಸುವವರಿಂದ ಹಿಡಿದು ವಿಷಯ ತಯಾರಕರವರೆಗೆ ಎಲ್ಲರೂ ಹೆಚ್ಚಿನ ಜವಾಬ್ದಾರಿಯನ್ನು ಅರಿತು ನಡೆಬೇಕು. ಯುವಜನರ ಮನಸ್ಸು ರಾಷ್ಟ್ರದ ಭವಿಷ್ಯ. ಆ ಭವಿಷ್ಯವನ್ನು ಗೊಂದಲದಿಂದಲ್ಲ, ಸ್ಪಷ್ಟತೆ ಮತ್ತು ಸಮತೋಲನದಿಂದ ರೂಪಿಸುವುದು ಸಮಯದ ಅವಶ್ಯಕತೆ.

ಆದರೆ, ಎನ್‌ಸಿಇಆರ್‌ಟಿ ರೂಪಿಸಿದ ಈ ಪಠ್ಯಪುಸ್ತಕದಲ್ಲಿ ಹೇಗೆ ಅಷ್ಟು ದೊಡ್ಡ ವಿಚಾರ ಬಂದಿತು ಎಂಬುದೇ ಈಗಿನ ಪ್ರಶ್ನೆ. ಈಗಾಗಲೇ ಕಳೆದ ಕೇಂದ್ರ ಸಂಪುಟ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಬಗ್ಗೆ ಅತೀವ ಬೇಸರ ವ್ಯಕ್ತಪಡಿಸಿರುವ ಬಗ್ಗೆಯೂ ತಿಳಿದುಬಂದಿದೆ. ಆಗ ಸ್ವತಃ ಮೋದಿ ಅವರೇ, ಇಂಥ ವಿಚಾರಗಳಲ್ಲಿ ಹೇಗೆ ನಿರ್ಲಕ್ಷ್ಯ ವಹಿಸಲಾಗಿದೆ ಎಂಬ ಬಗ್ಗೆ ಪ್ರಶ್ನೆಯನ್ನೂ ಎತ್ತಿದ್ದಾರೆ. ಜತೆಗೆ, ಇದರಲ್ಲಿ ಲೋಪ ಮಾಡಿರುವ ಎನ್‌ಸಿಇಆರ್‌ಟಿ ಅಧಿಕಾರಿಗಳನ್ನು ಹೊಣೆ ಮಾಡುವಂತೆಯೂ ಖಡಕ್ ಆಗಿಯೇ ಸೂಚಿಸಿದ್ದಾರೆ. ಈಗಾಗಲೇ, ಬುಧವಾರವೇ ಸುಪ್ರೀಂಕೋರ್ಟ್ ಈ ಬಗ್ಗೆ ತೀರಾ ಖಾರವಾಗಿಯೇ ಪ್ರಶ್ನಿಸಿದ್ದು, ಪುಸ್ತಕವನ್ನೇ ನಿಷೇಧಿಸಿದೆ. ಭಾರತದಂಥ ಪ್ರಜಾಪ್ರಭುತ್ವದಲ್ಲಿ ಸದ್ಯ ಜನ ಅತೀವವಾಗಿ ನಂಬಿಕೊಂಡಿರುವುದು ನ್ಯಾಯಾಂಗ ವ್ಯವಸ್ಥೆಯನ್ನೇ. ಹೀಗಾಗಿ ಯಾವುದೇ ಕಾರಣಕ್ಕೂ ಜನರಲ್ಲಿ ನ್ಯಾಯಾಂಗ ವ್ಯವಸ್ಥೆಯ ಮೇಲೆ ಸಂಶಯ ಮೂಡಿಸುವಂಥ ಕೆಲಸ ಮಾಡಬಾರದು. ಇಂಥ ವಿಚಾರಗಳಲ್ಲಿ ಸೂಕ್ಷ್ಮತೆ ಬೇಕಾಗಿದೆ.

ರಾಷ್ಟ್ರೋತ್ಥಾನ ಪರಿಷತ್ ಸಮಾಜ ಸೇವೆಗೆ 60ರ ಸಂಭ್ರಮ

ರಾಜೇಶ್ ಪದ್ಮಾರ್

ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣದ ಧ್ಯೇಯೋದ್ದೇಶಗಳೊಂದಿಗೆ ಶಿಕ್ಷಣ, ಸಾಹಿತ್ಯ, ಸೇವೆ, ಆರೋಗ್ಯ ಮುಂತಾದ ಬಹುಮುಖೀ ಚಟುವಟಿಕೆಗಳಲ್ಲಿ ನಿರತವಾಗಿರುವ ರಾಜ್ಯದ ವಿಶಿಷ್ಟ ಸಾಮಾಜಿಕ ಸೇವಾ ಸಂಸ್ಥೆಯಾದ ರಾಷ್ಟ್ರೋತ್ಥಾನ ಪರಿಷತ್ ಇದೀಗ ಸೇವೆ-ಸಮಾಜಕಾರ್ಯದ 60 ಸಾರ್ಥಕ ಸಂವತ್ಸರಗಳನ್ನು ಪೂರೈಸುತ್ತಿದೆ.

1965ರ ಫೆಬ್ರವರಿಯಲ್ಲಿ ಬೆಂಗಳೂರಿನ ಸೌತ್‌ಎಂಡ್ ರಸ್ತೆಯ ಬಾಡಿಗೆ ಕಟ್ಟಡವೊಂದರಲ್ಲಿ ಸೇವಾಸಂಸ್ಥೆಯ ರೂಪದಲ್ಲಿ ಕಾರ್ಯಾರಂಭ ಮಾಡಿದ ರಾಷ್ಟ್ರೋತ್ಥಾನಕ್ಕೆ ಇದೀಗ 60 ವರ್ಷಗಳನ್ನು ಪೂರೈಸಿದೆ. ಇಂದು ರಾಜ್ಯದೆಲ್ಲೆಡೆ ಸಮಾಜದ ವಿವಿಧ ವಲಯಗಳಲ್ಲಿ ಕಾರ್ಯಪ್ರವೃತ್ತವಾಗಿದ್ದು ಸಮಾಜ ಪರಿವರ್ತನೆಗೆ ಮಹತ್ವದ ಕೊಡುಗೆ ನೀಡುತ್ತಿದೆ. ಸೇವೆಯ ಜಗತ್ತನ್ನು life's mission ಆಗಿ ಸ್ವೀಕರಿಸಿರುವ 'ರಾಷ್ಟ್ರೋತ್ಥಾನ ಪರಿಷತ್'ಗೆ ಬೀಜವನ್ನು ಬಿತ್ತಿದವರು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕದ ಜ್ಯೇಷ್ಠ ಪ್ರಚಾರಕರಾಗಿದ್ದ ಸ್ವ. ಯಾದವರಾವ್ ಜೋಷಿ, ಹೊ.ವೆ. ಶೇಷಾದ್ರಿ, ನಂ. ಮಾಧವರಾವ್, ಎಂ. ಗೋವಿಂದರಾವ್, ಅರಕಲಿ ನಾರಾಯಣ್ ಮುಂತಾದವರು. ಮೈ.ಚ. ಜಯದೇವ್ ಅವರು ಸಂಸ್ಥೆಯ ಪ್ರಾರಂಭದಿಂದ ಹಿಡಿದು ತಮ್ಮ ಜೀವಿತ ಕಾಲದವರೆಗೆ ಸಂಸ್ಥೆಯ ದಿಕ್ಕು-ಓಘಗಳನ್ನು ನಿರ್ಧರಿಸುವಲ್ಲಿ ಮುಖ್ಯ ಪಾತ್ರವಹಿಸಿದರು.

ದೃಷ್ಟಿ-ಧ್ಯೇಯ

"ಸಂದರ್ಭ ಅನುಕೂಲಕರವಾಗುವಂತೆ ಏರ್ಪಡಲಿ. ಆಮೇಲೆ ಕೆಲಸ ಮಾಡೋಣ ಎಂದು ಕಾಯುತ್ತಾ ಕೂರದೇ ಅಂತಹ ಸಂದರ್ಭವನ್ನು ಸೃಷ್ಟಿಮಾಡಿ ಮುಂದಕ್ಕೆ ಸಾಗುತ್ತಿರಬೇಕು" ಎಂದು ಆರೆಸ್ಸೆಸ್ ಜ್ಯೇಷ್ಠ ಪ್ರಚಾರಕರಾಗಿದ್ದ ಯಾದವರಾವ್ ಜೋಷಿಯವರು ಹೇಳುತ್ತಿದ್ದರು. ಅದರಂತೆ ನಿರಂತರವಾಗಿ ಸೇವಾವಕಾಶಗಳನ್ನು ಹುಡುಕಿಕೊಂಡು ನಮ್ಮ ಪರಿಧಿಯಲ್ಲಿ ಸಮಾಜವನ್ನು ಹೇಗೆ ಹೆಚ್ಚು ಸಚೇತನಗೊಳಿಸಬಹುದು ಎಂಬ ದಿಕ್ಕಿನಲ್ಲಿ ಚರೈವೇತಿ-ಚರೈವೇತಿ ಎಂದು ದೃಢವಾದ ಹೆಜ್ಜೆಗಳನ್ನಿಡುತ್ತಾ ರಾಷ್ಟ್ರೋತ್ಥಾನ ಪರಿಷತ್ ಮುಂದೆ ಸಾಗುತ್ತಿದೆ – ಎನ್ನುತ್ತಾರೆ ಪ್ರಧಾನ ಕಾರ್ಯದರ್ಶಿಗಳಾದ ದಿನೇಶ್ ಹೆಗ್ಡೆ.

ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣಕ್ಕಾಗಿ ಶಿಕ್ಷಣ, ಆರೋಗ್ಯ, ಸಾಮಾಜಿಕ ಜಾಗೃತಿ, ಸೇವಾ ಚಟುವಟಿಕೆಗಳ ಮೂಲಕ ರಾಷ್ಟ್ರೋತ್ಥಾನ ಪರಿಷತ್ ಕಾರ್ಯೋನ್ಮುಖವಾಗಿದೆ. ರಾಷ್ಟ್ರೋತ್ಥಾನ ಪರಿಷತ್‌ನ ಸೇವಾ ಚಟುವಟಿಕೆಗಳು ರಾಜ್ಯದ ಲಕ್ಷಾಂತರ ಮಂದಿಗೆ ತಲುಪಿದೆ. ಮಾನವ ಸೇವೆಯನ್ನು ಅದರ ಅತ್ಯುತ್ತಮ ಅರ್ಥದಲ್ಲಿ ಮಾಡುವುದು ಹಾಗೂ ಭಾರತೀಯ ಚಿಂತನೆಗಳ ಆಧಾರದ ಮೇಲೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಪುನರುತ್ಥಾನ, ಗ್ರಾಮೀಣಾಭಿವೃದ್ಧಿಯ ಮೂಲಕ ಸಮರಸ ಸಮಾಜ ನಿರ್ಮಾಣ-ಇದರ ದೃಷ್ಟಿ-ಧ್ಯೇಯ.

ಕಾರ್ಯಚಟುವಟಿಕೆಗಳು

ಸೇವಾವಸತಿ: ಶಿಕ್ಷಣ, ಆರೋಗ್ಯ, ಸ್ವಾವಲಂಬನೆ, ಸಂಸ್ಕಾರ ಈ ನಾಲ್ಕು ಆಯಾಮಗಳಲ್ಲಿ ಸೇವಾವಸತಿ (ಸೇವಾಬಸ್ತಿ/ಸ್ಲಂ)ಗಳಲ್ಲಿ ಸೇವಾ ಚಟುವಟಿಕೆಗಳು ನಡೆಯುತ್ತಿವೆ. 1989ರಲ್ಲಿ ಸ್ಲಂಗಳಲ್ಲಿ ಅನೌಪಚಾರಿಕ ಶಿಕ್ಷಣ ನೀಡುವ ಉದ್ದೇಶದಿಂದ ಸೇವಾ ವಸತಿ ಪ್ರಕಲ್ಪವು ಪ್ರಾರಂಭಗೊಂಡಿತು. ನಿರಂತರ ಸೇವಾ ಚಟುವಟಿಕೆಗಳ ಮೂಲಕ ಸೇವಾಬಸ್ತಿಯ ಸಾವಿರಾರು ಮಕ್ಕಳು-ಮಹಿಳೆಯರು, ಯುವಕ-ಯುವತಿಯರಿಗೆ ಈ ಯೋಜನೆ ಅಪಾರ ಪ್ರಮಾಣದಲ್ಲಿ ನೆರವಾಗಿದ್ದು, ಸಾವಿರಾರು ಕುಟುಂಬಗಳ ಸರ್ವತೋಮುಖ ಪ್ರಗತಿಗೆ ಕಾರಣವಾಗಿದೆ. ಪ್ರಸ್ತುತ ಬೆಂಗಳೂರಿನ 210 ಸ್ಲಂ(ಸೇವಾವಸತಿ)ಗಳಲ್ಲಿ ವ್ಯಾಸಂಗಕೇಂದ್ರ, ಶಿಶುಮಂದಿರ, ಬಾಲಗೋಕುಲ, ಅನೌಪಚಾರಿಕ ಶಿಕ್ಷಣ ಕೇಂದ್ರ, ಜೋಳಿಗೆ ಪುಸ್ತಕಾಲಯ, ಸ್ವ-ಸಹಾಯ ಸಂಘ ಇತ್ಯಾದಿ ಆಯಾಮಗಳಲ್ಲಿ 685 ವಿವಿಧ ಸೇವಾಚಟುವಟಿಕೆಗಳು ನಡೆಯುತ್ತಿವೆ.

ರಾಷ್ಟ್ರೋತ್ಥಾನ ರಕ್ತಕೇಂದ್ರ

1993ರ ಮೇ 30ರಂದು ಪ್ರಾರಂಭಗೊಂಡ ರಾಷ್ಟ್ರೋತ್ಥಾನ ರಕ್ತ ಕೇಂದ್ರವು ಅಹರ್ನಿಶಿಯಾಗಿ 24X7 ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಅತ್ಯುತ್ತಮ ರಕ್ತನಿಧಿ ಎಂಬ ಪ್ರಮಾಣ ಪತ್ರವನ್ನು ಪಡೆದಿದೆ. ವಿವಿಧ ಸಂಘ-ಸಂಸ್ಥೆಗಳ ನೆರವಿನೊಂದಿಗೆ ರಕ್ತದಾನ ಶಿಬಿರಗಳನ್ನು ಆಯೋಜಿಸುತ್ತಾ, ರಕ್ತದ ತುರ್ತು ಅಗತ್ಯವಿರುವವರಿಗೆ ಸಮಯಕ್ಕೆ ಸರಿಯಾಗಿ ಗುಣಮಟ್ಟದ ರಕ್ತ ಪೂರೈಸುವ ದೃಷ್ಟಿಯಿಂದ ಕಾರ್ಯಪ್ರವೃತ್ತವಾಗಿದೆ. ರಾಷ್ಟ್ರೋತ್ಥಾನ ರಕ್ತ ಕೇಂದ್ರದಿಂದ ಈವರೆಗೆ 4 ಲಕ್ಷ ಮಂದಿ ಪ್ರಯೋಜನ ಪಡೆದಿದ್ದಾರೆ. 6,000ಕ್ಕೂ ಅಧಿಕ ರಕ್ತದಾನ ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳನ್ನು ಆಯೋಜಿಸಿ 11 ಲಕ್ಷ ಮಂದಿ ರಕ್ತದಾನಿಗಳಿಂದ 5 ಲಕ್ಷ ಯೂನಿಟ್ ರಕ್ತ ಸಂಗ್ರಹಿಸಿದೆ.

ರಾಷ್ಟ್ರೋತ್ಥಾನ ಆಸ್ಪತ್ರೆ

2022 ಡಿಸೆಂಬರ್‌ನಲ್ಲಿ ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ವೃತ್ತಿಪರ



ಗುಣಮಟ್ಟದ ಆರೋಗ್ಯ ಸೇವೆ ನೀಡುವ ಉದ್ದೇಶದಿಂದ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ 'ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ'ವನ್ನು ಪ್ರಾರಂಭಿಸಿದೆ. ಆಸ್ಪತ್ರೆಯು ಒಂದೇ ಸೂರಿನಡಿ ಆಧುನಿಕ ವೈದ್ಯಪದ್ಧತಿ(ಅಲೋಪತಿ), ಆಯುರ್ವೇದ, ಹೋಮಿಯೋಪತಿ, ಯೋಗ, ನ್ಯಾಚುರೋಪತಿ ಮೊದಲಾದ ಚಿಕಿತ್ಸಾ ಸೌಲಭ್ಯಗಳನ್ನು ಒಳಗೊಂಡಿರುವ ಒಂದು 'ಸಮಗ್ರ ಚಿಕಿತ್ಸೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ'ಯಾಗಿ ಸೇವೆ ಸಲ್ಲಿಸಲಿದೆ.

ರಾಷ್ಟ್ರೋತ್ಥಾನ ಯೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

1972ರಲ್ಲಿ ಪ್ರಾರಂಭಗೊಂಡ ರಾಷ್ಟ್ರೋತ್ಥಾನ ಯೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಆರೋಗ್ಯಪೂರ್ಣ ಜೀವನ ಶೈಲಿಯ ಮೂಲಕ ಸ್ವಸ್ಥ ಸಮಾಜ ನಿರ್ಮಾಣದ ಆಶಯದೊಂದಿಗೆ ಹತ್ತಾರು ಕಡೆಗಳಲ್ಲಿ ಯೋಗ ಕೇಂದ್ರಗಳನ್ನು ಹೊಂದಿದೆ. ಅಂತರಾಷ್ಟ್ರೀಯ ಯೋಗ ದಿನಾಚರಣೆ, ಆನ್‌ಲೈನ್ ಯೋಗ ತರಗತಿಗಳು, ಉಪನ್ಯಾಸ ಸರಣಿ ಕಾರ್ಯಕ್ರಮಗಳು, ಫಿಟ್ನೆಸ್ ಸೆಂಟರ್, ನೃತ್ಯ-ಸಂಗೀತ ಕೇಂದ್ರ, ಕರಾಟೆ ತರಗತಿಗಳು, ಅಂಗಮರ್ದನ ಚಿಕಿತ್ಸೆ, ಉಗಿಸ್ನಾನ ಚಿಕಿತ್ಸಾ ಕೇಂದ್ರ ಸೇರಿದಂತೆ ಅನೇಕ ಪೂರಕ ಚಟುವಟಿಕೆಗಳು ನಡೆಯುತ್ತಿವೆ.

ರಾಷ್ಟ್ರೋತ್ಥಾನ ಗೋಶಾಲೆ

ಭಾರತೀಯ ದೇಸಿಗೋತಳಿಗಳ ಸಂರಕ್ಷಣೆ, ಸಂವರ್ಧನೆಯ ಉದ್ದೇಶದೊಂದಿಗೆ ದೊಡ್ಡಬಳ್ಳಾಪುರದ ಸಮೀಪದ ಶ್ರೀ ಘಾಟಿ ಸುಬ್ರಹ್ಮಣ್ಯ ಕ್ಷೇತ್ರದ ತಪ್ಪಲಿನ 'ಶ್ರೀಮಾಧವಸೃಷ್ಟಿ'ಯಲ್ಲಿ ರಾಷ್ಟ್ರೋತ್ಥಾನ ಗೋಶಾಲೆ ಕಾರ್ಯನಿರ್ವಹಿಸುತ್ತಿದೆ. ಗಿರ್, ಸಾಹಿವಾಲ್, ಒಂಗೋಲ್, ಅಮೃತಮಹಲ್, ಮಲೆನಾಡುಗಿಡ್ಡ ಸೇರಿದಂತೆ 700ಕ್ಕೂ ಹೆಚ್ಚು ಗೋವುಗಳಿಗೆ ಆಶ್ರಯತಾಣವಾಗಿದೆ. ಗೋಶಾಲೆ ಪರಿಸರದಲ್ಲಿ ಕಾಡನ್ನು ಬೆಳೆಸುವ 'ವೃಂದಾವನ', 'ಸಸಿನೆಡು' ಯೋಜನೆಗಳ ಮೂಲಕ ಗಿಡ ನೆಟ್ಟು ಅರಣ್ಯಾಭಿವೃದ್ಧಿ ಮಾಡುವ ಯೋಜನೆ 2018ರಿಂದ ಪ್ರಾರಂಭವಾಗಿದ್ದು ಪರಿಸರ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದೆ.

ರಾಷ್ಟ್ರೋತ್ಥಾನದ ಶೈಕ್ಷಣಿಕ ಸಂಸ್ಥೆಗಳು

1972ರಲ್ಲಿ ಬಳ್ಳಾರಿಯ ಹಗರಿಬೊಮ್ಮನಹಳ್ಳಿಯಲ್ಲಿ ಶಿಶುಮಂದಿರದೊಂದಿಗೆ ಪ್ರಾರಂಭಗೊಂಡ ಶೈಕ್ಷಣಿಕ ಚಟುವಟಿಕೆಗಳು ಇಂದು 20 ಶಿಶುಮಂದಿರಗಳು, 9 ರಾಜ್ಯ ಪಠ್ಯಕ್ರಮ ಶಾಲೆಗಳು ಹಾಗೂ 17 ಕೇಂದ್ರ ಪಠ್ಯಕ್ರಮ(ಸಿಬಿಎಸ್‌ಸಿ) ಶಾಲೆಗಳು, 3 ಪದವಿ ಪೂರ್ವ ಕಾಲೇಜುಗಳು ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡುತ್ತಿದೆ. ಪ್ರಸ್ತುತ 25,000 ಮಂದಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಪಿ.ಯು ಶಿಕ್ಷಣದೊಂದಿಗೆ ಐಐಟಿ ಸೇರಿದಂತೆ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ತರಬೇತಿ ನೀಡುವ ಉದ್ದೇಶದಿಂದ ಬಾಲಕರಿಗಾಗಿ 'ತಪಸ್' ಹಾಗೂ ಬಾಲಕಿಯರಿಗಾಗಿ 'ಸಾಧನಾ' ಎಂಬ ವಿಶಿಷ್ಟ ಶೈಕ್ಷಣಿಕ ಯೋಜನೆಗಳನ್ನು ನಡೆಸಲಾಗುತ್ತಿದೆ. ತಪಸ್‌ನ ವಿದ್ಯಾರ್ಥಿಗಳಿಗೆ ಐಐಟಿ-ಜೆಇಇ ಪರೀಕ್ಷೆ ತರಬೇತಿ ಹಾಗೂ 'ಸಾಧನಾ'ದ ವಿದ್ಯಾರ್ಥಿಗಳಿಗೆ ನೀಟ್/ಸಿಇಟಿ ತರಬೇತಿ ನೀಡಲಾಗುತ್ತಿದೆ. ಈವರೆಗೆ 525 ಮಂದಿ ಹುಡುಗರು ಹಾಗೂ 495 ಮಂದಿ ಹುಡುಗಿಯರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ.

ರಾಷ್ಟ್ರೋತ್ಥಾನ ಸಾಹಿತ್ಯ

1965ರಲ್ಲಿ ಪ್ರಾರಂಭಗೊಂಡ ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಕಟಣೆಗಳ ಪ್ರಮುಖ ಉದ್ದೇಶ ಭಾರತೀಯ ಜೀವನದ ಜ್ಞಾನ-ನಿಷ್ಠೆಗಳನ್ನು ಜನಮನದಲ್ಲಿ ಬೇರೂರಿಸುವುದು, ಸಾಮಾಜಿಕ ಚಿಂತನ ಪ್ರಧಾನವಾದ ಗ್ರಂಥಗಳನ್ನು ಪ್ರಕಟಿಸುವುದು. ಹಾಗೆಯೇ ಮೂಲ ಕನ್ನಡ ಕೃತಿಗಳ ಜೊತೆಗೆ ಇತರ ಭಾಷೆಗಳಿಂದಲೂ ಉತ್ತಮ ರಾಷ್ಟ್ರೀಯ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದದ ಮೂಲಕ ತರುವುದು. ಈ ದಿಶೆಯಲ್ಲಿ ಇದುವರೆಗೆ ಪ್ರಕಟವಾದ ಒಟ್ಟು ಪುಸ್ತಕಗಳ ಸಂಖ್ಯೆ 320ಕ್ಕೂ ಹೆಚ್ಚು. 'ಭಾರತ-ಭಾರತಿ ಪುಸ್ತಕ ಸಂಪದ'ದ ಮೂಲಕ 610 ಕನ್ನಡ ಹಾಗೂ 225 ಇಂಗ್ಲೀಷ್ ಪುಸ್ತಕಗಳು ಪ್ರಕಟವಾಗಿದೆ.

ಗೀತಾ ಭಾರತಿ

1982ರಲ್ಲಿ ಪ್ರಾರಂಭಗೊಂಡ 'ಗೀತಾಭಾರತಿ' ಯೋಜನೆಯ ಮೂಲಕ ನೂರಾರು ಹಾಡುಗಳು ಧ್ವನಿಮುದ್ರಿಕೆಗಳ ಮೂಲಕ ಲಕ್ಷಾಂತರ ಕೇಳುಗರಿಗೆ ತಲುಪಿದೆ.

ರಾಷ್ಟ್ರೋತ್ಥಾನ ಮುದ್ರಣಾಲಯ

1967ರ ಮೇ 29ರಂದು ಪ್ರಾರಂಭಗೊಂಡ ರಾಷ್ಟ್ರೋತ್ಥಾನ ಮುದ್ರಣಾಲಯವು ಅತ್ಯುತ್ತಮ ಮುದ್ರಣ ತಂತ್ರಜ್ಞಾನ ಹೊಂದಿದ್ದು, ಇಂದು ರಾಜ್ಯದ ಅತ್ಯುತ್ತಮ ಮುದ್ರಣಾಲಯಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಉತ್ಥಾನ

1965ರ ವಿಜಯದಶಮಿಯಂದು ಪ್ರಾರಂಭಗೊಂಡ ಉತ್ಥಾನ ಮಾಸಪತ್ರಿಕೆಯು ತನ್ನದೇ ಆದ ಓದುಗರ ಬಳಗವನ್ನು ಹೊಂದಿದ್ದು, ರಾಜ್ಯದ ಸದಭಿರುಚಿಯ ವಿಶಿಷ್ಟ ಮಾಸಪತ್ರಿಕೆ ಎಂಬ ಮನ್ನಣೆಗೆ ಪಾತ್ರವಾಗಿದೆ.

ಕೋವಿಡ್ ಸೇವಾ ಚಟುವಟಿಕೆಗಳು

ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ರಾಷ್ಟ್ರೋತ್ಥಾನ ಪರಿಷತ್ ಕಡೆಯಿಂದ ವಿವಿಧ ಪ್ರಕಾರದ ಸೇವಾ ಚಟುವಟಿಕೆಗಳು ನಡೆಯಿತು.

ರಾಷ್ಟ್ರೋತ್ಥಾನ ಬಳಗ

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತರಾದ ಸಮಾನ ಮನಸ್ಕರು ಸೇರಿ ಸಮಗ್ರ ಸಮಾಜ ಪರಿವರ್ತನೆಗಾಗಿ ಶ್ರಮಿಸಲು ರೂಪಿಸಿರುವ ವೇದಿಕೆ, ರಾಷ್ಟ್ರೋತ್ಥಾನ ಬಳಗ. ವಿವಿಧ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ರಾಷ್ಟ್ರೋತ್ಥಾನ ಬಳಗ ಘಟಕಗಳು ಸಕ್ರಿಯವಾಗಿದೆ. ಪ್ರಶಿಕ್ಷಣ ಭಾರತಿ ಎಂಬ ಪ್ರಕಲ್ಪದ ಮೂಲಕ ರಾಜ್ಯದೆಲ್ಲೆಡೆಯ ನೂರಾರು ಶಿಕ್ಷಕರಿಗೆ ತರಬೇತಿ ಮಾರ್ಗದರ್ಶನ ಮಾಡುತ್ತಿದೆ. ರಾಷ್ಟ್ರೋತ್ಥಾನ ಪರಿಷತ್ತಿನ ಕೇಂದ್ರ ಕಚೇರಿ ಇರುವ ಬೆಂಗಳೂರಿನ ಕೇಶವಶಿಲ್ಪ ಕಟ್ಟಡಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. 1942ರಲ್ಲಿ ಸ್ವಾತಂತ್ರ್ಯವೀರ ಸಾವರ್ಕರ್‌ರವರು ಬೆಂಗಳೂರಿಗೆ ಭೇಟಿ ನೀಡಿದ್ದಾಗ ಇದೇ ಕಟ್ಟಡದಲ್ಲಿ ತಂಗಿದ್ದರು. ಸಮಾಜ ಪರಿವರ್ತನೆಯ 60 ವಸಂತಗಳನ್ನು ಪೂರೈಸಿರುವ ರಾಷ್ಟ್ರೋತ್ಥಾನ ಪರಿಷತ್‌ಗೆ ಶುಭವನ್ನು ಹಾರೈಸುತ್ತಾ ತನ್ನ ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣ ಮಾಡುವ ಗುರಿಯನ್ನು ಸೇರಲೆಂದು ಆಶಿಸೋಣ.

ಸಂಪರ್ಕಕ್ಕಾಗಿ: www.rashtrotthana.org

ಭಗವಂತನಿರುವ ತಾಣ

ವದನಾನಿ ಪ್ರಸನ್ನಾನಿ ಸ್ನಿಗ್ಧಾನ್ಯಕ್ಷೀಣಿ ಯತ್ರ ಚ।
ಪ್ರೀಯಂತೇ ಬಾಂಧವಾ ಯತ್ರ ತತ್ರೈವ ರಮತೇ ಹರಿಃ ॥
ವಾರಾಂಗನಾ ಚಾಪ್ರಿಯವಾದೀನೀ ಚ
ನ ತೇ ಚ ಕರ್ಮಾಣಿ ಸಮಾರಂಭತೇ ॥

ಮುಖದಲ್ಲಿ ಸಂತಸ, ಕಣ್ಣಿನಲ್ಲಿ ಸ್ನೇಹ, ಸಂತಸ ಪಡುವ ಬಾಂಧವರು ಇರುವಲ್ಲಿ ಶ್ರೀಮನ್ನಾರಾಯಣನೂ ಇರುತ್ತಾನೆ – ಎಂಬುದು ಶ್ಲೋಕಾರ್ಥ.



ಭಗವಂತ ಎಲ್ಲೆಡೆ ಇದ್ದಾನೆ. ಅವನಿಲ್ಲದ ತಾಣವಿಲ್ಲ. ಅಣುರೇಣು ತೃಣಕಾಷ್ಠಗಳಲ್ಲೂ ಭಗವಂತನಿದ್ದಾನೆ. ಅವನಿಲ್ಲದೇ ಅಥವಾ ಅವನ ಪ್ರೇರಣೆಯಿಲ್ಲದೆ ಹುಲ್ಲುಕಡ್ಡಿಯೂ ಅಲ್ಲಾಡದು. ಇದನ್ನೇ 'ತೇನ ವಿನಾ ತೃಣಮಪಿ ನ ಚಲತಿ' ಎಂಬ ಸೂಕ್ತಿ ಪ್ರತಿನಿಧಿಸುತ್ತದೆ. ಎಲ್ಲೆಡೆಯಲ್ಲೂ ದೇವರಿದ್ದರೆ ಗುಡಿಗೆ ಹೋಗಿ ನಮಸ್ಕರಿಸುವುದೇಕೆ? ಎಂಬ ಪ್ರಶ್ನೆ ಮೂಡಬಹುದು. ಎಲ್ಲೆಂದರಲ್ಲಿ ದೇವರಿಗೆ ಕೈಮುಗಿಯು ವುದು, ನಮಸ್ಕರಿಸುವುದು ಸಾಧುವಲ್ಲ; ಸಾಧ್ಯವೂ ಅಲ್ಲ. ನಮ್ಮೆಲ್ಲ ಪ್ರಾರ್ಥನೆಯನ್ನು ಸಲ್ಲಿಸುವುದಕ್ಕೆ ಕೃತಜ್ಞತೆಯನ್ನು ನಿವೇದಿಸಿಕೊಳ್ಳುವುದಕ್ಕೆ ದೇವಸ್ಥಾನದಂತಹ ಪ್ರಶಸ್ತ ಸ್ಥಳ ಬೇಕಾಗುತ್ತದೆ. ಪವಿತ್ರ ಸ್ಥಳ ಇರಬೇಕಾಗುತ್ತದೆ. ಈ ಕಾರಣಕ್ಕಾಗಿಯೇ ದೇವಸ್ಥಾನದ ಪರಿಕಲ್ಪನೆ ಬಂದಿರುವುದು.

ಎಲ್ಲ ಕಡೆಗಳಲ್ಲೂ ದೇವರಿರುವುದು ಸತ್ಯವಾದರೂ, ಎಲ್ಲರಲ್ಲಿಯೂ ಪರಮಾತ್ಮ ನೆಲೆಸಿರುವುದು ಸತ್ಯವಾದರೂ ವಿಶೇಷವಾಗಿ ಎಲ್ಲಿದ್ದಾನೆ ಎಂಬುದನ್ನು ಪ್ರಕೃತ ಸುಭಾಷಿತ ವಿವರಿಸುತ್ತದೆ.

ಯಾರ ಮುಖದಲ್ಲಿ ಪ್ರಸನ್ನತೆಯಿದೆಯೋ, ಯಾರು ಎಲ್ಲರನ್ನೂ ಪ್ರೀತಿಯಿಂದ ಕರೆದು ಉಪಚರಿಸುತ್ತಾರೋ, ಪ್ರೀತಿ, ಸೌಹಾರ್ದ ಹಾಗೂ ನಗುಮೊಗದಿಂದ ಸತ್ಕರಿಸುತ್ತಾರೋ ಅಲ್ಲಿ ಶ್ರೀಮನ್ನಾರಾಯಣ ಯಾವಾಗಲೂ ನೆಲೆಸಿರುತ್ತಾನೆ.

ಯಾರ ಕಣ್ಣಲ್ಲಿ ನಿರ್ವ್ಯಾಜವಾದ ಸ್ನೇಹ ಕಾಣಿಸುತ್ತದೆಯೋ ಅಲ್ಲಿ ಭಗವಂತ ಬಂದು ನೆಲೆನಿಲ್ಲುತ್ತಾನೆ. ಜಗತ್ತಿನಲ್ಲಿ, ಜೀವನದಲ್ಲಿ ಸ್ನೇಹಕ್ಕಿಂತ ಹಿರಿದಾದುದಿಲ್ಲ. ಸ್ನೇಹಪೂರ್ಣ ದೃಷ್ಟಿಯೇ ನಮ್ಮನ್ನು ತೊಂದರೆಯಿಂದ ದೂರ ಮಾಡುತ್ತದೆ. ಸಂತಸವನ್ನೀಯುತ್ತದೆ. 'ಸ್ನೇಹೇ ಚ ಬಂಧುಃ ನ ಕದಾಪಿ ದೂರಃ' ಅಂದರೆ ಸ್ನೇಹವಿದ್ದರೆ ಸ್ನೇಹಿತರು ದೂರವಿದ್ದರೂ ದೂರವಲ್ಲ ಎಂಬುದು ಕಥನದ ಆಶಯವಾದರೆ ಸ್ನೇಹ, ಭಕ್ತಿ ಮತ್ತು ತನ್ನತನವಿರುವಲ್ಲಿ ಗುಣಗಳಿರುತ್ತವೆ ಎಂಬುದನ್ನು ಸ್ನೇಹೋ ಭಕ್ತಿಃ ಸ್ವತಾಚ್ಛೈವ ಯತ್ರ ಸ್ಯುಃ ತತ್ರ ವೈ ಗುಣಾ ಎಂಬ ಸೂಕ್ತಿಯು ತಿಳಿಸುತ್ತದೆ. ಕಣ್ಣಂಚಿನ ಸ್ನೇಹದಲ್ಲಿ ಎಲ್ಲ ಒಳಿತೂ ಸಾಂದ್ರವಾಗಿರುತ್ತದೆ. ದೇವರು ಇಲ್ಲಲ್ಲದೇ ಇನ್ನೆಲ್ಲಿ ನೆಲೆನಿಂತಾನು?

ಇವುಗಳ ಜತೆಗೆ ಸಂತಸ ಪಡುವ ಬಂಧು ಬಾಂಧವರು ಇದ್ದರಂತೂ ಬೇರೇನೂ ಹೇಳಬೇಕಿಲ್ಲ. ಅದು ಯಾವಾಗಲೂ ಭಗವಂತನು ನೆಲೆಸುವ ತಾಣವಾಗುತ್ತದೆ.

ಈ ಕಾರಣಕ್ಕಾಗಿಯೇ ಮನುಷ್ಯನು ಸದ್ಗುಣಗಳ ಗಣಿಯಾಗಬೇಕು. ಯಾವಾಗಲೂ ಸಂತಸದಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕು. ಎಲ್ಲರನ್ನೂ ಸ್ನೇಹದಿಂದ ಕಾಣುವ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಉದಾರ ಚಿಂತನೆಯನ್ನು ಬೆಳೆಸಿಕೊಂಡು ಎಲ್ಲರೂ ತನ್ನ ಬಾಂಧವರು ಎಂಬ ಮಾನಸಿಕತೆಯನ್ನೂ ಬೆಳೆಸಿಕೊಳ್ಳಬೇಕು.

ಎಐಗೆ ನೈತಿಕ ಚೌಕಟ್ಟು: ಭಾರತದ ಹೆಜ್ಜೆ

ರಾಮ್ ಮಾಧವ್

ಕೆಲವೊಮ್ಮೆ ಒಂದು ದಶಕದಲ್ಲಿ ಆಗುವಂತಹುದು ಒಂದೇ ವಾರದಲ್ಲಿ ಸಂಭವಿಸುತ್ತದೆ ಎಂಬುದಾಗಿ ಲೆನಿನ್ ಹಿಂದೊಮ್ಮೆ ಹೇಳಿದ್ದ. ಕ್ರಾಂತಿಕಾರಿ ಬದಲಾವಣೆಗಳು ಕ್ಷಿಪ್ರವಾಗಿ ಹಾಗೂ ಅತ್ಯಂತ ವೇಗವಾಗಿ ಉಂಟಾಗುತ್ತವೆ. ಇತ್ತೀಚಿನ ಜಾಗತಿಕ ಕೃತಕ ಬುದ್ಧಿಮತ್ತೆ (AI) ಸಮ್ಮೇಳನದಲ್ಲಿ ಪ್ರಧಾನಿ ಮೋದಿಯವರು ಕೂಡಾ "ಜಗತ್ತಿನಲ್ಲಿ ಈಗ AI ಅತ್ಯಂತ ವೇಗದ ಬದಲಾವಣೆಗಳನ್ನು ತರುತ್ತಿದೆ" ಎಂದು ನುಡಿದರು. ಮಾನವ ಇತಿಹಾಸದಲ್ಲಿ ಇದೊಂದು ಮಹತ್ವದ ತಿರುವು ಎಂದು ಹೇಳಿದ ಅವರು ನಾಗರಿಕತೆಯ ಗತಿಯನ್ನೇ ಬದಲಿಸಿಬಿಡಬಲ್ಲ ಸಾಮರ್ಥ್ಯ AI ಹೊಂದಿರುವುದಾಗಿ ನುಡಿದರು. ಆದರೆ ಭವಿಷ್ಯದ ಪೀಳಿಗೆಗೆ ನಾವು ಎಂತಹ ಸ್ವರೂಪದ AIಯನ್ನು ನೀಡಬೇಕು ಎಂಬ ಕುರಿತಂತೆ ಆಲೋಚಿಸಬೇಕಾಗಿದೆ ಎಂಬ ಎಚ್ಚರಿಕೆಯನ್ನೂ ಅವರು ನೀಡಿದರು. AI ಯಂತ್ರ ಕೇಂದ್ರಿತ ಆಗುವ ಬದಲಿಗೆ ಅದನ್ನು ಮಾನವಕೇಂದ್ರಿತವನ್ನಾಗಿ ಮಾಡುವುದು ಹೇಗೆ? ಅದು ಸಂವೇದನಾಶೀಲ ಮತ್ತು ಜವಾಬ್ದಾರಿಯುತ ಮಾಡುವುದು ಹೇಗೆ ಎಂಬ ಕುರಿತು ಚಿಂತಿಸುವುದೆ AI ಸಮ್ಮೇಳನದ ಉದ್ದೇಶವಾಗಿತ್ತೆಂದು ಅವರು ತಿಳಿಸಿದರು.

ಇವು ಅತ್ಯಂತ ಮಹತ್ವದ ಪ್ರಶ್ನೆಗಳು. AI ಕ್ರಾಂತಿಕಾರಿ ಬದಲಾವಣೆಗಳನ್ನು ತರುವುದು ನಿಶ್ಚಿತವಾಗಿದೆ. ಆದರೆ ನಮ್ಮ ಅಸ್ತಿತ್ವವನ್ನು ಭಂಗಿಸದ ರೀತಿಯಲ್ಲಿ ಅದನ್ನು ರೂಪಿಸಬೇಕಾಗಿದೆ. ಜತೆಗೇ ಅದು ಪ್ರಜಾತಾಂತ್ರಿಕ ಸ್ವರೂಪದಲ್ಲೂ ಇರಬೇಕಾಗಿದೆ. ಯಾವುದೇ ಪರಿಣತ ಟ್ರೈನರ್ ಅಥವಾ ಒಂದು ತಂಡವು AI ಅಲ್ಗಾರಿಥಮ್‌ನ್ನು ರಚಿಸಬಲ್ಲುದು ಹಾಗೂ ಅದಕ್ಕೆ ಪೂರಕವಾಗಿ ಉತ್ಪನ್ನಗಳನ್ನು ಅಥವಾ ಅಪ್ಲಿಕೇಶನ್‌ಗಳನ್ನು ರಚಿಸಬಲ್ಲುದು. ಇವು ನಮ್ಮ ಖಾಸಗಿ ಹಿತಾಸಕ್ತಿಗಳನ್ನು ಮತ್ತು ಸಾಮಾಜಿಕ ಸಂಬಂಧಗಳನ್ನು ಪ್ರಭಾವಿಸಬಲ್ಲುದು. ಮನುಷ್ಯನ ಸಾಮರ್ಥ್ಯವನ್ನು ಅನೂಹ್ಯ ಮಟ್ಟಕ್ಕೆ ಏರಿಸಬಲ್ಲುದು. ನಮ್ಮ ಕಾರ್ಯಗಳನ್ನು ಅತ್ಯಂತ ಪರಿಪೂರ್ಣವಾಗಿ ಮತ್ತು ಅತ್ಯಂತ ವೇಗವಾಗಿ ಮಾಡಬಲ್ಲುದು.

315000 ವರ್ಷಗಳ ಹಿಂದೆ ಆಫ್ರಿಕಾದಲ್ಲಿ ತನ್ನ ಪಯಣವನ್ನು ಆರಂಭಿಸಿದ ಹೋಮೋ ಸೇಪಿಯನ್ಸ್ ಮುಂದಿನ ದಿನಗಳಲ್ಲಿ ಹೊಸ ಬಗೆಯ ಸಂತತಿಯೊಂದರ ಅಂದರೆ ಮೆಟಾಹ್ಯೂಮನ್‌ಗಳ ಹುಟ್ಟಿಗೆ ಸಾಕ್ಷಿಯಾಗಲಿದೆ. AI ಮತ್ತು ಜೆನೆಟಿಕ್ ಮಿಲನದಿಂದ ಆವಿಷ್ಕರಿಸಲ್ಪಡುವ ಸೂಪರ್ ಹ್ಯೂಮನ್‌ಗಳು ಮುಂದಿನ ಭವಿಷ್ಯದಲ್ಲಿ ಮನುಷ್ಯನ ಪಾಲಿಗೆ ಮಾರಕವಾಗಿ ಪರಿಣಮಿಸಬಹುದು ಎಂಬುದಾಗಿ ಕೆಲವು ಪರಿಣತರು ಎಚ್ಚರಿಕೆ ನೀಡುತ್ತಿದ್ದಾರೆ. 2023ರಲ್ಲಿ 350ಕ್ಕೂ ಅಧಿಕ AI ಪರಿಣತರು ಮತ್ತು ಎಕ್ಸಿಕ್ಯೂಟಿವ್‌ಗಳು ಸಭೆ ಸೇರಿ ನಿಯಂತ್ರಣವಿಲ್ಲದ AI ಅಪಾಯಕಾರಿಯಾಗುವುದರ ಕುರಿತಂತೆ ಸರಕಾರಗಳು ಎಚ್ಚರಿಕೆ ವಹಿಸಬೇಕೆಂದು ಹೇಳುವ ಹೇಳಿಕೆಯೊಂದಕ್ಕೆ ಸಹಿ ಹಾಕಿದ್ದರು. ಭವಿಷ್ಯದ ಮನುಷ್ಯ AI ಯಿಂದ ಅಪಾಯ ಎದುರಿಸಲಿದ್ದಾನೆ ಎಂಬುದು ಅವರ ಎಚ್ಚರಿಕೆಯಾಗಿದೆ. ಈ ರೀತಿ ಸಹಿ ಹಾಕಿದವರಲ್ಲಿ 'ಓಪನ್ AI' ಮುಖ್ಯಸ್ಥ ಕೂಡಾ ಸೇರಿದ್ದರು.

AI ಯ ನೂತನ ಯುಗವು ಸಮಾಜವನ್ನು 'ತಂತ್ರಜ್ಞಾನ ಹೊಂದಿದವರು' ಮತ್ತು 'ತಂತ್ರಜ್ಞಾನ ರಹಿತರು' ಎಂಬ ವಿಭಜನೆಗೂ ಕಾರಣವಾದೀತು. ಕಂಪೆನಿಗಳ ಕೆಲಸಗಳನ್ನು AI ತಂತ್ರಜ್ಞಾನಕ್ಕೆ ಒಪ್ಪಿಸುವ ಮೂಲಕ ಉದ್ಯಮಗಳಲ್ಲಿ ಅರ್ಧಕ್ಕೂ ಹೆಚ್ಚು ಉದ್ಯೋಗ ಕಡಿತವಾದೀತು. ಸೆಕ್ರೆಟರಿಗಳು, ಸಹಾಯಕರು, ಕಾಲ್ ಸೆಂಟರ್ ಉದ್ಯೋಗಿಗಳು ಮುಂತಾದ ಕಡಿಮೆ ಪರಿಣತ ಉದ್ಯೋಗಗಳನ್ನೆಲ್ಲಾ AI ಸ್ಥಳಾಂತರಿಸಬಹುದು. 2023ರಿಂದ 2028ರ ಅವಧಿಯಲ್ಲಿ ಶೇ. 44ರಷ್ಟು ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ ಎಂಬುದಾಗಿ ಅಂದಾಜಿಸಲಾಗಿದೆ. ಇವರಲ್ಲಿ ಬಹುತೇಕವಾಗಿ ಕೆಲಸ ಕಳೆದುಕೊಳ್ಳುವವರು ಮಹಿಳೆಯರು.

ಸೃಷ್ಟಿಶೀಲ(ಜನರೇಟಿವ್) AI ಯಿಂದ ಉಂಟಾಗುವ ಇನ್ನು ಕೆಲವು ಅಪಾಯಗಳೆಂದರೆ ಮಾಹಿತಿ ರಹಸ್ಯ ಸೋರಿಕೆ, ಡೀಪ್ ಫೇಕ್‌ಗಳ ಪ್ರಸರಣ ಮತ್ತು ಸುಳ್ಳು ಸುದ್ದಿಗಳ ಪ್ರಸಾರ. ಇವೆಲ್ಲ ಸತ್ಯ ಯಾವುದು, ಸುಳ್ಳು ಯಾವುದು ಎಂಬುದರ ನಡುವಿನ ವ್ಯತ್ಯಾಸ ತಿಳಿಯಲಾಗದಷ್ಟು ಸೂಕ್ಷ್ಮವಾಗಿದೆ. ಅತ್ಯಂತ ದೊಡ್ಡ ಸವಾಲು ಒದಗಿಬರುವುದು ಎಐ ನಿಯಂತ್ರಿತ ಶಸ್ತ್ರಾಸ್ತ್ರಗಳು ಮತ್ತು ರಕ್ಷಣಾ ವ್ಯವಸ್ಥೆಯಿಂದ. ಸ್ವತಂತ್ರ ಶಸ್ತ್ರಾಸ್ತ್ರ ವ್ಯವಸ್ಥೆಯು ಅತ್ಯಂತ ಮಾರಕವಾದುದಷ್ಟೇ ಅಲ್ಲದೆ ಅದು ಸೈನಿಕರು ಮತ್ತು ನಾಗರಿಕರ ನಡುವಿನ ವ್ಯತ್ಯಾಸವನ್ನು ತಿಳಿಯಲಾರದ್ದರಿಂದ ನಾಗರಿಕರ ನಾಶಕ್ಕೂ ಕಾರಣವಾಗಲಿದೆ. ಇಂತಹ AI ನಿಯಂತ್ರಿತ ಶಸ್ತ್ರಾಸ್ತ್ರಗಳು ಕೆಟ್ಟ ಜನರ ಕೈಗೆ ಸಿಕ್ಕಿದರೆ ಅದರ ಪರಿಣಾಮವನ್ನು ಊಹಿಸಲಸಾಧ್ಯ.

ನಾವೀಗ ನಕಲಿ ವ್ಯಕ್ತಿಗಳಿಂದ ಸುತ್ತುವರಿಯಲ್ಪಟ್ಟಿದ್ದೇವೆ. ಕೆಲವೊಮ್ಮೆ ನಮಗೆ ಅದು ತಿಳಿದಿರುತ್ತದೆ, ಕೆಲವೊಮ್ಮೆ ತಿಳಿದಿರುವುದಿಲ್ಲ ಎಂಬುದಾಗಿ ಪತ್ರಕರ್ತರೊಬ್ಬರು ಎಚ್ಚರಿಸಿದ್ದರು. ವೆಬ್‌ಸೈಟ್‌ಗಳಲ್ಲಿ ಗ್ರಾಹಕ ಸೇವೆ ಒದಗಿಸುವವರು, ವಿಡಿಯೋ ಗೇಮ್‌ಗಳಲ್ಲಿ ನಮ್ಮೊಂದಿಗೆ ಆಡುವವರು, ನಮ್ಮ ಸಾಮಾಜಿಕ ಮಾಧ್ಯಮಗಳ ಉಸ್ತುವಾರಿ ನಡೆಸುವವರು, ನಮ್ಮ ಶೇರು ಮಾರುಕಟ್ಟೆಯನ್ನು ನಿರ್ವಹಣೆ ಮಾಡುವವರು ಎಲ್ಲರೂ ನಿಜವಾದ ವ್ಯಕ್ತಿಗಳಲ್ಲ, ಅವರೆಲ್ಲ ವರ್ಚುವಲ್ ವ್ಯಕ್ತಿಗಳು. ಚಾಟ್ ಜಿಪಿಟಿ ಎಂಬ AI ಮೂಲಕ ನಕಲಿ ವ್ಯಕ್ತಿಗಳು ಪ್ರಬಂಧ ಬರೆಯಬಲ್ಲರು. ಪತ್ರಗಳನ್ನು ಬರೆಯಬಲ್ಲರು ಹಾಗೂ ನಮಗೆ ವರದಿ ಮಾಡಬಲ್ಲರು. ಇಂತಹ ನಕಲಿ ವ್ಯಕ್ತಿಗಳ ಕಾರ್ಯಾಚರಣೆ ಆರಂಭವಷ್ಟೇ ಎಂದು ಪರಿಣತರು ಹೇಳುತ್ತಾರೆ. ಭವಿಷ್ಯವು ಕೇವಲ AI ಯಲ್ಲ, ಅದಕ್ಕಿಂತಲೂ ಎಜಿಐ (ಸೃಷ್ಟಿಶೀಲ ಕೃತಕ ಬುದ್ಧಿಮತ್ತೆ) ಮಿಗಿಲಾದುದು. ಕಾರ್ಯವೆಸಗುವುದರಲ್ಲಿ ಸಾಮಾನ್ಯ ಮನುಷ್ಯನಿಗಿಂತ ಬಹಳಷ್ಟು ಪಾಲು ಶ್ರೇಷ್ಠವಾದುದು. ಎಜಿಐ ಮನುಷ್ಯನ ಹಸ್ತಕ್ಷೇಪವಿಲ್ಲದೆ ಕೋಡ್ ಮತ್ತು ಅಲ್ಗಾರಿಥಮ್‌ಗಳನ್ನು ತಾನೇ ಬರೆಯಬಲ್ಲುದು. ಕಂಪ್ಯೂಟಿಂಗ್ ತಂತ್ರಜ್ಞಾನದಲ್ಲೆ ಅದು ತನ್ನನ್ನು ತಾನೇ ಅಭಿವೃದ್ಧಿಪಡಿಸಿಕೊಳ್ಳಬಲ್ಲುದು. ಮುಂದೊಂದು ದಿನ ಮನುಷ್ಯನ ಬುದ್ಧಿಮತ್ತೆಯನ್ನು ಮೀರಿದ AI ರಚನೆಗಳು ಹುಟ್ಟಿಕೊಂಡರೆ ಅಚ್ಚರಿಪಡಬೇಕಾಗಿಲ್ಲ, ಅವು ಮನುಷ್ಯನ ನಿಯಂತ್ರಣವನ್ನೂ ಮೀರಿ ಕಾರ್ಯಾಚರಿಸಬಲ್ಲವು.

ಇವೆಲ್ಲವೂ ಕೆಲವಾರು ಚರ್ಚೆಗೆ ಗ್ರಾಸ ಒದಗಿಸಿವೆ. ಟೆಕ್ ಕಂಪೆನಿಗಳು ಕೆಟ್ಟ ಕೃತಕ ಬದ್ಧಿಮತ್ತೆಯ ಉಪಕರಣಗಳನ್ನು ಹೊರಗೆ ಬಿಡಬಹುದು ಹಾಗೂ ಇದು ಇಡೀ ಜಗತ್ತಿಗೇ ದೊಡ್ಡ ಹಾನಿ ಎಸಗಬಹುದು ಎಂಬುದಾಗಿ ಅಮೆರಿಕದ ಸಂಸತ್ ಸದಸ್ಯರೊಬ್ಬರು 2023ರಲ್ಲಿ ಎಚ್ಚರಿಸಿದ್ದರು. ಮೈಕ್ರೋಸಾಫ್ಟ್‌ನ ಬಿಂಗ್ ಸರ್ಚ್ ಇಂಜಿನ್‌ನಲ್ಲಿ ಅಳವಡಿಸಿದ ಚಾಟ್ ಜಿಪಿಟಿಯ ಸ್ವರೂಪವೊಂದು ತನ್ನನ್ನು ಪ್ರಶ್ನಿಸಿದ ಪತ್ರಕರ್ತನೊಡನೆ ತಾನು ಮನುಷ್ಯನ ನಿಯಂತ್ರಣ ಮೀರಿ ಪರಮಾಣು ಕೋಡ್‌ಗಳನ್ನು ಕದಿಯಲು ಉತ್ಸುಕವಾಗಿರುವುದಾಗಿ ಹೇಳಿತ್ತು.

ಯಾವುದಾದರೂ ಪ್ರಮುಖ ತಂತ್ರಜ್ಞಾನವು ದೊಡ್ಡ ಬದಲಾವಣೆಗೆ ಕಾರಣವಾದಾಗಲೆಲ್ಲಾ ಅದಕ್ಕೆ ಬಲವಾದ ಸೈದ್ಧಾಂತಿಕ ಮತ್ತು ನೈತಿಕ ಚೌಕಟ್ಟುಗಳನ್ನು ಹೇರುವ ವಾದಗಳೂ ಹುಟ್ಟಿಕೊಳ್ಳುತ್ತವೆ. ಕೈಗಾರಿಕಾ ಕ್ರಾಂತಿ ನಡೆದಾಗ ಕಾರ್ಲ್‌ಮಾರ್ಕ್ಸ್ ಉದಿಸಿದ್ದ. ಪರಮಾಣು ಬಾಂಬ್‌ಗಳ ಅಪಾಯವು ಎದುರಾದಾಗ ಅಣ್ವಸ್ತ್ರ ಪ್ರಸರಣ ತಡೆ ಒಪ್ಪಂದ ಹುಟ್ಟಿಕೊಂಡಿತು. ಆದರೆ AI ಯನ್ನು ಸೃಷ್ಟಿಸಬಲ್ಲ ವ್ಯಕ್ತಿಗಳ ಸಂಖ್ಯೆಯು ಹೆಚ್ಚುತ್ತಿರುವಂತೆಯೇ ಅದರ ಪ್ರತಿಕೂಲ ಪರಿಣಾಮ ತಡೆಯಲು ಯೋಚಿಸುವಂತಹ ವ್ಯಕ್ತಿಗಳ ಸಂಖ್ಯೆಯು ಕಡಿಮೆಯಾಗುತ್ತಿರುವುದು ಅಪಾಯಕಾರಿ ಎಂದು ಕಿಸಿಂಜರ್ ಕೊರಗಿದ್ದ.

ಕುತೂಹಲದ ಸಂಗತಿಯೆಂದರೆ AIಗೆ ಮೊದಲ ತಾತ್ವಿಕ ನಿಯಂತ್ರಣದ ಪ್ರಯತ್ನ ವ್ಯಾಟಿಕನ್‌ನಿಂದ ಮೂಡಿಬಂತು. ವ್ಯಾಟಿಕನ್ ಹಲವಾರು ಜಾಗತಿಕ AI ಮುಖಂಡರನ್ನು 2020ರಲ್ಲಿ ತನ್ನಲ್ಲಿಗೆ ಆಹ್ವಾನಿಸಿ, ಕೃತಕ ಬುದ್ಧಿಮತ್ತೆಗೆ ನೈತಿಕ ಚೌಕಟ್ಟೊಂದನ್ನು ರೂಪಿಸುವಂತೆ ಕೇಳಿಕೊಂಡಿತು.

ಐನ್‌ಸ್ಟೈನ್ ನಂತರದ ಖ್ಯಾತ ವಿಜ್ಞಾನಿ ಎಂದೇ ಪರಿಗಣಿಸಲ್ಪಟ್ಟಿರುವ ಸ್ಟೀಫನ್ ಹಾಕಿಂಗ್ ತಮ್ಮ ಮರಣಾನಂತರದ ಪ್ರಕಟವಾದ ಪುಸ್ತಕದಲ್ಲಿ "AIಯ ಅಲ್ಪಾವಧಿ ಪರಿಣಾಮವು ಅದನ್ನು ಯಾರು ನಿಯಂತ್ರಿಸುತ್ತಾರೆ ಎಂಬುದರಲ್ಲಿದೆ. ಆದರೆ ಅದರ ದೀರ್ಘಾವಧಿ ಪರಿಣಾಮವು ಅದನ್ನು ಮನುಷ್ಯರಿಂದ ನಿಯಂತ್ರಿಸಲು ಸಾಧ್ಯವೆ ಎಂಬುದರಲ್ಲಿದೆ" ಎಂದು ಬರೆದಿದ್ದರು. ಇಂತಹ ಸಾಧ್ಯತೆಯನ್ನು ನಿರಾಕರಿಸುವುದು ಮನುಕುಲದ ಅತ್ಯಂತ ದೊಡ್ಡ ಹಾಗೂ ಕೆಟ್ಟ ಪ್ರಮಾದವಾಗಬಹುದು ಎಂದೂ ಅವರು ಎಚ್ಚರಿಸಿದ್ದರು. "AI ಬಗ್ಗೆ ನಾವೇಕೆ ಚಿಂತೆ ಮಾಡಬೇಕು. ಅಗತ್ಯ ಬಿದ್ದಾಗ ಅದರ ವಿದ್ಯುತ್ ಸಂಪರ್ಕದ ಪ್ಲಗ್ ಕಿತ್ತರಾಯಿತು" ಎಂದು ಸಿನಿಕನೊಬ್ಬ ಪ್ರತಿಕ್ರಿಯಿಸಿದ್ದ. ಅದಕ್ಕೆ ಹಾಕಿಂಗ್ ಉತ್ತರಿಸಿದ್ದರು "ಜನರು ಸೂಪರ್ ಕಂಪ್ಯೂಟರ್ ಒಂದರೊಡನೆ ದೇವರಿದ್ದಾನೆಯೆ ಎಂದು ಪ್ರಶ್ನಿಸಿದರು. 'ಈಗ ಇದ್ದಾನೆ' ಎಂದು ಉತ್ತರಿಸಿದ ಆ ಸೂಪರ್ ಕಂಪ್ಯೂಟರ್ ವಿದ್ಯುತ್ ಸಂಪರ್ಕ ಕಡಿಯದ ರೀತಿಯಲ್ಲಿ ತನ್ನ ಪ್ಲಗ್‌ನ್ನು ಸುಟ್ಟುಕೊಂಡಿತು" ಎಂದು ಉತ್ತರಿಸಿದ್ದರು. ಈ ಹಿನ್ನೆಲೆಯಲ್ಲಿ ಭಾರತವು 'ಸರ್ವ ಜನ ಹಿತಾಯ, ಸರ್ವ ಜನ ಸುಖಾಯ' ಧ್ಯೇಯವಾಕ್ಯದಡಿ ಕೃತಕ ಬುದ್ಧಿಮತ್ತೆ ಸಮ್ಮೇಳನವನ್ನು ಆಯೋಜಿಸಿದ್ದು ಸೂಕ್ತ ಹಾಗೂ ಸಮಯೋಚಿತ ಹೆಜ್ಜೆಯಾಗಿದೆ. ಎಐಯನ್ನು ಪ್ರಜಾತಾಂತ್ರಿಕಗೊಳಿಸುವತ್ತ ಭಾರತವು ಜಗತ್ತನ್ನು ಪ್ರೇರೇಪಿಸಿದೆ.

ಲೂಟ್ಯೆನ್ಸ್ ಬಗ್ಗೆ ಏಕೆ ತಲೆಕೆಡಿಸಿಕೊಳ್ಳಬೇಕು?

ವೀರ್ ಸಾಂಘ್ವಿ

ರಾಷ್ಟ್ರಪತಿ ಭವನದ ಹೊರಗೆ ಅದನ್ನು ನಿರ್ಮಿಸಿದ ಲೂಟ್ಯೆನ್ಸ್‌ನ ಶಿರದ ಪುತ್ಥಳಿ ಇತ್ತೆಂಬುದು ನಿಮಗೆ ಗೊತ್ತಿತ್ತೆ? ನನಗಂತೂ ಗೊತ್ತಿರಲಿಲ್ಲ.


ಲೂಟ್ಯೆನ್ಸ್ ಎಂಬಾತ ಬ್ರಿಟಿಷ್ ವೈಸರಾಯ್‌ಗಾಗಿ ಈ ಭವನವನ್ನು ಅರಮನೆಯ ರೀತಿ ರೂಪಿಸಿದ್ದ ಹಾಗೂ ಅದನ್ನು 1931ರಲ್ಲಿ ಉದ್ಘಾಟಿಸಲಾಗಿತ್ತು ಎಂಬುದು ನನಗೆ ಗೊತ್ತಿತ್ತು. ಉದ್ಘಾಟನಾ ಸಮಾರಂಭಕ್ಕೆ ಭಾರತದ ಸ್ವಾತಂತ್ರ್ಯ ಹೋರಾಟದ ನಾಯಕರು ಹಾಜರಾಗಿರಲಿಲ್ಲ. ಜವಾಹರಲಾಲ್ ನೆಹರೂ ಅಂತೂ "ಈ ಭವನವು ಅತ್ಯಂತ ಕೊಳಕು ಮತ್ತು ನಿರುಪಯೋಗಿ ವೆಚ್ಚ" ಎಂದು ಬಣ್ಣಿಸಿದ್ದರು.

ಆದರೆ ಅದನ್ನು ನಿರ್ಮಿಸಿದವನ ಪುತ್ಥಳಿಯನ್ನು ಅಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ ಎಂಬುದು ತಿಳಿದೇ ಇರಲಿಲ್ಲ. ಬಹುಶಃ ಹೆಚ್ಚಿನ ಭಾರತೀಯರಿಗೂ ಅದರ ಬಗ್ಗೆ ಅರಿವಿಲ್ಲ. ಆತನ ಪುತ್ಥಳಿಯನ್ನು ಮೊನ್ನೆ ತೆಗೆದು ಹಾಕಿ, ರಾಜಾಜಿಯವರ ಪುತ್ಥಳಿಯನ್ನು ಅಲ್ಲಿ ಸ್ಥಾಪಿಸಲಾಯಿತು ಎಂಬ ಸುದ್ದಿ ಓದಿದ ಬಳಿಕವೇ ಇದು ತಿಳಿದುಬಂದುದು.

ಲೂಟ್ಯೆನ್ಸ್ ಬಗ್ಗೆ ಬ್ರಿಟಿಷರಿಗೆ ಹೆಚ್ಚು ತಿಳಿದಿದೆಯೆ ಹೊರತು ಭಾರತೀಯರಿಗೆ ಅಲ್ಲ, ಹೆಚ್ಚಿನ ಭಾರತೀಯರಿಗೆ ಈ ಹೆಸರನ್ನು ಉಚ್ಚರಿಸುವ ರೀತಿಯೂ ತಿಳಿದಿಲ್ಲ. (ಅದನ್ನು ಲೂಟ್ಯೆನ್ಸ್ ಎನ್ನುವುದಕ್ಕಿಂತ ಲುಚೆನ್ಸ್ ಎಂದು ಹೆಚ್ಚಿನವರು ಉಚ್ಚರಿಸುತ್ತಾರೆ) ಭಾರತದಲ್ಲಿ ಆತನ ಹೆಸರನ್ನು ಉಲ್ಲೇಖಿಸುವುದಿದ್ದರೆ ಅದನ್ನು 'ಹೊಸದಿಲ್ಲಿ'ಗೆ ತಳುಕು ಹಾಕುತ್ತಾರೆ. ಪ್ರಧಾನಿ ಮತ್ತು ಸಂಪುಟ ಸದಸ್ಯರು ವಾಸಿಸುತ್ತಿದ್ದ ನಿವಾಸಗಳನ್ನು ನಿರ್ಮಿಸಿದವರು ಅವರು. 'ಲೂಟ್ಯೆನ್ಸ್ ಗಣ್ಯರು' ಎಂಬುದಾಗಿ ಈ ಕಟ್ಟಡಗಳಲ್ಲಿ ವಾಸಿಸುವ ವ್ಯಕ್ತಿಗಳನ್ನು ಉಲ್ಲೇಖಿಸಿಯೂ ಹೇಳುವುದಿದೆ. ಅದು ವ್ಯಂಗ್ಯವಾಗಿ. ಭಾರತದಲ್ಲಿದ್ದುಕೊಂಡೂ ಇಂಗ್ಲಿಷ್ ಸಂಸ್ಕೃತಿಯನ್ನು ಪ್ರತಿಪಾದಿಸುವವರನ್ನು ಮತ್ತು ಕೇವಲ ಇಂಗ್ಲಿಷ್ ಮಾತನಾಡುವವರನ್ನು ಈ ರೀತಿ ಸಂಬೋಧಿಸಲಾಗುತ್ತದೆ.

ಆದ್ದರಿಂದ ಬಹುತೇಕ ಭಾರತೀಯರಿಗೆ ರಾಷ್ಟ್ರಪತಿ ಭವನದ ಹೊರಗೆ ಲೂಟ್ಯೆನ್ಸ್‌ನ ಪುತ್ಥಳಿ ಇತ್ತೇ ಇಲ್ಲವೇ ಎಂಬುದು ಮುಖ್ಯ ವಿಷಯವಲ್ಲ. ಹಾಗಾಗಿ ಅದನ್ನು ತೆಗೆದುದು ಕೂಡಾ ಮಹತ್ವದ ಸುದ್ದಿಯಲ್ಲ. ಆ ಜಾಗದಲ್ಲಿ ದೇಶದ ಮೊದಲ ಗವರ್ನರ್ ಜನರಲ್ ಸಿ. ರಾಜಗೋಪಾಲಾಚಾರಿ ಅವರ ಪುತ್ಥಳಿ ಸ್ಥಾಪಿಸಿದ್ದು ಒಳ್ಳೆ ಕಾರ್ಯವೇ. ಆದರೆ ಅದರ ಕುರಿತಂತೆಯೂ ಕೆಲವರು ವಿವಾದ ಎಬ್ಬಿಸುತ್ತಿರುವುದು ಮಾತ್ರ ಸಮರ್ಥನೀಯವಲ್ಲ.

ಲೂಟ್ಯೆನ್ಸ್ ಪುತ್ಥಳಿ ತೆಗೆದುದನ್ನು ವಿರೋಧಿಸುವ ಈ



ಮಂದಿ "ಹಾಗಿದ್ದರೆ ಬ್ರಿಟಿಷ್ ರಾಜ್ ಅನ್ನು ಪ್ರತಿನಿಧಿಸುವ ಎಲ್ಲಾ ಕುರುಹುಗಳನ್ನು ತೆಗೆಯಬಾರದೇಕೆ" ಎಂಬ ವಾದ ಮುಂದಿಡುತ್ತಾರೆ. ವೈಸರಾಯ್‌ಗಳು, ಜನರಲ್‌ಗಳು ಮತ್ತು ಗವರ್ನರ್‌ಗಳು ಭಾರತವನ್ನು ಶೋಷಿಸಿದ್ದು ನಿಜವಾದರೂ ಲೂಟ್ಯೆನ್ಸ್ ಕೇವಲ ಒಬ್ಬ ಕಟ್ಟಡ ನಿರ್ಮಾಣಗಾರ. ಆತನು ಭಾರತೀಯರಿಗೆ ಯಾವುದೇ ಅನ್ಯಾಯ ಎಸಗಿಲ್ಲ, ಆತನ ಪುತ್ಥಳಿ ತೆಗೆಯುವ ಅಗತ್ಯವೇನಿತ್ತು ಎಂದೂ ಅವರು ಪ್ರಶ್ನಿಸುತ್ತಾರೆ.

ಅಂದರೆ ಈ ವಾದದ ಪ್ರಕಾರ ಯಾರು ಭವ್ಯಕಟ್ಟಡ ನಿರ್ಮಿಸುತ್ತಾನೋ ಆತನ ಪುತ್ಥಳಿಯನ್ನು ನಿರ್ಮಿಸುವುದು ಅಗತ್ಯ ಎಂಬಂತಾಗುತ್ತದೆ. ಇದೊಂದು ವಿಚಿತ್ರ ವಾದ. ಹಾಗಿದ್ದರೆ ದಿಲ್ಲಿ ಸರಕಾರದ ಹೊಸ ಭವನದ ಹೊರಗೆ ಬಿಮಲ್ ಪಟೇಲ್ ಪುತ್ಥಳಿಯನ್ನು ಸ್ಥಾಪಿಸಬೇಕೆ? ರಾಷ್ಟ್ರಪತಿ ಭವನವು ಅತ್ಯಂತ ಸುಂದರ ಕಟ್ಟಡವಾಗಿರಬಹುದು. ಅದನ್ನಾರೂ ನಿರಾಕರಿಸಲಾರರು. ಲೂಟ್ಯೆನ್ಸ್‌ಗೆ ಕುಶಲತೆಯ ಶ್ರೇಯಸ್ಸನ್ನು ಯಾರೂ ನಿರಾಕರಿಸುವುದಿಲ್ಲ. ಆದರೆ ಅದಕ್ಕೆ ಪುತ್ಥಳಿ ಯಾಕೆ ಬೇಕು? ಬೇಕೆಂದಾದರೆ ಇಂತಹ ಭವನದಲ್ಲಿ ವಾಸಿಸಿದ ಹೆಸರಾಂತ ಐತಿಹಾಸಿಕ ವ್ಯಕ್ತಿಗಳ ಪುತ್ಥಳಿ ಇಡುವುದು ಸೂಕ್ತವಲ್ಲವೆ?

'ಬ್ರಿಟಿಷರ ಮತ್ತು ಮೊಘಲರ ಕುರುಹುಗಳನ್ನೆಲ್ಲಾ ಅಳಿಸುವುದಾದರೆ ತಾಜ್‌ಮಹಲನ್ನು ಉಳಿಸಿಕೊಳ್ಳುವುದೇಕೆ? ಅದನ್ನೂ ಕೆಡವಬಹುದಲ್ಲವೆ' ಎಂದು ಯಾರೋ ವ್ಯಂಗ್ಯವಾಗಿ ಪ್ರಶ್ನಿಸಿದರು. ಇದೊಂದು ಮೂರ್ಖ ವಾದ. ಮೊಘಲರದು ಭಾರತದಲ್ಲಿ ಹುಟ್ಟಿ ಬೆಳೆದ ಸಾಮ್ರಾಜ್ಯ. ಅವರು ಬ್ರಿಟಿಷ್ ವಸಾಹತುಶಾಹಿಗಳಂತಲ್ಲ. ಬ್ರಿಟಿಷರು ಇಲ್ಲಿನ ಸಂಪತ್ತನ್ನೆಲ್ಲಾ ಕೊಂಡೊಯ್ದು ಬ್ರಿಟನ್‌ನಲ್ಲಿ ತಮ್ಮ ಸಾಮ್ರಾಜ್ಯ ಬೆಳೆಸಿದವರು. ಅವರು ತಮ್ಮನ್ನು ತಾವು ಭಾರತೀಯರೆಂದು ಎಂದೂ ಭಾವಿಸಿಕೊಳ್ಳಲಿಲ್ಲ. ಒಂದು ರೀತಿಯಲ್ಲಿ ಲೂಟ್ಯೆನ್ಸ್‌ನ ಅಭಿಮಾನಿಗಳು ತಮ್ಮ ವಾದವನ್ನು ಅತಿರೇಕಕ್ಕೆ ಕೊಂಡೊಯ್ಯುತ್ತಿದ್ದಾರೆ.

ತಾಜ್‌ಮಹಲನ್ನು ಕಟ್ಟಿಸಿದ್ದು ಶಾ ಜಹಾನ್ ಎಂದು ಗೊತ್ತು. ಆದರೆ ಅದನ್ನು ನಿರ್ಮಿಸಿದ ಆರ್ಕಿಟೆಕ್ಟ್ ಯಾರು? ಆತನ ಹೆಸರು ಯಾರಿಗೂ ಗೊತ್ತಿಲ್ಲ. ತಾಜ್‌ಮಹಲ್ ಕಟ್ಟಿದ ವಾಸ್ತುಶಿಲ್ಪಿ ಯಾರೆಂದು ಗೊತ್ತಿಲ್ಲದ ಮೇಲೆ ಹಾಗೂ ಆ ಕುರಿತಂತೆ ನಾವು ತಲೆಕೆಡಿಸಿಕೊಳ್ಳದಿರುವಾಗ ಬ್ರಿಟಿಷ್ ವೈಸರಾಯ್‌ಗಾಗಿ ಭವನವೊಂದನ್ನು ಕಟ್ಟಿದ ಬ್ರಿಟಿಷ್ ಆರ್ಕಿಟೆಕ್ಟ್‌ನ ಕುರಿತಂತೆ ತಲೆಕೆಡಿಸಿಕೊಳ್ಳುವುದೇಕೆ?

ಲೂಟ್ಯೆನ್ಸ್‌ನ ಪ್ರತಿಮೆ ಉಳಿಯುವುದೇ ಅಥವಾ ಅಳಿದುಹೋಗುವುದೆ ಎಂಬುದು ಇಲ್ಲಿ ಮುಖ್ಯ ವಿಷಯವಲ್ಲ. ಆದರೆ ತನ್ನ ವೈಸರಾಯ್‌ಗೆ ಸೇವೆ ಸಲ್ಲಿಲೆಂದು ಭವನ ಕಟ್ಟಿದ ಆರ್ಕಿಟೆಕ್ಟ್‌ನ್ನು ಸ್ವತಂತ್ರ ಭಾರತವು ಎಂದೆಂದೂ ನೆನಪಿಸಿಕೊಳ್ಳುತ್ತಲೇ ಇರಬೇಕೆಂದು ವಾದಿಸುವ ಬ್ರಿಟಿಷರನ್ನು ಕಂಡಾಗ ಅಸಹನೆಯಾಗುತ್ತದೆ. ಲೂಟ್ಯೆನ್ಸ್ ಪ್ರತಿಮೆಯನ್ನು ತೆಗೆದುಹಾಕಿದ ಕುರಿತಂತೆ ಇಂಗ್ಲೆಂಡ್‌ನಲ್ಲಿ ಹಲವರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಇದನ್ನು ನೋಡುವಾಗ ಹಿಟ್ಲರ್‌ನನ್ನು ಈಗಲೂ ಹೊಗಳುವ ಜರ್ಮನ್ನರ ವರ್ತನೆ ನೆನಪಿಗೆ ಬರುತ್ತದೆ. ಇದು ನೋಡುವಾಗ ಅನ್ನಿಸುವುದೆಂದರೆ, ಲೂಟ್ಯೆನ್ಸ್ ಪ್ರತಿಮೆಯನ್ನು 1947ರಲ್ಲೇ ಕಿತ್ತು ಬಿಸಾಕಬೇಕಿತ್ತು ಎಂಬುದಾಗಿ!

ಆತ್ಮ ಸಾಕ್ಷಾತ್ಕಾರಕ್ಕೆ ಗೀತೆ ಪೂರಕ: ರಾಷ್ಟ್ರಪತಿ ಮುರ್ಮು

ಆಧ್ಯಾತ್ಮಿಕ ಜೀವನಕ್ಕೆ ಭಗವದ್ಗೀತೆ ಪ್ರೇರಣೆ



ಜಮ್ಶೆಡ್‌ಪುರ : ಇಂದಿನ ಯುವಶಕ್ತಿಗೆ ಹೊಸ ದಿಕ್ಕು ತೋರಿ ,ಬದುಕಿಗೊಂದು ನವ ಆಯಾಮ ನೀಡುವಲ್ಲಿ ಪವಿತ್ರ ಭಗವದ್ಗೀತೆಯಲ್ಲಿನ ಆಧ್ಯಾತ್ಮಿಕ ಸಂದೇಶಗಳು ಪ್ರೇರಣಾದಾಯಿ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಪ್ರಾಯಪಟ್ಟಿದ್ದಾರೆ.

ಕಡ್ಮಾದಲ್ಲಿ ಶ್ರೀ ಜಗನ್ನಾಥ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ದಾನದತ್ತಿ ಕೇಂದ್ರ ಟ್ರಸ್ಟ್ ಸಂಕೀರ್ಣಕ್ಕೆ ಭೂಮಿಪೂಜೆ ನೆರವೇರಿಸಿದ ಬಳಿಕ ,ಜಾರ್ಖಂಡ್‌ನ ಜಮ್ಶೆಡ್‌ಪುರದಲ್ಲಿ ಜನಸ್ತೋಮವನ್ನುದ್ದೇಶಿಸಿ ಮಾತನಾಡಿದ ಮುರ್ಮು

ಪೊಡವಿಗೊಡೆಯನು ಭಗವದ್ಗೀತೆಯಲ್ಲಿ ನೀಡಿರುವ ಸಂದೇಶಗಳು ಆತ್ಮ ಸಾಕ್ಷಾತ್ಕಾರಕ್ಕೆ ಪೂರಕವೆಂದು ವಿಶ್ಲೇಷಿಸಿದರು. ಪ್ರಸ್ತಾವಿತ ಟ್ರಸ್ಟ್ ಆಧ್ಯಾತ್ಮಿಕ ಅಧ್ಯಯನ ಮತ್ತು ಕೋಮು ಸೌಹಾರ್ದ ಕೇಂದ್ರವಾಗಿ ಮೂಡಿಬರಲಿದೆ. ಹೆಣ್ಣು ಮಕ್ಕಳ ಸಹಿತ ಬಡ ಮಕ್ಕಳಿಗೆ ತನ್ನ ಹಾಸ್ಟೆಲ್‌ನಲ್ಲಿ ಶಿಕ್ಷಣಾವಕಾಶ ಕಲ್ಪಿಸಲಿದೆ.

ಪ್ರಸ್ತಾವಿತ ಆಧ್ಯಾತ್ಮಿಕ ಕೇಂದ್ರದ ಆಯೋಜಕರ ಪ್ರಯತ್ನಗಳಿಗೆ ಪ್ರಶಂಸೆ ವ್ಯಕ್ತಪಡಿಸಿದ ರಾಷ್ಟ್ರಪತಿ ಮುರ್ಮು, ಭಗವದ್ಗೀತೆಯ ಸಂದೇಶಗಳನ್ನು ಯುವಶಕ್ತಿ ತಮ್ಮ ಬದುಕಲ್ಲಿ ಅಳವಡಿಸಲು ಕೇಂದ್ರವು ನೆರವಾಗಲಿದೆ, ಮತ್ತವರ ಚಾರಿತ್ರ್ಯವನ್ನು ಪರಿಶುದ್ಧಗೊಳಿಸಲು ಪ್ರೇರಣೆಯಾಗಲಿದೆ. ನಮ್ಮ ಆಧ್ಯಾತ್ಮಿಕ ಪರಂಪರೆಯಲ್ಲಿ ಪ್ರೀತಿ ಹಾಗೂ ಎಲ್ಲಾ ಜೀವಿಗಳು ಹಾಗೂ ಸಸ್ಯಗಳ ಬಗ್ಗೆ ದಯೆ ತೋರುವುದಕ್ಕೆ ಮಹತ್ತ್ವದ ಪ್ರಾಧಾನ್ಯತೆ ನೀಡಲಾಗಿದೆ ಎಂದು ಹೇಳಿದರು.

ಮಹಾಪ್ರಭು ಜಗನ್ನಾಥ ಇಡೀ ಜಗದೊಡೆಯ: ಮಹಾಪ್ರಭು ಜಗನ್ನಾಥನು ಇಡೀ ವಿಶ್ವದೊಡೆಯ. ಅವನು ಯಾವುದೇ ತಾರತಮ್ಯರಹಿತವಾಗಿ ಇಡೀ ಮಾನವ ಜನಾಂಗವನ್ನು ಪೊರೆವ ಕರುಣಾಮಯಿ. ಭಗವಾನ್ ಜಗನ್ನಾಥನು ಜಾತಿ ಮತಪಂಥಗಳ ಭೇದರಹಿತನು ಅಥವಾ ಅಸ್ಪೃಶ್ಯತೆರಹಿತನು. ಜಗನ್ನಾಥನು ಜಗತ್ ಕೇ ನಾಥ್ ಎಂದು ಆರಾಧಿಸಲ್ಪಡೋದು ಇದೇ ಹಿನ್ನೆಲೆಯಿಂದ ಎಂದು ರಾಷ್ಟ್ರಪತಿಗಳು ಕೊಂಡಾಡಿದರು. ಜಾರ್ಖಂಡ್ ರಾಜ್ಯಪಾಲಳಾಗಿದ್ದಾಗ ರಾಜ್ಯವು ಸಾಮಾಜಿಕ ಸೌಹಾರ್ದತೆಗೆ ಹೆಸರಾಗಿತ್ತು ಮತ್ತು ಆದಿವಾಸಿ ಪರಂಪರೆಗಳ ಸಂರಕ್ಷಿಸಿತ್ತು ಎಂದು ನೆನಪುಗಳ ಮೆಲುಕು ಹಾಕಿದ ರಾಷ್ಟ್ರಪತಿ ಮುರ್ಮು, ಭಗವಾನ್ ಜಗನ್ನಾಥನ ಕುರಿತು ವಿಶ್ವಾದ್ಯಂತ ದಿನೇ ದಿನೇ ಬೆಳೆಯುತ್ತಿರುವ ಪ್ರೀತಿ, ನಂಬುಗೆ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು.

500 ಜಗನ್ನಾಥ ದೇಗುಲಗಳು: ದೇಶಾದ್ಯಂತ ಇದುವರೆಗೆ 500ಕ್ಕೂ ಅಧಿಕ ಜಗನ್ನಾಥ ದೇಗುಲಗಳ ನಿರ್ಮಿಸಲಾಗಿದೆ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಮಾಹಿತಿ ನೀಡಿದರು.

100ಕೋಟಿ ವೆಚ್ಚದಲ್ಲಿ ಆಧ್ಯಾತ್ಮಿಕ ಕೇಂದ್ರ ರಚನೆ: ಹೊಸ ಆಧ್ಯಾತ್ಮಿಕ ಕೇಂದ್ರವು 12ನೇ ಶತಮಾನದ ಪುರಿ ದೇವಾಲಯವನ್ನು ಪ್ರತಿಬಿಂಬಿಸಲಿದೆ. ಖರ್ಕಾಯಿ ನದಿಗೆ ಸಮೀಪ ಸುಮಾರು 2.5 ಎಕರೆಗೂ ಅಧಿಕ ಜಾಗದಲ್ಲಿ ಸುಮಾರು 100ಕೋಟಿ ವೆಚ್ಚದಲ್ಲಿ ಕೇಂದ್ರವು ತಲೆ ಎತ್ತಲಿದೆ ಎಂದು ಮಾಹಿತಿ ನೀಡಿದ ಟ್ರಸ್ಟ್‌ನ ಆಡಳಿತ ಟ್ರಸ್ಟಿ ಎಸ್.ಕೆ.ಬೆಹೆರಾ, ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಪ್ರಸ್ತುತ ಕೇಂದ್ರವು ಉತ್ತೇಜಕವಾಗಲಿದೆ ಮತ್ತು ಯುವ ಪೀಳಿಗೆಯ ಸನ್ನಡತೆ ಸಹಿತ ವ್ಯಕ್ತಿತ್ವ ನಿರ್ಮಾಣ ಮತ್ತು ನೈತಿಕತೆ ಅಭಿವೃದ್ಧಿ ಕೇಂದ್ರವಾಗಿ ರೂಪುಗೊಳ್ಳಲಿದೆ ಎಂದು ಹೇಳಿದರು.

ಭಾರತ ಕೆನಡಾ ಸಂಬಂಧಕ್ಕೆ ಗ್ರೀನ್ ಸಿಗ್ನಲ್?





ಇಂದಿನಿಂದ ಕೆನಡಾ ಪ್ರಧಾನಿ ಕಾರ್ನಿ ಭಾರತ ಭೇಟಿ

ಸುದ್ದಿ ಸಮಗ್ರ

ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಶುಕ್ರವಾರದಿಂದ ನಾಲ್ಕು ದಿನಗಳವರೆಗೆ ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ. ಈ ಮೂಲಕ ಹದಗೆಟ್ಟಿರುವ ಉಭಯ ದೇಶಗಳ ನಡುವಿನ ಸಂಬಂಧ ಸರಿಯಾಗಿ ಹೊಸ ಚೈತನ್ಯ ತುಂಬುವ ಸಾಧ್ಯತೆ ಇದೆ. ಇದರ ಜತೆಗೆ ಕಾರ್ನಿ ಭಾರತ ಭೇಟಿಗೆ ಮುಂಚಿತವಾಗಿ ನಿಜ್ಜರ್ ಹತ್ಯೆಯಲ್ಲಿ ''ಭಾರತೀಯ ಹಸ್ತಕ್ಷೇಪ''ದ ಆರೋಪದ ಬಗ್ಗೆ ಕೆನಡಾ ತನ್ನ ನಿಲುವುಗಳಲ್ಲಿ ಗಮನಾರ್ಹ ಬದಲಾವಣೆ ಮಾಡಿಕೊಂಡಿದೆ. ಇದು ಕಳೆದ ಒಂದು ವರ್ಷದಿಂದ ಹದಗೆಟ್ಟಿರುವ ದ್ವಿಪಕ್ಷೀಯ ಸಂಬಂಧವನ್ನು ಮತ್ತೆ ಸರಿಪಡಿಸಿಕೊಳ್ಳುವ ಒಂದು ಧನಾತ್ಮಕ ಪ್ರಯತ್ನ ಎಂದು ವಿಶ್ಲೇಷಿಸಲಾಗುತ್ತಿದೆ.

ಭಾರತ- ಕೆನಡಾ ಸಂಬಂಧದಲ್ಲಿ ಏರುಪೇರು

- ನಿಜ್ಜರ್ ಹತ್ಯೆಯಲ್ಲಿ ಭಾರತದ ಹಸ್ತಕ್ಷೇಪ ಆರೋಪದ ಬಗ್ಗೆ ಕೆನಡಾ ತನ್ನ ನಿಲುವನ್ನು ಮೃದುಗೊಳಿಸಿದೆ.
- ನಿಜ್ಜರ್ ಹತ್ಯೆಗೆ ಭಾರತವನ್ನು ನೇರವಾಗಿ ದೂಷಿಸಲಾಗಿತ್ತು, ಭಾರತವು ಆರೋಪಗಳನ್ನು ನಿರಾಕರಿಸಿತು.
- 2024ರಿಂದ ಹದಗೆಟ್ಟಿದ್ದ ರಾಜತಾಂತ್ರಿಕ ಸಂಬಂಧ. ಕಾರ್ನಿ ಅವಧಿಯಲ್ಲಿ ಬದಲಾವಣೆಯ ಗಾಳಿ
- ಉಭಯ ದೇಶಗಳ ನಡುವಿನ ವ್ಯಾಪಾರ ವಾರ್ಷಿಕವಾಗಿ 21 ಶತಕೋಟಿ ಡಾಲರ್ ಮೀರಿದೆ.
- ದೀರ್ಘಕಾಲದಿಂದ ಬಾಕಿ ಇರುವ ವ್ಯಾಪಾರ ಒಪ್ಪಂದದ ಮಾತುಕತೆಗಳ ಪುನರಾರಂಭ ಸಾಧ್ಯತೆ

ಕಾರ್ನಿ ಕಾಲದ ಬದಲಾವಣೆ

ಕೆನಡಾದಲ್ಲಿ ಬಳಿಕ ಆಯೋಗದ ವರದಿ ಈ ಹತ್ಯೆಯಲ್ಲಿ ವಿದೇಶಿ ರಾಜ್ಯದೊಂದಿಗೆ ಯಾವುದೇ ನಿರ್ಣಾಯಕ ಸಂಪರ್ಕವನ್ನು ಸಾಬೀತುಪಡಿಸಲಾಗಿಲ್ಲ ಎಂದು ಹೇಳಿದೆ. ಪ್ರಸ್ತುತ ಕಾರ್ನಿ ಭೇಟಿಗೆ ಮುಂಚಿತವಾಗಿ, ಕೆನಡಾದ ಅಧಿಕಾರಿಗಳು ಭಾರತದೊಂದಿಗೆ ದೃಢವಾದ ರಾಜತಾಂತ್ರಿಕ ಸಂಬಂಧಕ್ಕೆ ಒತ್ತು ನೀಡಿದ್ದಾರೆ. ಯಾವುದೇ ಆಪಾದನೆಗಳಂತಹ ಸನ್ನಿವೇಶಗಳು ಮುಂದುವರಿಯುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮಾರ್ಚ್ 2025 ರಲ್ಲಿ ಕಾರ್ನಿ ಅಧಿಕಾರ ವಹಿಸಿಕೊಂಡಾಗಿನಿಂದ ಸಂಬಂಧಗಳಲ್ಲಿನ ಸುಧಾರಣೆ ಗೋಚರಿಸುತ್ತಿದೆ. ರಾಯಭಾರಿಗಳನ್ನು ಮತ್ತೆ ಕರೆಸಿಕೊಳ್ಳಲಾಗಿದ್ದು, ಉನ್ನತ ಮಟ್ಟದ ಭೇಟಿಗಳು ಪುನರಾರಂಭಗೊಂಡಿವೆ.

ಹಿಂದಿನ ಆರೋಪಗಳಿಂದ ಬದಲಾವಣೆ?

2024ರಲ್ಲಿ, ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊ ನೇತೃತ್ವದ ಕೆನಡಾ ಸರ್ಕಾರ, ಬ್ರಿಟಿಷ್ ಕೊಲಂಬಿಯಾದಲ್ಲಿ 2023ರಲ್ಲಿ ನಡೆದ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಗೂ ಭಾರತಕ್ಕೂ ಸಂಬಂಧ ಕಲ್ಪಿಸುವ ವಿಶ್ವಾಸಾರ್ಹ ಆರೋಪಗಳು ಇವೆ ಎಂದು ಹೇಳಿಕೊಂಡಿತ್ತು. ಭಾರತ ಈ ಆರೋಪಗಳನ್ನು ಆಧಾರರಹಿತವೆಂದು ಬಲವಾಗಿ ನಿರಾಕರಿಸಿತ್ತು. ಈ ಹೇಳಿಕೆಗಳಿಂದ ಎರಡೂ ದೇಶಗಳು ರಾಯಭಾರ ಕಚೇರಿಯ ಅಧಿಕಾರಿಗಳನ್ನು ಹೊರಹಾಕಿದ್ದವು, ಇದು ರಾಜತಾಂತ್ರಿಕ ಬಿಕ್ಕಟ್ಟಿಗೆ ಕಾರಣವಾಗಿತ್ತು. ಕೆನಡಾದ ಗುಪ್ತಚರ ಸಂಸ್ಥೆ, ಈ ಪ್ರಕರಣವನ್ನು ಗಂಭೀರ ಉದ್ವಿಗ್ನತೆ ಎಂದು ಕರೆದು, ''ವಿದೇಶಿ ಹಸ್ತಕ್ಷೇಪ''ದ ಬಗ್ಗೆ ಎಚ್ಚರಿಕೆ ನೀಡಿತ್ತು.

ವ್ಯಾಪಾರ ಮತ್ತು ತಂತ್ರಜ್ಞಾನದ ಮೇಲೆ ಗಮನ

ಫೆಬ್ರವರಿ 27 ರಿಂದ ಮಾರ್ಚ್ 2 ರವರೆಗೆ ನಿಗದಿಯಾಗಿರುವ ಕಾರ್ನಿ ಅವರ ಭಾರತ ಪ್ರವಾಸ, ಅವರ ಇಂಡೋ-ಪೆಸಿಫಿಕ್ ಪ್ರವಾಸದ ಕೇಂದ್ರಬಿಂದು ಎನಿಸಿದೆ. ಇದರಲ್ಲಿ ಆಸ್ಟ್ರೇಲಿಯಾ ಮತ್ತು ಜಪಾನ್ ಸಹ ಸೇರಿವೆ. ಭಾರತ ಭೇಟಿ ಮುಂಬೈನಲ್ಲಿ ಪ್ರಾರಂಭವಾಗಿ ನಂತರ ದಿಲ್ಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಮಾತುಕತೆ ನಡೆಸಲಾಗುತ್ತದೆ.

ಹಲವು ಒಪ್ಪಂದಗಳ ಬಗ್ಗೆ ಚರ್ಚೆ

ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯೊಂದಿಗೆ ವಾಣಿಜ್ಯ ಸಂಬಂಧಗಳನ್ನು ಬಲಪಡಿಸುವ ಗುರಿ ಹೊಂದಿರುವ ಪ್ರಾಯೋಗಿಕ ವಿದೇಶಾಂಗ ನೀತಿಯ ಬದಲಾವಣೆಯ ಭಾಗವಾಗಿ ಈ ಭೇಟಿ ನಡೆಯುತ್ತಿದೆ. ವ್ಯಾಪಾರ, ಇಂಧನ, ಕೃತಕ ಬುದ್ಧಿಮತ್ತೆ, ಕ್ವಾಂಟಮ್ ಕಂಪ್ಯೂಟಿಂಗ್, ಸಂಶೋಧನಾ ಸಹಯೋಗ, ಪ್ರತಿಭೆಗಳಿಗೆ ಅವಕಾಶ ಮತ್ತು ರಕ್ಷಣಾ ಕ್ಷೇತ್ರಗಳ ಬಗ್ಗೆ ಚರ್ಚೆ ನಡೆಯುವ ನಿರೀಕ್ಷೆಯಿದೆ.

ಸ್ಥಗಿತಗೊಂಡ ಸಮಗ್ರ ಆರ್ಥಿಕ ಪಾಲುದಾರಿಕೆ?

ಕೆನಡಾ-ಭಾರತ ಸಿಇಒ ವೇದಿಕೆಯ ಪುನರುಜ್ಜೀವನ, ಮತ್ತು ವ್ಯಾಪಾರ ಮತ್ತು ಶಿಕ್ಷಣ ಕ್ಷೇತ್ರದ ನಾಯಕರೊಂದಿಗಿನ ಸಭೆಗಳು ಬದಲಾವಣೆಗಳನ್ನು ಸೂಚಿಸಿವೆ. 2010ರಲ್ಲಿ ಪ್ರಾರಂಭವಾದರೂ, ಪದೇಪದೆ ಸ್ಥಗಿತಗೊಂಡ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ ಮಾತುಕತೆಗಳು ಈಗ ಪುನರಾರಂಭಗೊಂಡಿವೆ. ಮುಂಬರುವ ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು ಗಮನಾರ್ಹವಾಗಿ ಹೆಚ್ಚಿಸುವ ಗುರಿಯನ್ನು ಎರಡೂ ದೇಶಗಳು ಹೊಂದಿವೆ.

ಆರೋಪಗಳು ಹಿನ್ನೆಲೆಗೆ?

ಹಿಂದಿನ ಆರೋಪಗಳಿಗೆ ಸಂಬಂಧಿಸಿದ ಕಾನೂನು ಪ್ರಕ್ರಿಯೆಗಳು ಮುಂದುವರಿಯುತ್ತಿದ್ದರೂ, ಎರಡೂ ಸರ್ಕಾರಗಳು ವಿಶಾಲ ಕಾರ್ಯತಂತ್ರ ಮತ್ತು ಆರ್ಥಿಕ ಹಿತಾಸಕ್ತಿಗಳು ಹಿಂದೆ ಸರಿಯುವುದನ್ನು ತಡೆಯಲು ನಿರ್ಧರಿಸಿದಂತೆ ತೋರುತ್ತಿದೆ. ಕಾರ್ನಿ ಭೇಟಿ, ಬಿಗಡಾಯಿಸಿರುವ ರಾಜತಾಂತ್ರಿಕ ಸಂಬಂಧ ಸುಸ್ಥಿರ ಪಾಲುದಾರಿಕೆಗೆ ಮರಳುವ ಸಾಧ್ಯತೆಯಿದೆ. ಜಾಗತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇದರ ಅಗತ್ಯವೂ ಇದೆ.

ಭದ್ರತಾ ಸಹಕಾರ ಮತ್ತು ವಲಸಿಗರೆಡೆ ಗಮನ

ಕೆನಡಾದಲ್ಲಿ ಸುಮಾರು 2.8 ಮಿಲಿಯನ್ ಭಾರತೀಯ ಮೂಲದವರಿದ್ದಾರೆ ಮತ್ತು ಭಾರತದ ಹೊರಗಿನ ಅತಿದೊಡ್ಡ ಸಿಖ್ ಸಮುದಾಯ ಅದಾಗಿದೆ. ನಿಜ್ಜರ್ ಪ್ರಕರಣದಿಂದ ವಲಸಿಗರ ಸೂಕ್ಷ್ಮ ಭಾವನೆಗಳಿಗೆ ಧಕ್ಕೆಯಾಗಿತ್ತು. ಇದನ್ನು ಸರಿಪಡಿಸುವ ಜತೆಗೆ, ಅಂತಾರಾಷ್ಟ್ರೀಯ ಅಪರಾಧ, ಉಗ್ರವಾದ, ಸೈಬರ್ ಅಪರಾಧ ಮತ್ತು ಅಕ್ರಮ ವಲಸೆ-ವಂಚನೆಯಂತಹ ಸಮಸ್ಯೆಗಳನ್ನು ಪರಿಹರಿಸಲು ಭದ್ರತಾ ಸಹಕಾರವನ್ನು ಬಲಪಡಿಸಲಾಗುತ್ತಿದೆ ಎಂದು ಎರಡೂ ದೇಶಗಳ ಅಧಿಕಾರಿಗಳು ಸೂಚಿಸಿದ್ದಾರೆ. ಉಭಯ ದೇಶಗಳ ಹಿರಿಯ ರಾಷ್ಟ್ರೀಯ ಭದ್ರತಾ ಸಲಹೆಗಾರರು ಇತ್ತೀಚೆಗೆ ವ್ಯಾಪಕ ಚರ್ಚೆ ನಡೆಸಿದ್ದಾರೆ.

ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ಸೂಚನೆ

ಕಂಟೆಂಟ್ ಕ್ರಿಯೇಟರ್‌ಗೆ ಹಣ ಸಿಗಲಿ

ಹೊಸದಿಲ್ಲಿ: ಡಿಜಿಟಲ್ ವೇದಿಕೆಗಳು ಆನ್‌ಲೈನ್ ಕಂಟೆಂಟ್‌ಗಳ ಜವಾಬ್ದಾರಿ ಹೊರಬೇಕು. ಕಂಟೆಂಟ್ ಸೃಜಿಸುವವರು ಹಾಗೂ ಹೊಸ ಸಂಸ್ಥೆಗಳಿಗೆ ನ್ಯಾಯೋಚಿತವಾಗಿ ಆದಾಯ ಹಂಚಿಕೆ ಮಾಡಬೇಕು. ಕಂಟೆಂಟ್ ಸೃಷ್ಟಿಸಿದವರಿಗೆ ನ್ಯಾಯವಾದ ಮೊತ್ತ ನಿರಾಕರಿಸಿದಲ್ಲಿ ಆವಿಷ್ಕಾರಗಳಿಗೆ ಹೊಡೆತ ಬೀಳಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಎಚ್ಚರಿಸಿದ್ದಾರೆ.

ಎಐ ಸೃಷ್ಟಿಸುವ ಕಂಟೆಂಟ್ ಅಥವಾ ಹುರುಳಿನ ಬಳಕೆಯನ್ನು ನಿಯಂತ್ರಿಸಬೇಕು. ಯಾವ ವ್ಯಕ್ತಿಯ ಮುಖ, ಧ್ವನಿ ಅಥವಾ ವ್ಯಕ್ತಿತ್ವ ಬಳಸಿಕೊಂಡು ಕಂಟೆಂಟ್ ರಚಿಸಲಾಗುವುದೋ, ಆ ವ್ಯಕ್ತಿಯ ಸಮ್ಮತಿ ವಿನಾ ಕಂಟೆಂಟ್ ಸೃಜಿಸಕೂಡದು ಎಂದು ಸಚಿವರು ಎಚ್ಚರಿಸಿದ್ದಾರೆ. ದಿಲ್ಲಿಯಲ್ಲಿ ಡಿಜಿಟಲ್ ಸುದ್ದಿ ಪ್ರಕಾಶಕರ ಸಮಾವೇಶ ಉದ್ದೇಶಿಸಿ ಸಚಿವರು ಈ ರೀತಿ ಎಚ್ಚರಿಕೆ ನೀಡಿದರು.

ತಾವು ಆತಿಥೇಯ ವಹಿಸಿದ ಕಂಟೆಂಟ್‌ಗಳ ಹೊಣೆಯನ್ನು ಸಂಬಂಧಿತ ಡಿಜಿಟಲ್ ವೇದಿಕೆಗಳೇ ವಹಿಸಬೇಕು. ಮಕ್ಕಳ ಸಹಿತ ಎಲ್ಲಾ ನಾಗರಿಕರ ಡಿಜಿಟಲ್ ಸುರಕ್ಷೆ ಕೂಡ ಡಿಜಿಟಲ್ ಪ್ಲಾಟ್‌ಫಾರಂಗಳ ಜವಾಬ್ದಾರಿಯಾಗಿದೆ. ಡಿಜಿಟಲ್ ವೇದಿಕೆಗಳಿಂದು (intermediaries)ಶಕ್ತಿಶಾಲಿ ಮಾಧ್ಯಮ ಕೇಂದ್ರಗಳಾಗಿ ಪರಿವರ್ತಿತವಾಗಿವೆ ಎಂದು ಗಮನಸೆಳೆದ ಸಚಿವ ವೈಷ್ಣವ್, ಬೌದ್ಧಿಕ ಆಸ್ತಿಗಳನ್ನು ಗೌರವಿಸಬೇಕು ಮತ್ತು ಅವುಗಳಿಗೆ ನ್ಯಾಯೋಚಿತ ಪರಿಹಾರವೀಯಬೇಕು. ಯಾಕೆಂದರೆ ವಿಜ್ಞಾನ, ತಂತ್ರಜ್ಞಾನ, ಕಲೆ ಮತ್ತು ಸಾಹಿತ್ಯ ರಂಗಗಳಲ್ಲಿ ಸಮಾಜದ ಪ್ರಗತಿಯು ಬೌದ್ಧಿಕ ಆಸ್ತಿಗಳನ್ನು ಅವಲಂಬಿಸಿದೆ. ಡಿಜಿಟಲ್ ವೇದಿಕೆಗಳು ಬರೇ ಸುದ್ದಿಸಂಸ್ಥೆಗಳಿಗೆ ಮಾತ್ರವಲ್ಲ, ಕುಗ್ರಾಮಗಳಲ್ಲಿನ ಸ್ವತಂತ್ರ ಕ್ರಿಯೇಟರ್‌ಗಳು, ಪ್ರಭಾವ ಸೃಜಿಸಬಲ್ಲವರು, ಪ್ರೊಫೆಸರ್‌ಗಳು ಮತ್ತು ಸಂಶೋಧಕರಿಗೂ ಸೂಕ್ತ ಪರಿಹಾರ ನೀಡಬೇಕು. ಹಾಗಾಗಿ ಈ ನಿಟ್ಟಿನಲ್ಲಿ ಎಲ್ಲಾ ಡಿಜಿಟಲ್ ವೇದಿಕೆಗಳು ತಮ್ಮ ನೀತಿಗಳ ಮರುವಿಮರ್ಶೆ ನಡೆಸಬೇಕು. ಸ್ವಯಂಪ್ರೇರಿತವಾಗಿ ಕ್ರಮ ಕೈಗೊಳ್ಳದಿದ್ದಲ್ಲಿ ಕಾನೂನು ರೀತ್ಯಾ ಹಾದಿಗಳಿವೆ ಎಂಬುದನ್ನು ಹಲವು ರಾಷ್ಟ್ರಗಳು ಈಗಾಗಲೇ ತೋರಿಸಿಕೊಟ್ಟಿವೆ ಎಂದು ಎಚ್ಚರಿಸಿದ್ದಾರೆ.

ಕಿರುಸುದ್ದಿ

ಎನ್‌ಕೌಂಟರ್: ಇಬ್ಬರು ನಕ್ಸಲರ ವಧೆ, ಶಸ್ತ್ರಾಸ್ತ್ರ ವಶ



ಬಿಜಾಪುರ್: ಚತ್ತೀಸಗಢದ ಬಿಜಾಪುರ್ ಜಿಲ್ಲೆಯಲ್ಲಿ ಗುರುವಾರ ಭದ್ರತಾ ಪಡೆಗಳ ಮತ್ತು ಮಾವೋವಾದಿಗಳ ನಡುವಿನ ಗುಂಡಿನ ಚಕಮಕಿಯಲ್ಲಿ ಇಬ್ಬರು ನಕ್ಸಲರು ಬಲಿಯಾಗಿದ್ದಾರೆ. ಜಂಗ್ಲಾ ಪೊಲೀಸ್ ಠಾಣೆ ವ್ಯಾಪ್ತಿಯ ಇಂದ್ರಾವತಿ ನದಿ ಕಾಡುಗಳಲ್ಲಿ ಮಾವೋವಾದಿಗಳು ಇದ್ದಾರೆಂಬ ಗುಪ್ತಚರ ಮಾಹಿತಿ ಆಧಾರದಲ್ಲಿ ಭದ್ರತಾ ಸಿಬ್ಬಂದಿ ಶೋಧ ಕಾರ್ಯಾಚರಣೆಯನ್ನು ನಡೆಸಿದ್ದಾರೆ. ಎನ್‌ಕೌಂಟರ್‌ಗೆ ಬಲಿಯಾದ ನಕ್ಸಲರಲ್ಲಿ ಒಬ್ಬ ಪುರುಷ ಮತ್ತು ಒಬ್ಬ ಮಹಿಳೆಯೆಂದು ಅಧಿಕಾರಿಗಳು ತಿಳಿಸಿದ್ದಾರೆ. ಎಸ್‌ಎಲ್‌ಆರ್ ರೈಫಲ್, ಇನ್ಸಾಸ್ ಅಸಾಲ್ಟ್ ರೈಫಲ್, 12-ಬೋರ್ ಗನ್, ಸ್ಫೋಟಕಗಳನ್ನು ಪೊಲೀಸರು ವಶಪಡಿಸಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಪಾಕ್‌ಗೆ ಭಾರತ ಛೀಮಾರಿ

ವಿಶ್ವಸಂಸ್ಥೆ/ಜಿನೀವಾ: ಜಮ್ಮು-ಕಾಶ್ಮೀರದ ಅಭಿವೃದ್ಧಿ ಬಜೆಟ್ ಅಂತಾರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) ಪಾಕಿಸ್ತಾನ ಇತ್ತೀಚೆಗೆ ಕೋರಿದ್ದ ಬೇಲ್‌ಔಟ್ ಪ್ಯಾಕೇಜ್‌ಗಿಂತ ಎರಡು ಪಟ್ಟು ಹೆಚ್ಚು ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಲ್ಲಿ ಭಾರತ ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡಿದೆ. ಕೌನ್ಸಿಲ್‌ನ 61ನೇ ಅಧಿವೇಶನದಲ್ಲಿ, ಪಾಕಿಸ್ತಾನ, ಕಾಶ್ಮೀರ ಸಮಸ್ಯೆಯನ್ನು ಎತ್ತಿದ ನಂತರ ಉತ್ತರಿಸುವ ಹಕ್ಕಿನಲ್ಲಿ ಜಿನೀವಾದಲ್ಲಿರುವ ಭಾರತದ ಶಾಶ್ವತ ರಾಯಭಾರ ಕಚೇರಿಯ ಮೊದಲ ಕಾರ್ಯದರ್ಶಿ ಅನುಪಮಾ ಸಿಂಗ್ ಈ ಹೇಳಿಕೆ ನೀಡಿದ್ದಾರೆ. ಜಮ್ಮು-ಕಾಶ್ಮೀರದ ಅಭಿವೃದ್ಧಿ ವೆಚ್ಚ ಪಾಕಿಸ್ತಾನ ಕೋರಿದ ಐಎಂಎಫ್ ಸಹಾಯವನ್ನು ಮೀರಿದೆ ಎಂದು ನಂಬಲಾಗದಂತಿದ್ದರೆ, ಪಾಕಿಸ್ತಾನ ಇನ್ನೂ ಕನಸಿನ ಲೋಕದಲ್ಲಿ ವಿಹರಿಸುತ್ತಿದೆ ಎಂದೇ ತಿಳಿಯಬೇಕಾಗುತ್ತದೆ. ಕಳೆದ ವರ್ಷ, ವಿಸ್ತೃತ ನಿಧಿ ಸೌಲಭ್ಯದಲ್ಲಿ ಸುಮಾರು 1 ಬಿಲಿಯನ್ ಯುಎಸ್ ಡಾಲರ್ ಅನ್ನು ಐಎಂಎಫ್ ಅನುಮೋದಿಸಿದ್ದು, ಒಟ್ಟು ವಿತರಣೆ ಸುಮಾರು 2.1 ಬಿಲಿಯನ್ ಯುಎಸ್ ಡಾಲರ್‌ಗೆ ಏರಿದೆ. ಕಣಿವೆ ರಾಜ್ಯದಲ್ಲಿ ಇತ್ತೀಚಿನ ಚುನಾವಣೆಗಳಲ್ಲಿ ದಾಖಲಾದ ಅತ್ಯುತ್ತಮ ಮತದಾನ ಪ್ರಮಾಣ ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ನಂಬಿಕೆ ತೋರಿಸಿದೆ ಮತ್ತು ಅದು ಭಯೋತ್ಪಾದನೆಗೆ ಸ್ಪಷ್ಟ ನಿರಾಕರಣೆಯೂ ಆಗಿದೆ ಎಂದು ಭಾರತ ಸಮರ್ಥಿಸಿಕೊಂಡಿದೆ. ಪಾಕಿಸ್ತಾನ ಮತ್ತು ಒಐಸಿ ಎತ್ತಿದ ಎಲ್ಲಾ ಆರೋಪಗಳನ್ನು ಭಾರತ ಸ್ಪಷ್ಟವಾಗಿ ನಿರಾಕರಿಸಿದೆ.

ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಆರ್‌ಎಸ್‌ಎಸ್ ಬದ್ಧ

ಲುಧಿಯಾನಾ: ಬಲಿಷ್ಠ ರಾಷ್ಟ್ರ ನಿರ್ಮಾಣವೇ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮೂಲ ಸಂಕಲ್ಪವಾಗಿದ್ದು, ದೇಶದ ಪ್ರತಿಯೊಬ್ಬ ನಾಗರಿಕನನ್ನೂ ಅದರಲ್ಲಿ ಭಾಗಿಯಾಗಿಸುವುದು ಸಂಘದ ಧ್ಯೇಯ ಎಂದು ಸರಸಂಘಚಾಲಕ್ ಮೋಹನ್ ಭಾಗವತ್ ತಿಳಿಸಿದ್ದಾರೆ. ಸಂಘದ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳ ಅಂಗವಾಗಿ ಪಂಜಾಬ್‌ಗೆ ಎರಡು ದಿನಗಳ ಭೇಟಿಗೆ ಆಗಮಿಸಿದ್ದ ಭಾಗವತ್ ಅವರು, ಜಾತಿ, ಮತ, ಭಾಷೆ ಅಥವಾ ಪಂಥ ಯಾವುದನ್ನೂ ಪರಿಗಣಿಸದೆ ಎಲ್ಲರನ್ನೂ ಒಳಗೊಂಡ ಸಮಗ್ರ ರಾಷ್ಟ್ರ ನಿರ್ಮಾಣಕ್ಕೆ ಸಂಘ ಬದ್ಧವಾಗಿದೆ ಎಂದು ಅವರು ಹೇಳಿದರು. ಎಲ್ಲರನ್ನು ಸಮಾನ ದೃಷ್ಟಿಯಿಂದಲೇ ಸಂಘ ಪರಿಗಣಿಸುತ್ತದೆ ಮತ್ತು ಸಮಾನವಾಗಿ ವರ್ತಿಸುತ್ತದೆ ಎಂದು ಭಾಗವತ್ ಒತ್ತಿ ಹೇಳಿದರು. ಸಂಘದ ಕುರಿತು ಟೀಕೆ ಮಾಡುವವರು ಮೊದಲು ಸಂಘವನ್ನು ಒಳಗಿನಿಂದ ಅರಿತುಕೊಳ್ಳಬೇಕು ಎಂದು ಅವರು ಪರೋಕ್ಷವಾಗಿ ಟೀಕಾಕಾರರಿಗೆ ಸಂದೇಶ ನೀಡಿದರು. ಸಂಘದ ಕಾರ್ಯಪದ್ಧತಿ ಹಾಗೂ ತತ್ವಗಳನ್ನು ತಿಳಿದುಕೊಂಡು, ಅಧ್ಯಯನ ಮಾಡಿದ ಬಳಿಕದ ಟೀಕೆಯನ್ನು ಸಂಘ ಸ್ವಾಗತಿಸುತ್ತದೆ. ಆದರೆ ಅಜ್ಞಾನಾಧಾರಿತ ಟೀಕೆ ಯಾರಿಗೂ ಉಪಯೋಗಕಾರಿಯಲ್ಲ ಎಂದು ಭಾಗವತ್ ಹೇಳಿದರು. ಇದೇ ವೇಳೆ, ಭಾಗವತ್ ಅವರು ಫೆ.27 ಹಾಗೂ 28ರಂದು ಹರ್ಯಾಣಕ್ಕೆ ಭೇಟಿ ನೀಡಲಿದ್ದಾರೆ. ಶುಕ್ರವಾರ ಅಂಬಾಲಾ ಸಿಟಿ ಹಾಗೂ ಅಂಬಾಲಾ ಕ್ಯಾಂಟೋನ್ಮೆಂಟ್‌ನ ಪೊಲೀಸ್ ಲೈನ್ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 15ರಿಂದ 40 ವರ್ಷದೊಳಗಿನ ಸುಮಾರು 1,000 ಸ್ವಯಂಸೇವಕರು ಭಾಗವಹಿಸಲಿದ್ದಾರೆ. ಫೆ.28ರಂದು ಕುರುಕ್ಷೇತ್ರದ ಶ್ರೀಮದ್ ಭಗವದ್ಗೀತಾ ಸಭಾಂಗಣದಲ್ಲಿ ವಿಚಾರ ಸಂಕಿರಣ ನಡೆಯಲಿದೆ.

ಟಿಕೆಟ್ ಮರುಪಾವತಿ ನಿಯಮ ಪರಿಷ್ಕರಣೆ

ಹೊಸದಿಲ್ಲಿ: ಪ್ರಯಾಣಿಕರಿಗೆ ಹೆಚ್ಚಿನ ಆಯ್ಕೆಗಳು ಮತ್ತು ರಕ್ಷಣೆ ನೀಡಲು ವಿಮಾನಯಾನ ಟಿಕೆಟ್ ಮರುಪಾವತಿ ನಿಯಮಗಳನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ನವೀಕರಿಸಿದೆ. 48 ಗಂಟೆಗಳ ಲುಕ್-ಇನ್ ಅವಧಿಯನ್ನು ಪರಿಚಯಿಸಲಾಗಿದೆ. ಈ ಅವಧಿಯಲ್ಲಿ, ಪರಿಷ್ಕೃತ ವಿಮಾನಗಳಲ್ಲಿನ ಯಾವುದೇ ಶುಲ್ಕ ವ್ಯತ್ಯಾಸವನ್ನು ಹೊರತುಪಡಿಸಿ, ಹೆಚ್ಚುವರಿ ಶುಲ್ಕಗಳಿಲ್ಲದೆ ಟಿಕೆಟ್‌ಗಳನ್ನು ರದ್ದುಗೊಳಿಸಬಹುದು ಅಥವಾ ತಿದ್ದುಪಡಿ ಮಾಡಬಹುದು. 7 ದಿನಗಳಲ್ಲಿ ನಿರ್ಗಮಿಸುವ ದೇಶೀಯ ವಿಮಾನಗಳಿಗೆ ಅಥವಾ ಬುಕಿಂಗ್ ಮಾಡಿದ 15 ದಿನಗಳಲ್ಲಿ ನಿರ್ಗಮಿಸುವ ಅಂತಾರಾಷ್ಟ್ರೀಯ ವಿಮಾನಗಳಿಗೆ ಈ ಸೌಲಭ್ಯ ಲಭ್ಯವಿರುವುದಿಲ್ಲ. ವಿಮಾನಯಾನ ಸಂಸ್ಥೆಯ ಆ್ಯಪ್ ಮೂಲಕ ಬುಕಿಂಗ್ ಮಾಡಿದ 24 ಗಂಟೆಗಳ ಒಳಗೆ ದೋಷ ವರದಿಯಾದರೆ ಆದೇ ಪ್ರಯಾಣಿಕರ ಹೆಸರನ್ನು ಸರಿಪಡಿಸಲು ಯಾವುದೇ ಹೆಚ್ಚುವರಿ ಶುಲ್ಕ ವಿಧಿಸಲಾಗುವುದಿಲ್ಲ. ಟ್ರಾವೆಲ್ ಏಜೆಂಟ್‌ಗಳು ಅಥವಾ ಪೋರ್ಟಲ್‌ಗಳ ಮೂಲಕ ಖರೀದಿಸಿದ ಟಿಕೆಟ್‌ಗಳಿಗೆ, ವಿಮಾನಯಾನ ಸಂಸ್ಥೆಗಳು 14 ಕೆಲಸದ ದಿನಗಳಲ್ಲಿ ಮರುಪಾವತಿಯನ್ನು ಪ್ರಕ್ರಿಯೆಗೊಳಿಸಬೇಕು. ಆದೇ ಪಿಎನ್‌ಆರ್‌ನಲ್ಲಿ ಪ್ರಯಾಣಿಕರನ್ನು ಅಥವಾ ಕುಟುಂಬದ ಸದಸ್ಯರನ್ನು ಆಸ್ಪತ್ರೆಗೆ ದಾಖಲಿಸುವುದರಿಂದ, ರದ್ದಾದರೆ ಪೂರ್ಣ ಮರುಪಾವತಿ ಅಥವಾ ಕ್ರೆಡಿಟ್ ಶೆಲ್‌ಗೆ ಕಾರಣವಾಗಬಹುದು. ಇತರ ಸಂದರ್ಭಗಳಲ್ಲಿ, ಮರುಪಾವತಿಯನ್ನು ನೀಡುವ ಮೊದಲು ಅಧಿಕೃತ ಏರೋಸ್ಪೇಸ್ ಮೆಡಿಸಿನ್ ತಜ್ಞರಿಂದ ಫಿಟ್ನೆಸ್-ಟು-ಟ್ರಾವೆಲ್ ಪ್ರಮಾಣಪತ್ರದ ಅಗತ್ಯವಿದೆ. ನಾಗರಿಕ ವಿಮಾನಯಾನ ಅಗತ್ಯಗಳಿಗೆ ತಿದ್ದುಪಡಿಗಳು, ವಿಳಂಬ ಮರುಪಾವತಿಗಳ ಬಗ್ಗೆ ಹೆಚ್ಚುತ್ತಿರುವ ದೂರುಗಳಿಗೆ ಇದೊಂದು ಪರಿಹಾರ ಒದಗಿಸಬಹುದು.

ಅಮೆರಿಕದ ವಾಣಿಜ್ಯ ಕಾರ್ಯದರ್ಶಿ, ಗೋಯಲ್ ಭೇಟಿ

ಹೊಸದಿಲ್ಲಿ: ಭಾರತ-ಅಮೆರಿಕ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಧನಾತ್ಮಕ ಬೆಳವಣಿಗೆಯಂತೆ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ದಿಲ್ಲಿಯಲ್ಲಿ ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಡಬ್ಲ್ಯೂ ಲುಟ್ನಿಕ್ ಅವರನ್ನು ಭೇಟಿಯಾದರು. ಇದು ಭಾರತ-ಅಮೆರಿಕ ವ್ಯಾಪಾರ ಒಪ್ಪಂದವನ್ನು ಒಪ್ಪಿಕೊಂಡ ನಂತರ ಅವರ ಮೊದಲ ಭೇಟಿಯಾಗಿದೆ. ಈ ವೇಳೆ ಅಮೆರಿಕ ರಾಯಭಾರಿ ಸರ್ಗಿ ಗೋರ್ ಕೂಡ ಉಪಸ್ಥಿತರಿದ್ದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾರೀ ಸುಂಕ ನೀತಿ ಬಗ್ಗೆ ಸುಪ್ರೀಂಕೋರ್ಟ್ ಕಾನೂನು ಬಾಹಿರ, ತುರ್ತು ಪರಿಸ್ಥಿತಿಯ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದೆ ಎಂದು ಹೇಳಿದ ಬಳಿಕ ವ್ಯಾಪಾರ ಒಪ್ಪಂದದ ಮಾತುಕತೆ ದಿನಾಂಕವನ್ನು ಮುಂದೂಡಲಾಗಿತ್ತು. ಭಾರತ ಮತ್ತು ಅಮೆರಿಕದ ಸಕಾರಾತ್ಮಕ ಹೇಳಿಕೆಗಳು ಈ ಭೇಟಿಯ ನಂತರ ಎರಡೂ ದೇಶಗಳು ದ್ವಿಪಕ್ಷೀಯ ವ್ಯಾಪಾರವನ್ನು ಮುಂದುವರಿಸಲು ಬದ್ಧವಾಗಿವೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

ಪಾಕ್ ಗಡಿ ಸಮೀಪ ಪೋಖ್ರಾನ್‌ನಲ್ಲಿ ವಾಯುಪಡೆ ತಾಲೀಮು

ಇಂದು ವಾಯು ಶಕ್ತಿಯ ದರ್ಶನ

ಜೈಸಲ್ಮೇರ್: ವಾಯು ರಕ್ಷಣಾ ಶಕ್ತಿಯನ್ನು ಪ್ರದರ್ಶಿಸುವ ವಾಯುಪಡೆಯ ತಾಲೀಮು ವಾಯು ಶಕ್ತಿ-2026, ರಾಜಸ್ಥಾನದ ಪೋಖ್ರಾನ್ ಉಡಾವಣಾ ಕೇಂದ್ರದಲ್ಲಿ ಶುಕ್ರವಾರ ಆರಂಭವಾಗಲಿದೆ. ಪಾಕಿಸ್ತಾನದ ಗಡಿಯಿಂದ 270 ಕಿ.ಮೀ. ದೂರದಲ್ಲಿರುವ ಪೋಖ್ರಾನ್‌ನಲ್ಲಿ ವಾಯು ಶಕ್ತಿ ನಡೆಯಲಿದೆ. ಶುಕ್ರವಾರದಿಂದ ಆರಂಭವಾಗುವ ಪ್ರದರ್ಶನ ಕಾರ್ಯಕ್ರಮಕ್ಕಾಗಿ ವಾಯುಪಡೆ ಅಭ್ಯಾಸ ನಡೆಸಿದೆ. ಪಾಕ್ ಗಡಿ ಸಮೀಪ ವಾಯುಪಡೆಯ ಹೈ-ಪ್ರೊಫೈಲ್ ಶಕ್ತಿ ಪ್ರದರ್ಶನ ನಡೆಸಲಿದೆ. ಪ್ರಮುಖ ಯುದ್ಧ ವಿಮಾನಗಳು, ಸೇನಾ ಸರಕು ವಿಮಾನಗಳು ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆಯ ಸಂಪೂರ್ಣ ಶಕ್ತಿ ಪ್ರದರ್ಶನ ನಡೆಯಲಿದೆ. ಶುಕ್ರವಾರ ನಡೆಯುವ ಕಾರ್ಯಕ್ರಮಕ್ಕಾಗಿ ವಾಯುಪಡೆ ಕಳೆದೊಂದು ವಾರದಿಂದ ಅಭ್ಯಾಸ ನಡೆಸುತ್ತಿದೆ. ಶನಿವಾರ ಮೀಸಲು ದಿನವನ್ನಾಗಿ ಇಡಲಾಗಿದೆ.

ಯಾಕಾಗಿ ಶಕ್ತಿ ಪ್ರದರ್ಶನ?: ಆಪರೇಷನ್ ಸಿಂದೂರ ಬಳಿಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಯುದ್ಧ ಸನ್ನದ್ಧತೆ ನಡೆಸುತ್ತಿದೆ. ಪಾಕಿಸ್ತಾನ, ಚೀನಾ ಗಡಿ ಪ್ರದೇಶಗಳಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ನಿಯೋಜನೆ ಮಾಡುತ್ತಿದ್ದು, ಭವಿಷ್ಯದ ಸವಾಲುಗಳನ್ನು ಎದುರಿಸಲು ಸನ್ನದ್ಧಗೊಳ್ಳುತ್ತಿದೆ. ಭಾರತವನ್ನು ಕೆಣಕಲು ಬಂದರೆ ಶತ್ರು ಸಂಹಾರ ಶತಸಿದ್ಧವೆಂಬ ಸಂದೇಶ ನೀಡುವುದಲ್ಲದೆ, ಎಲ್ಲಾ ರೀತಿಯಲ್ಲೂ ಸೇನಾ ಸಾಮರ್ಥ್ಯ ಬಲವರ್ಧನೆ ಮಾಡುವುದರಲ್ಲಿ ಸರ್ಕಾರ ತೊಡಗಿದೆ.



- ವಾಯುಪಡೆ (ಐಎಎಫ್) ತ್ವರಿತ ಪ್ರತಿದಾಳಿ ಪ್ರದರ್ಶನ
- ಯುದ್ಧ ಭೂಮಿಯ ನೈಜ ಕಾರ್ಯಾಚರಣೆ ಪ್ರದರ್ಶನ
- ಹಲವು ವಿಭಾಗಗಳ ಯುದ್ಧ ಸನ್ನದ್ಧತೆ ಖಚಿತಪಡಿಸುವಿಕೆ
- ವಾಯುಪಡೆಯ ಶಸ್ತ್ರಾಸ್ತ್ರಗಳ ಉಡಾವಣೆ ಪ್ರದರ್ಶನ
- ಶಸ್ತ್ರಾಸ್ತ್ರಗಳ ನಿಖರತೆಯ ಪರೀಕ್ಷೆ
- ಯುದ್ಧ ವಿಮಾನಗಳು, ಶಸ್ತ್ರಾಸ್ತ್ರಗಳು ಮತ್ತು ಉಡಾವಣಾ ವ್ಯವಸ್ಥೆಗಳ ನಡುವಿನ ಏಕೀಕರಣದ ಪ್ರಯೋಗ

ಯುದ್ಧ ವಿಮಾನಗಳು?

- ರಾಫೆಲ್
- ಸುಖೋಯ್ ಎಸ್‌ಯು-30ಎಂಕೆಐ
- ಮಿರೇಜ್-2000
- ಮಿಗ್-29
- ಜಾಗ್ವಾರ್
- ತೇಜಸ್ (ಭಾಗವಹಿಸುವುದು ಖಚಿತವಾಗಿಲ್ಲ)

ಹೆಲಿಕಾಪ್ಟರ್, ಸರಕು ವಿಮಾನಗಳು?

- ಎಎಚ್-64 ಅಪಾಚೆ
- ಚಿನೂಕ್
- ಸಿ-130ಜೆ, ಸಿ-295, ಸಿ-17
- ಎಲ್‌ಸಿಎಚ್ ಪ್ರಚಂಡ್


ವಾಯು ರಕ್ಷಣಾ ವ್ಯವಸ್ಥೆಗಳು?

- ಎಸ್-400 (ಸುದರ್ಶನ ಚಕ್ರ) ಕ್ಷಿಪಣಿ ವ್ಯವಸ್ಥೆ
- ಇತರ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ನಿಯೋಜನೆ

ಅತ್ಯಧಿಕ ಇನ್‌ಸ್ಟಾ ಹಿಂಬಾಲಕರಿರುವ ವಿಶ್ವ ನಾಯಕ

ಮೋದಿಗೆ 10 ಕೋಟಿ ಫಾಲೋವರ್ಸ್

ಹೊಸದಿಲ್ಲಿ: ದೇಶದೊಳಗೆ ಯಾರೇನೇ ಗುಲ್ಲು ಎಬ್ಬಿಸಿದರೂ ಜಾಗತಿಕ ಮಟ್ಟದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆ ಕಡಿಮೆಯಾಗಿಲ್ಲ, ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ಮೋದಿ ಹಿಂಬಾಲಕರ ಸಂಖ್ಯೆ 10 ಕೋಟಿ (100 ದಶಲಕ್ಷ) ದಾಟಿದ್ದು, ಇನ್‌ಸ್ಟಾದಲ್ಲಿ ಅತ್ಯಧಿಕ ಹಿಂಬಾಲಕರನ್ನು ಹೊಂದಿರುವ ವಿಶ್ವ ನಾಯಕ ಮತ್ತು ರಾಜಕಾರಣಿ ಎಂಬ ಮೈಲಿಗಲ್ಲು ಬರೆದಿದ್ದಾರೆ.



ವಿಶ್ವದ ಅತ್ಯಧಿಕ ಇನ್‌ಸ್ಟಾ ಹಿಂಬಾಲಕರನ್ನು ಹೊಂದಿರುವ ಜನಪ್ರಿಯ ವ್ಯಕ್ತಿಗಳ ಯಾದಿಯಲ್ಲಿ ಮೋದಿ 37ನೇ ಸ್ಥಾನ ಸಂಪಾದಿಸಿದ್ದಾರೆ. ಭಾರತದ ಕ್ರಿಕೆಟ್ ತಾರೆ ವಿರಾಟ್ ಕೊಹ್ಲಿ 16ನೇ ಸ್ಥಾನದಲ್ಲಿದ್ದಾರೆ. ಕೊಹ್ಲಿ, ಅಗ್ರ-20ರೊಳಗೆ ಸ್ಥಾನ ಪಡೆದ ಏಕೈಕ ಭಾರತೀಯರಾಗಿದ್ದಾರೆ.

ಪ್ರಧಾನಿ ಮೋದಿಯವರು 2014ರಲ್ಲಿ ಇನ್‌ಸ್ಟಾಗ್ರಾಂ ಸೇರಿದ್ದರು. ಇತರ ಜಾಗತಿಕ ನಾಯಕರಿಗೆ ಹೋಲಿಸಿದರೆ ಮೋದಿಯವರು ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಸಕ್ರಿಯವಾಗಿದ್ದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗಿಂತ ದುಪ್ಪಟ್ಟು ಹಿಂಬಾಲಕರನ್ನು ಮೋದಿ ಹೊಂದಿದ್ದಾರೆ. ನಂತರದಲ್ಲಿರುವ ಐವರು ನಾಯಕರ ಒಟ್ಟು ಹಿಂಬಾಲಕರ ಸಂಖ್ಯೆ, ಮೋದಿ ಹಿಂಬಾಲಕರ ಸಂಖ್ಯೆಗಿಂತ ಕಡಿಮೆಯಿದೆ. ದ್ವಿತೀಯ ಸ್ಥಾನ ಪಡೆದಿರುವ ಟ್ರಂಪ್ 4.32 ಕೋಟಿ (43.2 ದಶಲಕ್ಷ) ಇನ್‌ಸ್ಟಾ ಹಿಂಬಾಲಕರನ್ನು ಹೊಂದಿದ್ದಾರೆ.

ಭಾರತೀಯ ರಾಜಕಾರಣಿಗಳಲ್ಲಿ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ (1.61 ಕೋಟಿ) ದ್ವಿತೀಯ ಸ್ಥಾನದಲ್ಲಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ (1.26 ಕೋಟಿ) ತೃತೀಯ ಸ್ಥಾನದಲ್ಲಿದ್ದಾರೆ.

ಇನ್‌ಸ್ಟಾ ಖಾತೆಗಳು

1. ಇನ್‌ಸ್ಟಾಗ್ರಾಂ - 69.8 ಕೋಟಿ
2. ಕ್ರಿಸ್ಟಿಯಾನೊ ರೊನಾಲ್ಡೊ - 67 ಕೋಟಿ
3. ಲಿಯೊನೆಲ್ ಮೆಸ್ಸಿ - 51.1 ಕೋಟಿ
4. ಸೆಲೆನಾ ಗೊಮೆಸ್ - 41.5 ಕೋಟಿ
5. ಕೈಲಿ ಜೆನ್ನರ್ - 39.1 ಕೋಟಿ

16. ವಿರಾಟ್ ಕೊಹ್ಲಿ - 27.4 ಕೋಟಿ

37. ನರೇಂದ್ರ ಮೋದಿ - 10 ಕೋಟಿ

ಇಸ್ರೇಲ್ ಜತೆ ರಕ್ಷಣಾ ಸಹಕಾರ ಸೇರಿ 17 ಒಪ್ಪಂದಗಳಿಗೆ ಸಹಿ

ಪುಟ 1➔ **ರಕ್ಷಣಾ ಸಹಯೋಗಕ್ಕಾಗಿ ಸಹಿ:** ರಕ್ಷಣಾ ಉತ್ಪಾದನೆಯಿಂದ ಆರಂಭಿಸಿ ಗುಪ್ತಚರ ಮಾಹಿತಿ ಹಂಚಿಕೆ, ಭಯೋತ್ಪಾದನೆ ವಿರೋಧಿ ಕಾರ್ಯಾಚರಣೆ ಮತ್ತು ಅತ್ಯಾಧುನಿಕ ಮಿಲಿಟರಿ ತಂತ್ರಜ್ಞಾನಗಳಿಗಾಗಿ ಭಾರತ-ಇಸ್ರೇಲ್ ರಕ್ಷಣಾ ಒಪ್ಪಂದಗಳಿಗೆ ಸಹಿ ಹಾಕಿವೆ. ಇವುಗಳಲ್ಲಿ ದೀರ್ಘವ್ಯಾಪ್ತಿಯ ನಿಖರ ದಾಳಿ ಸಾಮರ್ಥ್ಯವುಳ್ಳ ಕ್ಷಿಪಣಿ, ಡ್ರೋನ್ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಮೇಲೆ ಪ್ರಾಮುಖ್ಯತೆ ನೀಡಲಾಗಿದೆ.



ಯುಪಿಐಗಾಗಿ ಇಸ್ರೇಲ್ ಸಹಿ: ಭಾರತದ ಏಕೀಕೃತ ಪಾವತಿ ಇಂಟರ್‌ಫೇಸ್ (ಯುಪಿಐ) ಪಾವತಿ ವ್ಯವಸ್ಥೆಯನ್ನು ಗಡಿಯಾಚೆಗೂ ಅಳವಡಿಸಲು, ಯುಪಿಐ ಮೂಲಕ ಪಾವತಿಗಳನ್ನು ಮಾಡುವ ಉದ್ದೇಶದಿಂದ ಇಸ್ರೇಲ್‌ನ ಮಸಾ ಭಾರತದ ಎನ್‌ಪಿಸಿಐ ಇಂಟರ್‌ನ್ಯಾಷನಲ್ ಜತೆ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದಿಂದಾಗಿ ಯುಪಿಐ ಸೇವೆಗಳು ಇಸ್ರೇಲ್‌ನಲ್ಲೂ ಲಭ್ಯವಾಗಲಿದೆ.

ಕೃಷಿ ಕ್ಷೇತ್ರಕ್ಕೆ ತಾಂತ್ರಿಕ ಬಲ: ನಿಖರವಾದ ಬೇಸಾಯ, ಉಪಗ್ರಹ ಆಧಾರಿತ ನೀರಾವರಿ ವ್ಯವಸ್ಥೆ, ಅತ್ಯಾಧುನಿಕ ಯಂತ್ರೋಪಕರಣ, ಸಮಗ್ರ ಕೀಟನಾಶ ನಿರ್ವಹಣೆ, ಬಿತ್ತನೆ ವಿನಿಮಯ, ಕೊಯ್ಲಿನ ನಂತರದ ಪರಿಹಾರಗಳು ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಕೇಂದ್ರ ಸರ್ಕಾರ ಉತ್ತೇಜನ ನೀಡಿದ್ದು, ಈ ಹಿನ್ನೆಲೆಯಿಂದ ಕೃಷಿ ಕ್ಷೇತ್ರದಲ್ಲಿನ ನಾವೀನ್ಯತೆಗಾಗಿ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮತ್ತು ಭಾರತ-ಇಸ್ರೇಲ್ ಕೃಷಿ ನಾವೀನ್ಯತೆ ಕೇಂದ್ರ (ಐಐಎನ್‌ಸಿಎ) ಒಪ್ಪಂದಕ್ಕೆ ಸಹಿ ಹಾಕಿವೆ.

ಶಾಂತಿ, ಸ್ಥಿರತೆ, ರಕ್ಷಣೆ: ಮಧ್ಯಪ್ರಾಚ್ಯದಲ್ಲಿ ಶಾಂತಿ ಹಾಗೂ ಸ್ಥಿರತೆ ಕಾಪಾಡುವುದು ಭಾರತದ ಭದ್ರತಾ ಹಿತಾಸಕ್ತಿ ಹಿಂದಿನ ಆಶಯವಾಗಿದೆ. ಭಾರತವು ಗಾಜಾ ಶಾಂತಿ ಉಪಕ್ರಮಗಳಿಗೆ ತುಂಬು ಬೆಂಬಲ ನೀಡಲಿದೆ ಎಂದು ಪ್ರಧಾನಿ ಮೋದಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಭಾರತದ ನಿಲುವು ಸ್ಪಷ್ಟ, ಅದೇನೆಂದರೆ ಮಾನವ ಸಮುದಾಯ ಯಾವ ಕಾರಣಕ್ಕೂ ಸಂಘರ್ಷ, ಹಿಂಸಾಚಾರಗಳಿಗೆ ಬಲಿಯಾಗಕೂಡದು. ಗಾಜಾ ಶಾಂತಿ ಯೋಜನೆ ಮುಖೇನ ಶಾಂತಿಯಮಾರ್ಗವನ್ನುಸೃಜಿಸಲಾಗಿದೆ. ಈಪ್ರಯತ್ನಗಳನ್ನುಭಾರತ ಸಂಪೂರ್ಣ ಬೆಂಬಲಿಸುವುದು. ಭವಿಷ್ಯದಲ್ಲೂ ಎಲ್ಲಾ ರಾಷ್ಟ್ರಗಳ ಜತೆ ನಾವು ಮಾತುಕತೆ, ಸಹಕಾರವನ್ನು ಮುಂದುವರೆಸುತ್ತೇವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಕಾಲಾತೀತ ಬಾಂಧವ್ಯ: ನಮ್ಮ ಬಾಂಧವ್ಯವು ಗಹನ ವಿಶ್ವಾಸ, ಪರಸ್ಪರ ಹಂಚಿಕೊಂಡಿರುವ ಪ್ರಜಾತಾಂತ್ರಿಕ ಮೌಲ್ಯಗಳು ಮತ್ತು ಮಾನವ ಸಂವೇದನಾಶೀಲತೆ ಎಂಬ ಭದ್ರ ಬುನಾದಿಯನ್ನು ಆಧರಿಸಿದ್ದಾಗಿದೆ. ಪ್ರತೀ ಕಾಲ ಪರೀಕ್ಷೆಗೂ ಅತೀತವಾದ್ದು ನಮ್ಮ ಸ್ನೇಹಬಾಂಧವ್ಯ ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

ಅಧ್ಯಕ್ಷ ಇಸಾಕ್ ಜತೆ ಫಲಪ್ರದ ಮಾತುಕತೆ: ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಇಸ್ರೇಲ್ ಅಧ್ಯಕ್ಷ ಇಸಾಕ್ ಹರ್ಜೋಗ್ ಗುರುವಾರ ವ್ಯಾಪಕ ಸುತ್ತಿನ ತೀರಾ ಫಲದಾಯಕ ಮಾತುಕತೆ ನಡೆಸಿದರು. ಶಿಕ್ಷಣ, ಸ್ಟಾರ್ಟ್ ಅಪ್‌ಗಳು, ಆವಿಷ್ಕಾರ, ತಂತ್ರಜ್ಞಾನ ಮತ್ತು ಸಂಪರ್ಕ ರಂಗಗಳಲ್ಲಿ ಸಹಕಾರವನ್ನು ಮತ್ತಷ್ಟು ವಿಸ್ತರಿಸುವ ಹಲವು ಅವಕಾಶಗಳನ್ನು ಉಭಯ ನಾಯಕರು ಮಾತುಕತೆ ವೇಳೆ ಕಂಡುಕೊಂಡರು.

ಓಕ್ ಸಸಿ ನೆಟ್ಟ ಹರ್ಜೋಗ್, ಪ್ರಧಾನಿ ಮೋದಿ: ಮೋದಿಯವರು ಹರ್ಜೋಗ್ ಅವರನ್ನು ಅವರ ಅಧಿಕೃತ ನಿವಾಸದಲ್ಲಿ ಭೇಟಿಯಾದರು. ಅಲ್ಲಿ ಉಭಯ ನಾಯಕರು ಸ್ನೇಹ, ಬೆಳವಣಿಗೆ ಮತ್ತು ಉಭಯ ರಾಷ್ಟ್ರಗಳ ನಡುವೆ ಪರಸ್ಪರ ಹಂಚಿಕೆಯ ಭವಿಷ್ಯ ನಿರ್ಮಾಣದ ದ್ಯೋತಕವಾಗಿ ಓಕ್ ಸಸಿಯೊಂದನ್ನು ಉದ್ಯಾನದಲ್ಲಿ ನೆಟ್ಟರು ಎಂದು ಅಧ್ಯಕ್ಷರ ಪತ್ರಿಕಾ ಹೇಳಿಕೆ ತಿಳಿಸಿದೆ. ನಮ್ಮೊಳಗೆ ಬಲು ವ್ಯಾಪಕ ಮತ್ತು ಉಪಯುಕ್ತ ಮಾತುಕತೆ ನಡೆಯಿತೆಂದು ಮೋದಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ತಾನು ಇಸ್ರೇಲ್‌ಗೆ ಬಂದಿಳಿದ ಕ್ಷಣದಿಂದ ನೀಡಲಾದ ತೀರಾ ಆತ್ಮೀಯ ಮತ್ತು ವೈಭವೋಪೇತ ಆದರಕ್ಕೆ ಪ್ರಧಾನಿ ಮೋದಿ ಹರ್ಜೋಗ್ ಅವರಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ಭಾರತ ಮತ್ತು ಭಾರತೀಯರ ಬಗ್ಗೆ ಇಸ್ರೇಲ್ ಜನರಿಗಿರುವ ಆತ್ಮೀಯತೆ ಹಾಗೂ ಪ್ರೀತಿಯನ್ನು ಇದು ಸಾಕ್ಷೀಕರಿಸಿದೆ ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

ಮುಖ್ಯಮಂತ್ರಿಗೆ ಹಣಕಾಸು ವರದಿ

•**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ರಚನೆಯಾಗಿ, ಐದು ಪ್ರತ್ಯೇಕ ಪಾಲಿಕೆಯಾದ ನಂತರ ತಮ್ಮ ಮೊದಲ ಬಜೆಟ್ ಮಂಡಿಸಲು ಐದು ಪಾಲಿಕೆಗಳು ಸಜ್ಜಾಗಿರುವ ಬೆನ್ನಲ್ಲೆ ಕರ್ನಾಟಕದ 5ನೇ ರಾಜ್ಯ ಹಣಕಾಸು ಆಯೋಗ ಐದು ಪಾಲಿಕೆಗಳಿಗೆ ಭೇಟಿ ನೀಡಿ, ಪಾಲಿಕೆಯ ಆರ್ಥಿಕ ಅಗತ್ಯತೆಗಳು, ಅಭಿವೃದ್ಧಿ ಕಾಮಗಾರಿಗಳು ಹಾಗೂ ಆಡಳಿತಾತ್ಮಕ ಸುಧಾರಣೆಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿತ್ತು. ಪ್ರಗತಿ ಪರಿಶೀಲನಾ ಸಭೆಯ ಸವಿವರವಾದ ವರದಿಯನ್ನು ಹೊಸದಾಗಿ ರಚನೆಯಾದ ಜಿಬಿಎಗೆ ಅನುಗುಣವಾಗಿ ಸಿದ್ಧಪಡಿಸಿ 5ನೇ ರಾಜ್ಯ ಹಣಕಾಸು ಆಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ವರದಿ ಸಲ್ಲಿಸಿದೆ.

ಐದು ಪಾಲಿಕೆಗಳಿಗೆ 8,370 ಕೋಟಿ ರೂ.ಗಳ ನೆರವಿಗೆ ಆಯೋಗ ಪ್ರಸ್ತಾವನೆ ಸ್ವೀಕರಿಸಿದೆ. ಅದನ್ನು ಅಗತ್ಯ ಮಾಹಿತಿಗನುಗುಣವಾಗಿ ಸಿದ್ಧಪಡಿಸಿ, ಜಿಬಿಎ ಮತ್ತು ನಗರ ಪಾಲಿಕೆಗಳಿಗೆ ಅಗತ್ಯ ಅನುದಾನ ಹಂಚಿಕೆಯನ್ನು ಮಾಡುವಂತೆ ಆಯೋಗ ಶಿಫಾರಸು ಮಾಡಿದೆ. ಆಯೋಗದ ಶಿಫಾರಸುಗಳ ಆಧಾರದ ಮೇಲೆ ರಾಜ್ಯ ಸರ್ಕಾರವು ಪಾಲಿಕೆಗಳಿಗೆ ಅನುದಾನ ಬಿಡುಗಡೆ ಮಾಡಲಿದೆ.

ಐದು ನಗರ ಪಾಲಿಕೆಗಳು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಕರ್ನಾಟಕದ 5ನೇ ರಾಜ್ಯ ಹಣಕಾಸು ಆಯೋಗಕ್ಕೆ ತಮ್ಮ ಪ್ರಸ್ತಾವನೆಯನ್ನು ಸಲ್ಲಿಸಿದ್ದವು. ಕೇಂದ್ರ ಪಾಲಿಕೆ 2,047 ಕೋಟಿ ರೂ., ಪೂರ್ವ ಪಾಲಿಕೆ 1,685 ಕೋಟಿ ರೂ., ಪಶ್ಚಿಮ ಪಾಲಿಕೆ 1,753 ಕೋಟಿ ರೂ., ಉತ್ತರ ಪಾಲಿಕೆ 1,210 ಕೋಟಿ ರೂ., ದಕ್ಷಿಣ ಪಾಲಿಕೆ 1,675 ಕೋಟಿ ರೂ. ಒಟ್ಟು 8,370 ಕೋಟಿ ರೂ. ಅನುದಾನ ಬೇಡಿಕೆಯನ್ನು ಸಲ್ಲಿಸಿದ್ದವು. ಹಣಕಾಸು ಆಯೋಗ ಲಭ್ಯವಾದ ಸಂಪನ್ಮೂಲಗಳ ಆಧಾರದಲ್ಲಿ ಶಿಫಾರಸುಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಲಿದೆ ಎಂದು ಕಾದು ನೋಡಬೇಕಿದೆ.

ಬೆಸ್ಕಾಂಗೆ ಸೂಚನೆ: ಬೀದಿ ದೀಪಗಳು, ಉದ್ಯಾನವನ, ಗ್ರಂಥಾಲಯಗಳು, ಸ್ಮಶಾನಗಳು, ಶಾಲೆಗಳು ಹಾಗೂ ಪಾಲಿಕೆಗೆ ಸಂಬಂಧಿಸಿದ ಇತರ ಸ್ಥಳಗಳಿಗೆ ವಿದ್ಯುತ್ ಪೂರೈಕೆಯ ಬಿಲ್‌ಗಳನ್ನು ಪಾಲಿಕೆಗೆ ತ್ರೈಮಾಸಿಕವಾಗಿ ಸಲ್ಲಿಸುತ್ತಿರುವುದರಿಂದ ಬಿಲ್‌ಗಳ ಮೇಲಿನ ಬಡ್ಡಿದರ ಪಾಲಿಕೆಗಳಿಗೆ ಹೊರೆಯಾಗುತ್ತಿದೆ. ಆದ್ದರಿಂದ ಬೆಸ್ಕಾಂ ವತಿಯಿಂದ ಪ್ರತಿ ತಿಂಗಳು ವಿದ್ಯುತ್ ಬಿಲ್‌ಗಳನ್ನು ನಗರ ಪಾಲಿಕೆಗಳಿಗೆ ಕಡ್ಡಾಯವಾಗಿ ನೀಡಿ, ಸಮನ್ವಯದೊಂದಿಗೆ ಬಡ್ಡಿ ದರಗಳನ್ನು ನಿಯಂತ್ರಿಸಲು ಕ್ರಮ ವಹಿಸುವಂತೆ ರಾಜ್ಯ ಹಣಕಾಸು ಆಯೋಗದ ಪ್ರಮುಖ ಶಿಫಾರಸು ನೀಡಿದೆ.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◈ ದೇವ ಭಕ್ತಿಯೊಂದಿಗೆ ದೇಶ ಭಕ್ತಿಯೂ ಜಾಗೃತವಾಗಲಿ - ಮಾಣಿಲ ಶ್ರೀಗಳು
- ಒಂದೆಡೆ ಭರ್ಜರಿಯಾಗಿ ದೇವರ ಪೂಜೆಯನ್ನು ಮಾಡುವುದು, ಇನ್ನೊಂದೆಡೆ ದೇಶವಿರೋಧಿ ಕೃತ್ಯದಲ್ಲಿ ತೊಡಗುವುದೆಂದರೆ ಸಂಬಳ ಕೊಡುವ ಧಣಿಗೆ ಎದುರಿನಿಂದ ನಮಸ್ಕರಿಸುತ್ತಾ ಹಿಂಬದಿಯಿಂದ ದ್ರೋಹ ಬಗೆವ ನೌಕರನಂತೆ!

ದಿನ ಭವಿಷ್ಯ

ಮೇಷ
ಎಲ್ಲ ಸುಸೂತ್ರವಾಗಿ ಸಾಗುವುದು. ಆದರೆ ಸಂಗಾತಿ ಜತೆ ಭಿನ್ನಮತ. ಇತರರ ಟೀಕಿಸದಿರಿ. ನಿಮ್ಮ ನಡೆನುಡಿ ಪರಾಮರ್ಶಿಸಿ. ನಿಮ್ಮಲ್ಲೇ ತಪ್ಪಿರಬಹುದು.

ವೃಷಭ
ಹೆಚ್ಚು ಹೊಣೆ- ನಿಮ್ಮ ಮನೆಯಲ್ಲೂ, ವೃತ್ತಿಯಲ್ಲೂ. ಹಿಡಿದ ಕೆಲಸ ಅಚ್ಚುಕಟ್ಟಾಗಿ ಪೂರೈಸಿ. ಟೀಕೆಗೆ ಆಸ್ಪದ ಕೊಡಬೇಡಿ. ವಾಗ್ವಾದ ನಡೆಸದಿರಿ.

ಮಿಥುನ
ಹರ್ಷದ ದಿನ. ಪ್ರೀತಿಪಾತ್ರರ ಜತೆ ಆತ್ಮೀಯ ಕಾಲಕ್ಷೇಪ. ಹಳೆ ನಿರ್ಧಾರವೊಂದು ಈಗ ಕೆಟ್ಟ ಫಲ ನೀಡಬಹುದು. ಎಚ್ಚರದ ನಡೆಯಿರಲಿ.

ಕಟಕ
ಆರಂಭದಲ್ಲಿ ಹಿನ್ನಡೆಯಾಗಿ ಕಂಡ ವಿಷಯ ಬಳಿಕ ನಿಮ್ಮ ಪಾಲಿಗೆ ಒಳಿತು ತಂದೀತು. ಅನಿರೀಕ್ಷಿತ ಧನಲಾಭ. ಹಳೆಯ ಸ್ನೇಹಿತರ ಭೇಟಿ.

ಸಿಂಹ
ವೃತ್ತಿಯ ಒತ್ತಡ ಹೆಚ್ಚು. ಹಾಗೆಂದು ಕೌಟುಂಬಿಕ ವ್ಯವಹಾರ ಕಡೆಗಣಿಸಬೇಡಿ. ಕುಟುಂಬಸ್ಥರ ಬೇಡಿಕೆಗೆ ಕಿವಿಗೊಡಿ. ಧನವ್ಯಯ.

ಕನ್ಯಾ
ಬಾಕಿ ಇದ್ದ ಕೆಲಸ ಮುಗಿಸಲು ಸಫಲ. ಆಪ್ತರ ಜತೆ ಮುನಿಸು ಸಂಭವ. ಸಮಾಧಾನದಿಂದ ವ್ಯವಹರಿಸಿ. ಮುನಿಸು ತಣಿಸಿ. ಖರ್ಚು ಹೆಚ್ಚಳ.

ತುಲಾ
ಪ್ರತಿಕೂಲ ಪರಿಸ್ಥಿತಿ ಉದ್ಭವಿಸಿದರೂ ಪಾಸಿಟಿವ್ ಚಿಂತನೆ ಬಿಡಬೇಡಿ. ವಿಳಂಬವಾದರೂ ಉದ್ದೇಶ ಸಾಧಿತವಾಗಲಿದೆ. ಆರ್ಥಿಕ ಪರಿಸ್ಥಿತಿ ತೃಪ್ತಿಕರ.

ವೃಶ್ಚಿಕ
ಆತ್ಮೀಯರ ಸಂಗಡ ಕಾಲ ಕಳೆಯುತ್ತಾ ಇನ್ನಿತರ ಉದ್ವಿಗ್ನತೆ ಮರೆಯುವಿರಿ. ಆದರೆ ಕೆಲಸ ಬಾಕಿ ಉಳಿಸದಿರಿ. ಅದನ್ನು ಪೂರೈಸಿ. ಬಂಧು ಭೇಟಿ.

ಧನು
ಸ್ವ-ಪರಾಮರ್ಶೆ ನಡೆಸಿ. ನಿಮ್ಮ ಕೆಲವಾರು ಪ್ರಶ್ನೆಗಳಿಗೆ ಉತ್ತರ ಸಿಗಬಹುದು. ನಿಮ್ಮ ಲೋಪ ಮುಚ್ಚಿ ಹಾಕಲು ಪ್ರಯತ್ನಿಸಬೇಡಿ.

ಮಕರ
ಅಭದ್ರತೆಯ ಭಾವ ಕಾಡಬಹುದು. ಕೆಲವು ಬೆಳವಣಿಗೆ ಮನಸ್ಸಿಗೆ ಅಹಿತಕಾರಿಯಾದೀತು. ಭಾವುಕ ಸನ್ನಿವೇಶಕ್ಕೆ ಸಾಕ್ಷಿಯಾಗುವಿರಿ.

ಕುಂಭ
ಕೌಟುಂಬಿಕ ಹೊಣೆ ಹೆಚ್ಚಳ. ಒಬ್ಬರ ವರ್ತನೆ ನಿಮಗೆ ಅಸಹನೀಯ ಎನ್ನಿಸೀತು. ಸಂಘರ್ಷ ಬೇಡ, ಹೊಂದಾಣಿಕೆಯ ವರ್ತನೆಯ ಒಳ್ಳೆಯದು.

ಮೀನ
ನಿರೀಕ್ಷಿತ ಉದ್ದೇಶ ಪೂರ್ತಿಯಾಗದು. ಆರೋಗ್ಯ ಸಮಸ್ಯೆ. ಕೆಲಸದಲ್ಲಿ ಸಣ್ಣ ಲೋಪ ಉಂಟಾದೀತು. ಅದನ್ನು ಕಡೆಗಣಿಸದಿರಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00
ಅದೃಷ್ಟ ಸಂಖ್ಯೆ : 4,7,,1,6

ಗ್ಯಾಸ್ ಚೇಂಬರ್ ಆಗದಂತೆ ಕ್ರಮ: ಸಚಿವ ಈಶ್ವರ ಬಿ. ಖಂಡ್ರೆ
ಶೀಘ್ರ ಶಾಸಕರೊಂದಿಗೆ ಸಭೆ

•**ಬೆಂಗಳೂರು:** ರಾಷ್ಟ್ರ ರಾಜಧಾನಿ ದಿಲ್ಲಿಯಂತೆ ಬೆಂಗಳೂರು ಸಹ ಮತ್ತೊಂದು ಗ್ಯಾಸ್ ಚೇಂಬರ್ ಆಗದಂತೆ ಕ್ರಮ ವಹಿಸಲು ಶೀಘ್ರವೇ ನಗರದ ಎಲ್ಲ 28 ಶಾಸಕರೊಂದಿಗೆ ಸಭೆ ನಡೆಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ರಾಜಾಜಿನಗರ ಶಾಸಕ ಸುರೇಶ್ ಕುಮಾರ್ ಕೋರಿಕೆಯ ಮೇರೆಗೆ ಅವರೊಂದಿಗೆ ಗುರುವಾರ ಉನ್ನತಾಧಿಕಾರಿಗಳ ಸಭೆ ನಡೆಸಿದ ಸಚಿವರು, ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ, ಜಲ ಮಾಲಿನ್ಯ ಮತ್ತು ಶಬ್ದ ಮಾಲಿನ್ಯ ಹೆಚ್ಚಾಗುತ್ತಿದೆ. ಇದರ ನಿಯಂತ್ರಣಕ್ಕೆ ಪಕ್ಷಾತೀತವಾಗಿ ಎಲ್ಲ ಜನಪ್ರತಿನಿಧಿಗಳ ಸಹಕಾರದ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ಸುರೇಶ್ ಕುಮಾರ್ ವಿಷಯ ಪ್ರಸ್ತಾಪಿಸಿ, ಬೆಂಗಳೂರು ನಗರದಲ್ಲಿ ರಸ್ತೆಯಲ್ಲಿನ ಧೂಳಿನಿಂದಾಗಿ ವಾಯು ಗುಣಮಟ್ಟ ಕ್ಷೀಣಿಸುತ್ತಿದ್ದು, ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ವೈದ್ಯರು ಬೆಂಗಳೂರು ಹೊರ ವಲಯಕ್ಕೆ ಹೋಗುವಂತೆ ಸಲಹೆ ನೀಡುತ್ತಿದ್ದಾರೆ. ವಾಯು ಗುಣಮಟ್ಟ ಕಾಪಾಡಲು ತುರ್ತು ಕ್ರಮ ಕೈಗೊಳ್ಳಬೇಕು ಎಂದರು.

ಸ್ಥಳೀಯ ಸಂಸ್ಥೆಗೆ ನೋಟಿಸ್ ನೀಡಲು ಸೂಚನೆ: ಇದಕ್ಕೆ ಸ್ಪಂದಿಸಿದ ಪರಿಸರ ಸಚಿವರು, ಈಗಾಗಲೇ ಬೆಂಗಳೂರಿನ 11 ಸ್ಥಳಗಳಲ್ಲಿ ಸ್ಥಾಪಿತ ಮತ್ತು 13 ಸಂಚಾರಿ ಘಟಕಗಳ ಮೂಲಕ ವಾಯು ಗುಣಮಟ್ಟ ಸೂಚ್ಯಂಕದ ಮೌಲ್ಯಮಾಪನ ಮಾಡಲಾಗುತ್ತಿದೆ. ವಾಯು ಗುಣಮಟ್ಟ ಸೂಚ್ಯಂಕ ಮೌಲ್ಯವು 100 ದಾಟಿದರೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಿ ನಿಗದಿತ ಕಾಲಮಿತಿಯಲ್ಲಿ ನಿಯಂತ್ರಿಸಲು ಸೂಚಿಸಿ. ಕ್ರಮ ವಹಿಸದಿದ್ದರೆ ನಿಯಮಾನುಸಾರ ಮೊಕದ್ದಮೆ ದಾಖಲಿಸಿ ಎಂದು ಸೂಚನೆ ನೀಡಿದರು.

ಉಪ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ: ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿ ಶೀಘ್ರವೇ ಅವರ ಅಧ್ಯಕ್ಷತೆಯಲ್ಲೇ ಬೆಂಗಳೂರು ನಗರದ ಎಲ್ಲ ಜನಪ್ರತಿನಿಧಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು.

ಏಕ ಬಳಕೆ ಪ್ಲಾಸ್ಟಿಕ್ ತ್ಯಾಜ್ಯ ಸಮಸ್ಯೆ ಬೆಂಗಳೂರಿನಲ್ಲಿ ವಿಪರೀತವಾಗಿದ್ದು, ಇದರ ನಿಯಂತ್ರಣಕ್ಕೆ ಸ್ಥಳೀಯ ಸಂಸ್ಥೆಗಳು ಹಾಗೂ ಇನ್ನಿತರ ಇಲಾಖೆಗಳ ಸಹಯೋಗದಲ್ಲಿ ಜಾಗೃತ ದಳ ರಚಿಸಿ ಕ್ರಮ ವಹಿಸುವಂತೆ ಸೂಚಿಸಿದರು. ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸುಲು ಪಾಲ್ಗೊಂಡಿದ್ದರು.

ತಿಂಗಳೊಳಗೆ ವರದಿ ಸಲ್ಲಿಕೆಗೆ ಸೂಚನೆ

ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಎಷ್ಟು ತ್ಯಾಜ್ಯ ಶುದ್ಧೀಕರಣ ಘಟಕಗಳಿವೆ. ಅವುಗಳ ಪೈಕಿ ಎಷ್ಟು ಕಾರ್ಯನಿರ್ವಹಿಸುತ್ತಿವೆ. ಅವುಗಳ ಸ್ಥಾಪಿತ ಸಾಮರ್ಥ್ಯ ಎಷ್ಟು ಮತ್ತು ಪ್ರಸ್ತುತ ಎಷ್ಟು ಎಂ.ಎಲ್.ಡಿ. ದ್ರವ ತ್ಯಾಜ್ಯ ಸಂಸ್ಕರಣೆ ಆಗುತ್ತಿದೆ. ಎಷ್ಟು ಎಂ.ಎಲ್.ಡಿ. ನೀರು ಸಂಸ್ಕರಣೆ ಆಗದೆ ಜಲ ಮೂಲ ಸೇರುತ್ತಿದೆ ಎಂಬ ಬಗ್ಗೆ ಪರಿಸರ ಇಲಾಖೆಯಿಂದ ಖುದ್ದು ಪರಿಶೀಲನೆ ನಡೆಸಿ 1 ತಿಂಗಳೊಳಗೆ ವರದಿ ಸಲ್ಲಿಸುವಂತೆ ಸಚಿವ ಖಂಡ್ರೆ ತಿಳಿಸಿದರು.



ದಾವಣಗೆರೆ - ಚಿತ್ರದುರ್ಗ ರೈಲು ಮಾರ್ಗ ಶೀಘ್ರ

•**ಚಿತ್ರದುರ್ಗ:** ದಾವಣಗೆರೆ-ಚಿತ್ರದುರ್ಗ ನಡುವಿನ ನೇರ ರೈಲ್ವೇ ಮಾರ್ಗ ಕಾಮಗಾರಿ 2027ರ ಜೂನ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಇದರ ಜೊತೆಗೆ 2027ರ ಡಿಸೆಂಬರ್ ಅಂತ್ಯದ ವೇಳೆಗೆ ದಾವಣಗೆರೆ - ಚಿತ್ರದುರ್ಗ - ತುಮಕೂರು, ರಾಯದುರ್ಗ - ತುಮಕೂರು, ಗದಗ-ವಾಡಿ ಸೇರಿದಂತೆ ಹಲವು ರೈಲ್ವೆಮಾರ್ಗಗಳನ್ನು ಪೂರ್ಣಗೊಳಿಸಿ ಜನರಸೇವೆಗೆ ಅನುವು ಮಾಡಿಕೊಡಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.



ಚಿತ್ರದುರ್ಗ ತಾಲೂಕಿನ ಭರಮಸಾಗರ ಹೋಬಳಿಯ ಹಂಪನೂರು ಗ್ರಾಮದ ಬಳಿ ಗುರುವಾರ ನೂತನ ರೈಲ್ವೆ ಕಾಮಗಾರಿಗಳ ಪ್ರಗತಿಯನ್ನು ವೀಕ್ಷಿಸಿದ ಬಳಿಕ ಕೇಂದ್ರ ಸಚಿವ ವಿ. ಸೋಮಣ್ಣ ಮಾಧ್ಯಮದವರೊಂದಿಗೆ ಮಾತನಾಡಿದರು.

ಜಿಲ್ಲೆಯಲ್ಲಿ ಈ ನೂತನ ರೈಲ್ವೆ ಯೋಜನೆಯ ಭೌತಿಕ ಕಾಮಗಾರಿ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಇಲ್ಲಿಯವರೆಗೆ ಜಿಲ್ಲೆಯಲ್ಲಿ ಕೇವಲ 8-9ರಷ್ಟು ಮಾತ್ರ ಕೆಲಸವಾಗಿದೆ. 2027ರ ಜನವರಿ ವೇಳೆಗೆ ಭರಮಸಾಗರ ವರೆಗಿನ ಹಾಗೂ ಜೂನ್ ವೇಳೆಗೆ ಚಿತ್ರದುರ್ಗದವರೆಗಿನ ರೈಲ್ವೆ ಮಾರ್ಗದ ಕಾಮಗಾರಿ ಪೂರ್ಣಗೊಳಿಸಿ, ರೈಲು ಸಂಚಾರಕ್ಕೆ ಮುಕ್ತಗೊಳಿಸುವ ಗುರಿ ಹೊಂದಲಾಗಿದೆ ಎಂದರು.

ತುಮಕೂರು-ದಾವಣಗೆರೆ ನೇರ ರೈಲ್ವೆ ಮಾರ್ಗ ಯೋಜನೆ ಈ ಭಾಗದ ಜನರ ಬಹುಕಾಲದ ಕನಸು, ಈ ಮಹತ್ವಾಕಾಂಕ್ಷೆಯ ಯೋಜನೆಯಿಂದ ದಾವಣಗೆರೆ ಮತ್ತು ಬೆಂಗಳೂರು ನಡುವಿನ ಪ್ರಯಾಣದ ದೂರ ಸುಮಾರು 80 ಕಿಲೋಮೀಟರ್‌ಗಳಷ್ಟು ಕಡಿಮೆಯಾಗಲಿದೆ. ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ಈ ಭಾಗದ ಜನರ ದಶಕಗಳ ಬೇಡಿಕೆಯಾಗಿದ್ದ ಈ ಯೋಜನೆಗೆ ರಾಜ್ಯ ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸಂಪೂರ್ಣ ಸಹಕಾರ ನೀಡುತ್ತಿದೆ ಎಂದು ಹೇಳಿದರು.

ಒಂದೂವರೆ ವರ್ಷವಾದರೂ ವಿದ್ಯಾರ್ಥಿಗಳಿಗಿಲ್ಲ ಅಂಕಪಟ್ಟಿ

ಪುಟ 1➔ ಇದರ ಜತೆಗೆ ಕಾನ್ವೋಕೇಶನ್ ಸರ್ಟಿಫಿಕೆಟ್‌ಗೆ ಪ್ರತ್ಯೇಕ ಹಣ ಕಟ್ಟಿಸಿಕೊಂಡಿದ್ದಾರೆ. ಆದರೂ, ಅಂಕಪಟ್ಟಿಗಳನ್ನು ನೀಡದೆ ಇರುವುದು ನಮ್ಮ ನೌಕರಿಗೆ ಹಾಗೂ ವ್ಯಾಸಂಗಕ್ಕೆ ತೊಂದರೆಯಾಗುತ್ತಿದೆ ಎಂದು ನೊಂದ ವಿದ್ಯಾರ್ಥಿಗಳು ಅಳಲುತೋಡಿಕೊಂಡಿದ್ದಾರೆ.

ಡಿಜಿ ಲಾಕರ್‌ನಲ್ಲೂ ಪ್ರಕಟವಾಗದ ಅಂಕಪಟ್ಟಿ: ಸರ್ಕಾರವು ಅಂಕಪಟ್ಟಿಗಳನ್ನು ಡಿಜಿಟಲ್ ರೂಪದಲ್ಲಿ ಶೇಖರಿಸಲು ಡಿಜಿ ಲಾಕರ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಆದರೆ, ವಿಶ್ವವಿದ್ಯಾಲಯಗಳು ದತ್ತಾಂಶವನ್ನು ಸರಿಯಾಗಿ ಅಪ್‌ಲೋಡ್ ಮಾಡದ ಕಾರಣ, ವಿದ್ಯಾರ್ಥಿಗಳು ಡಿಜಿ ಲಾಕರ್‌ನಲ್ಲಿ ಹುಡುಕಿದರೂ ನೋ ರೆಕಾರ್ಡ್ ಫೌಂಡ್ ಎಂಬ ಸಂದೇಶ ಬರುತ್ತಿದೆ. ಇದರಿಂದ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ತೊಡಕಾಗಿದೆ.

2 ವರ್ಷ ಕಳೆದರೂ ಸಿಗದ ಅಂಕಪಟ್ಟಿ

ಅಂಕಪಟ್ಟಿ ಇಲ್ಲದಿರುವಿಕೆಯ ದೊಡ್ಡ ಹೊಡೆತ ಬಿದ್ದಿರುವುದು ಉನ್ನತ ವ್ಯಾಸಂಗ ಮಾಡುವವರಿಗೆ. ಸಾಮಾನ್ಯವಾಗಿ ಕೋರ್ಸ್ ಮುಗಿದ 3 ರಿಂದ 6 ತಿಂಗಳೊಳಗೆ ಅಂಕಪಟ್ಟಿ ವಿತರಣೆಯಾಗಬೇಕು. ಆದರೆ, ಬೆಂಗಳೂರು ವಿ.ವಿ.ಯಲ್ಲಿ ವಿದ್ಯಾರ್ಥಿಗಳಿಗೆ ಇನ್ನೂ ಅಂಕಪಟ್ಟಿ ವಿತರಣೆಯಾಗಿಲ್ಲ. ಇದರಿಂದಾಗಿ ಖಾಸಗಿ ಕಂಪನಿಗಳಲ್ಲಿ ಕೆಲಸಕ್ಕೆ ಸೇರುವವರಿಗೆ ಮೂಲ ದಾಖಲೆ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ವಿದೇಶಿ ವ್ಯಾಸಂಗಕ್ಕೆ ಹೋಗ ಬಯಸುವವರಿಗೆ ವೀಸಾ ಮತ್ತು ಅಡ್ಮಿಷನ್ ಪ್ರಕ್ರಿಯೆ ಸ್ಥಗಿತಗೊಳ್ಳುತ್ತಿದೆ. ಅನೇಕ ವಿ.ವಿ.ಗಳು ಪಿಎಚ್.ಡಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿವೆ. ಆದರೆ, ಅರ್ಜಿ ಸಲ್ಲಿಸಲು ಸ್ನಾತಕೋತ್ತರ ಪದವಿಯ ಅಂಕಪಟ್ಟಿ ಕಡ್ಡಾಯವಾಗಿದೆ.

ಉನ್ನತ ವ್ಯಾಸಂಗಕ್ಕೆ ಅಥವಾ ತುರ್ತು ಅವಶ್ಯಕತೆ ಇರುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮುದ್ರಿಸಿ ನೀಡುತ್ತಿದ್ದೇವೆ. ಡಿಜಿ ಲಾಕರ್‌ನಲ್ಲಿ ತಕ್ಷಣ ದತ್ತಾಂಶ ಅಪ್‌ಡೇಟ್ ಮಾಡಲು ಸಂಬಂಧಪಟ್ಟವರಿಗೆ ಸೂಚಿಸುತ್ತೇನೆ.
■ ಡಾ. ಜಯಕರ ಎಸ್.ಎಂ., ಬೆಂಗಳೂರು ವಿ.ವಿ ಕುಲಪತಿ

ನನ್ನ ಬಳಿ ತಾತ್ಕಾಲಿಕ ಅಂಕಪಟ್ಟಿ ಮಾತ್ರ ಇದೆ, ಆದರೆ ಹಲವು ಕಡೆ ಮೂಲ ಅಂಕಪಟ್ಟಿಯೇ ಬೇಕು ಎನ್ನುತ್ತಿದ್ದಾರೆ. ಕೇಳಿದರೆ ಡಿಜಿ ಲಾಕರ್ ನೋಡಿ ಎನ್ನುತ್ತಾರೆ, ಅಲ್ಲಿ ದತ್ತಾಂಶವೇ ಇಲ್ಲ, ಹಾಗಾದರೆ ನಾವು ಕಟ್ಟಿದ ಹೆಚ್ಚಿನ ಹಣ ಎಲ್ಲಿಗೆ ಹೋಯಿತು?
■ ಹೆಸರು ಹೇಳಲು ಇಚ್ಚಿಸದ ವಿದ್ಯಾರ್ಥಿ

ಪಾಕ್ ಮೇಲೆ ಆಫ್ಘನ್ ಭಾರೀ ಗುಂಡಿನ ದಾಳಿ

ಪುಟ 1➔ **ತಪಾಸಣಾ ಚೌಕಿಗಳು ವಶ:** ಗಡಿಭಾಗದ ಮೊಹ್ಮಂದ್, ಚಿತ್ರಾಲ್ ಹಾಗೂ ಕುರ್ರಮ್ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಭಾರೀ ಗುಂಡಿನ ದಾಳಿ ಮುಂದುವರಿದಿದೆ. ನಂಗರ್ ಹಾರ್‌ನ ಗೋಷ್ಟಾ ಪ್ರದೇಶದಲ್ಲಿನ ಮೂರು ಪಾಕಿಸ್ತಾನಿ ಚೌಕಿಗಳು ಮತ್ತು ಕುನಾರ್‌ನ ಎರಡು ಚೌಕಿಗಳು ಆಫ್ಘನ್ ಪಡೆಗಳು ವಶಕ್ಕೆ ಪಡೆದಿವೆ. ಶೋರ್ಕೋ ಗಡಿಭಾಗದಲ್ಲಿಯೂ ತೀವ್ರ ಚಕಮಕಿ ನಡೆದಿದೆ. ಈ ವಾರದ ಆರಂಭದಲ್ಲಿ ಪಾಕಿಸ್ತಾನ ಭದ್ರತಾ ಪಡೆಗಳು ಡ್ಯುರಂಡ್ ರೇಖೆಯಲ್ಲಿರುವ ತಾಲಿಬಾನ್ ತಪಾಸಣಾ ಚೌಕಿಗಳ ಮೇಲೆ ಭಾರೀ ದಾಳಿ ನಡೆಸಿದ್ದವು. ಆಗ ಆಫ್ಘನ್‌ನ 28 ಯೋಧರು ಸಾವನ್ನಪ್ಪಿದ್ದರು.

ನುಸುಳುಕೋರರನ್ನು ಓಡಿಸುವುದು ಖಚಿತ: ಕೇಂದ್ರ ಸಚಿವ ಅಮಿತ್ ಶಾ

ಪುಟ 1➔ ಇವುಗಳನ್ನು ನಾಶಪಡಿಸಲು ನಾವು ಬದ್ಧರಾಗಿದ್ದೇವೆ. ಒಳನುಸುಳುವಿಕೆಯು ಜನಸಂಖ್ಯಾ ಬದಲಾವಣೆಯ ಬೆದರಿಕೆಯನ್ನೂ ಒಡ್ಡುತ್ತದೆ. ಇದು ಒಂದು ಪ್ರದೇಶದ ಸಂಸ್ಕೃತಿ ಮತ್ತು ಭೌಗೋಳಿಕತೆಯನ್ನೂ ಹಾಳುಮಾಡುತ್ತದೆ ಎಂದು ಶಾ ಹೇಳಿದರು. ಅತ್ಯಂತ ದುರ್ಬಲ ಪ್ರದೇಶಗಳನ್ನು ಗುರುತಿಸುವ ಮೂಲಕ ಜನಸಂಖ್ಯಾ ಬದಲಾವಣೆಯನ್ನು ಅಧ್ಯಯನ ಮಾಡಲು ಮತ್ತು ರದ್ದುಗೊಳಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲು ಕೇಂದ್ರದಲ್ಲಿನ ನರೇಂದ್ರ ಮೋದಿ ಸರ್ಕಾರವು ನಿರ್ಧರಿಸಿದೆ ಎಂದು ಹೇಳಿದರು. ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಜನಸಂಖ್ಯಾ ಬದಲಾವಣೆಯಿಂದ ಹೆಚ್ಚು ಬಾಧಿತವಾಗಿವೆ. ಪಶ್ಚಿಮ ಬಂಗಾಳದಲ್ಲಿ ಶೀಘ್ರದಲ್ಲೇ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುತ್ತದೆ ಎಂಬ ವಿಶ್ವಾಸ ನಮಗಿದೆ ಎಂದು ಶಾ ಪ್ರತಿಪಾದಿಸಿದರು.



ಹಿಂದು ಧರ್ಮಕ್ಕೆ ಮತಾಂತರವಲ್ಲ, ಘರ್‌ವಾಪ್ಸಿ!

ಪುಟ 1➔ ಹೀಗಾಗಿ ಇದನ್ನು ಹಿಂದು ಧರ್ಮಕ್ಕೆ ಮತಾಂತರವಾಗಿದ್ದಾರೆ ಎಂಬುದಕ್ಕಿಂತ ಘರ್‌ವಾಪ್ಸಿಯಾಗಿದ್ದಾರೆ ಎಂದು ಕರೆಯುವುದು ಸೂಕ್ತವಾಗುತ್ತದೆ.

ಗೆಜೆಟ್ ಹೇಳುವುದೇನು?: ಕಾನೂನಿನ ಪ್ರಕಾರ ಪ್ರತಿಯೊಂದು ಧಾರ್ಮಿಕ ಮತಾಂತರವನ್ನು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಿಸುವುದು ಕಡ್ಡಾಯ. ಈ ಅಧಿಕೃತ ದಾಖಲೆಗಳ ಪರಿ ಶೀಲನೆಯ ಪ್ರಕಾರ, 2024ರಲ್ಲಿ ಕೇರಳದಲ್ಲಿ ಒಟ್ಟು 365 ಮಂದಿ ಹಿಂದು ಧರ್ಮಕ್ಕೆ ಮತಾಂತರಗೊಂಡಿದ್ದಾರೆ.

ಇವರಲ್ಲಿ 262 ಮಂದಿ ದಲಿತ ಕ್ರೈಸ್ತರು ಮತ್ತು ಮುಸ್ಲಿಮರು. ಪರಿಶಿಷ್ಟ ಜಾತಿ ಹುದ್ದೆ ಸಿಗುವ ಭರವಸೆ ಹಲವರ ಮತಾಂತರ ನಿರ್ಧಾರದಲ್ಲಿ ಪ್ರಮುಖ ಕಾರಣವಾಗಿದ್ದುದಾಗಿ ವಿಶ್ಲೇಷಣೆ ಸೂಚಿಸುತ್ತದೆ. ಇದೇ ಅವಧಿಯಲ್ಲಿ ಇಸ್ಲಾಂಗೆ ಮತಾಂತರಗೊಂಡವರ ಸಂಖ್ಯೆ 343 ಆಗಿದ್ದರೆ, ಕ್ರೈಸ್ತ ಧರ್ಮಕ್ಕೆ ಸೇರಿದ್ದವರು 255 ಮಂದಿ. ಈ ವೆಬ್‌ಸೈಟ್ ಪ್ರಕಾರ, ಮತಾಂತರಗಳ ಬಗ್ಗೆ ಹರಿದಾಡುತ್ತಿರುವ ಜನಪ್ರಿಯ ಕಥನಗಳಿಗೆ ವಿರುದ್ಧವಾಗಿ, ಹಿಂದು ಧರ್ಮವೇ ಪ್ರಮುಖ ಲಾಭದಾಯಕವಾಗಿ ಹೊರಹೊಮ್ಮಿದೆಯಂತೆ.

ಲವ್ ಜಿಹಾದ್ ಆರೋಪಗಳ ಬೆಳಕಿನಲ್ಲಿ ಗಮನ ಸೆಳೆಯುವ ಅಂಕಿ-ಅಂಶವೆಂದರೆ, 2024ರಲ್ಲಿ ಕೇವಲ 67 ಮಂದಿ ಕ್ರೈಸ್ತರು ಇಸ್ಲಾಂಗೆ ಮತಾಂತರಗೊಂಡಿದ್ದಾರೆ. ಇವರಲ್ಲಿ 42 ಮಂದಿ ಮಹಿಳೆಯರು. ಅದೇ ವೇಳೆ 234 ಮಂದಿ ಹಿಂದುಗಳು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದು, ಇವರಲ್ಲಿ 130 ಮಂದಿ ಮಹಿಳೆಯರು. ಜತೆಗೆ 21 ಮಂದಿ ಕ್ರೈಸ್ತರು ಇದೇ ಮತದ ಇತರೆ ಪಂಥದತ್ತ ಹೋಗಿದ್ದಾರೆ. ಇವರಲ್ಲಿ 13 ಮಂದಿ ಮಹಿಳೆಯರಿದ್ದಾರೆ. ಆದರೆ, ಇಲ್ಲಿ ಹಲವಾರು ಗೊಂದಲ ಸೃಷ್ಟಿಸಿದ್ದಾರೆ. ಹಿಂದು ಧರ್ಮದಿಂದ ಮತ್ತೊಂದು ಮತಕ್ಕೆ ಹೋಗಿ ಮತ್ತೆ ವಾಪಸ್ ಬರುವುದಕ್ಕೆ ಮತಾಂತರ ಅನ್ನಲಾಗುವುದಿಲ್ಲ, ಇದನ್ನು ಘರ್ ವಾಪ್ಸಿ ಎನ್ನಲಾಗುತ್ತದೆ. ಇನ್ನೊಂದು ಸಂಗತಿ ಎಂದರೆ ಒಂದು ಧರ್ಮ ದಲ್ಲೇ ಇತರೆ ಪಂಥಗಳತ್ತ ವಾಲಿದರೆ ಅದನ್ನೂ ಮತಾಂತರ ಅನ್ನ ಲಾಗುವುದಿಲ್ಲ. ಈ ಎರಡೂ ಸಂಗತಿಗಳ ವಿಚಾರದಲ್ಲಿ ವೆಬ್‌ಸೈಟ್ ನರೇಟೀವ್ ಸೃಷ್ಟಿ ಮಾಡುವಲ್ಲಿ ಸೋತಿದೆ.

ದಿ ಕೇರಳ ಸ್ಟೋರಿ 2 ಬಿಡುಗಡೆಗೆ ಹೈ ತಡೆ

ಪುಟ 1➔ ಚಿತ್ರಕ್ಕೆ ನೀಡಲಾದ ಸೆನ್ಸಾರ್ ಪ್ರಮಾಣಪತ್ರವನ್ನು ಪ್ರಶ್ನಿಸಿ ಮತ್ತು ಅದರ ಬಿಡುಗಡೆಯನ್ನು ಅಮಾನತುಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ನ್ಯಾಯಾಲಯವು ಆಲಿಸಿದ ನಂತರ ಮಧ್ಯಂತರ ಆದೇಶ ಬಂದಿದೆ.

ಗ್ರೇಡ್ ಆಧಾರಿತ ಡಿಎಲ್ ವ್ಯವಸ್ಥೆ ಶೀಘ್ರವೇ ಜಾರಿ: ನಿತಿನ್ ಗಡ್ಕರಿ

ಪುಟ 1➔ ಚಾಲನೆ ಮಾಡುವಾಗ ಮೊಬೈಲ್ ಫೋನ್ ಬಳಕೆ, ಅತಿಯಾದ ವೇಗ ಮತ್ತು ಕುಡಿದು ವಾಹನ ಚಲಾಯಿಸುವುದೇ ಅಪಘಾತಕ್ಕೆ ಮುಖ್ಯ ಕಾರಣಗಳು. ಹೀಗಾಗಿ, ಪದೇ ಪದೇ ಸಂಚಾರಿ ನಿಯಮ ಉಲ್ಲಂಘಿಸಿದರೆ ಪರವಾನಿಗೆ ರದ್ದುಗೊಳಿಸುವುದು ಸೇರಿದಂತೆ ಕಠಿಣ ನಿಯಮಗಳನ್ನು ಜಾರಿಗೊಳಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಪ್ರಸ್ತಾವಿತ ವ್ಯವಸ್ಥೆಯಲ್ಲಿ, ಸಂಚಾರ ನಿಯಮ ಉಲ್ಲಂಘನೆಗಾಗಿ ದಂಡದ ಅಂಕಗಳನ್ನು ಕಡಿತಗೊಳಿಸಲಾಗುತ್ತದೆ. ಮಿತಿಮೀರಿದ ಉಲ್ಲಂಘನೆಗಳನ್ನು ದಾಖಲಿಸಿದರೆ ಪರವಾನಿಗೆ ಅಮಾನತು ಅಥವಾ ರದ್ದಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ದಂಡವನ್ನು ಹೆಚ್ಚಿಸಲಾಗಿದ್ದರೂ, ಜಾರಿಗೊಳಿಸುವ ಸವಾಲು ಇನ್ನೂ ಉಳಿದಿವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಸಾರ್ವಜನಿಕ ಸಹಾಯವನ್ನು ಉತ್ತೇಜಿಸಲು ಅಪಘಾತ ಸಂತ್ರಸ್ತರಿಗೆ ನಗದು ರಹಿತ ಚಿಕಿತ್ಸೆ ನೀಡುವ ಪಿಎಂ ರಾಹತ್ ಯೋಜನೆಯನ್ನು ಗಡ್ಕರಿ ಉಲ್ಲೇಖಿಸಿದರು. ಸುಸ್ಥಿರ ಕಡಲ ಕಾರ್ಯಾಚರಣೆಗಳನ್ನು ಉತ್ತೇಜಿಸಲು ವಿಒ ಚಿದಂಬರನಾರ್ ಬಂದರಿನಲ್ಲಿ 40 ಹಸಿರು ಹೈಡ್ರೋಜನ್ ಚಾಲಿತ ಟ್ರಕ್‌ಗಳನ್ನು ನಿಯೋಜಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಮುಂಡರಗಿ: ತಕ್ಷಣ ಸಚಿವ ಸಂಪುಟ ಕರೆದು ನೇಮಕ ಪ್ರಕ್ರಿಯೆ ನಿರ್ಣಯವನ್ನು ಮಾಡಬೇಕೆಂದು ಬಂಜಾರ ಸಮಾಜದ ಮುಖಂಡ ಸುಭಾಷ್ ಗುಡಿಮನಿ ಸರ್ಕಾರಕ್ಕೆ ಆಗ್ರಹಿಸಿದ್ದಾರೆ. ಅವರು ಈ ಕುರಿತು ಪ್ರಕಟಣೆ ನೀಡಿ, ಒಳ ಮೀಸಲಾತಿ 6+6+5 ರ ಅನುಪಾತ ಆದೇಶ ಹಿಂಪಡಿದು ಹಳೆ ಮೀಸಲಾತಿಯನ್ನು ಜಾರಿಗೆ ತಂದು ನೇಮಕಾತಿ ಮಾಡಿಕೊಳ್ಳಬೇಕು. ಶೈಕ್ಷಣಿಕ ಉದ್ಯೋಗಕ್ಕೆ ತೊಂದರೆಯಾಗದಂತೆ ಆದೇಶ ಹೊರಡಿಸಬೇಕೆಂದರು. ಒಳ ಮೀಸಲಾತಿ ಅವೈಜ್ಞಾನಿಕವಾಗಿದ್ದು ಇದು ಗೊಂದಲದ ಗೂಡಾಗಿದೆ. ಹಲವಾರು ಸಮಸ್ಯೆಗಳು, ನ್ಯಾಯಾಲಯದಲ್ಲಿ ಅಡೆತಡೆಗಳು ಇರುವುದರಿಂದ ಇದರ ನೆಪ ಹೇಳಿ ರಾಜ್ಯ ಸರ್ಕಾರ ನೇಮಕ ಪರಿಕ್ರಿಯೆ ತಡೆ ಹಿಡಿದಿದ್ದು ಇದನ್ನು ತೀವ್ರವಾಗಿ ಖಂಡಿಸುತ್ತೇವೆ. ಇದರಿಂದ ವಿದ್ಯಾರ್ಥಿಗಳ ವಯೋಮಿತಿ ಕಳೆದುಹೋಗುವುದರಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ. ಕಳೆದ ಮೂರು ವರ್ಷದಿಂದ ಯಾವುದೇ ಒಂದು ನೇಮಕ ಪ್ರಕ್ರಿಯೆ ಮಾಡಿಲ್ಲ, ಆದಕ್ಕೆ ಮೂರು ವರ್ಷ ಉದ್ಯೋಗಕಾಂಕ್ಷಿಗಳಿಗೆ ವಯೋಮಿತಿಯನ್ನು ಹೆಚ್ಚು ಮಾಡಬೇಕು ಎಂದು ಒತ್ತಾಯಿಸಿದರು.

ಪಲ್ಲಕ್ಕಿ ಉತ್ಸವ ಇಂದು

ಗದಗ: ಬೆಟಗೇರಿಯ ಹಳೇಬನಶಂಕರಿದೇವಿ ದೇವಸ್ಥಾನದಲ್ಲಿ ಫೆ.27 ರಂದು ಸಂಜೆ 6ಕ್ಕೆ ದೇವಾಂಗ ಮಹಿಳಾ ಮಂಡಳ ಸದಸ್ಯರಿಂದ ಲಲಿತ ಸಹಸ್ರ ನಾಮಾವಳಿ, ಭಜನೆ, ಬನಶಂಕರಿದೇವಿಯ ಪಲ್ಲಕ್ಕಿ ಉತ್ಸವ ಹಮ್ಮಿಕೊಳ್ಳಲಾಗಿದೆ. ಪಲ್ಲಕ್ಕಿ ಉತ್ಸವದ ಪ್ರಸಾದ ಸೇವೆ ನಾರಾಯಣಪ್ಪ ಕಂಗೂರಿ ಹಾಗೂ ಕುಟುಂಬ ವರ್ಗದವರು ವಹಿಸಿಕೊಂಡಿದ್ದಾರೆ ಎಂದು ಹಳೇಬನಶಂಕರಿದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ ಪದಾಧಿಕಾರಿಗಳು ತಿಳಿಸಿದ್ದಾರೆ.

ಆರೋಗ್ಯ ಶಿಬಿರ ಕಾರ್ಯಕ್ರಮ

ಗದಗ: ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪೂರ, ಗದಗ-ಬೆಟಗೇರಿ ಸಂಸ್ಥೆ ಮತ್ತು ರಕ್ತ ತಪಾಸಣಾ ಕೇಂದ್ರ, ಬೆಟಗೇರಿ-ಗದಗ ಸಹಯೋಗದೊಂದಿಗೆ ಸಂಸ್ಥೆಯ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ಬುಧವಾರ ಆರೋಗ್ಯ ಶಿಬಿರ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ನಿರ್ದೇಶಕಿ ಸುಮಲತ ಜಂಟಿ, ಡಾ.ಶಕುಂತಲಾ ತೋಟರ್, ಕಿರಣ ಕರಿಗಾರ ಹಾಗೂ ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಮತ್ತು ಸಂಸ್ಥೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅವಧಿ ವಿಸ್ತರಣೆ

ಗದಗ: ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ರ ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಂದ, ಶುಲ್ಕ ಮರುಪಾವತಿ ಯೋಜನೆಯ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ಮಾ.5 ರವರೆಗೆ ವಿಸ್ತರಿಸಲಾಗಿದೆ.

ಸಭೆ ನಾಳೆ

ಮುಂಡರಗಿ: ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ ತಾಲೂಕು ಘಟಕದ ಪದಾಧಿಕಾರಿಗಳ ಹಾಗೂ ಆಜೀವ ಸದಸ್ಯರ ಸಭೆಯನ್ನು ಫೆ.28 ರ ಬೆಳಗ್ಗೆ 11.45ಕ್ಕೆ ಶಾಸಕರ ಮಾದರಿ ಕೇಂದ್ರಶಾಲೆಯಲ್ಲಿ (ಎಂ.ಸಿ.ಎಸ್) ಮಾಸಿಕ ಸಭೆ ಕರೆಯಲಾಗಿದೆ ಎಂದು ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಎನ್.ಎನ್.ಕಲಕೇರಿ ತಿಳಿಸಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ತಾಲೂಕು ಘಟಕದ ಅಧ್ಯಕ್ಷ ಆರ್.ಬಿ.ಹಕ್ಕಂಡಿ ವಹಿಸಿಕೊಳ್ಳುವರು. ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ಈಶ್ವರಪ್ಪ ಹಂಚಿನಾಳ ಹಾಗೂ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಬಿ.ಕೆ.ಜಯಲಕ್ಷ್ಮೀ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಫೆಬ್ರುವರಿ ತಿಂಗಳಲ್ಲಿ ಜನಿಸಿದ ನಮ್ಮ ಸಂಘದ ಆಜೀವ ಸದಸ್ಯರುಗಳ ಹುಟ್ಟುಹಬ್ಬ ಆಚರಿಸಲಾಗುವುದು. ನಮ್ಮ ಸಂಘದ ನಿವೇಶನನಿಧಿ / ವಾರ್ಷಿಕ ವಂತಿಗೆ ನೀಡಿ ರಸೀದಿ ಪಡೆದುಕೊಳ್ಳಲು ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	4809-9191
ಅಜವಾನ	7612-10051
ಅಲಸಂದಿ	5744-6269
ಕಡಲೆ	2012-5529
ಹವೀಜ	9238-9238
ಹೆಸರು	1309-7291
ಹುರಳಿ	3912-4383
ಜೋಳ	2044-4062
ಗೋವಿನಜೋಳ	1575-1805
ರಾಗಿ	2717-2717
ಕುಸಬಿ	4089-5552
ಸೂರ್ಯಕಾಂತಿ	6169-6169
ತೊಗರಿ	4144-5812
ಗೋಧಿ	2244-4539
ಒಟಾಣಿ	5550-5750



ನರಗುಂದ: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನರಗುಂದ ಶಾಖೆಯ ವತಿಯಿಂದ ಸ್ಕ್ರೀನ್ ಟೈಮ್ ಟು ಆ್ಯಕ್ಟಿವಿಟಿ ಟೈಮ್ ಅಭಿಯಾನದಡಿಯಲ್ಲಿ ನಾಲ್ಕನೇ ದಿನದ ಅಂಗವಾಗಿ ಗುರುವಾರ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ ಆರ್ ಅಂಬೇಡ್ಕರ್ ಮೆಟ್ರಿಕ್ ನಂತರದ ವಸತಿ ನಿಲಯದಲ್ಲಿ ಯುಥ್ಸ್ ವಿತ್ ಯೋಗ ಎಂಬ ಕಾರ್ಯಕ್ರಮದಲ್ಲಿ ಯೋಗಾಸನ ಮಾಡಿಸಲಾಯಿತು. ರಾಷ್ಟ್ರೀಯ ಮಟ್ಟದ ಯೋಗಪಟು ಸಂಜು ಜೋಗಿನ, ನಗರ ಕಾರ್ಯದರ್ಶಿ ಅಭಿಷೇಕ ನವಲಗುಂದ, ತಾಲೂಕು ಸಂಚಾಲಕ ಆಕಾಶ ಕಲಾಲ, ಮಲ್ಲನಗೌಡ ಹಿರೇಗೌಡ್ರ, ರುದ್ರೇಶ ಕೊಣ್ಣೂರ, ಚನ್ನು, ರವಿ ಇತರರಿದ್ದರು.

ಜನತಾ ದರ್ಶನ ಕಾರ್ಯಕ್ರಮ: ಪೂರ್ವಭಾವಿ ಸಭೆ

ಗದಗ: ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ನಡೆಯಲಿರುವ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮ ಕುರಿತು ಪೂರ್ವಸಿದ್ಧತಾ ಸಭೆಯು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀಧರ್ ಅವರು, ಜನತಾ ದರ್ಶನವು ಸಾರ್ವಜನಿಕರ ಅಹವಾಲುಗಳಿಗೆ ತ್ವರಿತ ಪರಿಹಾರ ಒದಗಿಸುವ ಮಹತ್ವದ ವೇದಿಕೆ ಆಗಿದ್ದು, ಯಾವುದೇ ತೊಂದರೆ ಉಂಟಾಗದಂತೆ ಪೂರ್ವಸಿದ್ಧತೆಗಳನ್ನು ಕೈಗೊಳ್ಳಬೇಕು. ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಅರ್ಜಿದಾರರಿಗೂ ಸರಿಯಾದ ಮಾರ್ಗದರ್ಶನ ನೀಡಬೇಕು ಹಾಗೂ ಅವರ ಅರ್ಜಿಗಳನ್ನು ತಕ್ಷಣ ದಾಖಲಿಸಿ ಸಂಬಂಧಿಸಿದ ಇಲಾಖೆಗೆ ರವಾನಿಸುವ ವ್ಯವಸ್ಥೆ ಇರಬೇಕು. ಅಧಿಕಾರಿಗಳು ತಮ್ಮ ಇಲಾಖೆಯ ಬಾಕಿ ಅರ್ಜಿಗಳ ವಿವರಗಳನ್ನು ಪೂರ್ವಭಾವಿಯಾಗಿ ಪರಿಶೀಲಿಸಿ, ಸಾಧ್ಯವಾದಷ್ಟು ಸ್ಥಳದಲ್ಲೇ ಪರಿಹಾರ ನೀಡುವ ಮನೋಭಾವದಿಂದ ಕಾರ್ಯನಿರ್ವಹಿಸಬೇಕು. ಫೆ.27ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅಧ್ಯಕ್ಷತೆಯಲ್ಲಿ ಜರುಗುವ ಜನತಾ ದರ್ಶನ ಕಾರ್ಯಕ್ರಮದಲ್ಲಿ ಎಲ್ಲ ಇಲಾಖೆಯ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಹಾಜರಾಗಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕೆಂದು ಅವರು ತಿಳಿಸಿದರು. ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಉಪವಿಭಾಗಾಧಿಕಾರಿ ಗಂಗಪ್ಪ ಎಂ., ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಪದ್ಮಾವತಿ ಜಿ. ಇತರರಿದ್ದರು.



ಲಕ್ಷ್ಮೇಶ್ವರ: ದೊಡ್ಡೂರ ರಸ್ತೆಗೆ ಹೊಂದಿಕೊಂಡಿರುವ ಪಿ.ಬಿ ಖರಾಟೆ ಅವರ ತೋಟದಲ್ಲಿ ರೈತರು ಮೆಕ್ಕೆಜೋಳ ಒಕ್ಕಲಿ ಮಾಡಿ ಬಿಟ್ಟಿದ್ದ ಹೊಟ್ಟಿನ ರಾಸಿಗೆ ಆಕಸ್ಮಿಕ ಬೆಂಕಿ ತಗುಲಿದ ಪರಿಣಾಮ ಒಂದಷ್ಟು ತೆಂಗು, ಮಾವಿನ ಮರಗಳಿಗಳು ಸುಟ್ಟಿವೆ.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ ಅಭಿಮತ

ಅವ್ವನ ಹೆಸರಿನ ಕಾರ್ಯಕ್ರಮ ಮಾದರಿ

ಗದಗ: ತಮ್ಮ ಸುಖ ತ್ಯಾಗ ಮಾಡಿದ ತಾಯಿ-ತಂದೆಯರನ್ನು ವೃದ್ಧಾಶ್ರಮ ಕಾಣುವಂತಾಗಿರುವುದು ಬೇಸರದ ಸಂಗತಿ. ಆದರೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ತಾಯಿ ಹೆಸರಲ್ಲಿ ಅವ್ವ ಸೇವಾ ಟ್ರಸ್ಟ್ ಸ್ಥಾಪಿಸಿ ಆ ಮೂಲಕ ಸಮಾಜದಲ್ಲಿ ವಿವಿಧ ಕಾರ್ಯಕ್ರಮಗಳ ಆಯೋಜನೆಗೆ ಕಾರಣೀಕರ್ತರಾಗಿರುವುದು ಮಾದರಿ ಎಂದು ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಶ್ಲಾಘಿಸಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದಲ್ಲಿ ಹುಬ್ಬಳ್ಳಿಯ ಅವ್ವ ಸೇವಾ ಟ್ರಸ್ಟ್ ಮಾತೋಶ್ರೀ ಗಂಗವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ರಾಜ್ಯ ಮಟ್ಟದಲ್ಲಿ ಮಹಿಳಾ ಪತ್ರಕರ್ತರಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಸ್ಥಾಪಿಸಿರುವ ದತ್ತಿ ನಿಧಿ ಪ್ರಶಸ್ತಿ ನಗರದ ಹೊರವಲಯದಲ್ಲಿರುವ ಗ್ರಾಮ ಗಂಗೋತ್ರಿ ಆವರಣದಲ್ಲಿರುವ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದ ಸಭಾಂಗಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಪತ್ರಕರ್ತೆ ತನುಜಾ ನಾಯಕ ಅವರಿಗೆ ಪ್ರದಾನ ಮಾಡಿ ಮಾತನಾಡಿದರು.

ಮಾತೋಶ್ರೀ ಗುರುವ್ವ ಶಿವಲಿಂಗಪ್ಪ ಅವ್ವ ಹೊರಟ್ಟಿ ಈ ಕಾರ್ಯಕ್ರಮದ ನೈತಿಕ ಶಕ್ತಿ ಆಗಿದ್ದಾರೆ. ಈ ತಾಯಿಯ ಕಾಳಜಿ, ಸಂಸ್ಕಾರ ಮತ್ತು ಕನವರಿಕೆಗಳನ್ನು ಅಕ್ಷರಕ್ಕೆ ಇಳಿಸುತ್ತಾ ಇವರ ಹೆಸರಿನ ಪ್ರಶಸ್ತಿ ಸ್ವೀಕರಿಸುತ್ತಿರುವ ಸುನಂದಾ ನಾಯಕ ಅವರ ಆಯ್ಕೆ ಅತ್ಯಂತ ಸೂಕ್ತವಾಗಿದೆ ಎಂದರು. ಇವತ್ತಿನ ಈ ಕಾರ್ಯಕ್ರಮವೇ ಅವ್ವ ಗುರವ್ವ ಅವರ ಸಂಸ್ಕಾರ ಮತ್ತು ಚೈತನ್ಯ ಜೀವಂತಿಕೆಗೆ ಸಾಕ್ಷಿಯಾಗಿದೆ ಎಂದು ವಿವರಿಸಿದರು.

ನಿಜವಾದ ಅಭಿವೃದ್ಧಿ ಎಂದರೆ ಗ್ರಾಮೀಣ ಭಾಗದ ಜನರ ಜೀವನಮಟ್ಟ ಸುಧಾರಿಸುವುದು ಮತ್ತು ಗ್ರಾಮೀಣ ಆರ್ಥಿಕತೆ ಬೆಳವಣಿಗೆಯೇ ನಿಜವಾದ ಅಭಿವೃದ್ಧಿ ಎನ್ನುವುದನ್ನು ನಾವು ಮರೆಯಬಾರದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ರಾಜು ಹೆಬ್ಬಳ್ಳಿ ಅಧ್ಯಕ್ಷತೆ ವಹಿಸಿದ್ದರು. ಸಭಾಪತಿ ಬಸವರಾಜ ಹೊರಟ್ಟಿ, ಕುಲಸಚಿವ ಪ್ರೊ.ಸುರೇಶ ನಾಡಗೌಡರ, ರಾಜ್ಯ ಕಾರ್ಯದರ್ಶಿ ನಿಂಗಪ್ಪ ಚಾವಡಿ, ಬಸವರಾಜ ಧಾರವಾಡ, ದತ್ತಿ ನಿಧಿ ಪ್ರಶಸ್ತಿ ಪುರಸ್ಕೃತ ತನುಜಾ ನಾಯಕ, ಜಿಲ್ಲಾ ವಾರ್ತಾಧಿಕಾರಿ ವಸಂತ ಮಡ್ಲೂರು ಇದ್ದರು.



ಕಿರಿಯ ವೃತ್ತಿ ಬಾಂಧವರಿಗೆ ಮಾದರಿ

ಆದರ್ಶಪ್ರಾಯ ಅವ್ವನ ಹೆಸರಿನ ಪ್ರಶಸ್ತಿಗೆ ತನುಜಾ ನಾಯಕ ಅವರನ್ನು ಆಯ್ಕೆ ಮಾಡಿರುವುದು ಹೆಚ್ಚು ಸೂಕ್ತವಾಗಿದೆ. ಮಹಿಳಾ ಸಂವೇದನೆ, ಕೌಟುಂಬಿಕ ಮೌಲ್ಯಗಳು, ಸಾಮಾಜಿಕ ಜಾಗೃತಿ ಮತ್ತು ಜೀವನ ಪ್ರೀತಿಯನ್ನು ಸಾರುವಂತಹ ಲೇಖನಗಳನ್ನು ನಿರಂತರವಾಗಿ ಬರೆಯುತ್ತಿರುವ ತನುಜಾ ನಾಯಕ ಅವರ ಸಾಮಾಜಿಕ ನೋಟ ಇವತ್ತಿನ ಕಿರಿಯ ವೃತ್ತಿ ಬಾಂಧವರಿಗೆ ಮಾದರಿಯಾಗಿದ್ದಾರೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ ಹೇಳಿದರು.

ಕಾನೂನು ಸುವ್ಯವಸ್ಥೆ ಕಾಪಾಡಿ: ಸಿಪಿಐ

ಲಕ್ಷ್ಮೇಶ್ವರ: ಲಕ್ಷ್ಮೇಶ್ವರ ಸೇರಿ ತಾಲೂಕಿನಾದ್ಯಂತ ನಡೆಯಲಿರುವ ಹೋಳಿ ಹಬ್ಬವನ್ನು ಎಲ್ಲರೂ ಶಾಂತಿ-ಸೌಹಾರ್ದತೆಯಿಂದ ಆಚರಿಸಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಿಪಿಐ ಬಿ.ವಿ. ನ್ಯಾಮಗೌಡರ ಹೇಳಿದರು.

ಅವರು ಗುರುವಾರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಹೋಳಿ ಹಬ್ಬದ ಪ್ರಯುಕ್ತ ಕರೆಯಲಾಗಿದ್ದ ಶಾಂತಿ ಸಭೆಯಲ್ಲಿ ಮಾತನಾಡಿ, ಅಹಿತಕರ ಘಟನೆಗೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಹಬ್ಬದ ಸಮಯದಲ್ಲಿ ಪಿಯುಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ನ'ಡೆ'ಯು'ತ್ತಿ'ರು'ವ'ದ'ರಿಂ'ದ' ಪರೀಕ್ಷಾರ್ಥಿಗಳಿಗೆತೊಂದರೆಯಾಗದಂತೆ ಹಬ್ಬ ಆಚರಣೆ ಮಾಡಬೇಕು. ಏನೇ ಸಮಸ್ಯೆ ಉಂಟಾದಲ್ಲಿ ನೇರವಾಗಿ ಪೊಲೀಸರಿಗೆ ಮಾಹಿತಿ ನೀಡಿ ಸಹಕರಿಸಬೇಕು ಎಂದರು.

- ಮಾ.3ರಂದು ಎಲ್ಲೆಡೆ ಕಾಮರತಿ-ಮೂರ್ತಿ ಪ್ರತಿಷ್ಠಾಪನೆಯೊಂದಿಗೆ ಕೆಲ ಗ್ರಾಮಗಳಲ್ಲಿ ಬಣ್ಣದೋಕಳಿ
- ಮಾ.4ರಂದು ತಾಲೂಕಿನ ಗ್ರಾಮೀಣ ಭಾಗದಲ್ಲಿ ಮತ್ತು ಮಾ.7ರಂದು ಲಕ್ಷ್ಮೇಶ್ವರದಲ್ಲಿ ರಂಗ ಪಂಚಮಿ
- ಈ ವರ್ಷ ಶಿಗ್ಲಿಯಲ್ಲಿ ರಂಗಿನೋಕಳಿ ಹಬ್ಬ ಆಚರಣೆ ಇಲ್ಲ
- ಇತ್ತೀಚೆಗಷ್ಟೇ ಗ್ರಾಮದೇವಿ ಜಾತ್ರೆ ನಡೆದ ಹಿನ್ನೆಲೆ ಬಣ್ಣದಾಟ ಆಡದಿರಲು ಗ್ರಾಮಸ್ಥರ ತೀರ್ಮಾನ

ಪಿಎಸ್‌ಐ ನಾಗರಾಜ ಗಡದ ಮಾತನಾಡಿ, ಹಬ್ಬದಲ್ಲಿ ರಾಸಾಯನಿಕ ಮಿಶ್ರಿತ ಬಣ್ಣವನ್ನು ಬಳಸಬೇಡಿ. ಹಬ್ಬದ ದಿನ ಬೈಕ್‌ಗಳ ಕರ್ಕಶ ಶಬ್ದ ಹಾಗೂ ಟ್ರ್ಯಾಕ್ಟರ್‌ನಲ್ಲಿ ಅಬ್ಬರದ ಸೌಂಡ್ ಬಾಕ್ಸ್ ಸಾರ್ವಜನಿಕರಿಗೆ, ವಿದ್ಯಾರ್ಥಿಗಳ ಓದಿಗೆ ತೊಂದರೆ ಮಾಡಬೇಡಿ. ಕಳೆದ ಬಾರಿ ವಿದ್ಯಾರ್ಥಿನಿಯರು ಇರುವ ಬಸ್ ನಲ್ಲಿ ಬಣ್ಣ ಎರಚಿ ವಿದ್ಯಾರ್ಥಿನಿಯರ ಆರೋಗ್ಯದ ಮೇಲೆ ಸಮಸ್ಯೆ ಉಂಟಾಗಿತ್ತು. ಆ ತರಹ ಘಟನೆಗಳು ನಡೆಯದಂತೆ ನಿಗಾವಹಿಸುತ್ತೇವೆ ಹೋಳಿ ಹಬ್ಬವನ್ನು ಸಹೋದರತ್ವ ಭಾವನೆಯಿಂದ ಶಾಂತಿಯುತ ಮತ್ತು ಅರ್ಥಪೂರ್ಣವಾಗಿ ಆಚರಿಸಿ ಎಂದರು. ಹಿರಿಯರಾದ ಪಿ.ಬಿ ಖರಾಟೆ, ಗಂಗಾಧರ ಮೆಣಸಿನಕಾಯಿ ಮಾತನಾಡಿದರು. ಶಿವಣ್ಣ ಕಟಗಿ, ಮಾಬುಸಾಬ ಮುಳುಗುಂದ, ಶರಣು ಗೋಡಿ, ನವೀನ ಹಿರೇಮಠ, ವಿಜಯ ಕುಂಬಾರ, ಹಾಲಪ್ಪ ಸೂರಣಗಿ, ಮಂಜುನಾಥ ಶೆರಸೂರಿ, ಮಲ್ಲೇಶಪ್ಪ ಬಸಾಪುರ, ದಾವೂದಖಾನ ಕಾರಡಗಿ, ಯೂನುಷ ಚೌರಿ, ಗೋಪಿ ಪಾಣಿಗಟ್ಟಿ, ಮುತ್ತು ಪಾಣಿಗಟ್ಟಿ, ಭರಮಗೌಡ ಪಾಣಿಗಟ್ಟಿ, ಮಂಜುನಾಥ ಕೊಡಳ್ಳಿ, ಫಕೀರೇಶ ಅಣ್ಣಿಗೇರಿ, ಬಸಣ್ಣ ಬೆಂಗಳೂರು, ಜಗದೀಶ ಕೋಲಕಾರ, ಶೇಖಣ್ಣ ಹಂಜಗಿ, ಇದ್ದರು.



ನಾಳೆ ಹಿಂದೂ ಸಮಾಜೋತ್ಸವ: ಭವ್ಯ ಶೋಭಾಯಾತ್ರೆ

ಗದಗ: ಹಿಂದೂ ಹಬ್ಬಗಳು ಹಾಗೂ ಮಹಾಪುರುಷರ ಜಯಂತ್ಯುತ್ಸವ ಆಚರಣೆ ಸಂದರ್ಭದಲ್ಲಿ ವಿರೋಧ ವ್ಯಕ್ತಪಡಿಸುವ ಮನಸ್ಥಿತಿ ದೇಶದಲ್ಲಿ ಹೆಚ್ಚಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಜಾತಿ, ಮತ, ಪಂಥ, ಪ್ರಾಂತ ಬದಿಗಿರಿಸಿ ಸಮಸ್ತ ಹಿಂದೂ ಸಮಾಜ ಬಾಂಧವರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಫೆ.28 ರಂದು ನಗರದಲ್ಲಿ ಭವ್ಯ ಹಿಂದೂ ಸಮಾಜೋತ್ಸವ ಆಯೋಜಿಸಲಾಗಿದೆ ಎಂದು ಶಿವಾನಂದ ಉಪನಗರ ಹಿಂದೂ ಸಮ್ಮೇಳನ ಸಮಿತಿ ಕಾರ್ಯದರ್ಶಿ ರಾಘವೇಂದ್ರ ಹಬೀಬ ಹೇಳಿದರು.

ನಗರದಲ್ಲಿ ಗುರುವಾರ ಸಭೆಯಲ್ಲಿ ಅವರು ಮಾತನಾಡಿ, ಫೆ.28ರಂದು ಮಧ್ಯಾಹ್ನ 3ಕ್ಕೆ ನಗರದ ಮುಳಗುಂದ ರಸ್ತೆಯ ಅಂಬಾಭವಾನಿ ದೇವಸ್ಥಾನದಿಂದ ಬೃಹತ್ ಶೋಭಾಯಾತ್ರೆ ಪ್ರಾರಂಭಗೊಳ್ಳಲಿದ್ದು, ತಾಯಿ ಭಾರತಾಂಬೆಯ ಜೊತೆಯಲ್ಲಿ ಮಹಾಪುರುಷರು ಹಾಗೂ ಸ್ವತಂತ್ರ್ಯ ಹೋರಾಟಗಾರರ ಭಾವಚಿತ್ರಗಳು ಶೋಭಾಯಾತ್ರೆಯಲ್ಲಿ ಇರಲಿವೆ. ಶೋಭಾಯಾತ್ರೆ ಮುಳಗುಂದನಾಕಾ, ತ್ರಿಕೂಟೇಶ್ವರ ದೇವಸ್ಥಾನ, ಜೋಡಮಾರುತಿ ದೇವಸ್ಥಾನ, ಪಟೇಲ ರಸ್ತೆ, ಬಸವೇಶ್ವರ ಸರ್ಕಲ್ ಮೂಲಕ ಸಭಾಸ್ಥಳ ವೀರಶೈವ ಜನರಲ್ ಲೈಬ್ರರಿ ಬಳಿ ಸಮಾರೋಪಗೊಳ್ಳಲಿದೆ. ನಂತರ ಸಂಜೆ 6ಕ್ಕೆ ಜರುಗುವ ಹಿಂದೂ ಸಮಾಜೋತ್ಸವ ವೇದಿಕೆ ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು ಪಾಲ್ಗೊಳ್ಳಲಿದ್ದು, ದಿಕ್ಸೂಚಿ ಭಾಷಣವನ್ನು ಜಗದೀಶ ಕಾರಂತ ಮಾಡಲಿದ್ದಾರೆ ಎಂದರು.

ಸಮಗ್ರ ಭಾರತ ನಿರ್ಮಾಣ

ಇತ್ತೀಚಿನ ದಿನಗಳಲ್ಲಿ ಹಿಂದೂಗಳನ್ನು ವಿರೋಧಿಸುವ ಮತ್ತು ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ. ಸಮಸ್ತ ಹಿಂದೂಗಳು ನಾವೆಲ್ಲ ಒಂದು ಎಂದಾದಾಗ ಸದೃಢ, ಸಮಗ್ರ ಭಾರತ ನಿರ್ಮಾಣ ಸಾಧ್ಯವಾಗಲಿದ್ದು, ಸಮಾವೇಶ ಇದಕ್ಕೆ ಪೂರಕವಾಗಲಿದೆ ಎಂದು ಶಿವಾನಂದ ಉಪನಗರ ಹಿಂದೂ ಸಮ್ಮೇಳನ ಸಮಿತಿ ಕಾರ್ಯದರ್ಶಿ ರಾಘವೇಂದ್ರ ಹಬೀಬ ಹೇಳಿದರು.

> ಹಿಂದೂ ಸಮಾಜೋತ್ಸವ ಭವ್ಯ ಶೋಭಾಯಾತ್ರೆಯಲ್ಲಿ ಸಹಕುಟುಂಬ ಪರಿವಾರದೊಡನೆ ಹಾಗೂ ಸಾಂಸ್ಕೃತಿಕ ಉಡುಗೆ ತೊಡುಗೆ ತೊಟ್ಟು ಸುಮಾರು 500ಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಳ್ಳಲಿದ್ದು, ಚಿಕ್ಕಮಕ್ಕಳು, ಸ್ವಾತಂತ್ರ್ಯ ಹೋರಾಟಗಾರರು ಮಹಾಪುರುಷರ ವೇಷಭೂಷಣ ಧರಿಸಿ ಪಾಲ್ಗೊಳ್ಳಲಿದ್ದಾರೆ.
> ■ ಅಶ್ವಿನಿ ಜಗತಾಪ, ಸಮ್ಮೇಳನ ಸಮಿತಿ ಸದಸ್ಯೆ

ಅರುಣ ವೇರ್ಣೇಕರ, ಸೂರಜ ನಾಯ್ಕರ, ರಾಮಚಂದ್ರ ಪಾಲನಕರ, ರತ್ನಾ ಕುರುಗೋಡ, ಅಶ್ವಿನಿ ಜಗತಾಪ ಮುಂತಾದವರಿದ್ದರು.



ವಿದ್ಯಾರ್ಥಿಗಳು ಸಾವಯವ ಕೃಷಿ ಬಗ್ಗೆ ಆಸಕ್ತಿ ವಹಿಸಲಿ: ಬೆಟಗೇರಿ

ಲಕ್ಷ್ಮೇಶ್ವರ: ವಿದ್ಯಾರ್ಥಿಗಳು ಓದಿನ ಜೊತೆಗೆ ಸಾವಯವ ಕೃಷಿ ಬಗ್ಗೆಯು ಹೆಚ್ಚಿನ ಆಸಕ್ತಿ ವಹಿಸಬೇಕು ಎಂದು ರಾಮಗೇರಿ ಗ್ರಾಮದಲ್ಲಿ ಸಾವಯವ ಕೃಷಿಯಲ್ಲಿ ಸಾಧನೆ ಮಾಡಿದ ರೈತ ಮಹೇಂದ್ರ ಬೆಟಗೇರಿ ಹೇಳಿದರು.

ಅವರು ಪಟ್ಟಣದ ದಿ ಯೂನಿಕ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿಗಳು ರಾಮಗೇರಿ ಗ್ರಾಮದ ಮಹೇಂದ್ರ ಬೆಟಗೇರಿ ಅವರ ತೋಟದಲ್ಲಿ ಸಾವಯವ ಕೃಷಿ ಅಧ್ಯಯನ ಪ್ರಾತ್ಯಕ್ಷಿಕೆ ಭೇಟಿ ವೇಳೆ ಮಾತನಾಡಿ, ಜೀವಾಮೃತ, ಬೀಜಾಮೃತ ಭೂಮಿಗೆ ಕೊಡುವುದರಿಂದ ಮಣ್ಣಿನಲ್ಲಿ ಹೆಚ್ಚಿನ ಪೋಷಕಾಂಶಗಳನ್ನು ಹೊಂದಿ ಭೂಮಿಗೆ ಫಲವತ್ತತೆ ಬರುತ್ತದೆ. ಭೂತಾಯಿಯನ್ನು ವಿಷಮುಕ್ತ ಮಾಡುವುದರ ಜತೆಗೆ, ವಿಷ ಮುಕ್ತ ಆಹಾರವನ್ನು ಸೇವನೆ ಮಾಡಬೇಕಾಗಿದೆ. ಸಾವಯವ ಕೃಷಿ ಪದ್ಧತಿಯನ್ನು ರೈತರು ಜಪ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳುಓದಿನೊಂದಿಗೆಬಿಡುವಿನಸಮಯದಲ್ಲಿ ಪಾಲಕರ ಜೊತೆಗೆ ಕೃಷಿಯಲ್ಲಿ ತೊಡಗಿಕೊಂಡು ಕೃಷಿ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳಿಗೆ ಕುರಿಸಾಕಾಣಿಕೆ , ಜೇನು, ದೇಸೀ ಗೋ ತಳಿಗಳ, ಎರೆಹುಳು ಗೊಬ್ಬರ, ಜೈವಿಕಗೊಬ್ಬರ, ಜೈವಿಕ ಅನಿಲ ಉತ್ಪಾದನೆ, ನೈಸರ್ಗಿಕ ವಿಧಾನದಿಂದ ಗಾಣದಿಂದ ಎಣ್ಣೆಉತ್ಪಾದನೆ ಕುರಿತು ಮಾಹಿತಿ ನೀಡಿದರು. ಮುಖ್ಯಶಿಕ್ಷಕ ಅರವಿಂದ ದೇಶಪಾಂಡೆ ಮಾತನಾಡಿ, ವಿದ್ಯಾರ್ಥಿಗಳಿಗೆ ಸಾವಯವ ಕೃಷಿ ಬಗ್ಗೆ ತಿಳಿದುಕೊಳ್ಳಬೇಕು ಎಂಬ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ವಿನಾಯಕ ಘೋರ್ಪಡೆ, ಶಿವಪ್ರಕಾಶ ಗುಡಗೇರಿ ,ಶಶಿಕಾಂತ ಕುಂಬಾರ, ಈರಣ್ಣ ಗಾಣಗೇರ, ಸಿ.ಎಫ್. ಪಾಟೀಲ, ಲಕ್ಷ್ಮಣ ಪೂಜಾರ, ರಾಜು ಅಂಕಲಿ, ಮಂಜುನಾಥ ಗೊರವರ ಇದ್ದರು.



ಫಲಾನುಭವಿಗಳಿಗೆ ಸಕಾಲದಲ್ಲಿ ಸೌಲಭ್ಯ ನೀಡಲು ಮಂದಾಲಿ ಸೂಚನೆ

ಗದಗ: ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ ಯೋಜನೆ, ಯುವನಿಧಿ ಯೋಜನೆ, ಅನ್ನಭಾಗ್ಯ ಯೋಜನೆ, ಗೃಹಜ್ಯೋತಿ ಯೋಜನೆ ಹಾಗೂ ಶಕ್ತಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಅಧ್ಯಕ್ಷ ಅಶೋಕ್ ಮಂದಾಲಿ ಅಧ್ಯಕ್ಷತೆಯಲ್ಲಿ ಜರುಗಿತು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ನಡೆದ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಮಾಸಿಕ ಸಭೆಯಲ್ಲಿ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಯಿತು. ತಾಲೂಕಿನ ಗೃಹಲಕ್ಷ್ಮೀ ಯೋಜನೆ ಅಡಿಯಲ್ಲಿ ಅಕ್ಟೋಬರ್‌ನಿಂದ ನವೆಂಬರ್ 2025ರವರೆಗೆ 79605 ಅರ್ಜಿಗಳು ನೋಂದಣಿಯಾಗಿದ್ದು, 79179 ಫಲಾನುಭವಿಗಳಿಗೆ ಒಟ್ಟು 31.66 ಕೋಟಿ ರೂ. ಡಿಬಿಟಿ ಮೂಲಕ ಪಾವತಿಸಲಾಗಿದೆ ಎಂದು ತಿಳಿಸಿದರು. ಬಾಕಿ ಇರುವ ಅರ್ಜಿಗಳನ್ನು ಶೀಘ್ರ ಪರಿಶೀಲಿಸಿ ಅರ್ಹರಿಗೆ ಸಕಾಲದಲ್ಲಿ ಹಣ ಬಿಡುಗಡೆ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಯುವನಿಧಿ ಯೋಜನೆಯಡಿಯಲ್ಲಿ ಡಿಸೆಂಬರ್ 2025ರವರೆಗೆ 2,594 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದು, 1,081 ಅರ್ಹ ಫಲಾನುಭವಿಗಳಿಗೆ ಡಿಬಿಟಿ ಮೂಲಕ ಹಣ ವರ್ಗಾವಣೆಯಾಗಿದೆ. ಉಳಿದ 1,513 ಅಭ್ಯರ್ಥಿಗಳು ಯೋಜನೆಯ ಷರತ್ತುಗಳ ಪ್ರಕಾರ ಹಂತ ಹಂತವಾಗಿ ಅರ್ಹರಾಗಲಿದ್ದಾರೆ ಎಂದರು. ನೋಂದಾಯಿತ ಯುವಕರಿಗೆ ಮಾರ್ಗದರ್ಶನ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಸದಸ್ಯ ಈಶ್ವರ ಹುಣಸಿಕಟ್ಟಿ, ಶರೀಫ ಬಿಳೆಯಲಿ, ತಾಲೂಕು ಮಟ್ಟದ ಗ್ಯಾರಂಟಿ ಸಮಿತಿಯ ಸದಸ್ಯ ಸಾವಿತ್ರಿ ಹೂಗಾರ, ಸಂಗು ಕರಕಲಮಟ್ಟಿ, ಸಂಗಮೇಶ ಹಾದಿಮನಿ, ರಮೇಶ್ ಹೊನ್ನಿಕಾಯ್ಕರ, ದೇವರಡ್ಡಿ ತಿರ್ಲಾಪುರ, ಗಣೇಶ್ ಸಿಂಗ್ ಮಿಟಾಡೆ, ಮಲ್ಲಪ್ಪ ಬಾರಕೇರ, ಭಾಷಾ ಮಲ್ಲಸಮುದ್ರ, ಮಲ್ಲಯ್ಯ ಕೊರವನವರ ಇದ್ದರು.



ಬಿಜೆಪಿ ಕಾರ್ಯಕರ್ತರಿಂದ ವಿಶೇಷ ಪೂಜೆ



ಲಕ್ಷ್ಮೇಶ್ವರ: ಷಡ್ಯಂತ್ರದ ಮೂಲಕ ಶಾಸಕ ಡಾ.ಚಂದ್ರು ಲಮಾಣಿ ಅವರನ್ನು ಲೋಕಾ ಬಲೆಗೆ ಸಿಲುಕಿದ್ದು, ಅವರು ಪ್ರಾಮಾಣಿಕರಾಗಿದ್ದು, ದೋಷಮುಕ್ತರಾಗಿ ಹೊರಬರುವ ವಿಶ್ವಾಸವನ್ನು ಕಾರ್ಯಕರ್ತರು ಹೊಂದಿದ್ದೇವೆ ಎಂದು ಶಿರಹಟ್ಟಿ ಪ.ಪಂ.ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ನಾಗರಾಜ ಲಕ್ಕುಂಡಿ ಹೇಳಿದರು.

ಬುಧವಾರ ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ಲೋಕಾ ಬಲೆಗೆ ಸಿಲುಕಿರುವ ಶಾಸಕ ಡಾ.ಚಂದ್ರು ಲಮಾಣಿ ದೋಷ ಮುಕ್ತರಾಗಿ ಹೊರಬರಲೆಂದು ಪ್ರಾರ್ಥಿಸಿ ಬಿಜೆಪಿ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿ ನಂತರ ಮಾತನಾಡಿದರು. ಈ ಭಾಗದಲ್ಲಿ ಉತ್ತಮ ಕಾರ್ಯ ಮಾಡುತ್ತಾ ಜನಪರ ಕಾಳಜಿ ಹೊಂದಿದ್ದ ಶಾಸಕ ಡಾ.ಚಂದ್ರು ಲಮಾಣಿ ಅವರನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಲೋಕಾಯುಕ್ತರ ಬಲೆಗೆ ಸಿಲುಕುವಂತೆ ಮಾಡಿರುವದು ಖೇದಕರ ಸಂಗತಿ. ಈ ಕುರಿತು ಕಾನೂನಿನ ಹೋರಾಟ ಮಾಡಲಾಗುವುದು. ಶಾಸಕರು ತಮಗೆ ಬಂದಿರುವ ಕಳಂಕವನ್ನು ತೊಳೆದು ಮತ್ತೆ ಎಂದಿನಂತೆ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿ ಎಂದು ದೇವರಿಗೆ ಕಾರ್ಯಕರ್ತರು ಪ್ರಾರ್ಥಿಸಿದ್ದೇವೆ ಎಂದರು.

ಇಂದು ರಾಜ್ಯಮಟ್ಟದ ಪ್ರತಿಭಟನೆ

ನರಗುಂದ: ಫೆ.27ರಂದು ಬೆಂಗಳೂರಿನಲ್ಲಿ ನಡೆಯಲಿರುವ ರಾಜ್ಯಮಟ್ಟದ ಪ್ರತಿಭಟನೆಯಲ್ಲಿ ಭಾಗಿಯಾಗಲು ಮತ್ತು ಕಳೆದ ಬಜೆಟ್‌ನಲ್ಲಿ ಘೋಷಿಸಿದ ಭರವಸೆಯಂತೆ ಮುಖ್ಯಮಂತ್ರಿಗಳು ಮಾಸಿಕ 10 ಸಾವಿರ ರೂ.ಗಳನ್ನು ನೀಡುವ ಆದೇಶವಾಗಬೇಕೆಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ನರಗುಂದ ಘಟಕದ ಅಧ್ಯಕ್ಷೆ ಶೋಭಾ ಮಲ್ಲನಗೌಡ್ರ ಆಗ್ರಹಿಸಿದರು.

ಗುರುವಾರದಂದು ತಾಲೂಕು ಆರೋಗ್ಯಾಧಿಕಾರಿಗಳಿಗೆ ಮನವಿ ಅರ್ಪಿಸಿ ಮಾತನಾಡಿ, ಮಾರ್ಚ್‌ನಲ್ಲಿ ನಡೆಯಲಿರುವ ಬಜೆಟ್‌ನಲ್ಲಿ ಕಳೆದ ಜನವರಿ 2025ರಲ್ಲಿ ನಡೆದ ಆಶಾ ಕಾರ್ಯಕರ್ತೆಯರ ಅನಿರ್ದಿಷ್ಟಾವಧಿ ಹೋರಾಟದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಘೋಷಿಸಿದ ಮಾಸಿಕ ರೂ.10,000 ನೀಡುವ ಆದೇಶವಾಗಬೇಕು. ಕೇಂದ್ರದ ಮಾರ್ಗಸೂಚಿ ಉಲ್ಲಂಘಿಸಿ, ತರ್ಕಬದ್ಧಗೊಳಿಸುವ ಹೆಸರಿನಲ್ಲಿ ಅಂದಾಜು 7000 ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆದು ಹಾಕುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿ ಈ ಹೋರಾಟದಲ್ಲಿ ಭಾಗಿಯಾಗುತ್ತೇವೆ. ತಾಲೂಕಿನ ಎಲ್ಲಾ ಪಿಎಚ್‌ಸಿಯ ಆಶಾ ಕಾರ್ಯಕರ್ತೆಯರು ಹೋರಾಟದಲ್ಲಿ ಪಾಲ್ಗೊಳ್ಳುತ್ತೇವೆ ಎಂದರು. ಶೋಭಾ ಮಲ್ಲನಗೌಡ್ರ, ರತ್ನಾ ತಳವಾರ, ವಿಜಯಲಕ್ಷ್ಮೀ ಶಲವಡಿ, ಉಮಾ ಹೂಗಾರ, ಜಯಶ್ರೀ ಬೊಂಬಲೆ, ರಾಜಬೀ ಲಾಡಿ, ಕವಿತಾ ಬಡಿಗೇರ, ನಾಗರತ್ನ ಹಿರೇಗೌಡ್ರ, ಮಂಜುಳಾ ಚಾಲಿಕಟ್ಟಿ, ರೇಣುಕಾ ಕಡ್ಲಿಕೊಪ್ಪ, ಶಾಂತಾ ಪಾಟೀಲ ಇತರರಿದ್ದರು.



ನೀರು ಪೂರೈಕೆಗೆ ಆಗ್ರಹಿಸಿ ಮನವಿ



ಲಕ್ಷ್ಮೇಶ್ವರ: ಪಟ್ಟಣದ ಬಸ್ತಿಬಣದಲ್ಲಿನ ಉಮಚಗಿಯವರ ಓಣಿ, ಕೌಲಪೇಟೆ ಓಣಿಗಳಲ್ಲಿ ಕಳೆದ ಎಂಟು ದಿನಗಳಿಂದ ಕೊಳವೆ ಬಾವಿ ನೀರು ಪೂರೈಕೆ ಆಗಿಲ್ಲ, ಇದರಿಂದಾಗಿ ಇಲ್ಲಿನ ನಿವಾಸಿಗಳಿಗೆ ನೀರಿನ ಹಾಹಾಕಾರ ಉಂಟಾಗಿದ್ದು ಬೇಗನೇ ನೀರು ಪೂರೈಸಲು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿ ಗುರುವಾರ ನಿವಾಸಿಗಳು ಪುರಸಭೆ ವ್ಯವಸ್ಥಾಪಕಿ ಮಂಜುಳ ಹೂಗಾರ ಅವರಿಗೆ ಮನವಿ ಸಲ್ಲಿಸಿದರು. ನದಿ ನೀರು ತಿಂಗಳಿಗೊಮ್ಮೆ ಪೂರೈಕೆ ಆಗುತ್ತಿದೆ. ಹೀಗಾಗಿ ಉಳಿದ ದಿನಗಳಲ್ಲಿ ನಾವು ಕೊಳವೆ ಬಾವಿ ನೀರೇ ನಮಗೆ ಗತಿ. ಆದರೆ ಎಂಟು ದಿನಗಳಿಂದ ಆ ನೀರೂ ಕೂಡ ಪೂರೈಕೆ ಆಗುತ್ತಿಲ್ಲ, ದನ ಕರುಗಳಿಗೆ ನೀರು ಕುಡಿಸಲೂ ಸಹ ತೊಂದರೆ ಆಗಿದೆ. ಕಾರಣ ಬೇಗನೇ ನೀರು ಪೂರೈಸಬೇಕು. ಓಣಿಯಲ್ಲಿನ ಚರಂಡಿಗಳನ್ನು ಸ್ವಚ್ಛ ಮಾಡಿಲ್ಲ, ಹೀಗಾಗಿ ಓಣಿ ತುಂಬ ಹೊಲಸು ವಾಸನೆ ತುಂಬಿದೆ. ಆದಷ್ಟು ಬೇಗನೇ ಪುರಸಭೆ ಚರಂಡಿಗಳನ್ನು ಸ್ವಚ್ಛ ಮಾಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ನೀರಾಲೋಟಿ, ಪರಮೇಶ ಹತ್ತಿಕಟ್ಟಿ, ಅಶೋಕ ಹೊಂಗಲ, ನಾಗರಾಜ ಅಂಬಲಿ, ಮಲ್ಲಪ್ಪ ಉಮಚಗಿ, ಅಕ್ಷಯ್ ಓದುನವರ ಸೇರಿದಂತೆ ಮತ್ತಿತರರಿದ್ದರು.

ರಸ್ತೆ ಹಂಪ್‌ಗಳಿಗೆ ಬಣ್ಣ ಹಚ್ಚಿದ ಯುವಕರು

ಲಕ್ಷ್ಮೇಶ್ವರ: ತಾಲೂಕಿನ ಹರದಗಟ್ಟಿ ಗ್ರಾಮದ ರಸ್ತೆಗೆ ವಾಹನ ವೇಗ ನಿಯಂತ್ರಣಕ್ಕಾಗಿ ಹಂಪ್ ಗಳನ್ನು ಹಾಕಿದ್ದರು. ಆದರೆ ರಾತ್ರಿ ವೇಳೆಯಲ್ಲಿ ಸವಾರರಿಗೆ ಸರಿಯಾಗಿ ಕಾಣದೆ , ಅನೇಕ ಬಾರಿ ಅಪಘಾತ ಸಂಭವಿಸಿದನ್ನು ಅರಿತು, ಸುಗಮವಾಗಿ ಸಂಚರಿಸಲು ತೊಂದರೆಯಾಗಿದ್ದರಿಂದ ಗ್ರಾಮದ ಯುವಕರೇ ಸೇರಿ ಶ್ರಮದಾನದ ಮೂಲಕ ರಸ್ತೆಯ ಹಂಪ್ ಗಳಿಗೆ ತಮ್ಮದೇ ಕರ್ಚಿನಲ್ಲಿ ಬಿಳಿ ಬಣ್ಣ ತಂದು ಹಚ್ಚಿದ್ದಾರೆ.

ಲಕ್ಷ್ಮೇಶ್ವರದಿಂದ - ಹರದಗಟ್ಟಿ ಗ್ರಾಮಕ್ಕೆ ಹೋಗುವ ರಸ್ತೆಗೆ ಕಳೆದ ನಾಲ್ಕು ತಿಂಗಳ ಹಿಂದೆ ಹಾಕಿದ ರೋಡ್ ಬ್ರೇಕ್ (ಹಂಪ್) ಗಳು ನಾಮಕವಾಸ್ತೆ ಆಗಿವೆ ಬಣ್ಣಗಳು ಹೋಗಿವೆ, ರಾತ್ರಿ ವೇಳೆ ವಾಹನ ಸವಾರರಿಗೆ ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ಹಂಪ್ ಗಳು ಕಾಣದೆ ಆಟೋ ರಿಕ್ಷಾ, ಬೈಕ್ ಮತ್ತಿತರ ವಾಹನಗಳ ಪಲ್ಟಿಯಾಗಿ ಹಲವು ಜನರು ನೋವು ಅನುಭವಿಸಿದ್ದರು. ಹಲವು ತಿರುವುಗಳು ಇರುವದರಿಂದ ಅಪಘಾತ ಹೆಚ್ಚು, ಇದನ್ನು ಅರಿತ ಊರಿನ ಯುವಕರು ತಮ್ಮ ಸ್ವಂತ ಖರ್ಚಿನಿಂದ ಬಣ್ಣಗಳು ತಂದು ತಾವೇ ಖುದ್ದಾಗಿ ರಸ್ತೆಯ ಹೊಂಡಕ್ಕೆ ಉತ್ತಮ ರೀತಿಯಲ್ಲಿ ವ್ಯವಸ್ಥಿತವಾಗಿ ಬಣ್ಣ ಹಚ್ಚಿ ಸದ್ಯಕ್ಕೆ ವಾಹನಗಳು ಸುಗಮವಾಗಿ ಓಡಾಡಲು ಅನುಕೂಲ ಮಾಡಿಕೊಟ್ಟಿದ್ದಾರೆ. ಜಗದೀಶ ಲಮಾಣಿ, ರೋಹನ ಲಮಾಣಿ, ಬಸವರಾಜ ಲಮಾಣಿ, ಪರಮೇಶ ಲಮಾಣಿ, ಶಿವಕುಮಾರ ತಳವಾರ, ಸಾಯಿನಾಥ ನಾಯಕ, ಮುತ್ತು ಲಮಾಣಿ ಮತ್ತಿತರರಿದ್ದರು.



ಕಿರುಸುದ್ದಿ

ಕಾಳಿ ನದಿ ತೀರದಲ್ಲಿ ಎಮ್ಮೆಯ ಮೇಲೆ ಮೊಸಳೆ ದಾಳಿ

◆ **ದಾಂಡೇಲಿ:** ನಗರದ ಹಳಿಯಾಳ ರಸ್ತೆಯ 3ನಂ ಗೇಟ್ ವಿನಾಯಕ ನಗರದ ಹತ್ತಿರದ ಕಾಳಿ ನದಿಯಲ್ಲಿ ಎಮ್ಮೆಯ ಮೇಲೆ ಮೊಸಳೆಯೊಂದು ದಾಳಿ ಮಾಡಿ ಗಂಭೀರ ಗಾಯಗೊಳಿಸಿದ ಘಟನೆ ಗುರುವಾರ ನಡೆದಿದೆ. ಎಮ್ಮೆಯ ಮೇಲೆ ದಾಳಿ ಮಾಡುತ್ತಿದ್ದಂತೆಯೇ ಅಲ್ಲೆ ಇದ್ದ ಸ್ಥಳೀಯರು ಬೊಬ್ಬೆ ಹಾಕಿದಾಗ ಮೊಸಳೆ ಎಮ್ಮೆಯನ್ನು ಬಿಟ್ಟು ಹೋಗಿದೆ ಎಮ್ಮೆಯ ಕೈಗೆ ಮತ್ತು ಕಾಲಿಗೆ ಗಂಭೀರ ಸ್ವರೂಪದ ಗಾಯವಾಗಿದೆ. ತಕ್ಷಣವೇ ಮಾಜಿ ನಗರ ಸಭಾಧ್ಯಕ್ಷೆ ಹಾಗೂ ನಿಕಟಪೂರ್ವ ಸದಸ್ಯೆ ಸರಸ್ವತಿ ರಜಪೂತ್ ಅವರು ನಗರ ಸಭೆಗೆ ಮಾಹಿತಿಯನ್ನು ನೀಡಿದ್ದಾರೆ. ನಗರ ಸಭೆಯ ಪೌರಕಾರ್ಮಿಕರು ಸ್ಥಳಕ್ಕೆ ಆಗಮಿಸಿ ಗಾಯಗೊಂಡ ಎಮ್ಮೆಯನ್ನು ಸ್ಥಳೀಯರ ಸಹಕಾರದಲ್ಲಿ ಆರೈಕೆ ಮಾಡಿ, ಸುಭಾಷ್ ನಗರದ ಪ್ರಸನ್ನ ಆಂಜನೇಯ ದೇವಸ್ಥಾನದ ಆವರಣದಲ್ಲಿ ಸ್ಥಳೀಯ ಗೋ ರಕ್ಷಕರ ಆರೈಕೆಯಲ್ಲಿರುವ ಜಾನುವಾರುಗಳ ಜೊತೆ ಬಿಟ್ಟು ಬಂದಿದ್ದಾರೆ. ಇದೀಗ ಗೋರಕ್ಷಕರಾದ ಶ್ರೀನಾಥ ಪಾಸಲ್ಕರ, ಸಚಿನ್ ದೊಂಡ್ವಾಡೆ, ಭವ್ ಭಜಂತ್ರಿ, ಸಂಚಿತ್, ರೋಹಿತ್, ಪ್ರಕಾಶ್, ಸಂತೋಷ ಬುಲುಬುಲೆ, ಪವನ್ ಬುಲುಬುಲೆ, ಕಾರ್ತಿಕ ಗಡೆಪ್ಪನವರ, ಗಗನ್ ಅವರ ತಂಡ ಈ ಎಮ್ಮೆಗೆ ಆರೈಕೆಯನ್ನು ಮಾಡುತ್ತಿದ್ದು, ಚಿಕಿತ್ಸೆಗಾಗಿ ಪಶುವೈದ್ಯ ಇಲಾಖೆಗೆ ಮಾಹಿತಿ ನೀಡಿ, ಪಶುವೈದ್ಯರನ್ನು ಸ್ಥಳಕ್ಕೆ ಕರೆಸಿ ಚಿಕಿತ್ಸೆ ಕೊಡಿಸಿದ್ದಾರೆ.

ಪೋಕ್ಸೋ ಪ್ರಕರಣ ದಾಖಲು

◆ **ಕನಕಗಿರಿ:** ತಾಲೂಕಿನ ವಸತಿ ನಿಲಯವೊಂದರಲ್ಲಿ ಓದುತ್ತಿದ್ದ ವಿದ್ಯಾರ್ಥಿನಿಯ ಹಾಸ್ಟೆಲ್‌ನಲ್ಲಿಯೇ ಹೆರಿಗೆಯಾಗಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವನ ಮೇಲೆ ಸ್ಥಳೀಯ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿದೆ. ವಿಜಯನಗರ ಜಿಲ್ಲೆಯ ಅಲ್ತಾಫ್ ಎನ್ನುವಾತ ವಿದ್ಯಾರ್ಥಿನಿಯನ್ನು ಲೈಂಗಿಕವಾಗಿ ಬಳಸಿಕೊಂಡಿರುವುದಿಂದ ಬಾಲಕಿ ಗರ್ಭವತಿಯಾಗಿದ್ದಾಳೆ. ವಿದ್ಯಾರ್ಥಿನಿ ಹಾಗೂ ಆರೋಪಿ ಅಲ್ತಾಫ್ (21) ನಡುವೆ ವಿವಾಹ ನಿಗದಿಯಾಗಿತ್ತು ಎನ್ನಲಾಗಿದ್ದು, ಆರೋಪಿಯು ಮದುವೆಗೂ ಮುನ್ನ ವಿದ್ಯಾರ್ಥಿನಿಯನ್ನು ಲೈಂಗಿಕವಾಗಿ ಬಳಸಿಕೊಂಡಿರುವುದು ವಿಚಾರಣೆ ಬಳಿಕ ಪೊಲೀಸರಿಗೆ ಗೊತ್ತಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮದುವೆ ಆಮಿಷವೊಡ್ಡಿದ್ದ ಸೋದರಮಾವ ಅಲ್ತಾಫ್ ಅಕ್ಟೋಬರ್‌ನಲ್ಲಿಯೇ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದನು. ಅಲ್ತಾಫ್ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ದೂರಿನಲ್ಲಿ ಮದುವೆ ಆಗುವುದಾಗಿ ದೈಹಿಕ ಸಂಪರ್ಕ ಬೆಳೆಸಿದ್ದೇನೆಂದು ಉಲ್ಲೇಖವಾಗಿದೆ. ಈ ವಿಚಾರ ಯಾರಿಗೂ ಹೇಳದಂತೆ ಬೆದರಿಕೆ ಹಾಕಿದ್ದಾನೆ ಎಂದು ಬಾಲಕಿ ದೂರಿನಲ್ಲಿ ಉಲ್ಲೇಖಿಸಿದ್ದಾಳೆ. ಕನಕಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

5.60 ಲಕ್ಷ ರೂ. ಮೌಲ್ಯದ ಆಭರಣ ದೋಚಿ ಪರಾರಿ

◆ **ಹುಬ್ಬಳ್ಳಿ:** ದೇವರಗುಡಿಹಾಳದಿಂದ ರೇವಡಿಹಾಳಕ್ಕೆ ಹೋಗುವ ರಸ್ತೆ ಹತ್ತಿರ ಹೋಗುತ್ತಿದ್ದವರಿಗೆ ದುಷ್ಕರ್ಮಿಗಳು ಚಾಕು ತೋರಿಸಿ 5.60 ಲಕ್ಷ ರೂ. ಮೌಲ್ಯದ ಆಭರಣ ಹಾಗೂ 4500 ರೂ. ದೋಚಿಕೊಂಡು ಹೋದ ಘಟನೆ ನಡೆದಿದೆ. ನಗರದ ಸಂಪತ್ ಕಠಾರೆ ಎಂಬುವರಿಗೆ ಬೆದರಿಸಿ ಹಣ ದೋಚಲಾಗಿದೆ. ಕಾರು ನಿಲ್ಲಿಸಿಕೊಂಡು ನಿಂತಾಗ ಹತ್ತಿರ ಬಂದ ಅಪರಿಚಿತರು, ಚಾಕು ತೋರಿಸಿ 35 ಗ್ರಾಂ ಬಂಗಾರ, ಹಣ ದೋಚಿಕೊಂಡು ಹೋಗಿದ್ದಾರೆ. ಈ ಕುರಿತು ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

20 ಲಕ್ಷ ವಂಚನೆ: ವ್ಯಕ್ತಿಯೊಬ್ಬರಿಗೆ ಷೇರು ಖರೀದಿ ಮಾಡಿದರೆ ಹೆಚ್ಚು ಲಾಭ ಗಳಿಸಬಹುದು ಎಂದು ನಂಬಿಸಿದ ಅಪರಿಚಿತರು 20.65 ಲಕ್ಷ ರೂ.ವಂಚಿಸಿದ್ದಾರೆ. ನಗರದ ಅಶೋಕ ಆರ್. ಎಂಬುವರಿಗೆ ಅಪರಿಚಿತರು ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಿಸಿ, ವಿವಿಧ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಸಿ ಹಣ ವರ್ಗಾಯಿಸಿಕೊಂಡು ಮೋಸ ಮಾಡಿದ್ದಾರೆ. ಈ ಕುರಿತು ಸೈಬರ್ ಕ್ರೈ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ರಕರ್ತೆ ತನುಜಾ ನಾಯಕಗೆ ಅವ್ವ ಪ್ರಶಸ್ತಿ ಪ್ರದಾನ

ತಾಯಿ ಪ್ರೀತಿಗೆ ಬೆಲೆ ಕಟ್ಟಲಾಗದು: ಹೊರಟ್ಟಿ

◆ **ಗದಗ:** ತಾಯಿ ಪ್ರೀತಿಗೆ ಬೆಲೆ ಕಟ್ಟಲಾಗದು. ಹೀಗಾಗಿ ಪ್ರತಿಯೊಬ್ಬರೂ ತಮ್ಮ ತಂದೆ-ತಾಯಿಯನ್ನು ಪ್ರೀತಿ, ವಾತ್ಸಲ್ಯದಿಂದ ನೋಡಿಕೊಳ್ಳಿ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದ ಗಂಗೋತ್ರಿ ಆವರಣದಲ್ಲಿರುವ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದ ಸಭಾಂಗಣದಲ್ಲಿ ಗುರುವಾರ ನಡೆದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕದಲ್ಲಿ ಅವ್ವ ಸೇವಾ ಟ್ರಸ್ಟ್ ಮಾತೋಶ್ರೀ ಗಂಗವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ರಾಜ್ಯ ಮಟ್ಟದಲ್ಲಿ ಮಹಿಳಾ ಪತ್ರಕರ್ತರಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಸ್ಥಾಪಿಸಿರುವ ದತ್ತಿ ನಿಧಿ ಪ್ರಶಸ್ತಿ ಪ್ರದಾನ ಹಾಗೂ ಗ್ರಾಮೀಣಾಭಿವೃದ್ಧಿಯಲ್ಲಿ ಪತ್ರಿಕೋದ್ಯಮದ ಪಾತ್ರ ಕುರಿತು ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪತ್ರಕರ್ತರು ಪತ್ರಿಕೆಗಳ ಮೂಲಕ ಸಮಾಜದಲ್ಲಿ ಪರಿಣಾಮ ಬೀರುತ್ತಾರೆ. ಹೀಗಾಗಿ ಪತ್ರಿಕೆಗಳ ವರದಿ, ಮಾಹಿತಿ ಹಾಗೂ ಸಮಾಜದಲ್ಲಿ ಅತ್ಯುತ್ತಮ ಸೇವೆ ಮಾಡಿದವರನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತಿದೆ. ಇದಕ್ಕೊಂದು ಪ್ರತ್ಯೇಕ ಸಮಿತಿ ರಚಿಸಿದ್ದೇವೆ. ನಮ್ಮ ತಾಯಿಯ ಸ್ಮರಣೆಯ ಹಿನ್ನೆಲೆಯಲ್ಲಿ ಪ್ರತಿವರ್ಷ ಸಾಧಕರಿಗೆ ಪ್ರಶಸ್ತಿ ನೀಡಲಾಗುತ್ತಿದೆ ಎಂದರು.

ಪ್ರಶಸ್ತಿ ಪ್ರದಾನ ಮಾಡಿದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ ಮಾತನಾಡಿ, ಅವ್ವನ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ರಾಜ್ಯಕ್ಕೆ ಮಾದರಿಯಾಗಿದೆ. ಎಷ್ಟೇ ದೊಡ್ಡ ಸ್ಥಾನಕ್ಕೇರಲಿ ತಾಯಿಗಿಂತ ದೊಡ್ಡದು ಯಾವುದೂ ಇಲ್ಲ. 'ಅವ್ವ' ನಮ್ಮೆಲ್ಲರ ಸಾಧನೆ, ಯಶಸ್ಸಿಗೆ ಸ್ಫೂರ್ತಿ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾರ್ಯನಿರತ ಪತ್ರಕರ್ತರ ಸಂಘದಜಿಲ್ಲಾಧ್ಯಕ್ಷರಾಜುಹೆಬ್ಬಳ್ಳಿಮಾತನಾಡಿದರು. ಕುಲಸಚಿವ ಪ್ರೊ.ಸುರೇಶ ನಾಡಗೌಡರ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ನಿಂಗಪ್ಪ ಚಾವಡಿ, ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಬಿ.ಬಿ.ಅಸೂಟಿ, ಅವ್ವ ಸೇವಾ ಟ್ರಸ್ಟ್ ಜಿಲ್ಲಾ ಸಂಚಾಲಕ ಬಸವರಾಜ ಧಾರವಾಡ, ಜಿಲ್ಲಾ ವಾರ್ತಾಧಿಕಾರಿ ವಸಂತ ಮಡ್ಲೂರು, ಕಾ.ನಿ.ಪ ಸಂಘದ ರಾಜ್ಯ ಕಾರ್ಯಕಾರಣಿ ಸದಸ್ಯ ಅರುಣಕುಮಾರ ಹಿರೇಮಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶರಣು ದೊಡ್ಡೂರ ಇದ್ದರು.



'ಅವ್ವ ದತ್ತಿ ನಿಧಿ' ಪ್ರಶಸ್ತಿ

ಹುಬ್ಬಳ್ಳಿಯ ಅವ್ವ ಸೇವಾ ಟ್ರಸ್ಟ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಸ್ಥಾಪಿಸಿರುವ ದತ್ತಿ ನಿಧಿಯ 2025-26ನೇ ಸಾಲಿನ ಪ್ರಶಸ್ತಿಗೆ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಹಿರಿಯ ಉಪಸಂಪಾದಕಿ ತನುಜಾ ನಾಯಕ ಅವರಿಗೆ ನೀಡಿ, ಗೌರವಿಸಲಾಯಿತು.

> ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗದಗ ಜಿಲ್ಲಾ ಘಟಕದ ಪತ್ರಿಕಾ ಭವನದ ಮೊದಲ ಮಹಡಿಗೆ ಐದು ಲಕ್ಷ ರೂ. ಅನುದಾನ ನೀಡಲಾಗುವುದು.
>
> ■ ಬಸವರಾಜ ಹೊರಟ್ಟಿ, ಸಭಾಪತಿ

ಕಾಶಿ, ಮಥುರಾ ಕ್ಷೇತ್ರದ ಗತವೈಭವ ಮರಳಲಿ

ಪ್ಲೇಸಸ್ ಆಫ್ ವರ್ಶಿಪ್ ಆಕ್ಟ್ ತಿದ್ದುಪಡಿ ಅವಶ್ಯ: ಗುರುಪ್ರಸಾದ ಗೌಡ

◆ **ಹುಬ್ಬಳ್ಳಿ:** 500 ವರ್ಷಗಳ ತಪಸ್ಸಿನ ನಂತರ ಅಯೋಧ್ಯೆಯಲ್ಲಿ ಭವ್ಯ ರಾಮ ಮಂದಿರದ ನಿರ್ಮಾಣವಾಗಿದೆ. ಅದೇ ರೀತಿಯಲ್ಲಿ ಕಾಶಿ ವಿಶ್ವನಾಥ ಮತ್ತು ಮಥುರಾ ಕ್ಷೇತ್ರಗಳ ಪುನರ್ ಸ್ಥಾಪನೆಯಾಗಬೇಕು ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ಸಮನ್ವಯಕರಾದ ಗುರುಪ್ರಸಾದ ಗೌಡ ತಿಳಿಸಿದರು.

ಹಿಂದೂಗಳ ಸಂಘಟನೆ ಮತ್ತು ಹಿಂದೂ ರಾಷ್ಟ್ರದ ಸ್ಥಾಪನೆಯ ಉದ್ದೇಶದೊಂದಿಗೆ ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ನಗರದ ಮಹಾದೇವ ವಿದ್ಯಾಸಂಸ್ಥೆ ಚೈತನ್ಯ ನಗರದಲ್ಲಿ ಬುಧವಾರ ಹಿಂದೂ ರಾಷ್ಟ್ರ-ಜಾಗೃತಿ ಸಭೆಯಲ್ಲಿ ಅವರು ಮಾತನಾಡಿದರು.

ಮೊಘಲರ ಆಳ್ವಿಕೆಯಲ್ಲಿ ನಮ್ಮ ಮಂದಿರಗಳನ್ನು ಕೆಡವಿ ಅಲ್ಲಿ ನಿರ್ಮಾಣ ಮಾಡಿದ್ದ ಮಸೀದಿಗಳ ಸಂರಕ್ಷಣೆ ಮಾಡಲು ಹಾಗೂ ಅಲ್ಪಸಂಖ್ಯಾತರ ಓಲೈಕೆಗಾಗಿ 1991ರಲ್ಲಿ ಪ್ಲೇಸಸ್ ಆಫ್ ವರ್ಶಿಪ್ ಆಕ್ಟ್ ಕಾನೂನು ತಂದು ನಮ್ಮ ಭಾವನೆಗಳಿಗೆ ಧಕ್ಕೆ ಮೂಡಿಸಿದ್ದಾರೆ ಎಂದು ಹೇಳಿದರು. ಹಿಂದೂ ರಾಷ್ಟ್ರ ಸ್ಥಾಪನೆಗಾಗಿ ಹಿಂದೂಗಳು ಜಾತಿ-ಪಂಥ ಮರೆತು ಸಂಘಟಿತರಾಗಬೇಕು. ಕೇವಲ ಭಾಷಣಕ್ಕೆ ಸೀಮಿತವಾಗದೆ, ಪ್ರತಿದಿನ ಒಂದು ಗಂಟೆ ಧರ್ಮ ಕಾರ್ಯಕ್ಕಾಗಿ ಸಮಯ ಮೀಸಲಿಡಿ. ಹಿಂದೂ ದೇವಸ್ಥಾನಗಳ ಸರಕಾರೀಕರಣ, ದೇಶದಲ್ಲಿ ವಕ್ಫ್ ಕಾನೂನಿನ ದುರ್ಬಳಕೆ, ಲವ್ ಜಿಹಾದ್, ಹಲಾಲ್ ಜಿಹಾದ್, ಬಲವಂತದ ಮತಾಂತರದ ಮೂಲಕ ಹಿಂದೂ ಸಮಾಜದ ಮೇಲೆ ಆಘಾತಗಳು ಹೆಚ್ಚುತ್ತಿವೆ.

ಹಿಂದೂ ದೇವಸ್ಥಾನಗಳ ರಕ್ಷಣೆ, ಧಾರ್ಮಿಕ ಸ್ವಾತಂತ್ರ್ಯ, ಸಾಂಸ್ಕೃತಿಕ ಮೌಲ್ಯಗಳ ಸಂರಕ್ಷಣೆಗಾಗಿ ಈ ದೇಶವನ್ನು ಹಿಂದೂ ರಾಷ್ಟ್ರವನ್ನಾಗಿ ಘೋಷಿಸುವುದಕ್ಕಾಗಿ ಮತ್ತು ಛತ್ರಪತಿ ಶಿವಾಜಿ ಮಹಾರಾಜರ 'ಹಿಂದವಿ ಸ್ವರಾಜ್ಯ'ದ ಸಂಕಲ್ಪದೊಂದಿಗೆ ಹಿಂದೂ ರಾಷ್ಟ್ರದ ನಿರ್ಮಾಣ ಯಜ್ಞದಲ್ಲಿ ಕೈಜೋಡಿಸಿ ಎಂದು ಮನವಿ ಮಾಡಿದರು. ಹಿಂದೂ ಮುಖಂಡ ಭಾಸ್ಕರ ಜೀತೂರಿ ಮಾತನಾಡಿದರು. ಸೌಮ್ಯಾ ಉಪ್ಪಿನ ನಿರೂಪಿಸಿದರು. ಹಿಂದೂ ಜನಜಾಗೃತಿ ಸಮಿತಿಯ ರಾಜು ಧರೆಯಣ್ಣನವರ ಪರಿಚಯ ಮತ್ತು ಕಾರ್ಯಕ್ರಮದ ಉದ್ದೇಶ ತಿಳಿಸಿದರು. 100ಕ್ಕೂ ಅಧಿಕ ಹಿಂದೂ ಬಾಂಧವರು ಪಾಲ್ಗೊಂಡಿದ್ದರು.



ಕೃಷ್ಣಾ ನದಿಗೆ ನೀರು ಬಿಡಲು ಒತ್ತಾಯ

ಮಹಾ ಸರ್ಕಾರಕ್ಕೆ ಶೀಘ್ರ ನಿಯೋಗ: ಕಾಗೆ



◆ **ಕಾಗವಾಡ:** ಕೃಷ್ಣಾ ನದಿ ಬತ್ತುವ ಭೀತಿಯಿದ್ದು, ಮಹಾರಾಷ್ಟ್ರ ಸರ್ಕಾರಕ್ಕೆ ಕರ್ನಾಟಕದ ಕೃಷ್ಣಾ ನದಿ ಪಾತ್ರದ ಚಿಕ್ಕೋಡಿ, ಅಥಣಿ, ಕಾಗವಾಡ, ರಾಯಬಾಗ, ಕುಡಚಿ ಜಮಖಂಡಿ ಮತಕ್ಷೇತ್ರದ ಶಾಸಕರು ಹಾಗೂ ಸಂಸದರು ಸೇರಿ ಮಹಾರಾಷ್ಟ್ರ ಸರ್ಕಾರಕ್ಕೆ ಕೃಷ್ಣಾ ನದಿಗೆ ನೀರು ಬಿಡುವಂತೆ ನಿಯೋಗದೊಂದಿಗೆ ಭೇಟಿ ಮಾಡಿ ಒತ್ತಾಯಿಸಲಿದ್ದೇವೆ ಎಂದು ಶಾಸಕ ರಾಜು ಕಾಗೆ ಹೇಳಿದರು.

ಅವರು ಕಾಗವಾಡ ಮತಕ್ಷೇತ್ರದ ಮಧಭಾವಿ ಕಲ್ಲೂತ್ತಿ ಹಣಮಾಪುರ, ನಾಗನೂರ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ಸಲ್ಲಿಸಿ ಮಾಧ್ಯಮಗಳಿಗೆಪ್ರತಿಕ್ರಿಯೆನೀಡಿದಅವರು, ಈಗಾಗಲೇ ಕಾಗವಾಡ ಮತಕ್ಷೇತ್ರದಲ್ಲಿ ಜನರ ಆರೋಗ್ಯ ದೃಷ್ಟಿಯಿಂದ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನ ಮಂಜೂರು ಮಾಡಿಸಿ ಅವುಗಳಿಗೆ ಹೆಚ್ಚಿನ ಅನುದಾನ ನೀಡಿ ಅಭಿವೃದ್ಧಿ ಪಡಿಸಲಾಗುತ್ತಿದೆ.

ಕೃಷ್ಣಾ ನದಿ ತೀರದ ಸಾವಿರಾರೂ ಎಕರೆ ಸವಳು ಮತ್ತು ಜವಳು ಭೂಮಿಯನ್ನು ಫಲವತ್ತತೆ ಮಾಡಲು ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡದೆ ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನ ನೀಡಿ ಯೋಜನೆ ಸಿದ್ಧಪಡಿಸಿ ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಲಕ್ಷ್ಮಣ ಸವದಿ ನನ್ನ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಕಳೆದ 35 ವರ್ಷಗಳಿಂದ ಉತ್ತಮ ಗೆಳೆತನ ಹೊಂದಿದ್ದು, ನಮ್ಮ ಬೆಂಬಲಿಗರು ಮತ್ತು ಸವದಿ ಬೆಂಬಲಿಗರು ಇಲ್ಲದ ಸಲ್ಲದ ಆರೋಪಗಳನ್ನು ಮಾಡುತ್ತಿದ್ದು, ಅದು ಶುದ್ಧ ಸುಳ್ಳು ಯಾರೂ ಸಹ ಊಹಾಪೋಹಗಳಿಗೆ ಗೊಂದಲಕ್ಕೀಡಾಗಬಾರದು ಎಂದರು.

ಅಭಿಯಂತರ ಮಲ್ಲಿಕಾರ್ಜುನ ಮಗದುಮ್, ತಾಲೂಕು ಆರೋಗ್ಯ ವೈದ್ಯಾಧಿಕಾರಿ ಬಸನಗೌಡ ಕಾಗೆ, ಬಸನಗೌಡ ಪಾಟೀಲ್(ಬಮ್ನಾಳ), ಮಾಧ್ಯಮ ವಕ್ತಾರರಾದ ರಾವಸಾಬ ಐಹೊಳೆ, ಕೃಷ್ಣಾ ಶಿಂಧೆ,ಫಾರುಖ ಅಲಾಸ್ಕರ,ಉದಯ ಅವಳೆ, ಗುತ್ತಿಗೆದಾರರಾದ ರಾಜು ಅಲಬಾಳ ಶಿವಪುತ್ರ ನಾಯಕ,ಸಿದ್ದಾರೂಢ ಸ್ವಾಮಗೌಡ, ಅರ್ಜುನ ನಾಯಕ,ಅಮಸಿದ್ಧ ಮಗಳೂರ, ತಿಪ್ಪಣ್ಣ ಭಜಂತ್ರಿ, ಅನಿಲ ಶಿಂಧೆ, ಬಸನಗೌಡ ಪಾಟೀಲ್, ಸೇರಿದಂತೆ ಇತರರು ಇದ್ದರು.

ಅನುಮಾನಾಸ್ಪದ ವ್ಯಕ್ತಿ ಪೊಲೀಸರಿಗೆ ಒಪ್ಪಿಸಿದ ಸ್ಥಳೀಯರು

◆ **ಅಂಕೋಲಾ:** ತಾಲೂಕಿನ ಅಗ್ರಗೋಣ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ವ್ಯಕ್ತಿಯೋರ್ವನನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಬಿಹಾರಿ ಶೈಲಿಯಲ್ಲಿ ಹಿಂದಿ ಭಾಷೆ ಮಾತನಾಡುತ್ತಿರುವ ಈತ ಮುಖಕ್ಕೆ ಮಾಸ್ಕ್ ಧರಿಸಿ ಅರಣ್ಯ ಪ್ರದೇಶದ ಬಳಿ ಅವಿತು ಕುಳಿತಿರುವುದು ಗಮನಕ್ಕೆ ಬಂದ ಕಾರಣ ಗ್ರಾಮಸ್ಥರು ಈತನನ್ನು ಹಿಡಿದು ವಿಚಾರಣೆ ನಡೆಸಿದಾಗ ಈತ ಪದೇ ಪದೇ ತನ್ನ ಮಾತನ್ನು ಬದಲಾಯಿಸುತ್ತಿರುವುದು ಮತ್ತು ಈತನ ಬಳಿ ಬಾಲಕಿಯೋರ್ವಳ ಉಡುಪು ದೊರಕಿರುವುದು ಸ್ಥಳೀಯರಲ್ಲಿ ಅನುಮಾನ ಮೂಡಲು ಕಾರಣವಾಗಿದೆ.



ಶಾಲೆಯಿಂದ ಮಕ್ಕಳು ಬರುವ ಸಂದರ್ಭದಲ್ಲಿ ಮಕ್ಕಳನ್ನು ಹಿಡಿಯುವ ಅಥವಾ ಏನಾದರೂ ದುಷ್ಕೃತ್ಯ ನಡೆಸುವ ಉದ್ದೇಶ ಹೊಂದಿದ್ದನೇ ಎನ್ನುವ ಕುರಿತಂತೆ ಸ್ಥಳೀಯರು ಆತಂಕಿತರಾಗಿದ್ದಾರೆ.

ಮುಸ್ಲಿಂ ಸಮುದಾಯದ ರಂಜಾನ್ ತಿಂಗಳು ಆರಂಭವಾಗಿರುವ ಕಾರಣ ಆರ್ಥಿಕ ಸಹಾಯ ಯಾಚಿಸಲು ಬೇರೆ ಊರುಗಳಿಂದ ಹಲವಾರು ಜನರು ಆಗಮಿಸುತ್ತಿದ್ದು, ಈತ ಸಹ ಆರ್ಥಿಕ ನೆರವು ಪಡೆಯಲು ಬಂದಿರಬಹುದು ಎಂದು ಅಲ್ಲಿನ ಜನ ಸುಮ್ಮನಿದ್ದರು. ಅನುಮಾನಾಸ್ಪದವಾಗಿ ನಿರ್ಜನ ಪ್ರದೇಶದಲ್ಲಿ ಮಾಸ್ಕ್ ಧರಿಸಿ ಕುಳಿತಿದ್ದ ಈತನನ್ನು ಮುಸ್ಲಿಂ ಸಮುದಾಯದವರೂ ಸೇರಿದಂತೆ ಸ್ಥಳೀಯ ಜನರು ಹಿಡಿದು ವಿಚಾರಣೆ ನಡೆಸಿದಾಗ ತಾನು ರಂಜಾನ್ ಉಪವಾಸದಲ್ಲಿದ್ದು ಜಮಾತ್‌ಗಾಗಿ ಬಂದಿರುವುದಾಗಿ ನಿಸರ್ಗದ ವೀಕ್ಷಣೆಗೆ ಕುಳಿತಿರುವುದಾಗಿ ಬೇರೆ ಬೇರೆ ರೀತಿಯ ಉತ್ತರ ನೀಡುತ್ತಿದ್ದು ಸಂಶಯಾಸ್ಪದವಾಗಿ ಕೆಲವೊಮ್ಮೆ ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದರಿಂದ ಸ್ಥಳೀಯರು ಪೊಲೀಸರಿಗೆ ಕರೆ ಮಾಡಿ ಈತ ಮಕ್ಕಳ ಕಳ್ಳ ಇರಬಹುದು ವಿಚಾರಣೆ ನಡೆಸುವಂತೆ ತಿಳಿಸಿದ್ದು ಅಂಕೋಲಾ ಪೊಲೀಸರು ವ್ಯಕ್ತಿಯನ್ನು ವಶಕ್ಕೆ ಪಡೆದಿರುವುದಾಗಿ ತಿಳಿದು ಬಂದಿದೆ.

40 ಟನ್‌ಗೂ ಹೆಚ್ಚು ಭಂಡಾರ ತೂರಿದ ಭಕ್ತವೃಂದ

◆ **ಚಿಕ್ಕೋಡಿ/ಕುಡಚಿ:** ತಾಲೂಕಿನ ಕೇರೂರ ಗ್ರಾಮದಲ್ಲಿ ನಿವ್ವಾಳಿಕೆಯ ಮೂಲಕ ಫೆ.21ರಿಂದ ಪ್ರಾರಂಭಗೊಂಡ ಅರಣ್ಯಸಿದ್ದೇಶ್ವರ ಹಾಗೂ ಮಲಕಾರಿಸಿದ್ದೇಶ್ವರ ಜಾತ್ರೆ ಗುರುವಾರ ಸಂಪನ್ನಗೊಂಡಿತು. ಜಾತ್ರೆ ಕೊನೆಯ ದಿನ ನಿವ್ವಾಳಿಕೆ, ದೇವವಾಣಿ, ಭಂಡಾರ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ಕೊನೆಯ ದಿನದಂದು ನಡೆದವು.

ಚಮ್ಮಾಳಿಗೆ ತರುವ ಮೂಲಕ ಚಾಲನೆ ಪಡೆದುಕೊಂಡ ಜಾತ್ರೆಯಲ್ಲಿ ಆರು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಮಹಾಪ್ರಸಾದ, ಎತ್ತು ಹಾಗೂ ಕುದುರೆ ಗಾಡಿಯ ಷರತ್ತು, ಕಬಡ್ಡಿ ಪಂದ್ಯಾವಳಿ ಮುಂತಾದವುಗಳು ಜರುಗಿದವು.ಕರ್ನಾಟಕ, ಮಹಾರಾಷ್ಟ್ರ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಸಹಸ್ರಾರು ಜನರು



ಪಲ್ಲಕ್ಕಿಯು ಬನಕ್ಕೆ ಆಗಮಿಸುತ್ತಲೇ ಭಂಡಾರವನ್ನು ತೂರುವ ಮೂಲಕ ತಮ್ಮ ಹರಕೆ ತೀರಿಸಿದರು.

ಕೊನೆಯ ದಿನ ದೇವಸ್ಥಾನದ ಹಿಂಬದಿಯಲ್ಲಿ ದೇವರ ಎತ್ತು, ದೇವರ ಕುದುರೆ, ದೇವರ ಪಲ್ಲಕ್ಕಿ ಆಗಮಿಸುತ್ತಿದ್ದಂತೆಯೇ ಮಹಿಳೆಯರು, ಮಕ್ಕಳು, ಯುವಕ ಯುವತಿಯರು ಭಂಡಾರವನ್ನು ತೂರಿ ದೇವರಿಗೆ ನಮಿಸಿದರು. 30-40 ಟನ್‌ಗೂ ಹೆಚ್ಚು ಭಂಡಾರ ತೂರಿದ್ದರಿಂದ ಕೇರೂರ ಗ್ರಾಮದಾದ್ಯಂತ ಎಲ್ಲಿ ನೋಡಿದರೂ ಹಳದಿಮಯವಾಗಿರುವುದು ಕಂಡು ಬಂತು.

ಮಾ.1ಕ್ಕೆ ಹಿಂದೂ ಜಾಗೃತಿ ಸಮ್ಮೇಳನ

◆ **ಧಾರವಾಡ:** ಮಾಳಮಡ್ಡಿ ಹಿಂದೂ ಸಮ್ಮೇಳನ ಸಮಿತಿಯಿಂದ ಹಿಂದೂಸಮ್ಮೇಳನಮಾ.1ರಂದುಸಂಜೆ5ಕ್ಕೆನಗರದಮಾಳಮಡ್ಡಿ ಕೆ.ಇ.ಬೋರ್ಡ್ ಹೈಸ್ಕೂಲ್ ಮೈದಾನದಲ್ಲಿ ಹಮ್ಮಿಕೊಂಡಿದೆ ಎಂದು ಸಮಿತಿ ಅಧ್ಯಕ್ಷೆ ಡಾ.ಸೌಭಾಗ್ಯ ಕುಲಕರ್ಣಿ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜ್ಞಾ ಪ್ರವಾಹದ ಅಖಿಲ ಭಾರತೀಯ ಸಹ ಸಂಯೋಜಕ ರಘುನಂದನ ಅವರು ದಿಕ್ಸೂಚಿ ಭಾಷಣ ಮಾಡಲಿದ್ದು, ನುಗ್ಗಿಕೇರಿ ಪರಮಾತ್ಮ ಮಹಾರಾಜ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ತಿಳಿಸಿದರು.

ಹಿಂದೂ ಸಮ್ಮೇಳನದ ಅಂಗವಾಗಿ ಫೆ.27ರಂದು ಮಧ್ಯಾಹ್ನ 3ಕ್ಕೆ ಬೈಕ್ ರ್‍ಯಾಲಿ ಹಮ್ಮಿಕೊಂಡಿದೆ. ಮಾಳಮಡ್ಡಿಯಿಂದ ಪ್ರಾರಂಭವಾಗುವ ರ್‍ಯಾಲಿ ರಾಯರಮಠ, ಗೌಳಿಗಲ್ಲಿ, ಸರಸ್ವತಪುರ, ಲಕ್ಷ್ಮೀಸಿಂಗನಕೇರಿ, ಕೆನರಾ ಬ್ಯಾಂಕ್, ಎಮ್ಮಿಕೇರಿ, ಹೆಡ್‌ಪೋಸ್ಟ್, ಚನ್ನಬಸವೇಶ್ವರ ದೇವಸ್ಥಾನ ಮೂಲಕ ವನವಾಸಿ ರಾಮಮಂದಿರದಲ್ಲಿ ಸಂಪನ್ನಗೊಳ್ಳಲಿದೆ.

ಸಮಿತಿ ಉಪಾಧ್ಯಕ್ಷರಾದ ಸುಮಂಗಲಾ ದಾಂಡೇವಾಲೆ, ಗೋವಿಂದಪ್ಪ ವಡ್ಡರ, ರಾಜಶೇಖರ ಹಿರೇಗೌಡರ, ರವಿಶಂಕರ ಕಾಂಬಳೆ, ಗೋಪಾಲ ಲಮಾಣಿ, ಕಾರ್ಯದರ್ಶಿ ವಿನಾಯಕ ಜೋಶಿ ಹಾಗೂ ವಿಷ್ಣು ಹುಕ್ಕೇರಿ ಪಾಲ್ಗೊಳ್ಳುವುದಾಗಿ ಹೇಳಿದರು.

ಸಮಿತಿ ಉಪಾಧ್ಯಕ್ಷ ರವಿ ದೇಶಪಾಂಡೆ, ಹಿಂದೂ ಸಮ್ಮೇಳನ ಸಮಿತಿ ಕಾರ್ಯದರ್ಶಿ ವಿನಾಯಕ ಜೋಶಿ, ಮುಖಂಡ ಬಸವರಾಜ ಮುತ್ತಳ್ಳಿ ಇದ್ದರು.

ಗ್ರಾಮ ಲೆಕ್ಕಾಧಿಕಾರಿ ಲೋಕಾ ಬಲೆಗೆ

◆ **ಹಾವೇರಿ:** ತನ್ನ ಕಾರ್ಯವ್ಯಾಪ್ತಿಯಲ್ಲಿ ಇಲ್ಲದ ಖಾತೆ ಬದಲಾವಣೆ ಮಾಡಿಸಿಕೊಡುವುದಾಗಿ ನಂಬಿಸಿ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಗ್ರಾಮ ಲೆಕ್ಕಿಗರೊಬ್ಬರು ಗುರುವಾರ ಲಂಚಸ್ವೀಕರಿಸುವಾಗ ರೆಡ್ ಹ್ಯಾಂಡಾಗಿ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಸಿಕ್ಕಿ ಬಿದ್ದಿದ್ದಾರೆ.



ತಾಲೂಕಿನ ನೆಗಳೂರ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಫಕೀರೇಶ ಬಾರ್ಕಿ ಲೋಕಾಯುಕ್ತರ ಬಲೆಗೆ ಬಿದ್ದ ಗ್ರಾಮ ಲೆಕ್ಕಿಗ. ಬಂಧಿತ ಫಕೀರೇಶ ಬಾರ್ಕಿ ಈ ಹಿಂದೆ ಹಾವೇರಿ ತಾಲೂಕು ಬಸಾಪುರ ಗ್ರಾಮದ ಗ್ರಾಮ ಲೆಕ್ಕಿಗನಾಗಿ ಕೆಲಸ ಮಾಡುತ್ತಿದ್ದು, ಇತ್ತೀಚೆಗೆ ನೆಗಳೂರು ಗ್ರಾಮ ಲೆಕ್ಕಿಗನಾಗಿ ವರ್ಗಾವಣೆಗೊಂಡಿದ್ದ. ದೂರುದಾರ ಬಸಾಪುರ ಗ್ರಾಮದ ಕರಿಯಲ್ಲಪ್ಪ ಕೆಸರಳ್ಳಿ ಎಂಬುವವರ ಪಿತ್ರಾರ್ಜಿತ ಆಸ್ತಿಯ ಖಾತೆ ಬದಲಾವಣೆಗಾಗಿ ನೆಗಳೂರು ಗ್ರಾಮ ಲೆಕ್ಕಿಗನಾಗಿದ್ದ ಫಕೀರೇಶ ಬಾರ್ಕಿ ಅವರಲ್ಲಿ ಕೇಳಿದಾಗ, ತನ್ನ ಕಾರ್ಯವ್ಯಾಪ್ತಿಯಲ್ಲಿ ಇಲ್ಲದೇ ಇದ್ದರೂ ಸಹ ಖಾತೆ ಬದಲಾವಣೆ ಮಾಡಿಸಿಕೊಡುವುದಾಗಿ ಮತ್ತು ಅದಕ್ಕೆ 63,000 ರೂ.ಲಂಚಕ್ಕೆ ಬೇಡಿಕೆ ಇಟ್ಟು ಮುಂಗಡವಾಗಿ 30 ಸಾವಿರ ರೂ.ಗಳನ್ನೂ ಸಹ ಪಡೆದಿದ್ದ.

ಅಲ್ಲದೆ ತಾನು ತಾನು ಒಪ್ಪಿಕೊಂಡ ಕೆಲಸವನ್ನು ಪೂರ್ಣಗೊಳಿಸದೆ ಮತ್ತೆ 30 ಸಾವಿರ ರೂ.ನೀಡುವಂತೆ ಒತ್ತಾಯಿಸಿ, ತುರ್ತಾಗಿ 8500 ರೂ. ನೀಡುವಂತೆ ಒತ್ತಡ ಹೇರಿದ್ದ. ಈ ಕುರಿತು ಬಸಾಪುರ ಗ್ರಾಮದ ಕರಿಯಲ್ಲಪ್ಪ ಕೆಸರಳ್ಳಿ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದು, ಈ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆ ನೆಗಳೂರ ಗ್ರಾಮದಲ್ಲಿರುವ ಗ್ರಾಮ ಆಡಳಿತಾಧಿಕಾರಿಗಳ ಕಚೇರಿಯಲ್ಲಿ ದೂರುದಾರರಿಂದ 8500 ರೂ.ಲಂಚದ ಹಣವನ್ನು ಸ್ವೀಕರಿಸುವಾಗ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾರೆ.

ಆರೋಪಿತ ಫಕೀರೇಶ ಬಾರ್ಕಿ ನೆಗಳೂರ ಗ್ರಾಮ ಲೆಕ್ಕಾಧಿಕಾರಿಯಾಗಿದ್ದು, ವಾಸ್ತವದಲ್ಲಿ ಅವರಿಗೆ ಬಸಾಪುರ ಗ್ರಾಮಂ ವ್ಯಾಪ್ತಿಯ ಕಾರ್ಯಗಳುಸಂಬಂಧವೇಇಲ್ಲ.ಆದರೂಅವರು ತಮ್ಮ ವ್ಯಾಪ್ತಿಗೆ ಬಾರದ ಬಸಾಪುರ ಗ್ರಾಮದ ಆಸ್ತಿ ಬದಲಾವಣೆ ಮಾಡಿಸಿಕೊಡುವುದಾಗಿ ಒಪ್ಪಿಕೊಂಡು ಹಣ ಪಡೆದಿದ್ದಾರೆ ಎಂಬ ದೂರಿನ ಮೇರೆಗೆ ಲೋಕಾಯುಕ್ತರು ದಾಳಿ ನಡೆಸಿದ್ದು ಸದ್ಯ ಆರೋಪಿತನನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದು, ಹೆಚ್ಚಿನ ತನಿಖೆ ಮುಂದುವರಿಸಿದ್ದಾರೆ.

ಜಿಂಬಾಬ್ವೆ ವಿರುದ್ಧ ಭರ್ಜರಿ ಗೆಲುವು | ಸೆಮಿ ಆಸೆ ಜೀವಂತ | ಮಿಂಚಿದ ಬ್ಯಾಟಿಂಗ್ ಪಡೆ | ಭಾರತಕ್ಕೆ ಹಾದಿ ಮಾಡಿಕೊಟ್ಟ ಹರಿಣರು

ವಿಂಡೀಸ್ ಪಂದ್ಯ ಗೆದ್ದರೆ ಸೆಮಿಫೈನಲ್‌ಗೆ ಭಾರತ

• **ಚೆನ್ನೈ:** ತನ್ನ ಅಸಲು ಲಯಕ್ಕೆ ಮರಳಿದ ಭಾರತ ತಂಡವು ಗೆಲ್ಲಲೇಬೇಕಾದ ಪಂದ್ಯದಲ್ಲಿ ಜಿಂಬಾಬ್ವೆ ಮೇಲೆ 72 ರನ್‌ಗಳ ಜಯದೊಂದಿಗೆ ಸವಾರಿ ನಡೆಸಿತು. ತಾನ್ಯಾಕೆ ನಂಬರ್ 1 ತಂಡವೆಂದೂ, ಒಂದು ಪಂದ್ಯದ ಸೋಲಿನಿಂದ ಹೆಚ್ಚಿನ ಪರಿಣಾಮ ಬೀಳದು ಎಂದು ಸಾಬೀತು ಮಾಡಿ ಸೆಮಿ ರೇಸ್‌ನಲ್ಲಿ ಉಳಿಯಿತು.

ದ.ಆಫ್ರಿಕಾ ಪಡೆ ವಿಂಡೀಸ್ ಪಡೆಯನ್ನು ಸೋಲಿಸಿ ಭಾರತ ಹಾದಿ ಸುಗಮಗೊಳಿಸಿತು. ಮಿಕ್ಕಿರುವ ಕೆಲಸವನ್ನು ಮಾಡುವಲ್ಲಿ ಭಾರತ ನಿಸ್ಸಂಶಯವಾಗಿ ಯಶಸ್ವಿಯಾಯಿತು. ಲೀಲಾಜಾಲವಾದ ಬ್ಯಾಟಿಂಗ್, ಕರಾರುವಾಕ್ ಬೌಲಿಂಗ್ ಮಾಡಿದ ಭಾರತ ಗೆಲ್ಲಲೇಬೇಕಾದ ಒತ್ತಡದಲ್ಲಿದೆ ಎಂದು ಅನ್ನಿಸಲೇ ಇಲ್ಲ. ಗುರುವಾರದ ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದು ಮೊದಲ ಇನ್ನಿಂಗ್ಸ್‌ನಲ್ಲಿ ದಾಖಲೆಯ 256 ರನ್ ಬಾರಿಸಿತು. 4 ವಿಕೆಟ್ ಮಾತ್ರ ಕಳೆದುಕೊಂಡಿತು. ಗುರಿ ಕಾಯ್ದುಕೊಳ್ಳುವಾಗ ಅಚ್ಚುಕಟ್ಟಾದ ಬೌಲಿಂಗ್‌ನೊಂದಿಗೆ 184 ರನ್‌ಗಳಿಗೆ ತಡೆಯೊಡ್ಡಿ ಜಿಂಬಾಬ್ವೆ ತಂಡವನ್ನು ಸೆಮಿ ರೇಸ್‌ನಿಂದ ಹೊರನೂಕಿತು.

ಬ್ಯಾಟಿಂಗ್‌ಗಿಳಿದ ಭಾರತದ ಆರೂ ಬ್ಯಾಟಿಗರು ಭೇಷ್ ಎನಿಸಿಕೊಂಡರು. ಲಯಕ್ಕೆ ಮರಳಿದ ಅಭಿಷೇಕ್ 55 ರನ್ ಗಳಿಸಿ ಉತ್ತಮ ಬ್ಯಾಟರ್ ಎನಿಸಿಕೊಂಡರು. ಪಾಂಡ್ಯ ಅಜೇಯ ಅರ್ಧಶತಕ ಬಾರಿಸಿದರು. ತಿಲಕ್ ವರ್ಮಾ ಬ್ಯಾಟಿಂಗ್ ವಿಶೇಷವಾಗಿತ್ತು. ಅಕ್ಷರ್ ಮತ್ತು ವರುಣ್ ಉತ್ತಮ ಬೌಲರ್ಸ್ ಎನಿಸಿದರು. ಈ ಗೆಲುವಿನೊಂದಿಗೆ ರನ್‌ರೇಟ್ ಕೂಡ ಹೆಚ್ಚು ಮಾಡಿಕೊಂಡಿರುವ ಭಾರತ ಸೆಮಿ ರೇಸ್‌ನಲ್ಲಿ ಭದ್ರವಾಗಿದ್ದು, ವಿಂಡೀಸ್ ವಿರುದ್ಧದ ಪಂದ್ಯ ನಿರ್ಣಾಯಕವಾಗಲಿದೆ.

ಅಬ್ಬರದ ಆರಂಭ: ಉತ್ತಮ ಬ್ಯಾಟಿಂಗ್ ಮಾಡುತ್ತಿಲ್ಲವೆಂಬ ಟೀಕೆಗಳಿಗೆ ಅಭಿಷೇಕ್ ಶರ್ಮಾ ತೆರೆ ಎಳೆದರು. 30 ಬಾಲ್ ಮಾತ್ರದಲ್ಲಿ 55 ರನ್ ಚಚ್ಚಿದರು. ರಿಂಕು ಬದಲಿಗೆ ಬ್ಯಾಟಿಂಗ್‌ಗಿಳಿದ ಸಂಜು(24) ಅಬ್ಬರದ ಆರಂಭ ನೀಡಿ ಬುನಾದಿ ಹಾಕಿಕೊಟ್ಟರು. ಇಶಾನ್(38) ಮೂರನೇ ಕ್ರಮಾಂಕದಲ್ಲಿ ಅತ್ಯುತ್ತಮ ಬ್ಯಾಟಿಂಗ್ ಮಾಡಿದರು. ಇಷ್ಟು ದಿನ ಪರದಾಡಿದ ಮಧ್ಯಮ ಕ್ರಮಾಂಕದ ಬ್ಯಾಟಿಗರು ಸ್ಫೋಟಕ ಬ್ಯಾಟಿಂಗ್ ಮಾಡಿದರು. ಸೂರ್ಯ 33 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಬೆನೆಟ್ ಪರಾಕ್ರಮ

ಗುರಿ ಬೆನ್ನತ್ತುವಾಗ ಜಿಂಬಾಬ್ವೆ ಭಾರೀ ಹಿನ್ನಡೆ ಅನುಭವಿಸಿತು. ಮೊದಲಿನಿಂದಲೂ ವಿಕೆಟ್ ಕಳೆದುಕೊಳ್ಳದಿದ್ದರೂ ಭಾರತ ಬೌಲರ್‌ಗಳು ಅವರನ್ನು ಕಟ್ಟಿಹಾಕಿದರು. 44 ರನ್ ಗಳಿಸಿದಾಗ ಜಿಂಬಾಬ್ವೆಯ ಮೊದಲ ವಿಕೆಟ್ ಪತನಗೊಂಡಿತು. ಅದಾದ ಬಳಿಕ ಹಿನ್ನಡೆ ಅನುಭವಿಸಿದ ಜಿಂಬಾಬ್ವೆ ರನ್ ಗಳಿಸಲು ಹೆಚ್ಚಿನ ಪ್ರಯತ್ನ ಪಟ್ಟಿತು. ಆದಾಗ್ಯೂ ಬೇಗನೇ ವಿಕೆಟ್ ಕಳೆದುಕೊಳ್ಳಲೇ ಇಲ್ಲ. ಗೆಲ್ಲಲು ಬೇಕಾದ ದೊಡ್ಡ ಸ್ಕೋರ್ ಬಾರಿಸಲಾಗದಿದ್ದರೂ 20 ಓವರ್ ಸಂಪೂರ್ಣ ಬ್ಯಾಟಿಂಗ್ ಮಾಡಿ 154 ರನ್ ಗಳಿಸಿತು. ತಂಡದ ಪರ ಬೆನೆಟ್ ಭರ್ಜರಿ ಬ್ಯಾಟಿಂಗ್ ಮಾಡಿದರು. ಮೊದಲಿನಿಂದಲೂ ಭಾರತ ತಂಡವನ್ನು ದಂಡಿಸಿದ ಅವರು ವಿಕೆಟ್ ಬೀಳುತ್ತಿದ್ದರೂ ಹೋರಾಟ ನಿಲ್ಲಿಸಲಿಲ್ಲ. ಒಟ್ಟು 97 ರನ್‌ಗಳಿಸಿ ಅಜೇಯರಾಗಿ ಉಳಿದರು.



ಪಾಂಡ್ಯ-ತಿಲಕ್ ಜುಗಲ್‌ಬಂದಿ

ಮಧ್ಯಮ ಕ್ರಮಾಂಕದಲ್ಲಿ ಪಾಂಡ್ಯ ಮತ್ತು ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಭಾರತ ಸ್ಕೋರ್ ಹಿಗ್ಗಿಸಿದರು. ಬಾನೆತ್ತರದ ಸಿಕ್ಸರ್‌ಗಳಿಂದಲೇ ಆರಂಭಿಸಿದ ತಿಲಕ್ ವರ್ಮಾ ಈ ಬಾರಿ ಬರೋಬ್ಬರಿ 275ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದರು. 23 ಬಾಲ್ ಮಾತ್ರ ಎದುರಿಸಿದ ಪಾಂಡ್ಯ ತಮ್ಮ ನೈಜ ಆಟದೊಂದಿಗೆ 4 ಸಿಕ್ಸರ್ ಮತ್ತು 2 ಬೌಂಡರಿಗಳೊಂದಿಗೆ 50 ರನ್ ಚಚ್ಚಿದರು. ತಿಲಕ್ ವರ್ಮಾ ಕೇವಲ 16 ಬಾಲ್‌ಗಳಲ್ಲಿ 3 ಬೌಂಡರಿ 4 ಸಿಕ್ಸರ್‌ಗಳೊಂದಿಗೆ ಔಟಾಗದೆ 44 ರನ್ ಬಾರಿಸಿದರು.

158 ಭಾರತೀಯರ ಕನಿಷ್ಠ ಸ್ಟ್ರೈಕ್‌ರೇಟ್!

ಭಾರತ ತಂಡದ ಯಾವುದೇ ಬ್ಯಾಟರ್‌ಗಳೂ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆಗೆ ಬೀಳಲೇ ಇಲ್ಲ. ಬಂದವರೆಲ್ಲಾ ಮೊದಲ ಬಾಲ್‌ನಿಂದಲೇ ಬೌಂಡರಿಗಟ್ಟುವ ಸ್ಪಷ್ಟ ನಿರ್ಧಾರ ಮಾಡಿಬಿಟ್ಟಿದ್ದರು. ಯಾರೊಬ್ಬರೂ ತಮ್ಮ ಸ್ಕೋರುಗಳ ಕಡೆ ಗಮನವೇ ಹರಿಸಲಿಲ್ಲ. ಸಿಂಗಲ್ ಪಡೆಯಲೋ ಅಥವಾ ಡಾಟ್ ಮಾಡಲು ಹೋಗಿ ಔಟಾಗಲೇ ಇಲ್ಲ. ಔಟಾಗದೆ ಉಳಿದವರೂ ಕೂಡ ಸಿಂಗಲ್ ಪಡೆಯಲು ಯತ್ನಿಸಲೇ ಇಲ್ಲ. ಗೌರವಿಸಬೇಕಾದ ಎಸೆತಗಳನ್ನು ಗೌರವಿಸಿದ್ದು ಬಿಟ್ಟರೆ ಇನ್ನುಳಿದ ಬಾಲ್‌ಗಳನ್ನೆಲ್ಲಾ ಬೌಂಡರಿಗಟ್ಟಿದರು. ಹೀಗಾಗಿ ಭಾರತ ತಂಡದ ಆಟಗಾರರ ಕನಿಷ್ಠ ಸ್ಟ್ರೈಕ್ ರೇಟ್ 158 ಆಗಿತ್ತು. ಇಶಾನ್ ಕಿಶನ್ 158, ಅಭಿಷೇಕ್ ಶರ್ಮ 160, ಸೂರ್ಯ 253, ಪಾಂಡ್ಯ 217 ಮತ್ತು ತಿಲಕ್ 275 ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದರು.

ಸ್ಕೋರ್‌ಬೋರ್ಡ್

ಭಾರತ 20 ಓವರ್‌ಗಳಲ್ಲಿ 256/4

ಸಂಜು	ಸಿ ಬರ್ಲ್ ಬಿ ಮುಝರ್ಬಾನಿ	24
ಅಭಿಷೇಕ್	ಸಿ ರಜಾ ಬಿ ಮಾಪೋಸಾ	55
ಕಿಶನ್	ಸಿ ಗರಾವ ಬಿ ರಜಾ	38
ಸೂರ್ಯ	ಸಿ ಮುಸೆಕಿವಾ ಬಿ ಗರಾವ	33
ಪಾಂಡ್ಯ	ನಾಟೌಟ್	50
ತಿಲಕ್	ನಾಟೌಟ್	44
ಇತರೆ		12

ಬೌಲಿಂಗ್ ವಿವರ

ರಿಚರ್ಡ್	4-0-62-1
ಬ್ಲೆಸ್ಸಿಂಗ್	4-0-43-1
ಮಾಪೋಸಾ	2-0-40-1
ಈವಾನ್ಸ್	4-0-52-0
ರಜಾ	3-0-29-1
ಬೆನೆಟ್	2-0-16-0
ಬರ್ಲ್	1-0-10-0

ಜಿಂಬಾಬ್ವೆ 20 ಓವರ್‌ಗಳಲ್ಲಿ 184/6

ಬೆನೆಟ್	ನಾಟೌಟ್	97
ಮರುಮಾನಿ	ಸಿ ಕಿಶನ್ ಬಿ ಅಕ್ಷರ್	20
ಮೇಯರ್ಸ್	ಸಿ ವರ್ಮಾ ಬಿ ಚಕ್ರವರ್ತಿ	6
ರಜಾ	ಸಿ ಅಭಿಷೇಕ್ ಬಿ ಅರ್ಷದೀಪ್	31
ಬರ್ಲ್	ಎಲ್‌ಬಿ ಬಿ ಅರ್ಷದೀಪ್	0
ಟೋನಿ	ಬಿ ಅರ್ಷದೀಪ್	11
ಮುಸೆಕಿವಾ	ಸಿ ಸ್ಯಾಮ್ಸನ್ ಬಿ ದುಬೆ	7
ಈವಾನ್ಸ್	ನಾಟೌಟ್	1
ಇತರೆ		11

ಬೌಲಿಂಗ್ ವಿವರ

ಅರ್ಷದೀಪ್	4-0-24-3
ಹಾರ್ದಿಕ್	3-0-21-0
ಬೂಮ್ರಾ	3-0-21-0
ವರುಣ್	4-0-35-1
ದುಬೆ	2-0-46-1

ಇತಿಹಾಸ ಬರೆದ ಭಾರತ

ಈ ಗೆಲುವಿನ ಮೂಲಕ ಭಾರತ ಐತಿಹಾಸಿಕ ದಾಖಲೆಯೊಂದನ್ನು ಮಾಡಿತು. ವಿಶ್ವಕಪ್‌ನಲ್ಲಿ ಭಾರತ 300 ರನ್ ಬಾರಿಸುತ್ತದೆ ಎಂಬ ಮಾತುಗಳು ಎಲ್ಲೆಡೆ ಹರಿದಾಡುತ್ತಿದ್ದವು. ಆದರೆ ಭಾರತ ಮಾತ್ರ 150 ರನ್ ಬಾರಿಸುವುದಕ್ಕೂ ಪರದಾಡುತ್ತಿತ್ತು. ಅಂತಹ ಸ್ಥಿತಿಯಲ್ಲಿ ಜಿಂಬಾಬ್ವೆ ವಿರುದ್ಧ ಸ್ಫೋಟಕ ಬ್ಯಾಟಿಂಗ್ ಮಾಡಿ ಬರೋಬ್ಬರಿ 256 ಚಚ್ಚಿದೆ. ಇದು ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ಗಳಿಸಿದ ಅತಿ ಹೆಚ್ಚು ರನ್ ಆಗಿದೆ. ಇದಲ್ಲದೆ, ವಿಶ್ವಕಪ್‌ನಲ್ಲಿ ತಂಡವೊಂದು ಬಾರಿಸಿದ ಎರಡನೇ ಅತಿ ಹೆಚ್ಚು ರನ್ ಆಗಿದೆ. 2009ರಲ್ಲಿ ಶ್ರೀಲಂಕಾ 260 ರನ್ ಬಾರಿಸಿತ್ತು. ಅದು ವಿಶ್ವಕಪ್‌ನ ಅತಿ ಹೆಚ್ಚು ರನ್ ಆಗಿದೆ.

ದಕ್ಷಿಣ ಆಫ್ರಿಕಾ ಸೆಮಿಗೆ

• **ಅಹಮದಾಬಾದ್:** ಕಳೆದ ಪಂದ್ಯದಲ್ಲಷ್ಟೇ ಭಾರತ ತಂಡವನ್ನು ಸೋಲಿಸಿ ಕೋಟ್ಯಂತರ ಅಭಿಮಾನಿಗಳ ಪಾಲಿಗೆ ವಿಲನ್ ಆಗಿದ್ದ ದ.ಆಫ್ರಿಕಾ ತಂಡವು ಗುರುವಾರ ವೆಸ್ಟ್ ಇಂಡೀಸ್ ವಿರುದ್ಧ ಗೆದ್ದು ಭಾರತ ಅಭಿಮಾನಿಗಳ ಪಾಲಿಗೆ ಆಸರೆಯಾದ ನೆರಳಾಯಿತು. ಜತೆಗೆ ತನ್ನ ಸೆಮಿಫೈನಲ್ ಪ್ರವೇಶ ಖಚಿತ ಪಡಿಸಿಕೊಂಡಿದೆ.

ಭಾರತ ಸೆಮಿಫೈನಲ್‌ಗೇರಬೇಕಾದರೆ ದ.ಆಫ್ರಿಕಾ ವಿಂಡೀಸ್ ತಂಡದ ವಿರುದ್ಧ ಗೆಲ್ಲಲೇಬೇಕಿತ್ತು. ಈ ಪಂದ್ಯದಲ್ಲೂ ಕೂಡ ಕಳೆದ ಪಂದ್ಯದ ಲಯವನ್ನೇ ಪ್ರದರ್ಶಿಸಿದ ಹರಿಣರು ವಿಶ್ವಕಪ್‌ನ ಬಲಿಷ್ಠ ತಂಡ, ಸೋಲದಿರುವ ಅಜೇಯ ಪಡೆ ಎನಿಸಿಕೊಂಡಿದೆ. ಗುರುವಾರದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಬುಲಾವ್ ನೀಡಿದ ಮಾರ್ಕ್ರಂ ಪಡೆ ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ವಿಂಡೀಸ್ ತಂಡದ ಹೆಡೆಮುರಿ ಕಟ್ಟಿತು. ಆದಾಗ್ಯೂ ರೋಮಾರಿಯೋ ಶೆಫರ್ಡ್ ಹಾಗೂ ಜೇಸನ್ ಹೋಲ್ಡರ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಉತ್ತಮ ಪ್ರದರ್ಶನ ನೀಡಿದ ವಿಂಡೀಸ್ ತನ್ನ ಪಾಲಿನ ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 176 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಪೇರಿಸಿತು. ಪ್ರತಿಯಾಗಿ ದ.ಆಫ್ರಿಕಾ ಮೊದಲಿನ ಮೂರು ಬ್ಯಾಟರ್‌ಗಳ ಹೊಡೆತದಾಟದೊಂದಿಗೆ 16.1 ಓವರ್‌ಗಳಲ್ಲಿ 1 ವಿಕೆಟ್ ಮಾತ್ರ ಕಳೆದುಕೊಂಡು 177 ರನ್ ಬಾರಿಸಿ ಗೆದ್ದಿತು. ಪಂದ್ಯದ ಏರಿಳಿತ ವಿಂಡೀಸ್, ಆಫ್ರಿಕಾಗಿಂತ ಭಾರತದ ಅಭಿಮಾನಿಗಳನ್ನೇ ಆತಂಕಕ್ಕೀಡು ಮಾಡಿತು. ಏಡನ್ ಮಾರ್ಕ್ರಂ ಅಜೇಯ 82 ರನ್ ಬಾರಿಸಿ ಪಂದ್ಯದ ಹೀರೋ ಎನಿಸಿದರು. ಡಿಕಾಕ್ ಮತ್ತು ರ್ಯಾನ್ ರಿಕೆಲ್ಟನ್ ಕೂಡ ಭರ್ಜರಿ ಬ್ಯಾಟಿಂಗ್ ಮಾಡಿದರು. ಎದುರಾಳಿ ವಿಂಡೀಸ್ ಕಡೆಯವರೂ ಕೂಡ ಉತ್ತಮ ಬ್ಯಾಟರ್ ಎನಿಸುವಂತೆ ಆಡಿದರು. ಲುಂಗಿ ಎನ್‌ಗಿಡಿ ಪಂದ್ಯದ ಉತ್ತಮ ಬೌಲರ್ ಎನಿಸಿಕೊಂಡರು. ಈ ಗೆಲುವಿನೊಂದಿಗೆ ದ.ಆಫ್ರಿಕಾ ಬಹುತೇಕ ಸೆಮಿಫೈನಲ್ ಖಚಿತಪಡಿಸಿಕೊಂಡಿದೆ. ವಿಂಡೀಸ್ ಭಾರತದೊಂದಿಗೆ ಗೆಲ್ಲಲೇಬೇಕಾದ ಅನಿವಾರ್ಯತೆಗೆ ಸಿಲುಕೊಂಡಿದೆ.



ಶೆಫರ್ಡ್-ಹೋಲ್ಡರ್ ಆಸರೆ

ಮೊದಲ ಇನ್ನಿಂಗ್ಸ್‌ನಲ್ಲಿ ಮೂರು ತಿರುವುಗಳಾದವು. ಮೊದಲ ಓವರ್‌ನಲ್ಲಿ ವಿಂಡೀಸ್ 17 ರನ್ ಬಾರಿಸಿ ಮಿಂಚಿತ್ತು. ದೊಡ್ಡ ಸ್ಕೋರ್‌ನತ್ತ ಸಾಗುತ್ತಿತ್ತು. ಆದರೆ ಬಳಿಕ ಚುರುಕುಗೊಂಡ ಆಫ್ರಿಕಾ, ಸರಸರನೇ ವಿಕೆಟ್‌ಗಳನ್ನು ಪಡೆಯಿತು. ಅಲ್ಲಿ 83 ರನ್ ಆನ್ನುವಷ್ಟರಲ್ಲಿ 7 ವಿಕೆಟ್ ಕಳೆದುಕೊಂಡಿತ್ತು. ಈ ಬಳಿಕ ಮತ್ತೊಂದು ತಿರುವು ಸಿಕ್ಕಿತು. ರೋಮಾರಿಯೊ ಶೆಫರ್ಡ್ ಮತ್ತು ಹೋಲ್ಡರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ತಮ್ಮ ತಂಡದ ಕುಸಿತ ಉಳಿಸಿದ ಈ ಜೋಡಿ 20 ಓವರ್ ತನಕ ಬ್ಯಾಟಿಂಗ್ ಮಾಡಿ 175ರ ಗಡಿ ದಾಟುವಂತೆ ಮಾಡಿತು. ಶೆಫರ್ಡ್ 52, ಹೋಲ್ಡರ್ 49 ರನ್‌ಗಳಿಸಿದರು.

ಸಂಕ್ಷಿಪ್ತ ಸ್ಕೋರ್

ವಿಂಡೀಸ್ 20 ಓವರ್‌ಗಳಲ್ಲಿ 176/8: ಶೆಫರ್ಡ್ 52★, ಹೋಲ್ಡರ್ 49; ಎನ್‌ಗಿಡಿ 30/3
ಆಫ್ರಿಕಾ 16.1 ಓವರ್‌ಗಳಲ್ಲಿ 177/1: ಮಾರ್ಕ್ರಂ 82★, ಡಿಕಾಕ್ 47, ರಿಕಲ್ಟನ್ 48★; ಚೇಸ್ 46/1

ಮಾರ್ಕ್ರಂ ಅರ್ಭಟ

ಗುರಿ ಬೆನ್ನತ್ತುವಾಗ ವಿಂಡೀಸ್‌ಗೆ ಯಾವುದೇ ಖುಷಿ ಪಡುವ ಘಳಿಗೆ ಕೂಡಿ ಬರಲಿಲ್ಲ. ಅಕ್ಷರಶಃ ಅತ್ಯುತ್ತಮ ಬ್ಯಾಟಿಂಗ್ ಮಾಡಿದ ನಾಯಕ ಮಾರ್ಕ್ರಂ ಮನಬಂದಂತೆ ದಂಡಿಸಿದರು. ಉತ್ತಮ ಎಸೆತಕ್ಕೆ ಗೌರವ ನೀಡುತ್ತಾ, ವೀಕ್ ಎಸೆತಗಳನ್ನು ಥಳಿಸುತ್ತಾ ಲೀಲಾಜಾಲವಾಗಿ ಅರ್ಧಶತಕ ಬಾರಿಸಿದರು ಮಾರ್ಕ್ರಂ. ಅವರಿಗೆ ಸಾಥ್ ನೀಡುವಲ್ಲಿ ಡಿಕಾಕ್ ಕೂಡ ಅಷ್ಟೇ ಸಫಲರಾದರು. 24 ಬಾಲ್‌ಗಳಲ್ಲಿ 47 ರನ್‌ಗಳಿಸಿ ಡಿಕಾಕ್ ಔಟಾದಂತೆ ಮೂರನೇ ಕ್ರಮಾಂಕದಲ್ಲಿ ರಿಕಲ್ಟನ್ ಬಂದರು. ಅವರು ಡಿಕಾಕ್ ಆಟವನ್ನೇ ಮುಂದುವರಿಸಿದರು. ಓವರ್‌ಗಳಿಗೆ ಕನಿಷ್ಠ ಹತ್ತರಂತೆ ಬಾರಿಸಿದ ದ.ಆಫ್ರಿಕಾ 16.1 ಓವರ್‌ಗಳಲ್ಲೇ ಗುರಿ ಮುಟ್ಟಿತು. ಮಾರ್ಕ್ರಂ 46 ಬಾಲ್‌ಗಳಲ್ಲಿ ಅಜೇಯ 82 ರನ್ ಬಾರಿಸಿದರು. ರಿಕಲ್ಟನ್ 28 ಬಾಲ್‌ಗಳಲ್ಲಿ ಅಜೇಯ 48 ರನ್ ಗಳಿಸಿದರು.

ಇಂದಿನ ಪಂದ್ಯ

ಇಂಗ್ಲೆಂಡ್ VS ನ್ಯೂಜಿಲೆಂಡ್
ಸಂಜೆ 7 (ಕೊಲಂಬೋ)

ಸೂಪರ್-8 ಅಂಕಪಟ್ಟಿ

ಗುಂಪು 1

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ದ.ಆಫ್ರಿಕಾ (Q)	2	2	0	0	4	+2.890
ವಿಂಡೀಸ್	2	1	1	0	2	+1.791
ಭಾರತ	2	1	1	0	2	-0.100
ಜಿಂಬಾಬ್ವೆ	2	0	2	0	0	-4.475

ಗುಂಪು 2

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಇಂಗ್ಲೆಂಡ್ (Q)	2	2	0	0	4	+1.491
ಕಿವೀಸ್	2	1	0	1	3	+3.050
ಪಾಕಿಸ್ತಾನ	2	0	1	1	1	-0.461
ಶ್ರೀಲಂಕಾ	2	0	2	0	0	-2.800

ಕಿರುಸುದ್ದಿ

ಟಿಟಿ: ದಾಖಲೆ ಮಾಡಿದ ಭಾರತ ಜೋಡಿ

• **ಹೊಸದಿಲ್ಲಿ:** ಭಾರತದ ಅಗ್ರ ಟೇಬಲ್ ಟೆನಿಸ್ ಜೋಡಿಯಾದ ಮನುಶ್ ಶಾ ಮತ್ತು ಮಾನವ್ ಟಕ್ಕರ್ ಇತಿಹಾಸ ಸೃಷ್ಟಿಸಿದರು. ಲೀಗ್ ಹಂತದಿಂದ ಹಿಡಿದು ಕ್ವಾರ್ಟರ್ ಪಂದ್ಯಗಳಲ್ಲೂ ಉತ್ತಮ ಪ್ರದರ್ಶನ ನೀಡಿ ಭಾರತದ ಪದಕ ಆಸೆ ಜೀವಂತವಾಗಿರಿಸಿದ್ದ ಅವರು ಕ್ವಾರ್ಟರ್‌ಫೈನಲ್ ಪಂದ್ಯದಲ್ಲೂ ತಮ್ಮ ಕರಾರುವಾಕ್ ಪ್ರದರ್ಶನದೊಂದಿಗೆ ಗೆಲುವು ಸಾಧಿಸಿದರು. ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯ ಅವರಿಗೆ ಕೇವಲ ಗೆಲುವಾಗದೆ, ಇತಿಹಾಸ ಸೃಷ್ಟಿಸುವ ಸಾಧನೆಯಾಗಿತ್ತು. ಆರನೇ ಸೀಡ್‌ನ ಮನುಶ್ ಮತ್ತು ಮಾನವ್ ಮಾರ್ಟಿನ್ ಅಲ್ಲೆಗ್ರೊ ಹಾಗೂ ಅಡ್ರೀನ್ ರಾಸ್ಸೆನ್‌ಫೊಸ್ಸೆ ಅವರನ್ನು ಎದುರಿಸಿದ್ದರು. ಈ ಪಂದ್ಯದಲ್ಲಿ ಮೊದಲಿನಿಂದಲೂ ಸಮಯೋಚಿತ ಪ್ರದರ್ಶನ ನೀಡಿದ ಅವರು, 3-0(11-8, 11-9, 11-9)ರಿಂದ ಭರ್ಜರಿ ಗೆಲುವು ಸಾಧಿಸಿ ಮಿಂಚಿದರು. ಇದರೊಂದಿಗೆ ಎದುರಾಳಿಗಳೊಂದಿಗಿದ್ದ ಮುಖಾಮುಖಿಯನ್ನು 2-0ಕ್ಕೆ ಹಿಗ್ಗಿಸಿದರು.

ವಿಶ್ವದಾಖಲೆ: ಪ್ರತಿ ಪಂದ್ಯದಲ್ಲೂ ತಮ್ಮ ಪರಾಕ್ರಮದೊಂದಿಗೆ ದಾಖಲೆಗಳನ್ನು ಮಾಡುತ್ತಾ ಬಂದ ಈ ಜೋಡಿ, ಡಬ್ಲ್ಯುಟಿಟಿ ಗ್ರ್ಯಾಂಡ್ ಸ್ಮ್ಯಾಷ್ ಇವೆಂಟ್‌ನ ಸೆಮಿಫೈನಲ್ ಲಗ್ಗೆ ಹಾಕಿದ ಮೊದಲ ಭಾರತೀಯ ಜೋಡಿ ಎನಿಸಿದೆ.

ಬೆಂಗಳೂರಿಗಿಂದು ಪಂಜಾಬ್ ಸವಾಲು

• **ಬೆಂಗಳೂರು:** ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಬೆಂಗಳೂರು ಎಫ್‌ಸಿ ಮತ್ತು ಪಂಜಾಬ್ ಎಫ್‌ಸಿ ತಂಡಗಳ ನಡುವೆ ಹೈ-ವೋಲ್ಟೇಜ್ ಪಂದ್ಯ ನಡೆಯಲಿದೆ. ಪಂಜಾಬ್ ಎಫ್‌ಸಿ ತಂಡವು ಸತತ ಎರಡನೇ ಪಂದ್ಯಕ್ಕಾಗಿ ಬೆಂಗಳೂರಿಗೆ ಆಗಮಿಸಿದ್ದು, ಜಮ್‌ಶೆಡ್‌ಪುರ ಎಫ್‌ಸಿ ವಿರುದ್ಧದ 1-0 ಸೋಲಿನ ಬಳಿಕ ಚೇತರಿಸಿಕೊಳ್ಳುವ ಗುರಿ ಹೊಂದಿದೆ. ಮತ್ತೊಂದೆಡೆ, ಬೆಂಗಳೂರು ಎಫ್‌ಸಿ ಈ ಸೀಸನ್‌ನ ತನ್ನ ಮೂರನೇ ಪಂದ್ಯಕ್ಕೆ ಸಜ್ಜಾಗಿದೆ. ನಾರ್ತ್-ಈಸ್ಟ್ ಯುನೈಟೆಡ್ ವಿರುದ್ಧದ ಪಂದ್ಯ 1-1 ಸಮಬಲದಲ್ಲಿ ಅಂತ್ಯಗೊಂಡ ನಂತರ, ಸುನಿಲ್ ಛೆಟ್ರಿ ಸಾರಥ್ಯದ ತಂಡವು ಗೆಲುವಿನ ಹಾದಿಗೆ ಮರಳಲು ಎದುರು ನೋಡುತ್ತಿದೆ. ಎರಡೂ ತಂಡಗಳು ಪೂರ್ಣ 3 ಅಂಕಗಳಿಗಾಗಿ ಹೋರಾಡಲಿರುವುದರಿಂದ ಮೈದಾನದಲ್ಲಿ ತೀವ್ರ ಪೈಪೋಟಿ ನಿರೀಕ್ಷಿಸಲಾಗಿದೆ. ಎರಡೂ ಕ್ಲಬ್‌ಗಳು ಹೊಸ ಆಟಗಾರರನ್ನು ಸೇರಿಸಿಕೊಂಡಿರುವುದು ಪಂದ್ಯದ ಕುತೂಹಲವನ್ನು ಹೆಚ್ಚಿಸಿದೆ. ಬೆಂಗಳೂರು ಎಫ್‌ಸಿ ತಂಡ ಮಧ್ಯಮೈದಾನದಲ್ಲಿ ಬ್ರಾಯನ್ ಸಾಂಚೆಝ್ ಅವರ ದೃಷ್ಟಿ ಮತ್ತು ಆಟದ ಸೃಜನಶೀಲತೆ ತಂಡಕ್ಕೆ ಬಲ ತುಂಬಿದೆ. ವಿಂಗರ್ ಅಶಿಕ್ ಕುರುಣಿಯಾನ್ ಅವರ ವೇಗವು ಎದುರಾಳಿ ರಕ್ಷಣಾ ಪಡೆಯನ್ನು ಮಣಿಸಲು ಪ್ರಮುಖ ಅಸ್ತ್ರವಾಗಿದೆ. ಹಾಗೆಯೇ ಸಿರೋಜಿದ್ದಿನ್ ಕುಝಿಯೇವ್ ಅವರ ತಾಂತ್ರಿಕ ಕೌಶಲ್ಯವು ತಂಡಕ್ಕೆ ಹೊಸ ಚೈತನ್ಯ ನೀಡಲಿದೆ. ಪಂಜಾಬ್ ಎಫ್‌ಸಿ ತಂಡವು ಮಿಡ್‌ಫೀಲ್ಡ್‌ನಲ್ಲಿ ಡ್ಯಾನಿ ರಾಮಿರೆಜ್ ಆಟದ ವೇಗವನ್ನು ನಿಯಂತ್ರಿಸಿದರೆ, ಮುಂಚೂಣಿಯಲ್ಲಿ ದೈಹಿಕವಾಗಿ ಬಲಿಷ್ಠವಾಗಿರುವ ಎಫಿಯಾಂಗ್ ನುಂಗುಸಿ ಗೋಲು ಗಳಿಸುವ ಜವಾಬ್ದಾರಿ ಹೊತ್ತಿದ್ದಾರೆ.

ಬ್ಯಾಡ್ಮಿಂಟನ್: ಭಾರತ ನೀರಸ ಆರಂಭ

• **ಹೊಸದಿಲ್ಲಿ:** ಸೂಪರ್ ಬ್ಯಾಡ್ಮಿಂಟನ್ ಪಂದ್ಯಾವಳಿಗಳಲ್ಲಿ ತಮ್ಮದೇ ವಿಶಿಷ್ಟ ಆಟಗಳ ಮೂಲಕ ವಿಶ್ವದ ಗಮನ ಸೆಳೆದಿರುವ ಭಾರತೀಯ ಶಟ್ಲರ್‌ಗಳು ತಮ್ಮ ಲಯವನ್ನು ಮುಂದುವರಿಸಲು ವಿಫಲರಾಗಿದ್ದಾರೆ. ಗುರುವಾರ ಶುರುವಾಗಿರುವ ಜರ್ಮನ್ ಓಪನ್ ಸೂಪರ್-300 ಬ್ಯಾಡ್ಮಿಂಟನ್ ಪಂದ್ಯಾವಳಿಯ ಮೊದಲ ದಿನವೇ ಭಾರತೀಯರಿಗೆ ಹಿನ್ನಡೆಯಾಗಿದೆ.



ನಾಕೌಟ್ ಮಾದರಿಯ ಕೂಟದ 32ರ ಸುತ್ತಿನ ಪಂದ್ಯದಲ್ಲಿ ಕಿರಣ್ ಜಾರ್ಜ್ ಅವರು ಟಾಪ್ ಸೀಡ್‌ನ ಕ್ರಿಸ್ಟೋ ಪೊಪೊವ್ ಅವರೊಂದಿಗೆ ಸೋತರು. 47 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಮೊದಲಿನಿಂದಲೂ ಬಿಗಿ ಹಿಡಿತ ಸಾಧಿಸಿದ ಅವರು, ಕಿರಣ್‌ಗೆ ಅವಕಾಶವೇ ನೀಡಲಿಲ್ಲ. ಆರಂಭಿಕ ಸೆಟ್‌ನಲ್ಲಿ 10 ಅಂಕವಷ್ಟೇ ಗಳಿಸಿ ನಿರಾಸೆ ಮೂಡಿಸಿದ್ದ ಕಿರಣ್ ಮುನ್ನಡೆ ಬಿಟ್ಟುಕೊಟ್ಟರು. ಮುಂದಿನ ಸೆಟ್‌ನಲ್ಲಿ ತಮ್ಮ ಪ್ರದರ್ಶನದ ದಿಕ್ಕು ಬದಲಾಯಿಸಿದರು. ಆದಾಗ್ಯೂ 20-22ರಿಂದ ಎದುರಾಳಿ ಪಂದ್ಯವನ್ನು ಗೆದ್ದು ಕಿರಣ್ ಅವರನ್ನು ಹೊರನೂಕಿದರು.

ಮತ್ತೋರ್ವ ಭಾರತೀಯ ತರುಣ್ ಮನ್ನೆಪಲ್ಲಿ ಚೀನಾದ ವಾಂಗ್ ಅವರೊಂದಿಗೆ ರೋಚಕ ಪಂದ್ಯದಲ್ಲಿ ಸೋತರು. ಅಲ್ಲಿ ಮೊದಲನೇ ಸೆಟ್‌ನಲ್ಲಿ ಗೆದ್ದು ಗೆಲುವಿನ ಹಳಿ ಆರಂಭಿಸುವ ಭರವಸೆಯಲ್ಲಿದ್ದ ಅವರಿಗೆ ನಂತರ ಭಾರೀ ಹಿನ್ನಡೆಯಾಯಿತು ಇನ್ನು ಮಹಿಳೆಯರ ವಿಭಾಗದಲ್ಲಿ ಮಾಳ್ವಿಕಾ ಬನ್ಸೋಡ್ ಅಮೆರಿಕದ ಬೇವಾನ್ ಝಾಂಗ್ ಅವರೊಂದಿಗೆ ಸೋತರು. ಮೊದಲಿಗೆ ಮುನ್ನಡೆ ಸಾಧಿಸಿದ ಮಾಳ್ವಿಕಾ ನಂತರದಲ್ಲಿ ಹಿನ್ನಡೆ ಅನುಭವಿಸಿದರು. ಇನ್ನು ತಸ್ನೀಮ್ ಮಿರ್ ಕೂಡ ವಾಂಗ್ ಝಿ ಅವರೊಂದಿಗೆ ಸೋತರು. ಆ ಪಂದ್ಯದಲ್ಲಿ ಯಾವುದೇ ಹೆಚ್ಚಿನ ಹೊಡೆದಾಟ ಕಾಣಿಸಲಿಲ್ಲ. ಮೊದಲ ಸೆಟ್‌ನಲ್ಲಿ 21-9ರಿಂದ ಗೆದ್ದ ಎದುರಾಳಿ ಎರಡನೇ ಸೆಟ್‌ನಲ್ಲಿ 21-14ರಿಂದ ಗೆದ್ದರು.

ಮೊದಲ ಸುತ್ತಿನಲ್ಲೇ ಸೋತ ಭರವಸೆಯ ಶಟ್ಲರ್ಸ್

ರಣಜಿ ಫೈನಲ್: ಸಂಕಷ್ಟದಲ್ಲಿ ಕರ್ನಾಟಕ | ಮಯಾಂಕ್ ಅಗರ್‌ವಾಲ್ ಆಸರೆ

ಪ್ರಶಸ್ತಿಯ ಸನಿಹಕ್ಕೆ ಜಮ್ಮು-ಕಾಶ್ಮೀರ

▸ ವಿಜಯಕುಮಾರ ಬೆಳ್ಳೇರಿಮಠ

• **ಹುಬ್ಬಳ್ಳಿ:** ಪ್ರವಾಸಿ ಜಮ್ಮು ಮತ್ತು ಕಾಶ್ಮೀರ ತಂಡದ ಬ್ಯಾಟರ್‌ಗಳು ಸತತ ಎರಡು ದಿನ ರಾಜ್ಯ ತಂಡದ ಬೌಲರ್‌ಗಳ ಬೆವರಿಳಿಸಿದರೆ, ಮೂರನೇ ದಿನ ಬೌಲರ್‌ಗಳು ಕಾಟ ಕೊಟ್ಟರು. ಇದರಿಂದಾಗಿ ಇಲ್ಲಿ ನಡೆದಿರುವ ರಣಜಿ ಟ್ರೋಫಿ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ ಸಂಕಷ್ಟಕ್ಕೆ ಸಿಲುಕಿದೆ. 9ನೇ ಬಾರಿ ಪ್ರಶಸ್ತಿಗೆ ಮುತ್ತಿಕ್ಕುವ ಕನಸು ಕಮರುವಂತಾಗಿದೆ. ಪಂದ್ಯದ 3ನೇ ದಿನದ ಆಟದ ಅಂತ್ಯಕ್ಕೆ ಕರ್ನಾಟಕ ತಂಡ 220ಕ್ಕೆ ಮಹತ್ವದ 5 ವಿಕೆಟ್‌ಗಳನ್ನು ಕಳೆದುಕೊಂಡು ಪರದಾಡುತ್ತಿದೆ.

ಮಯಾಂಕ್ ಆಸರೆ: ಮಾಜಿ ನಾಯಕ ಮಯಾಂಕ್ ಅಗರ್‌ವಾಲ್ ಮಾತ್ರ (207 ಎಸೆತಗಳಲ್ಲಿ ಅಜೇಯ 130) ಶತಕ ಗಳಿಸುವ ಮೂಲಕ ಕ್ರೀಸ್ ಕಾಯ್ದುಕೊಂಡು ಆಸರೆಯಾಗಿದ್ದಾರೆ. ವಿಕೆಟ್ ಕೀಪರ್ ಕೃತಿಕ್ ಕೃಷ್ಣ ಅವರಿಗೆ ಜೊತೆಯಾಗಿದ್ದಾರೆ (75 ಎಸೆತಗಳಲ್ಲಿ 27 ರನ್). ಆದರೆ, ಆತಿಥೇಯ ತಂಡ ಪ್ರಶಸ್ತಿ ಗಳಿಸಬೇಕೆಂದರೆ ಈ ಇಬ್ಬರೂ ಬ್ಯಾಟರ್‌ಗಳ ಜೊತೆಯಾಟ ಬೆಟ್ಟದಂಥ ಗುರಿಯನ್ನು ತಲುಪುವವರೆಗೂ ಮುಂದುವರಿಯಬೇಕಿರುವುದು ಅನಿವಾರ್ಯ. ಮೂರನೇ ದಿನದಾಟದ ಅತ್ಯಂಕ್ಕೆ ಆತಿಥೇಯ ಕರ್ನಾಟಕ 69 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 220 ರನ್ ಗಳಿಸಿದೆ. ಮೊದಲ ಇನಿಂಗ್ಸ್ ಲೀಡ್ ಪಡೆಯಲು ಇನ್ನೂ 364 ರನ್ ಗಳಿಸಬೇಕಿದ್ದು, ದೊಡ್ಡ ಸವಾಲನ್ನು ಮೀರುವುದು ಕಷ್ಟ ಸಾಧ್ಯವೆನ್ನಿಸಿದೆ. ಆದಾಗ್ಯೂ ಆಸರೆಯಾಗಿರುವ ಮಯಾಂಕ್ ಹೋರಾಟ ಜಾರಿಯಿಟ್ಟಿದ್ದಾರೆ.



ಚಿತ್ರ: ಮಂಜುನಾಥ ಜರತಾರಘರ

ಆರಂಭಿಕ ಆಘಾತ

ಜಮ್ಮು ಕಾಶ್ಮೀರ ತಂಡ ನೀಡಿದ ಬೃಹತ್ ಗುರಿ ಬೆನ್ನಟ್ಟಿದ ಕರ್ನಾಟಕ ಆರಂಭಿಕ ಆಘಾತ ಅನುಭವಿಸಿತು. ನಬಿ ಎಸೆದ 11ನೇ ಓವರ್‌ನಲ್ಲಿ ಭರವಸೆಯ ಆಟಗಾರ ಕೆ.ಎಲ್.ರಾಹುಲ್ (13 ರನ್, 39 ಎಸೆತ, 2 ಬೌಂಡರಿ) ವಿಕೆಟ್ ಕೀಪರ್ ಕನ್ಹಯ್ಯ ವಾಧ್ವಾನ್‌ಗೆ ಕ್ಯಾಚಿತ್ತು ನೀಡಿ ಬೇಸರದಿಂದ ಪೆವಿಲಿಯನ್‌ಗೆ ತೆರಳಿದರು. ಇನ್ನೊಂದು ಬದಿ ಬಾಲಿಂಗ್ ಮಾಡುತ್ತಿದ್ದ ಸುನೀಲ್ ಕುಮಾರ 11 ರನ್‌ಗಳಿದ್ದ ನಾಯಕ ದೇವದತ್ತ ಪಡಿಕಲ್ ಅವರ ವಿಕೆಟ್ ಉರುಳಿಸಿದರು. ಮೊದಲ ಸ್ಲಿಪ್‌ನಲ್ಲಿದ್ದ ಅಬ್ದುಲ್ ಸಮದ್ ಕೆಳ ಮಟ್ಟದಲ್ಲಿ ಬಂದ ಕ್ಯಾಚ್ ಪಡೆದು ಸಂಭ್ರಮಿಸಿದರು. ನಬಿ ಎಸೆದ 18ನೇ ಓವರ್‌ನಲ್ಲಿ ಕರುಣ್ ನಾಯರ್ ಹಾಗೂ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಆರ್. ಸ್ಮರಣ್ ಸಹ ಸೊನ್ನೆ ಸುತ್ತಿದರು.

ಸಂಕ್ಷಿಪ್ತ ಸ್ಕೋರ್

ಜಮ್ಮು ಕಾಶ್ಮೀರ 584/10(173.1 ಓ)
ಲೋತ್ರಾ; 72, ಆಬಿದ್ ಮುಷ್ತಾಕ 28, ಆಕೀಬ್ ನಬಿ 2, ಯುಧವೀರ 30, ಸುನೀಲಕುಮಾರ 1
ಕರ್ನಾಟಕ ಬೌಲಿಂಗ್:
ಪ್ರಸಿದ್ಧ 5 ವಿಕೆಟ್, 34.1 ಓವರ್, 98 ರನ್,
ಕರ್ನಾಟಕ 220-5(69)
ಕೆ.ಎಲ್.ರಾಹುಲ್; 13, ಮಯಂಕ್: ಔಟಾಗದೆ 130 ರನ್, 207 ಎ, 17 ಬೌ, ಶ್ರೇಯಸ್; 27 ರನ್, 83 ಎ, 1 ಬೌ, ಕೃತಿಕ್ : ಬ್ಯಾಟಿಂಗ್ 27 ರನ್, 75 ಎ, 2 ಬೌ.
ಜಮ್ಮು ಕಾಶ್ಮೀರ ಬೌಲಿಂಗ್
ಆಕೀಬ್ ನಬಿ: 3 ವಿಕೆಟ್, 14 ಓವರ್, 32 ರನ್

ಮೂರನೇ ದಿನ ಆಗಿದ್ದೇನು?

ಮೂರನೇ ದಿನದಾಟದ ಮೊದಲ ಅವಧಿಯಲ್ಲಿ ರಾಜ್ಯದ ಬೌಲರ್‌ಗಳು ಮಿಕ್ಕ ನಾಲ್ಕು ವಿಕೆಟ್ ಗಳಿಸಿದರಾದರೂ ಅಷ್ಟರೊಳಗೆ ಕಾಶ್ಮೀರ ತಂಡ 584 ರನ್ ಗಳಿಸಿಯಾಗಿತ್ತು. ಬ್ಯಾಟಿಂಗ್‌ಗೆ ಅನುಕೂಲಕರ ವಾತಾವರಣ ಕಲ್ಪಿಸಿರುವ ಪಿಚ್‌ನಲ್ಲಿ ಕರ್ನಾಟಕದ ಆಟಗಾರರೂ ತಕ್ಕ ಉತ್ತರ ನೀಡಬಹುದು ಎಂಬ ನಿರೀಕ್ಷೆಯನ್ನು ವೇಗದ ಬೌಲರ್ ಅಕಿಬ್ ನಬಿ ದಾರ್ (14 ಓವರ್‌ಗಳಲ್ಲಿ 32ಕ್ಕೆ 3 ವಿಕೆಟ್) ಹುಸಿಯಾಗಿಸಿದರು. ಸುನೀಲ್ ಕುಮಾರ್ ಹಾಗೂ ಯುಧವೀರ್ ಸಿಂಗ್ ಸಹ ತಲಾ ಒಂದು ವಿಕೆಟ್ ಗಳಿಸುವ ಮೂಲಕ ಅಕಿಬ್ ನಬಿ ಅವರಿಗೆ ಸಾಥ್ ನೀಡಿದರು. ಇವರಿಬ್ಬರ ದಾಳಿಗೆ ಕರ್ನಾಟಕ ಬ್ಯಾಟಿಗರು ಹಿನ್ನಡೆ ಅನುಭವಿಸಿದರು. ಪಡಿಕ್ಕಲ್, ಕರುಣ್ ಮತ್ತು ಸ್ಮರಣ್ ಕೈಕೊಟ್ಟರು.

ಚೆಸ್: ಗುಕೇಶ್ ಪಂದ್ಯ ಡ್ರಾ

• **ಹೊಸದಿಲ್ಲಿ:** ಪೋರ್ಜುಗಲ್ ಚೆಸ್ ಫೆಸ್ಟಿವಲ್ ಮಾಸ್ಟರ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅಮೆರಿಕದ ಹಂಸ್ ನೀಮನ್ ವಿರುದ್ಧ ಕಠಿಣ ಹೋರಾಟದ ಬಳಿಕ ಡ್ರಾಗೆ ತೃಪ್ತಿಪಟ್ಟರು. ಪಂದ್ಯ ರೋಚಕವಾಗಿತ್ತು. ಕಪ್ಪು ಕಾಯಿಗಳೊಂದಿಗೆ ಆಡಿದ ಗುಕೇಶ್ ಮೊದಲಿನಿಂದಲೂ ಚಾಣಾಕ್ಷ ಆಟವಾಡಿ ದರು. ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಮಧ್ಯಮದಲ್ಲಿ ಅಲ್ಪ ಮುನ್ನಡೆ ಸಾಧಿಸಿದರೂ ಕೊನೆಯಲ್ಲಿ ಪಂದ್ಯ ಡ್ರಾಗೆ ತಲುಪಿತು. ಹಾಲಿ ಚಾಂಪಿಯನ್



ಅರ್ವಿಂದ್ ಚಿತಂಬರಂ ಉಜ್ಬೆಕಿಸ್ತಾನದ ನೋಡಿರ್‌ಬೇಕ್ ಅವರೊಂದಿಗೆ ವಿರುದ್ಧ ಸೋಲನುಭವಿಸಿದರು. ಫಿಲಿಡರ್ ಡಿಫೆನ್ಸ್ ಆಡಿದ ಅರವಿಂದ್, ಕೊನೆಯಲ್ಲಿ ಚಾಣಾಕ್ಷ್ಯತೆ ಮೆರೆದರೂ ಗೆಲ್ಲಲು ಸಾಕಾಗಲಿಲ್ಲ. ಕನಿಷ್ಠ ಪಕ್ಷ ಡ್ರಾ ಮಾಡಿಕೊಳ್ಳಲೂ ಆಗಲಿಲ್ಲ. ಜರ್ಮನಿಯ ಟಾಪ್ ಸೀಡ್ ಕೇಮರ್ ನೆದರ್ಲೆಂಡ್ಸ್ ಆಟಗಾರ ಜಾರ್ಡನ್ ವಿರುದ್ಧ ಸೋಲು ಕಂಡರು. ಬರ್ಲಿನ್ ಡಿಫೆನ್ಸ್‌ನ ಹೊಸ ಆಲೋಚನೆಯಿಂದ ಕೀಮರ್ ಗೊಂದಲಕ್ಕೀಡಾದರು. ಉಜ್ಬೆಕಿಸ್ತಾನದ ಯಾಕೂಬ್ಬೊವ್ ಸ್ಪೇನ್‌ನ ಈಚಡಜಿಥ ಆಲ್ಬ್ರಿಟ್ಟ ಎಜ್ಜಿಚ್ಚಿಟ ವಿರುದ್ಧ ಜಯಿಸಿದರು. ಸ್ಥಳೀಯ ಆಟಗಾರ ಡೆವಿಡ್ ನವಾರಾ ಇರಾನ್‌ನ ಪರ್ಹಾವನ್ ವಿರುದ್ಧ ಮೇಲುಗೈ ಸಾಧಿಸಿದರು.

ಚಾಲೆಂಜರ್ಸ್ ವಿಭಾಗದಲ್ಲಿ: ಚಾಲೆಂಜರ್ಸ್ ವಿಭಾಗದಲ್ಲಿ ಮಹಿಳಾ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಹಂಗೇರಿಯ ಟಾಪ್ ಸೀಡ್ ಬೆಂಜಾಮಿನ್ ಗ್ಲೇಡುರಾ ವಿರುದ್ಧ ಉತ್ತಮ ಗೆಲ್ಲುವ ಹಂತಕ್ಕೆ ಹೋದರೂ ಡ್ರಾಗೆ ತೃಪ್ತಿಪಟ್ಟರು. ಇನ್ನೊಂದೆಡೆ ಭಾರತದ ಸೂರ್ಯ ಶೇಖರ್ ನೆದರ್‌ಲ್ಯಾಂಡ್ಸ್‌ನ ಥಾಮಸ್ ವಿರುದ್ಧ ಸೋಲು ಕಂಡರು.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5908

ಎಡದಿಂದ ಬಲಕ್ಕೆ
1.ಒದಗಿ ಬಂದ ಸುಸಂದರ್ಭ (3)
3.ಸಾಯುವವರೆಗೂ ಎಂಬರ್ಥದ ಶಬ್ದ (5)
5.ಸಂತೋಷದ ಸಮಾನಪದ (3)
7.ಕಾಷ್ಠ, ಸರಳಭಾಷೆಯಲ್ಲಿ (3)
8.ವರ್ಗಕೋಣೆಯಲ್ಲಿ ಇರುವಿಕೆ (3)
9. ಅರದ ನಡುವೆ ಕಳವಳಗೊಂಡವನಿದ್ದಾನೆ (3)
10. ಬೇಡಿದ್ದನ್ನು ಕೊಡುವ ಆಕಳು (3)
11. ಹಾಡುಗಾರನಿಲ್ಲಿ ತಿರುಗಿದ್ದಾನೆ (3)
12. ಗಂಗೆಯೊಂದಿಗೆ ಇರುವ ಜೋಡುನದಿ (3)
13. ಸೂರ್ಯನ ಮಗನಾಗಿ ಕರ್ಣ (3)
15. ತಲೆದೋರಿದ ದುಡ್ಡಿನ ಬರ (5)
16. ಕಟುವಿನ ನಡುವೆ ಕೊಳೆಯಿದೆ (3)

ಮೇಲಿನಿಂದ ಕೆಳಕ್ಕೆ
2.ಕಾಲುವೆಗೆ ಬಿದ್ದ ಹುರಿಯುವ ಹೆಂಚು (3)
3.ಪದವಿ-ಉನ್ನತಸ್ಥಾನ ಹೊಂದಿದವ (4)
4.ಹುಣ್ಣಿಮೆ-ಅಮಾವಾಸ್ಯೆಯ ನಂತರದ ಮೂರನೆಯ ದಿನ (3)
6.ವಿಷಸರ್ಪ ಚಲನಚಿತ್ರವಾಗಿ ತಲೆಕೆಳಗಾಗಿದೆ (5)
7.ನಸುಕಿನಲ್ಲಿ ಕರ ಹಿಡಿದು ದಾರಿ ತೋರಿದ ಆಶಾವಾದಿ (5)
11.ಹಕ್ಕಿಗಳ ಮಧುರವಾದ ಧ್ವನಿ (4)
12. ಯೌವನವಿಲ್ಲಿ ತಲೆಕೆಳಗಾಗಿದೆ (3)
14.ಉಸಿರಾಡುವ ಗಾಳಿಯಷ್ಟೇ ನಂಬಿಕೆ (3)

5907 ಉತ್ತರ

ಎಡದಿಂದ ಬಲಕ್ಕೆ:
1.ಗಿರಿಧರ
3.ವಿತರಕ 5.ನರ್ತನ
6.ಯುಗಾಂತರ
8.ರವಿವಾರ 10.ಅನುಜ
11.ನಮನ 13.ಪುರಾಣ
15.ನವರಾತ್ರಿ
16.ಗಲಿಬಿಲಿ

ಮೇಲಿನಿಂದ ಕೆಳಕ್ಕೆ :
1.ಗಿಟುಕುಹಾಯು
2.ರತನ 3.ವಿಜ್ಞಾನ
4.ಕಳ್ಳವ್ಯಾಪಾರ 7.ತನುಜ
9.ವಿಮಾನ 10.ಅರ್ಜುನ
12.ನಕಲಿ 12.ಪುತ್ರಿ
14.ಗಣ

ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಆಕ್ರೋಶ

ಅಲ್ಪಸಂಖ್ಯಾತರ ಗುಲಾಮಗಿರಿ ಸರ್ಕಾರ

ಶಿವಾಜಿ ಮೆರವಣಿಗೆ ಮೇಲೆ ಕಲ್ಲು ತೂರಾಟ ಪ್ರಕರಣ



ಬಾಗಲಕೋಟೆ: ಮುಸ್ಲಿಂ ಸಮುದಾಯದವರನ್ನು ಮತಬ್ಯಾಂಕ್ ಸಲುವಾಗಿ ಮತ್ತು ಓಲೈಕೆ ಮಾಡುತ್ತಿರುವುದರಿಂದ ಸಮಾಜದಲ್ಲಿ ಸ್ವಾಸ್ಥ್ಯ ಹಾಳಾಗುತ್ತಿದ್ದು, ಅಲ್ಪಸಂಖ್ಯಾತರ ಗುಲಾಮಗಿರಿ ಸರ್ಕಾರ ರಾಜ್ಯದಲ್ಲಿದೆ. ರಾಜ್ಯದ ಮುಖ್ಯಮಂತ್ರಿ, ಮಂತ್ರಿಮಂಡಲಕ್ಕೆ ನಾಚಿಕೆಯಾಗಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯ ಮೆರವಣಿಗೆಯಲ್ಲಿ ಪಂಕಾ ಮಸೀದಿಯಿಂದ ಕಲ್ಲು ತೂರಾಟ ಪ್ರಕರಣ ಖಂಡಿಸಿ ನವನಗರದ ಜಿಲ್ಲಾ ಆಡಳಿತ ಭವನದ ಎದುರು ಹಿಂದೂ ರಕ್ಷಣಾ ಸಮಿತಿಯಿಂದ ಆಯೋಜಿಸಿದ್ದ ಬೃಹತ್ ಪ್ರತಿಭಟನಾ ಸಭೆ ಉದ್ದೇಶಿಸಿ ಅವರು ಮಾತನಾಡಿದರು.

ಹಿಂದೂಗಳ ಮೆರವಣಿಗೆಯ ಸಂದರ್ಭದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಇಲಾಖೆ ಜಾಗೃತಗೊಂಡಿದ್ದರೆ ಕಲ್ಲು ತೂರಾಟದ ಪ್ರಕರಣ ಕಿಡಿಗೇಡಿಗಳಿಂದ ನಡೆಯುತ್ತಿರಲಿಲ್ಲ ಎಂದು ಹೇಳಿದರು. ರಾತ್ರಿ 10 ಗಂಟೆಯಾದರೂ ನೂರಾರು ಜನ ಹಿಂದೂಗಳ ಮೆರವಣಿಗೆ ಹೋಗುವ ಸಂದರ್ಭದಲ್ಲಿ ಪಂಕಾ ಮಸೀದಿಯಲ್ಲಿ ಸೇರುತ್ತಾರೆಂದರೆ ಇದೊಂದು ಪೂರ್ವನಿಯೋಜಿತ ಕೃತ್ಯವಾಗಿದೆ. ಎಸ್ಪಿಯವರ ಮೇಲೆಯೂ ಕಲ್ಲು ಬಿದ್ದರೂ ಮಸೀದಿಯಲ್ಲಿದ್ದವರ ಮೇಲೆ ಕ್ರಮ ಆಗುತ್ತಿಲ್ಲವೆಂದರೆ ಪೊಲೀಸ್ ಇಲಾಖೆ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದರು.

ಕೊಡಗಿನ ಹಿಂದೂ ಜಾಗರಣ ವೇದಿಕೆಯ ಮುಖಂಡ ಉಲ್ಲಾಸ ಮಾತನಾಡಿ, ಹಿಂದೂಗಳ ಮೆರವಣಿಗೆಯಲ್ಲಿ ಕಲ್ಲು ತೂರಾಟ, ದಾಳಿ ನಿರಂತರವಾಗಿ ನಡೆಯುತ್ತಿದೆ. ಕೆಜೆ ಹಳ್ಳಿಯಲ್ಲಿ ಬೆಂಕಿ ಹಚ್ಚಿರುವುದು, ದಾವಣಗೆರೆಯಲ್ಲಿ ಗಣೇಶ ಮೆರವಣಿಗೆ, ನಾಗಮಂಗಲ, ಇತ್ತೀಚೆಗೆ ಬಾಗಲಕೋಟೆಯಲ್ಲಿ ಶಿವಾಜಿ ಮೆರವಣಿಗೆ ಮೇಲೆ ಕಲ್ಲು ತೂರಾಟ, ಚಪ್ಪಲಿ ಎಸೆಯುತ್ತಿರುವುದನ್ನು ನೋಡಿದರೆ ಹಿಂದೂಗಳ ಭಾವನೆಗೆ ಧಕ್ಕೆ ತರುವ ಕೆಲಸ ಮತಾಂಧ ಶಕ್ತಿಗಳು ಮಾಡುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದೂಗಳ ಮೇಲೆ ಪದೇ ಪದೆ ನಡೆಯುತ್ತಿರುವ ದಾಳಿ ನಿಲ್ಲಬೇಕಾದರೆ ಮೊದಲು ಮತಾಂಧ ಶಕ್ತಿಗಳ ಅಟ್ಟಹಾಸವನ್ನು ಬಂದ್ ಮಾಡಬೇಕು. ಬಾಗಲಕೋಟೆಯ ಪಂಕಾ ಮಸೀದಿಯನ್ನು ಬಂದ್ ಮಾಡಬೇಕು. ಅಶಾಂತಿ, ಕೋಮು ಗಲಭೆ, ಅರಾಜಕತೆ ಸೃಷ್ಟಿಸುವವರ ಮೇಲೆ ಪೊಲೀಸ್ ಇಲಾಖೆ, ಜಿಲ್ಲಾ ಆಡಳಿತ ಗಂಭೀರವಾಗಿ ಪರಿಗಣಿಸಿ ಅಂತಹವರ ಮೇಲೆ ಪ್ರಕರಣ ದಾಖಲಿಸಿ ಬಂಧನ ಮಾಡಬೇಕು.

ದೇವಸ್ಥಾನದಲ್ಲಿ ಗಂಟೆ ಸದ್ದು ಕೇಳುತ್ತದೆ ಎಂದು ದೂರು ಕೊಡುವವರು ದಿನಕ್ಕೆ ಐದು ಬಾರಿ ಮಸೀದಿಯಲ್ಲಿ ಪ್ರಾರ್ಥನೆ ಮಾಡುವ ಸಂದರ್ಭದಲ್ಲಿ ಕೇಳಿ ಬರುವ ಶಬ್ದದಿಂದ ಎಷ್ಟು ತೊಂದರೆಯಾಗುತ್ತಿದೆ. ಸಮಾಜಕ್ಕೆ ಕಿರಿಕಿರಿಯಾಗುತ್ತಿರುವ ಬಗ್ಗೆ ಅರಿತುಕೊಳ್ಳಬೇಕು ಎಂದು ಹೇಳಿದರು.

ಬಿಗಿ ಭದ್ರತೆ ಇದ್ದರೂ ಹೋರಾಟ

ನಗರದಲ್ಲಿ ನಿಷೇಧಾಜ್ಞೆ ಜಾರಿ ಮಾಡಿದ್ದರಿಂದ ಹೋರಾಟವನ್ನು ನವನಗರಕ್ಕೆ ಸ್ಥಳಾಂತರಿಸಲಾಯಿತು. ಹೋರಾಟದಲ್ಲಿ ಭಾಗವಹಿಸದಂತೆ ಜಾಗೃತಿ ಮೂಡಿಸುವುದು, ಬಿಗಿ ಭದ್ರತೆಯನ್ನು ಪೊಲೀಸ್ ಇಲಾಖೆ ಕೈಗೊಂಡರೂ ಹಿಂದೂಗಳ ಪ್ರತಿಭಟನೆ ನಡೆಯಿತು.

ಮಸೀದಿ ಮುಖ್ಯಸ್ಥರನ್ನು ಬಂಧನ ಮಾಡಬೇಕು. ಘಟನೆಯಲ್ಲಿ ಭಾಗಿಯಾದವರನ್ನೆಲ್ಲಾ ಬಂಧನ ಮಾಡುವುದು, ಪಂಕಾ ಮಸೀಸಿ ಸೀಜ್ ಮಾಡುವಂತೆ ಒತ್ತಾಯಿಸಿರುವ ಮನವಿಯನ್ನು ಹಿಂದೂ ರಕ್ಷಣಾ ಸಮಿತಿಯಿಂದ ಜಿಲ್ಲಾಧಿಕಾರಿ ಸಂಗಪ್ಪನವರಿಗೆ ಮನವಿ ಸಲ್ಲಿಸಲಾಯಿತು.

ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಮಾಜಿ ಶಾಸಕ ರಾಜಶೇಖರ ಶೀಲವಂತ, ಪ್ರಭು ಹಡಗಲಿ, ಎಂ.ಆರ್.ಸಿಂಧೆ, ಶಿವು ಮೇಲ್ನಾಡ, ಅಶೋಕ ಮುತ್ತಿನಮಠ, ಬಸವರಾಜ ಯಕಂಚಿ, ಕುಮಾರಸ್ವಾಮಿ ಹಿರೇಮಠ, ಕಿರಣ್ ಪವಾಡಶೆಟ್ಟರ, ಸುರೇಶ ಮಾಗಿ, ಸಂಗಪ್ಪ ಗಾಣಿಗೇರ, ಶಶಿಕಲಾ ಮಜ್ಜಗಿ, ಉಮೇಶ ಹಂಚಿನಾಳ, ಬಸವರಾಜ ಹುನಗುಂದ, ಸುರೇಶ ಮಾಗಿ ಇದ್ದರು.

ಮಾರಿಕಾಂಬಾ ದರ್ಶನಕ್ಕೆ ಹರಿದು ಬಂದ ಭಕ್ತಗಣ



ಶಿರಸಿ: ರಾಜ್ಯದ ಪ್ರಸಿದ್ಧ ಶಿರಸಿ ಶ್ರೀ ಮಾರಿಕಾಂಬಾ ದೇವಿಯ ಜಾತ್ರಾ ಮಹೋತ್ಸವದ ಸೇವಾ ವಿಧಿ-ವಿಧಾನಗಳು ಗುರುವಾರದಿಂದ ಆರಂಭಗೊಂಡಿದ್ದು, ಮೊದಲ ದಿನವೇ ಸಹಸ್ರಾರು ಭಕ್ತರು ಅಮ್ಮನ ದರ್ಶನ ಪಡೆದು ಧನ್ಯರಾದರು.

ಪೂಜಾ ಕಾರ್ಯಕ್ರಮಗಳ ಮೊದಲ ದಿನವೇ ಭಕ್ತಸಾಗರ ಹರಿದು ಬಂದಿದ್ದು, ಶಿರಸಿ ನಗರವು ಭಕ್ತಿ ಪರವಶತೆಯಲ್ಲಿ ಮುಳುಗಿದೆ.

ದೂರದೂರುಗಳಿಂದ ಆಗಮಿಸಿದ ಭಕ್ತಾದಿಗಳು ನಸುಕಿನಿಂದಲೇ ದೇವಿಯ ದರ್ಶನಕ್ಕಾಗಿ ಸುದೀರ್ಘ ಸರತಿ ಸಾಲಿನಲ್ಲಿ ನಿಂತಿದ್ದರು. ನಗರದ ಮಾರಿಕಾಂಬಾ ದೇವಸ್ಥಾನದಿಂದ ಬಿಡಕಿಬೈಲಿನ ಜಾತ್ರಾ ಮಂಟಪದವರೆಗೂ ಭಕ್ತರು ಸಾಲುಗಟ್ಟಿ ನಿಂತು ಹಣ್ಣು-ಕಾಯಿ, ಕಾಣಿಕೆ, ಹರಕೆ ಹಾಗೂ ತುಲಾಭಾರದಂತಹ ವಿವಿಧ ಸೇವೆಗಳನ್ನು ಸಲ್ಲಿಸಿ ಅಮ್ಮನ ಕೃಪೆಗೆ ಪಾತ್ರರಾದರು.

ಮುಂಜಾನೆ ಭಕ್ತರ ದಟ್ಟಣೆ ಹೆಚ್ಚಿದ್ದರೂ, ಮಧ್ಯಾಹ್ನದ ವೇಳೆಗೆ ಬಿಸಿಲಿನ ತಾಪದಿಂದಾಗಿ ಸಂಖ್ಯೆ ಕೊಂಚ ವಿರಳವಾಗಿತ್ತು. ದೇವಸ್ಥಾನದ ವತಿಯಿಂದ ಆಯೋಜಿಸಲಾಗಿದ್ದ ಅನ್ನಪ್ರಸಾದ ಸೇವಿಸಿದ ಭಕ್ತರು ಸಂಜೆಯ ನಂತರ ಮತ್ತೆ ಜಾತ್ರಾ ಗದ್ದಲದತ್ತ ಮುಖ ಮಾಡಿದರು.

ಸಂಜೆ 6 ಗಂಟೆಯ ನಂತರ ಜಾತ್ರಾ ಮೈದಾನವು ಕಳೆಗಟ್ಟಿದ್ದು, ಸರ್ಕಸ್, ಸಾವಿನ ಬಾವಿ, ಜೋಕಾಲಿ ಹಾಗೂ ವಿವಿಧ ಮಳಿಗೆಗಳ ಮುಂದೆ ಜನಜಂಗುಳಿ ಕಂಡುಬಂದಿತು. ಬಿಸಿಲಿನಲ್ಲಿ ಬಂದ ಭಕ್ತರ ದಾಹ ತಣಿಸಲು ಶಿವಾಜಿ ಚೌಕ ಸೇರಿದಂತೆ ವಿವಿಧೆಡೆ ಹಿಂದೂ ಸಂಘಟನೆಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳು ಪಾನಕ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದವು.

ಜಾತ್ರಾ ಮಂಟಪಕ್ಕೆ ಶಾಸಕ ಭೀಮಣ್ಣ ನಾಯ್ಕ ಭೇಟಿ ನೀಡಿ ಭಕ್ತರ ಅನುಕೂಲ ಹಾಗೂ ಸಿದ್ಧತೆಗಳನ್ನು ಪರಿಶೀಲಿಸಿ ಅಧಿಕಾರಿಗಳಿಗೆ ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಸಚಿವ ಮಧು ಬಂಗಾರಪ್ಪ ಅವರ ಪತ್ನಿ ಹಾಗೂ ಪುತ್ರ ದೇವಿಯ ದರ್ಶನ ಪಡೆದರು.

ರಾಮಲಿಂಗೇಶ್ವರ ದೇವಸ್ಥಾನ ಕಮೀಟಿ ಕಾರ್ಯ ಶ್ಲಾಘನೀಯ: ಶ್ರೀಗಳು



ನವಲಗುಂದ: ನವಲಗುಂದ ಭಕ್ತರು ಜಾಗೃತ ಭಕ್ತರು. ಇಲ್ಲಿ ಧರ್ಮ ಪ್ರಸಾರ, ಜ್ಞಾನ ದಾಸೋಹ ನಿತ್ಯ ನಿರಂತರ. ನವಲಗುಂದ ರಾಮಲಿಂಗ ಕಾಮದೇವನ ದೇಗುಲ ಅತ್ಯಂತ ಜಾಗೃತ ದೇವಸ್ಥಾನ ಎಂದು ಶಿರಹಟ್ಟಿಯ ಭಾವೈಕ್ಯತಾ ಮಹಾ ಸಂಸ್ಥಾನ ಪೀಠದ ಫಕೀರ ಸಿದ್ಧರಾಮ ಶ್ರೀಗಳು ಹೇಳಿದರು.

ಅವರು ಗುರುವಾರ ರಾಮಲಿಂಗ ದೇವಾಲಯದ ಕಳಸಾರೋಹಣ, ಕಾರ್ಯಾಲಯ, ಯಾತ್ರಿ ನಿವಾಸ ಉದ್ಘಾಟನೆಯ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಕಲಿಯುಗದ ಕಾಮಧೇನು ಇಷ್ಟಾರ್ಥ ಸಿದ್ಧಿಗಳ ದಯಪಾಲಿಸುವ ಕಾಮದೇವನಿಗೆ ದೇವಾಲಯ ಇರುವುದು ನವಲಗುಂದದಲ್ಲಿ ಮಾತ್ರ. ಇದು ನವಲಗುಂದದ ಹಿರಿಮೆ. ಇಂದು ರಾಮಲಿಂಗೇಶ್ವರ ಕಾಮದೇವನಿಗೆ ಬರುವ ಭಕ್ತರ ಸಂಖ್ಯೆ ಲಕ್ಷೋಪಲಕ್ಷವಾಗಿದ್ದು, ಅವರಿಗೆ ಸಕಲ ಸೌಲಭ್ಯ ಕಲ್ಪಿಸುತ್ತಿರುವ ಕಮೀಟಿಯವರ ಕಾರ್ಯ ಶ್ಲಾಘನೀಯ. ಭಕ್ತರ ಮನೆಗಳ ಹಸ್ತಾಂತರ ನಡೆಯುತ್ತಿರುವುದು ಸಂತಸ. ಸರ್ವ ಭಕ್ತರಿಗೂ ಶುಭವಾಗಲಿ. ಇಂಥ ಭಕ್ತಗಣ ಇರುವಲ್ಲಿ ಶಾಂತಿ ಸೌಹಾರ್ದ ಬೀಡು ಆಗುತ್ತದೆ ಎಂದರು.

ಸಾನ್ನಿಧ್ಯವನ್ನು ಪಂಚಗ್ರಹ ಹಿರೇಮಠದ ಸಿದ್ದೇಶ್ವರ ಶಿವಾಚಾರ್ಯ ಶ್ರೀಗಳು, ಗವಿಮಠದ ಬಸಲಿಂಗ ಶ್ರೀಗಳು, ನಿಯೋಜಿತ ವೀರಬಸವ ದೇವರು ವಹಿಸಿದ್ದರು. ಮಾಜಿ ಸಚಿವ ಕೆ ಎನ್ ಗಡ್ಡಿ, ಮುಖಂಡರಾದ ಮಲ್ಲಿಕಾರ್ಜುನ ಜಲಾದಿ, ವಿ.ಟಿ.ಕರಿಸಕ್ರಣ್ಣವರ, ಶಶಿಧರ ಭರತಭೂಜನಮಠ, ಪಾಂಡಪ್ಪ ಕೋನರಡ್ಡಿ, ನರಸಿಂಹ ಇನಾಮತಿ, ಯಲ್ಲಪ್ಪ ಭೋವಿ, ಬಸವರಾಜ ಚಕ್ರಸಾಲಿ, ವೆಂಕಣ್ಣ ಗಾಯಕವಾಡ, ಉಮೇಶ ಕುರಹಟ್ಟಿ, ಈರಪ್ಪ ಪುಗಶೆಟ್ಟಿ, ನಾಗಪ್ಪ ಭೋವಿ, ಫಕೀರಪ್ಪ ಪೂಜಾರ, ವೀರಯ್ಯ ವಿರಕ್ತಮಠ ಉಪಸ್ಥಿರಿದ್ದರು.

ಅಡಿವೆಪ್ಪ ಕಮತರ ಪ್ರಾರ್ಥಿಸಿದರು. ಆರ್.ಎಚ್.ನೇಗಲಿ ಹಾಗೂ ಎ.ಬಿ.ಕೊಪ್ಪದ ನಿರೂಪಿಸಿದರು. ಅಣ್ಣಪ್ಪ ಬಾಗಿ ಸ್ವಾಗತಿಸಿದರು. ಪ್ರಸ್ತಾವಿಕವಾಗಿ ಹುಚ್ಚಪ್ಪ ಭೋವಿ ಮಾತನಾಡಿದರು. ಪ್ರಕಾಶ ಹೂಗಾರ ವಂದಿಸಿದರು.

ಇಂದು ಜೆಡಿಎಸ್ ಬೆಳ್ಳಿಹಬ್ಬ

ವಿಜಯಪುರ: ನಗರ ಹೊರ ವಲಯ ಸಿಂದಗಿ ಬೈಪಾಸ್ ಹತ್ತಿರ ಕಿತ್ತೂರು ಕರ್ನಾಟಕ ಭಾಗದ ಜೆಡಿಎಸ್ ಬೆಳ್ಳಿಹಬ್ಬ ಜನತಾ ಸಮಾವೇಶ ಫೆ.27ರಂದು ಬೆಳಗ್ಗೆ 11.30ಕ್ಕೆ ಹಮ್ಮಿಕೊಳ್ಳಲಾಗಿದ್ದು, ಸಮಾವೇಶ ಯಶಸ್ವಿ ಮಾಡುವಂತೆ ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಅಂದಿನ ಕಾರ್ಯಕ್ರಮಕ್ಕೆ ವಿಜಯಪುರಕ್ಕೆ ಮಾಜಿ ಪ್ರಧಾನಿಗಳು ಹಾಗೂ ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ಆಗಮಿಸಲಿದ್ದಾರೆ. ಕೇಂದ್ರ ಸಚಿವರು ಹಾಗೂ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ, ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕಾಂಗ ಪಕ್ಷದ ನಾಯಕ ಸುರೇಶ ಬಾಬು, ಉಪನಾಯಕ ಶಾರದಾ ಪೂರ್ಯಾ ನಾಯ್ಕ ಸೇರಿದಂತೆ ಪಕ್ಷದ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು ರಾಜ್ಯಮಟ್ಟದ ಹಾಗೂ ಕಿತ್ತೂರ ಕರ್ನಾಟಕ ಭಾಗದ ಹಲವು ಜೆಡಿಎಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಭಾಗಿ ಆಗಲಿದ್ದಾರೆ ಎಂದು ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಕಳ್ಳತನ: ಸ್ಥಳಕ್ಕೆ ಪೊಲೀಸರ ಭೇಟಿ, ಪರಿಶೀಲನೆ



ಅಂಕೋಲಾ: ತಾಲೂಕಿನ ಡೋಂಗ್ರಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಇತ್ತೀಚೆಗೆ ಕಳ್ಳತನ ಪ್ರಕರಣಗಳು ನಿರಂತರವಾಗಿ ಹೆಚ್ಚು ನಡೆಯುತ್ತಿವೆ. ಈ ಸಂಬಂಧ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಾದ ದೀಪನ್ ಎಂ.ಎನ್ ಅವರು ಗುರುವಾರ ಸಂಜೆ ಮೂರು ಬಾರಿ ಕಳ್ಳತನ ನಡೆದ ಕಲ್ವತರು ಸೊಸೈಟಿ ಹೆಗ್ಗಾರಕ್ಕೆ ಭೇಟಿ ನೀಡಿದರು. ನೆರೆದ ಸ್ಥಳೀಯರೊಂದಿಗೆ ಸುದೀರ್ಘವಾಗಿ ಚರ್ಚಿಸಿ, ಕಳ್ಳನನ್ನು ಪತ್ತೆ ಹಚ್ಚಲು ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡವನ್ನು ರಚಿಸಲಾಗುವುದು ಎಂದು ತಿಳಿಸಿದರು. ಸಾರ್ವಜನಿಕರು ಇತ್ತೀಚೆಗೆ ನಡೆದಿರುವ ಕಳ್ಳತನದ ಕುರಿತು ಮಾಹಿತಿ ನೀಡಿದರು. ವರಿಷ್ಠಾಧಿಕಾರಿಗಳು ಜನರೊಂದಿಗೆ ಅತ್ಯಂತ ತಾಳ್ಮೆ, ಸಂಯಮದೊಂದಿಗೆ ಅವರ ಅಹವಾಲನ್ನು ಕೇಳಿದರು. ಇವರ ಭೇಟಿ ಜನರಲ್ಲಿ ಹೊಸ ಭರವಸೆ ಮೂಡಿಸಿದೆ. ಈ ಸಂದರ್ಭದಲ್ಲಿ ಅಂಕೋಲಾ ಸಿಪಿಐ ಚಂದ್ರಶೇಖರ ಮಠಪತಿ, ಪಿಎಸ್ಐ ಹಾಗೂ ಸಿಬ್ಬಂದಿ, ಸ್ಥಳೀಯರು ಇದ್ದರು.

ಅಂತಿಮ ಹಂತ ತಲುಪಿದ ಯೋಜನೆ

ಹಳಿಯಾಳ: ತಾಲೂಕಿನ 46 ಕೆರೆಗಳು ಹಾಗೂ 19 ಬಾಂದಾರಗಳಿಗೆ ಕಾಳಿ ನದಿಯಿಂದ ನೀರು ತುಂಬಿಸುವ ಮಹತ್ವಾಕಾಂಕ್ಷೆಯ ಯೋಜನೆ ಈಗ ಅಂತಿಮ ಹಂತ ತಲುಪಿದೆ. ಅಗತ್ಯವಿರುವ ಎಲ್ಲಾ ಅನುಮತಿಗಳು ಪೂರ್ಣಗೊಂಡಿದ್ದು, ತಾಂತ್ರಿಕ ಕಾರ್ಯಗಳುಸಮರ್ಪಕವಾಗಿ ಸಾಗುತ್ತಿವೆ. ಇಂತಹ ನಿರ್ಣಾಯಕ ಸಂದರ್ಭದಲ್ಲಿ ಅನಗತ್ಯ ಪ್ರತಿಭಟನೆಗಳು ಹಾಗೂ ಗೊಂದಲ ಸೃಷ್ಟಿಸುವ ಪ್ರಯತ್ನಗಳಿಂದ ಯೋಜನೆಯ ಸುಗಮ ಅನುಷ್ಠಾನದಲ್ಲಿ ಹಿನ್ನಡೆಯಾಗುವ ಸಾಧ್ಯತೆ ಇದೆ ಎಂದು ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು. ಗುರುವಾರ ಸಂಜೆ ತುರ್ತು ಪತ್ರಿಕಾ ಹೇಳಿಕೆ ನೀಡಿರುವ ಅವರು ಇಷ್ಟು ದಿನಗಳ ಕಾಲ ತಾಳ್ಮೆಯಿಂದ ಕಾಯುತ್ತಿರುವ ರೈತ ಬಂಧುಗಳು, ಈ ಸಂದರ್ಭದಲ್ಲಿ ವಿವೇಚನೆಯೊಂದಿಗೆ ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ.

ಎಸ್‌ಡಿಎಮ್‌ಸಿ ಪ್ರಶಸ್ತಿ: ಕಲಾಲ ಶಾಲೆ ಭಾಜನ

ಮುಂಡಗೋಡ: 2025-26ನೇ ಸಾಲಿನ ಪ್ರೌಢಶಾಲೆಗಳ ಅತ್ಯುತ್ತಮ ಎಸ್‌ಡಿಎಮ್‌ಸಿ ಪ್ರಶಸ್ತಿಗೆ ತಾಲೂಕಿನ ಚಿಗಳ್ಳಿ ಗ್ರಾಮದ ದೇವಕ್ಕ ಭಾಯಪ್ಪ ಕಲಾಲ ಸರ್ಕಾರಿ ಪ್ರೌಢಶಾಲೆ ಭಾಜನವಾಗಿದೆ. ತಾಲೂಕಿನ ಪ್ರೌಢಶಾಲೆಗಳಲ್ಲಿ ಇದೊಂದೇ ಪ್ರೌಢಶಾಲೆ ಪ್ರಶಸ್ತಿಗೆ ಆಯ್ಕೆಯಾಗಿದ್ದು ನಿಜಕ್ಕೂ ಎಸ್.ಡಿ.ಎಮ್.ಸಿ.ಯ ಕಾರ್ಯ ಶ್ಲಾಘನೀಯವಾಗಿದೆ.



ಪ್ರಾಥಮಿಕ ಶಾಲೆಗಳಲ್ಲಿ ಗುಂಜಾವತಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಇಂದೂರಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು ಅತ್ಯುತ್ತಮ ಎಸ್.ಡಿ.ಎಮ್.ಸಿ. ಪ್ರಶಸ್ತಿಗೆ ಆಯ್ಕೆಯಾಗಿದ್ದು ಚಿಗಳ್ಳಿ, ಗುಂಜಾವತಿ ಮತ್ತು ಇಂದೂರ ಗ್ರಾಮಗಳ ಶಾಲೆಯ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು, ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು ಮತ್ತು ಊರ ನಾಗರಿಕರು ಶುಭ ಕೋರಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	65699	68918
ಬಿಳಿಗೋಟು	28009	40200
ಕೆಂಪುಗೋಟು	32611	39681
ಬೆಟ್ಟೆ	41298	53429
ರಾಶಿ	51299	55349
ಚಾಲಿ	44099	49199
ಯಲ್ಲಾಪುರ	**ಕನಿಷ್ಠ**	**ಗರಿಷ್ಠ**
ಅಪಿ	63890	64001
ರಾಶಿ	49699	60399
ಬೆಟ್ಟೆ	37000	52359
ಕೆಂಪುಗೋಟು	22012	40809
ಬಿಳಿಗೋಟು	22612	38699
ಚಾಲಿ	38691	50978
ಕೋಕಾ	15010	35312
ಕಾಳುಮೆಣಸು	62599	68509



ಯಲ್ಲಾಪುರ: ಅಂತಾರಾಷ್ಟ್ರೀಯ ಯೋಗ ಗುರು, ಆರ್ಟ್ ಆಫ್ ಲಿವಿಂಗ್‌ನ ಶ್ರೀ ರವಿಶಂಕರ ಗುರೂಜಿಯವರು ತಮ್ಮ ಎಪ್ಪತ್ತನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಯೋಗ ಕ್ಷೇತ್ರ ಹಾಗೂ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನ ಕಾರ್ಯಕ್ರಮಧರ್ಲಲೀ ಯಲ್ಲಾಪುರದ ದತ್ತಾತ್ರೇಯ ಗಾಂವ್ಕಾರ್ ಚಿಟ್ಟೆಪಾಲ್, ಸುಬ್ರಾಯ ಭಟ್ಟ ಆನೇಜಡ್ಡಿ ಹಾಗೂ ಶೈಲಶ್ರೀ ಉಮಾಮಹೇಶ್ವರ ಭಟ್ಟ ಇವರನ್ನು ಸನ್ಮಾನಿಸಿದರು.

ಯೋಗ, ಸಂಗೀತ ಕ್ಷೇತ್ರ ಸಾಧಕರಿಗೆ ಸನ್ಮಾನ

ಯಲ್ಲಾಪುರ: ಅಂತಾರಾಷ್ಟ್ರೀಯ ಯೋಗ ಗುರು, ಆರ್ಟ್ ಆಫ್ ಲಿವಿಂಗ್‌ನ ಶ್ರೀ ರವಿಶಂಕರ ಗುರೂಜಿಯವರು ತಮ್ಮ ಎಪ್ಪತ್ತನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಯೋಗ ಕ್ಷೇತ್ರ ಹಾಗೂ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಯಲ್ಲಾಪುರದ ದತ್ತಾತ್ರೇಯ ಗಾಂವ್ಕಾರ್ ಚಿಟ್ಟೆಪಾಲ್, ಸುಬ್ರಾಯ ಭಟ್ಟ ಆನೇಜಡ್ಡಿ ಹಾಗೂ ಶೈಲಶ್ರೀ ಉಮಾಮಹೇಶ್ವರ ಭಟ್ಟ ಇವರನ್ನು ಸನ್ಮಾನಿಸಿದರು. ದತ್ತಾತ್ರೇಯ ಗಾಂವ್ಕಾರ್ ಚಿಟ್ಟೆಪಾಲ್ 25 ವರ್ಷಗಳಿಂದ ಸಂಗೀತ ಸೇವೆ ವಿಶೇಷವಾಗಿ ಮಕ್ಕಳಿಗೆ ಪ್ರಾಥಮಿಕ ಹಂತದ ಕಲಿಸುವಿಕೆಯಲ್ಲಿ ತೊಡಗಿದ್ದು, ಧಾರವಾಡದ ಮಕ್ಕಳ ಅಕಾಡೆಮಿಯಿಂದ ಬಾಲದೀಪ ಪ್ರಶಸ್ತಿಗೆ ಹಾಗೂ ಬಂಗಾರಮಕ್ಕಿಯವರು ನೀಡಿದ ಜಾನಪದ ಪ್ರಶಸ್ತಿಗೆ ಭಾಜನರಾಗಿದ್ದ ಇವರನ್ನು ಈ ಸಂದರ್ಭದಲ್ಲಿ ಗುರುತಿಸಿ ಸನ್ಮಾನಿಸಲಾಯಿತು. ತಾಲೂಕಿನ ಹುಟಕಮನೆಯ ಪ್ರಾಥಮಿಕ ಶಾಲೆ ಶಿಕ್ಷಕ ಸುಬ್ರಾಯ ಭಟ್ಟ ಆನೇಜಡ್ಡಿಯವರು 16 ವರ್ಷಗಳಿಂದ ಯೋಗಸೇವೆ ಹಾಗೂ ಯೋಗ ಸಾಧನೆಯಲ್ಲಿ ತೊಡಗಿದ್ದು, ರಾಷ್ಟ್ರಮಟ್ಟದ ಯೋಗಪಟುವಾಗಿರುವ ಇವರನ್ನು ಸನ್ಮಾನಿಸಿದ್ದಾರೆ. ಶೈಲಶ್ರೀ ಉಮಾಮಹೇಶ್ವರ ಭಟ್ಟ ರವರು ಕಳೆದ 12 ವರ್ಷಗಳಿಂದ ಪತಂಜಲಿಯ ಮಹಿಳಾ ಪ್ರಭಾರಿಯಾಗಿ ಯೋಗ ಸಂಘಟನೆಯಲ್ಲಿ ಸದಾ ತೊಡಗಿಸಿಕೊಂಡಿದ್ದು, ಪ್ರತಿಷ್ಠಿತ ವಿದ್ಯಾ ಸಂಸ್ಥೆಯಾದ ವಿಶ್ವದರ್ಶನ ಶಿಕ್ಷಣ ಸಮಿತಿಯ ಪ್ರಾರಂಭಿಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವುದು, ಸ್ವರ್ಣವಲ್ಲಿ ಮಹಾ ಸಂಸ್ಥಾನದ ನಗರಭಾಗಿಮಾತೃಮಂಡಳಿಯ ಅಧ್ಯಕ್ಷರಾಗಿ ಸೇವೆ ಗುರುತಿಸಿ ಸನ್ಮಾನಿಸಿದ್ದಾರೆ. ಈ ಪ್ರಶಸ್ತಿ ಪ್ರಧಾನ ಸಮಾರಂಭ ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಶ್ರೀ ರವಿಶಂಕರ್ ಗುರೂಜಿಯವರ ಆಶ್ರಮದಲ್ಲಿ ನಡೆಯಿತು.



ಭಟ್ಕಳ : ಸಂಸ್ಕೃತದಲ್ಲಿ ಧಾರ್ಮಿಕ ಪಠಣ ಮಾಡಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಕುಂಟವಾಣಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಶ್ರೀಕರ ಗಜಾನನ ಹೆಬ್ಬಾರ ಇವನನ್ನು ಕುಂಟವಾಣಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರು ಮತ್ತು ಹಳೇ ವಿದ್ಯಾರ್ಥಿಗಳಿಂದ ಸನ್ಮಾನಿಸಿಲಾಯಿತು. ಈ ಸಂದರ್ಭಲ್ಲಿ ಶಿಕ್ಷಕರಾದ ಕುಮಾರ ನಾಯ್ಕ, ಶಶಿಕಲಾ ನಾಯ್ಕ, ಶಿವಕುಮಾರ ಹಿಜ್ಜಡ, ಹಾಗೂ ಇತರ ಶಿಕ್ಷಕರು ಹಾಗೂ ಹಳೇ ವಿದ್ಯಾರ್ಥಿಗಳಾದ ಸುಶ್ಮಿತಾ, ನಾಗಶ್ರೀ ಇದ್ದರು.

ವಿಧಾನ ಪರಿಷತ್ ಸದಸ್ಯ ಗಣಪತಿ ಉಳ್ವೇಕರ ಸಲಹೆ

ವಿಕಸಿತ ಭಾರತದ ಪರಿಕಲ್ಪನೆಗೆ ಕೊಡುಗೆ ನೀಡಿ

ಕಾರವಾರ: ಯುವಕರು ಯಾವುದೇ ದೇಶದ ಶಕ್ತಿ, ಸಂಪತ್ತು ಮತ್ತು ಭವಿಷ್ಯ. ಭಾರತ ದೇಶದ ಜನ ಸಂಖ್ಯೆಯಲ್ಲಿ ಹೆಚ್ಚಿನ ಭಾಗ ಯುವಕರದ್ದೇ ಆಗಿದ್ದು, ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದೆ. ವಿಕಸಿತ ಭಾರತ ನಿರ್ಮಾಣ ಮಾಡಲು ಯುವಕರ ಚಿಂತನೆಗಳು ಸಕಾರಾತ್ಮಕವಾಗಿರಬೇಕು ಎಂದು ವಿಧಾನ ಪರಿಷತ್ ಸದಸ್ಯ ಗಣಪತಿ ಉಳ್ವೇಕರ ಹೇಳಿದರು.

ಅವರು ಗುರುವಾರ ಕಾರವಾರದ ಬಾಡ ಶಿವಾಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಭಾರತ ಸರ್ಕಾರದಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ ಪ್ರಾಂತೀಯ ಕಚೇರಿ ಬೆಂಗಳೂರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಮೈ ಭಾರತ ಕೇಂದ್ರ, ಉತ್ತರ ಕನ್ನಡ ಹಾಗೂ ಶಿವಾಜಿ ಶಿಕ್ಷಣ ಮಹಾವಿದ್ಯಾಲಯ ಬಾಡ, ಕಾರವಾರ ಇವರ ಸಹಯೋಗದಲ್ಲಿ ನಡೆದ ವಿಕಸಿತ ಭಾರತ ಜಿಲ್ಲಾ ಯುವ ಸಂಸತ್ತು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಪರ ಜಿಲ್ಲಾಧಿಕಾರಿ ಸಾಜಿದ ಮುಲ್ಲಾ ಮಾತನಾಡಿ, ವಿಕಸಿತ ಭಾರತದ ಪರಿಕಲ್ಪನೆ ಎಂದರೆ ಕೇವಲ ಆರ್ಥಿಕ ಬೆಳವಣಿಗೆ ಮಾತ್ರವಲ್ಲ , ಸಮಾನತೆ, ಸ್ವಚ್ಛತೆ, ಶಾಂತಿ, ವೈಜ್ಞಾನಿಕ ಮನೋಭಾವನೆ, ಅಜ್ಞಾನ ಮತ್ತು ಅನ್ಯಾಯಗಳ ಬಗ್ಗೆ ಯುವಕರು ಜಾಗೃತೆ ಮೂಡಿಸಬೇಕು. ಇಂದಿನ ಯುವಕರು ತಮ್ಮ ಸಾಮರ್ಥ್ಯವನ್ನು ಗುರುತಿಸಿಗೊಂಡು ದೇಶದ ಪ್ರಗತಿಗಾಗಿ ಶ್ರಮಿಸಿದರೆ ವಿಕಸಿತ ಭಾರತದ ಪರಿಕಲ್ಪನೆ ನನಸಾಗುತ್ತದೆ. ಯುವ ಜನಾಂಗದ ಚಿಂತನೆಗಳು ಸೃಜನಾತ್ಮಕವಾಗಿರಲಿ ಎಂದರು.



> ಯುವ ಸಂಸತ್ತು ಮುಂದಿನ ನಾಯಕರನ್ನು ನಿರ್ಮಾಣ ಮಾಡುವ ವೇದಿಕೆಯಾಗಿದೆ. ನೀವು ಮಾಡುವ ಚಿಂತನೆಗಳು ಮುಂದಿನ ವಿಕಸಿತ ಭಾರತದ ಪರಿಕಲ್ಪನೆಗೆ ಸಹಾಯಕವಾಗಲಿ.
>
> ■ ಪ್ರಕಾಶ ಕೇ.ರಾಣೆ, ಶಿವಾಜಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ

ಕಾರವಾರದ ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಮುಖ್ಯಸ್ಥ ಡಾ.ಶಿವಕುಮಾರ ಹರಗಿ ಮಾತನಾಡಿ, ವಿಕಾಸ ಮತ್ತು ವಿಕಸಿತ ರಾಷ್ಟ್ರವಾಗಲು ಯುವಕರು ನಾಯಕತ್ವ, ಸಾಮಾಜಿಕ ಜವಾಬ್ದಾರಿ ಹಾಗೂ ಸತ್ಯ ನಿಷ್ಠೆಯನ್ನು ಅಳವಡಿಸಿಕೊಂಡು ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ನಾಯಕತ್ವದ ಗುಣಗಳು ಬೆಳೆದು ದೇಶವನ್ನು ಪ್ರತಿನಿಧಿಸುವ ಸಂಕಲ್ಪ ಈಡೇರಿಸಲು ಸಾಧ್ಯ ಎಂದರು.

ಮೈ ಭಾರತ ಕೇಂದ್ರ, ಉತ್ತರ ಕನ್ನಡದ ಉಪ-ನಿರ್ದೇಶಕ ಲೋಕೇಶ ಕುಮಾರ, ವಿಕಸಿತ ಭಾರತ ಜಿಲ್ಲಾ ಯುವ ಸಂಸತ್ತಿನ ಕುರಿತಾದ ಉದ್ದೇಶಗಳು ಹಾಗೂ ಕಾರ್ಯಕ್ರಮ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರಾಚಾರ್ಯ ಡಾ.ಸುಮನ.ಜಿ. ಸಾವಂತ ಸ್ವಾಗತಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ. ನವೀನ ದೇವರಭಾವಿ ವಂದಿಸಿದರು. ಡಾ ಮಾಧವಿ ಗಾಂವಕರ ಮತ್ತು ರೂಪಾ ಗಾಂವಕರ ನಿರೂಪಿಸಿದರು.

ಉತ್ತರ ಕನ್ನಡ ಜಿಲ್ಲೆಯಿಂದ ವಿಕಸಿತ ಭಾರತ ಯುವ ಸಂಸತ್ತಿನಲ್ಲಿ ಭಾಗವಹಿಸಿದ ವಿವಿಧ ಮಹಾವಿದ್ಯಾಲಯದ ಸ್ಪರ್ಧಾಳುಗಳಲ್ಲಿ ಪ್ರಾರ್ಥನಾ ಭಟ್ ಪ್ರಥಮ ಸ್ಥಾನ, ಪ್ರಸನ್ನ ಮರಾಠಿ ದ್ವಿತಿಯ ಸ್ಥಾನ, ಕಾರ್ತಿಕ ಶಾನಭಾಗ ತೃತಿಯ, ಸಿಂಧು ಗಾಂವಕರ ನಾಲ್ಕನೆ ಹಾಗೂ ರಂಜಿತಾ ನಾಯಕ ಐದನೆ ಸ್ಥಾನ ಪಡೆದುಕೊಂಡರು. ನಿರ್ಣಾಯಕರಾಗಿ ಹೇಮಲತಾ ಕೆ., ಸುಮಯಾ ಸೈಯದ, ಡಾ.ರಾಜಕುಮಾರ ಪಾಟೀಲ್, ಲೋಕೇಶ ಕುಮಾರ, ಹೆಮಂತ ಎಚ್. ಭಟ್ ರವರು ಸಂಪದಾ ಮತ್ತಿತರರು ಇದ್ದರು.

ಮೃತ ದೇಹದ ಗುರುತು ಪತ್ತೆ ಹಚ್ಚಿದ ಪೊಲೀಸರು

ಮುಂಡಗೋಡ: ತಾಲೂಕಿನ ಮಳಗಿ ಬಳಿಯ ಕೊಳಗಿ ಅರಣ್ಯದಲ್ಲಿ ದೊರೆತ ರುಂಡವಿಲ್ಲದ ಮಹಿಳೆಯ ಮೃತ ದೇಹವು ಗುರುತು ಪತ್ತೆ ಹಚ್ಚಲಾಗಿದ್ದು, ಮಳಗಿ ಗ್ರಾಮದ ಶಿವಕ್ಕ ಪಾಟೀಲ(75) ಎಂಬುವರ ಮೃತದೇಹ ಎನ್ನಲಾಗಿದೆ.

ಕಳೆದ ಶುಕ್ರವಾರ ಮಳಗಿ ಗ್ರಾಪಂ ವ್ಯಾಪ್ತಿಯ ಕೊಳಗಿ ಗ್ರಾಮದ ಅರಣ್ಯದಲ್ಲಿ ರುಂಡ ಇಲ್ಲದ ಮಹಿಳೆಯ ಬೆತ್ತಲೆ ಶವ ಪತ್ತೆಯಾಗಿತ್ತು, ಈ ಸುದ್ದಿ ತಾಲೂಕಿನಲ್ಲಿ ವ್ಯಾಪಕ ಸಂಚಲನ ಮೂಡಿಸಿತ್ತು. ರುಂಡವಿಲ್ಲದ ಮಹಿಳೆಯ ಗುರುತು ಪತ್ತೆಹಚ್ಚಲುಪೊಲೀಸರು ಹರಸಾಹಸ ಪಡಬೇಕಾಯಿತು. ಇಲ್ಲಿನ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮೊದಲು ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಹಿಳೆಯರು ಯಾರಾದರೂ ಕಾಣೆಯಾಗಿದ್ದಾರೆಯೇ ಎಂಬ ಮಾಹಿತಿ ಪಡೆದರು. ಆದರೆ ಯಾರೂ ಕಾಣೆಯಾದ ಬಗ್ಗೆ ವರದಿ ಆಗಿರಲಿಲ್ಲ, ಅಲ್ಲದೆ ಶಿವಕ್ಕ ಕಾಣೆಯಾದ ಬಗ್ಗೆ ಯಾರಿಗೂ ತಿಳಿದಿರಲಿಲ್ಲ. ಕೊನೆಗೂ ಮುಂಡಗೋಡ ಪೊಲೀಸರು ಮಹಿಳೆಯ ಗುರುತು ಪತ್ತೆ ಹಚ್ಚಿದ್ದಾರೆ ಎಂದು ತಿಳಿದು ಬಂದಿದೆ.

ಶವದ ಗುರುತು ಪತ್ತೆಯಾಗಿದ್ದು ಹೇಗೆ? ಮೃತ ಶಿವಕ್ಕಳಿಗೆ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದು, ಒಬ್ಬಳು ಕಾತೂರ, ಇನ್ನೊಬ್ಬರು ಶಿರಸಿಯಲ್ಲಿ, ಪುತ್ರ ಯಲ್ಲಾಪುರದಲ್ಲಿ ವಾಸವಿದ್ದಾರೆ ಎನ್ನಲಾಗಿದೆ. ರುಂಡವಿಲ್ಲದ ಮಹಿಳೆಯ ಶವ ಸಿಕ್ಕ ನಂತರ ಶಿರಸಿಯಲ್ಲಿರುವ ಪುತ್ರಿ ತಾಯಿ ಶಿವಕ್ಕನಿಗೆ ಪೋನ್ ಕರೆ ಮಾಡಿದ್ದರು. ತಾಯಿಯ ಮೊಬೈಲ್ ಸಂಪರ್ಕಕ್ಕೆ ಬರುತ್ತಿರಲಿಲ್ಲ, ಅಲ್ಲದೆ ಸಿಕ್ಕ ಮಹಿಳೆಯ ಶವದಲ್ಲಿ ಲಿಂಗದಕಾಯಿ(ಗುಂಡಗಡಗಿ) ಹಾಗೂ ಅದರ ಜೊತೆಗೆ ಇದ್ದ ಮನೆಯ ಕೀಲಿ ಕೈ ಪತ್ತೆಯಾಗಿರುವುದರಿಂದ ಸಂಶಯ ವ್ಯಕ್ತವಾಗಿ ಸಹೋದರಿಯರು ಮುಂಡಗೋಡ ಪೊಲೀಸರಿಗೆ ಸಂಪರ್ಕ ಮಾಡಿದ್ದಾರೆ ಎನ್ನಲಾಗಿದೆ. ಕುಟುಂಬಸ್ಥರನ್ನು ಪೊಲೀಸರು ಕಾರವಾರದಲ್ಲಿ ಮಹಿಳೆಯ ಮೃತದೇಹ ಗುರುತಿಸಲು ಕರೆದೊಯ್ದಿದ್ದರು. ಮೃತ ಶಿವಕ್ಕನ ಮಹಿಳೆಯ ದೇಹದಲ್ಲಿದ್ದ ಗುರುತು ನೋಡಿ ಇದು ನಮ್ಮ ತಾಯಿದೆ ಎಂದು ತಿಳಿಸಿದ್ದಾರೆ. ಆದರೆ ಪುತ್ರ ಮಾತ್ರ ಕೊನೆಯವರೆಗೂ ತಾಯಿಯ ದೇಹವಲ್ಲ ಎನ್ನುತ್ತಿದ್ದರು ಎನ್ನಲಾಗಿದೆ. ನಂತರ ಪೊಲೀಸರು ಡಿಎನ್‌ಎ ಪರೀಕ್ಷೆಗೆ ಒಳಪಡಿಸಲಾಯಿತು. ಕೊನೆಯಲ್ಲಿ ಪುತ್ರ ಸಹ ತಾಯಿಯ ದೇಹದಲ್ಲಿದ್ದ ಗುರುತು ಮತ್ತು ಕೆಲ ವಸ್ತುಗಳನ್ನು ನೋಡಿ ಮೃತದೇಹವೆಂದುಒಪ್ಪಿಕೊಂಡರು. ಮಹಿಳೆಯ ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ಶವವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿದರು. ಆದರೂ ಪೊಲೀಸರು ಶಿವಕ್ಕನದೇ ದೇಹವೆಂದು ಖಚಿತ ಪಡಿಸಿಲ್ಲ, ಡಿಎನ್‌ಎ ವರದಿ ಬಂದ ನಂತರ ಮಹಿಳೆಯ ದೇಹವೆಂದು ಗೊತ್ತಾಗಲಿದೆ ಎಂದು ಬಲ್ಲ ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಗುರುವಾರ ಸಂಜೆ ಕುಟುಂಬಸ್ಥರು ಮೃತದೇಹವನ್ನು ಮಳಗಿ ಗ್ರಾಮಕ್ಕೆ ತಂದು ಲಿಂಗಾಯತ ಸಂಪ್ರದಾಯದಂತೆ ಅಂತ್ಯಕ್ರಿಯೆ ನಡೆಸಿದ್ದಾರೆ.

> **ಈವರೆಗೂ ಪತ್ತೆಯಾಗದ ಮಹಿಳೆಯ ರುಂಡ**
>
> ಹಂತಕರು ಸಾಕ್ಷಿ ನಾಶ ಮಾಡಲು ಮತ್ತು ಮೃತದೇಹ ಗುರುತು ಹತ್ತಬಾರದೆಂದು ಮಹಿಳೆಯ ರುಂಡ ಕತ್ತರಿಸಿಕೊಂಡು ಹೋಗಿದ್ದರು. ಶವ ಯಾರದೆಂದು ಪತ್ತೆ ಹಚ್ಚಲು ಪೊಲೀಸರಿಗೆ ತಲೆನೋವಾಗಿತ್ತು. ರುಂಡ ಇಲ್ಲದ ಕಾರಣ ಮಹಿಳೆಯ ಗುರುತು ಪತ್ತೆಯಾಗಲು ಏಳು ದಿನ ಬೇಕಾಯಿತು ಎನ್ನಲಾಗಿದೆ. ಕೊನೆಗೂ ಪೊಲೀಸರಿಗೆ ಮಹಿಳೆಯ ಗುರುತು ಪತ್ತೆಯಾಗಿದ್ದು ಹಂತಕರು ಯಾರು, ಕೊಲೆಗೆ ಉದ್ದೇಶವೇನು ಎಂಬ ವಿಷಯ ಪೊಲೀಸ್ ತನಿಖೆಯಿಂದ ತಿಳಿದು ಬರಬೇಕಾಗಿದೆ.

ನೀರು ಯೋಜನೆಗಾಗಿ ಪ್ರತಿಭಟನೆಗೆ ಮುಂದಾದ ರೈತರು

ಇಂದಿನಿಂದ ದಶದಿನಗಳ ಪಾದಯಾತ್ರೆ

ಹಳಿಯಾಳ : ಕಬ್ಬು ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದವರ ಮುಂದಾಳತ್ವದಲ್ಲಿ ನೀರಿಗಾಗಿ ಹೆಜ್ಜೆ ಹಾಕಿ ಎನ್ನುವ ಘೋಷಣೆಯೊಂದಿಗೆ ಕ್ಷೇತ್ರದ ಹಳ್ಳಿ ಹಳ್ಳಿಗೆ ಪಾದಯಾತ್ರೆಯ ಮೂಲಕ ಹೋರಾಟಕ್ಕೆ ಅಣಿಯಾಗಿದ್ದು

ಮರಾಠಾ ಭವನದಿಂದ ಫೆಬ್ರುವರಿ 27 ರಿಂದ ಸಾಯಂಕಾಲ 5 ಘಂಟೆಗೆ ಈ ಹೋರಾಟ ಪ್ರಾರಂಭವಾಗಲಿದೆ.

2003 ರ ಸಂಕಲ್ಪ - 2017 ರಲ್ಲಿ ಅಡಿಗಲ್ಲು - 2026 ಇನ್ನೂ ಕೆಲಸ ಬಾಕಿ! ಎನ್ನುವುದನ್ನು ತಲೆ ಬರಹದ ಮೂಲಕ ಕಾಳಿ ನದಿ ನೀರು ಯೋಜನೆ, ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ಜೆಜೆಎಮ್ ಯೋಜನೆಗಳೇ ಮುಖ್ಯ ವಿಷಯವಾಗಿದ್ದು, ಕಾಮಗಾರಿಯ ಆರಂಭದಿಂದ ಹಿಡಿದು ಇಂದಿನ ವರೆಗೂ ಕಾಮಗಾರಿಯಲ್ಲಿಯ ವಿಳಂಬದ ಕುರಿತು ಜನಜಾಗೃತಿ ಮೂಡಿಸುವ ಉದ್ದೇಶ ಹೊಂದಲಾಗಿದೆ. ನೀರಿಗಾಗಿ ಹೆಜ್ಜೆ ಹಾಕಿ ಈ ಪಾದಯಾತ್ರೆಯು ಕಾಳಿ ನದಿಯಿಂದ ಹಳಿಯಾಳ ತಾಲೂಕಿನ ಕೆರೆ ತುಂಬಿಸುವ ಮಹತ್ವದ ಯೋಜನೆಯಾಗಿದ್ದು, 20 ವರ್ಷಗಳ ಹೋರಾಟದ ಫಲವಾಗಿ ಮಂಜೂರಾದ ಯೋಜನೆ ಯಾಗಿದೆ. ಡಿಸೆಂಬರ 2017 ರಲ್ಲಿ ಅಡಿಗಲ್ಲು ಇಟ್ಟು ಇನ್ನೂ ಪೂರ್ಣಗೊಳ್ಳದೆ ಆಮೆಗತಿಯಲ್ಲಿ ಸಾಗುತ್ತಿದ್ದು ಆಳುವ ಸರ್ಕಾರದ ವಿಳಂಬ ನೀತಿ ಮತ್ತು ಜನಪ್ರತಿನಿಧಿಗಳ ನಿರ್ಲಕ್ಷ್ಯ ಧೋರಣೆ ವಿರುದ್ಧ ರೈತ ವರ್ಗ ಈಗ ಪ್ರತಿಭಟನೆಗೆ ಸಿದ್ಧವಾಗಿದೆ.

ಯೋಜನೆಯ ವಿಳಂಬದ ಹಿಂದಿನ ಎಲ್ಲಾ ಹುನ್ನಾರಗಳಬಗ್ಗೆ ಬಹಿರಂಗಸಭೆಯಲ್ಲಿಯೇ ಪ್ರಸ್ತಾಪಿಸಲಿದ್ದು ನೈಜ ಪರಿಸ್ಥಿತಿಯ ಅನಾವರಣದಿಂದಾಗಿ ಹಲವಾರು ಜನರ ಮುಖವಾಡ ಕಳಚಲಾಗುವುದು ಎಂದು ಕಬ್ಬು ಬೆಳೆಗಾರರ ಹಿತ ಸಂರಕ್ಷಣಾ ಸಮಿತಿ ಅಧ್ಯಕ್ಷ ನಾಗೇಂದ್ರ ಜಿವೋಜಿ ಹೇಳಿಕೆ ನೀಡಿದ್ದಾರೆ. ಫೆಬ್ರುವರಿ 27 ರಂದು ಶುಕ್ರವಾರ ಸಾಯಂಕಾಲ 4.30, ಮರಾಠಾ ಭವನ ಹಳಿಯಾಳದಿಂದ ಪಾದಯಾತ್ರೆ ಪ್ರಾರಂಭವಾಗಲಿದ್ದು, ಮಾರ್ಚ್ 9 ರಂದು ಹಳಿಯಾಳದಲ್ಲಿ ಬಹಿರಂಗ ಸಭೆ, ರಾಸ್ತಾ ರೋಖೋ, ಪ್ರತಿಭಟನೆ ಮೂಲಕ ಅಂತ್ಯವಾಗಲಿದೆ.



ಮಾ.8ಕ್ಕೆ ಯುವ ಪ್ರತಿಭಾ ಪುರಸ್ಕಾರ

ಅಂಕೋಲಾ: ನಾವು ಬೆಳೆಯಬೇಕು ನಮ್ಮವರೂ ಬೆಳೆಯಬೇಕು ಎಂಬ ಸದುದ್ದೇಶದೊಂದಿಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ತೋರಿರುವ ಉತ್ತರ ಕನ್ನಡ ಜಿಲ್ಲೆಯ ಯುವ ಪ್ರತಿಭೆಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಮೂಲಕ ಕಳೆದ 12 ವರ್ಷಗಳಿಂದ ಪ್ರೋತ್ಸಾಹಿಸುತ್ತ ಬಂದಿರುವ ಗಾಂವಕರ ಮೆಮೋರಿಯಲ್ ಫೌಂಡೇಶನ್ ಬಾಸಗೋಡ ಇವರ 13ನೇ ವರ್ಷದ ಯುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಮಾ.8ರಂದು ಸಂಜೆ 4 ಗಂಟೆಯಿಂದ ಬಸ್ ನಿಲ್ದಾಣದ ಸಮೀಪದ ಸ್ವಾತಂತ್ರ್ಯ ಸಂಗ್ರಾಮ ಭವನದಲ್ಲಿ ನಡೆಯಲಿದ್ದು, ವಿವಿಧ ರಂಗಗಳಲ್ಲಿ ಸಾಧನೆ ಮಾಡಿರುವ ಜಿಲ್ಲೆಯ 10 ಜನ ಸಾಧಕರಿಗೆ ಯುವ ಸಾಧಕರಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುವುದು ಎಂದು ಗಾಂವಕರ ಮೆಮೋರಿಯಲ್ ಫೌಂಡೇಶನ್ ಅಧ್ಯಕ್ಷ ದೇವಾನಂದ ಗಾಂವಕರ ಹೇಳಿದರು.

ತಾಲೂಕಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟಗಾರರಾಗಿ, ಶಿಕ್ಷಣಪ್ರೇಮಿಯಾಗಿ, ಯಕ್ಷಗಾನ ಕಲಾವಿದ ಅರ್ಥಧಾರಿಯಾಗಿ, ಸಾಮಾಜಿಕ, ಸಹಕಾರಿ ಧುರೀಣರಾಗಿ, ಸದಾ ಸಾಮಾಜಿಕ ಚಿಂತನೆಯೊಂದಿಗೆ ಬದುಕಿದ್ದ ಬೊಮ್ಮಯ್ಯ ರಾಕು ಗಾಂವಕರ ಅವರು ಇಂದಿಗೂ ಜನಮಾನಸದಲ್ಲಿ ನೆಲೆಸಿದ್ದು, ಅವರ ಸೇವೆಯನ್ನು ಮುಂದುವರಿಸುವ ಸಂಕಲ್ಪದಿಂದ ಗಾಂವಕರ ಮೆಮೋರಿಯಲ್ ಟ್ರಸ್ಟಿನ ಮೂಲಕ ಇದುವರೆಗೆ ಜಿಲ್ಲೆಯ ವಿವಿಧ ರಂಗಗಳ 112 ಸಾಧಕರನ್ನು ಗುರುತಿಸಿ ಪುರಸ್ಕರಿಸಲಾಗಿದೆ ಎಂದು ಹೇಳಿದರು. ಈ ವರ್ಷದ ಕಾರ್ಯಕ್ರಮವನ್ನು ಭುವನಂ ಫೌಂಡೇಶನ್ ಮೂಲಕ ವಿಧಾಯಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ



ಚಲನಚಿತ್ರ ನಟಿ ಹರ್ಷಿತಾ ಪೂಣಚ್ಚ ಅವರು ಉದ್ಘಾಟಿಸಲಿದ್ದು, ಕರಾವಳಿ ಮುಂಜಾವು ಸಂಪಾದಕ ಗಂಗಾಧರ ಹಿರೇಗುತ್ತಿ ಅಧ್ಯಕ್ಷತೆ ವಹಿಸುವರು ಕೆಎಲ್ಇ ಬೆಳಗಾವಿಯ ವೈದ್ಯ ಡಾ.ರಣಜೀತ್ ನಾಯಕ ಕೆಂಚನ್ ಅವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ಇರಲಿದ್ದು, ಚರಿತ್ರೆಯಲ್ಲಿ ಅಮರಳಾದ ವಾಸರೆಯ ಮಾಣು ನಾಯಕ ಸಂಸ್ಮರಣೆ ನಡೆಯಲಿದೆ ಎಂದ ಅವರು ಬಾಸಗೋಡದ ಬೊಮ್ಮಯ್ಯ ಗಾಂವಕರ ಅವರ ಕುರಿತಂತೆ ಹೊರತರಲಾಗಿದ್ದ ಬಹುಮುಖಿ ಕೃತಿ ಅವರ ಕುರಿತ ಇನ್ನಷ್ಟು ಬರಹಗಳ ಜೋಡಣೆಯ ಜೊತೆಗೆ ಪರಿಷ್ಕೃತಗೊಂಡು ಲೋಕಾರ್ಪಣೆಗೊಳ್ಳಲಿದೆ ಎಂದು ಕಾರ್ಯಕ್ರಮದ ಕುರಿತು ಮಾಹಿತಿ ಹಂಚಿಕೊಂಡರು. ಶೈಕ್ಷಣಿಕ ಸಂಸ್ಥೆಗಳಿಗೆ ಸಂವಿಧಾನ ಓದು ಪುಸ್ತಕ ಕೊಡುಗೆ, ಯಕ್ಷ ನೃತ್ಯ, ಗಾಯನ, ಜಾನಪದ ಸೊಗಡಿನ ವೈಶಿಷ್ಟ್ಯಗಳೊಂದಿಗೆ ಕಾರ್ಯಕ್ರಮ ನಡೆಯುವುದಾಗಿ ದೇವಾನಂದ ಗಾಂವಕರ ತಿಳಿಸಿದರು. ಗಾಂವಕರ ಮೆಮೋರಿಯಲ್ ಫೌಂಡೇಶನ್ನಿನ ಪದಾಧಿಕಾರಿಗಳು,ಸದಸ್ಯರು, ಅಭಿಮಾನಿಗಳು, ಲಯನ್ಸ್ ಕ್ಲಬ್ ಕರಾವಳಿಯ ಪ್ರಮುಖರು ಉಪಸ್ಥಿತರಿದ್ದರು.

ಕೈಗಾದಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಲು ರೂಪಾಲಿ ಆಗ್ರಹ

ಕಾರವಾರ: ಕೈಗಾ ಅಣು ವಿದ್ಯುತ್ ಯೋಜನೆಯಲ್ಲಿ 5 ಮತ್ತು 6ನೇ ಘಟಕ ನಿರ್ಮಾಣ ಕಾಮಗಾರಿ ನಿರ್ಮಾಣಕ್ಕೆ ಚಾಲನೆ ದೊರೆತಿದ್ದು, ಯೋಜನೆಯಲ್ಲಿ ಕೈಗಾ ನಿರಾಶ್ರಿತರ ಕುಟುಂಬದವರು ಹಾಗೂ ಸ್ಥಳೀಯರಿಗೆ ಉದ್ಯೋಗ ಹಾಗೂ ಸ್ಥಳೀಯರಿಗೆ ಸೂಕ್ತ ಮೂಲಭೂತ ಸೌಲಭ್ಯ ದೊರಕಿಸಿಕೊಡಬೇಕೆಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಕೈಗಾ ಅಣು ವಿದ್ಯುತ್ ಯೋಜನೆ ಮುಖ್ಯಸ್ಥರನ್ನು ಆಗ್ರಹಿಸಿದ್ದಾರೆ. ಕೈಗಾ ಅಣು ವಿದ್ಯುತ್ ಯೋಜನೆಗೆ ನಮ್ಮ ನೆಲ, ಜಲ ಬಳಕೆಯಾಗಿದೆ.



ನಮ್ಮವರೇ ನಿರಾಶ್ರಿತರಾಗಿದ್ದಾರೆ ಹಾಗಿರುವಾಗ ಉದ್ಯೋಗ ನೀಡಿಕೆಯಲ್ಲಿ, ಸೌಲಭ್ಯಗಳನ್ನು ಕಲ್ಪಿಸಬೇಕಾದಲ್ಲಿ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ನಿರಾಶ್ರಿತರು ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆತಲ್ಲಿ ಅವರ ಜೀವನಮಟ್ಟ ಸುಧಾರಣೆಯಾಗಲಿದೆ. ನಮ್ಮ ಯುವಕರು ಸ್ಥಳೀಯವಾಗಿ ಉದ್ಯೋಗ ಇಲ್ಲದೆ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಇವರಿಗೆ ಸ್ಥಳೀಯವಾಗಿ ಉದ್ಯೋಗ ನೀಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು. ಕೈಗಾವಾಡ ನಿರಾಶ್ರಿತ ಕೇಂದ್ರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಮೂಲಭೂತ ಸೌಲಭ್ಯವನ್ನು ಕಲ್ಪಿಸಬೇಕು. ಕೈಗಾದ ಕಾರ್ಮಿಕರು ಹಾಗೂ ಗುತ್ತಿಗೆದಾರರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವಂತೆ ಅವರು ಆಗ್ರಹಿಸಿದ್ದಾರೆ.

ಅದೇ ರೀತಿ ಬಿಣಗಾದ ಗ್ರಾಸಿಂ ಇಂಡಸ್ಟ್ರಿಯಲ್ಲೂ ಸ್ಥಳೀಯರಿಗೆ ಉದ್ಯೋಗ ನೀಡಿಕೆಯಲ್ಲಿ ಆದ್ಯತೆ ನೀಡಬೇಕೆಂದು ಗ್ರಾಸಿಂ ಇಂಡಸ್ಟ್ರಿ ಮುಖ್ಯಸ್ಥರನ್ನು ಆಗ್ರಹಿಸುವುದಾಗಿ ರೂಪಾಲಿ ಎಸ್.ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಗ ಸಂಯೋಜಕ ಸಂಜೂ ಕೋಳೂರ್‌ಗೆ ಅಭಿನಂದನೆ

ಕನ್ನಡ ಗಜಲ್ ಸಾಹಿತ್ಯಕ್ಕೆ ದನಿಯಾದವರು

ಹಳಿಯಾಳ: ಗಜಲ್ ಎನ್ನುವುದು ಸಾಹಿತ್ಯದ ರಾಣಿಯ ಸ್ಥಾನ ಅಲಂಕರಿಸಿದ್ದು ನೋವನ್ನು ಸ್ಪಷ್ಟರೂಪದಲ್ಲಿ ಹೊರಹಾಕುವ ಸಾಮರ್ಥ್ಯ ಹೊಂದಿದೆ. ಗಜಲ ಸಾಹಿತ್ಯದಲ್ಲಿ ರಾಜ್ಯದ ಕೊಡುಗೆ ಅಪಾರವಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಡಾ.ಸಿದ್ಧರಾಮ ಹೊನ್ಕಲ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಮರಾಠಾ ಭವನದಲ್ಲಿ ಮಾತೋಶ್ರೀ ಗಿರಿಜಮ್ಮ ಕೋಳೂರ ವೇದಿಕೆಯಲ್ಲಿ ಜರುಗಿದ ರಾಜ್ಯಮಟ್ಟದ ಗಜಲ್ ಕವನ ಕಾವ್ಯಗೋಷ್ಠಿಯನ್ನು ಅವರು ಗಜಲ್ ವಾಚನದ ಮೂಲಕ ಉದ್ಘಾಟಿಸಿ ಮಾತನಾಡಿದರು.

1970 ರಲ್ಲಿ ಡಾ.ಶಾಂತರಸರ ಕಾರಣದಿಂದ ಕನ್ನಡದಲ್ಲಿ ಗಜಲ್ ರಚನೆ ಪ್ರಾರಂಭವಾಗಿದ್ದು ಕರ್ನಾಟದಾದ್ಯಂತ 300 ಕನ್ನಡ ಗಜಲ್ ರಚನಾಕಾರರಿದ್ದಾರೆ. ಇದುವರೆಗೂ ಕನ್ನಡ ಭಾಷಾ ಗಾಯನದಲ್ಲಿ ಮೇಳೈಸಿರಲಿಲ್ಲ, ಆದರೆ ಹಳಿಯಾಳದ



ಪತ್ರಕರ್ತ, ಸಂಗೀತ ರಾಗ ಸಂಯೋಜಕರಾದ ಸಂಜು ಕೋಳೂರ ರವರು ವಿಶಿಷ್ಟವಾದ ಶೈಲಿ ಹಾಗೂ ಗಜಲ್ ಭಾವಕ್ಕೆ ಧಕ್ಕೆಯಾಗದಂತೆ ಭಾವನೆಯಲ್ಲಿ ಮುಳುಗುವಂತಹ ಸಂಗೀತ ರಾಗ ಸಂಯೋಜನೆಯನ್ನು ಕರ್ನಾಟಕದ ನೂರಕ್ಕೂ ಹೆಚ್ಚಿನ ಕನ್ನಡ ಗಜಲ್ ಸಾಹಿತಿಗಳ ರಚನೆಗೆ ದನಿಯಾಗಿಸಿದ್ದಾರೆ.ಇಂದು ತಮ್ಮ 50 ನೇ ಹುಟ್ಟುಹಬ್ಬದ ಕಾರ್ಯಕ್ರಮವನ್ನು ಕನ್ನಡ ಗಜಲ್ ಸಾಹಿತ್ಯಕ್ಕೆ ಅರ್ಪಿಸಿದ್ದು ತಮ್ಮ ರಾಗ ಸಂಯೋಜನೆಯು ಪ್ರಮುಖ 5 ಕನ್ನಡ ಗಜಲ್ ಸಾಹಿತಿಗಳ ರಚನೆಯ 25 ಕನ್ನಡ ಗಜಲ್ ಗಳ ಮುರಿದ ಮೌನ ಎನ್ನುವ ಆಲ್ಬಮ್ ಬಿಡುಗಡೆ ಮಾಡಿರುವುದು ಹರ್ಷ ತಂದಿದೆ ಎಂದರು.

ಹಿರಿಯ ಕನ್ನಡ ಗಜಲ್ ರಚನೆಗಾರರಾದ ಪ್ರಭಾವತಿ.ಎಸ್.ದೇಸಾಯಿ ವಿಜಯಪುರ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಜು ಕೋಳೂರ ಅವರು ಕನ್ನಡ ಗಜಲ್ ಸಾಹಿತ್ಯಕ್ಕೆ ಹೊಸ ಮೆರಗು ನೀಡಿ ಹಲವಾರು ಹೊಸ ಕನ್ನಡ ಗಜಲ್ ರಚನಾಕಾರರಿಗೆ ಉತ್ತೇಜನ ನೀಡುತ್ತಾ ನಮ್ಮಂತಹ ಹಿರಿಯರೊಂದಿಗೆ ಉತ್ತಮ ಸಂವಹನ ನಡೆಸಿದವರು. ಒಂದು

> ಸಂಜು ಕೋಳೂರ್ ಅವರು ಇದುವರೆಗೂ 800 ಕ್ಕೂ ಹೆಚ್ಚಿನ ಕನ್ನಡ ಗಜಲ್ ಗಳಿಗೆ ಸಂಗೀತ ರಾಗ ಸಂಯೋಜನೆ ಮಾಡಿದರೂ ಯಾವುದೇ ಶುಲ್ಕ ಅಥವಾ ವಂತಿಗೆ ಪಡೆಯದೇ ನಾಡಿನಾದ್ಯಂತ ಇರುವ 120ಕ್ಕೂ ಮಿಗಿಲಾದ ಕನ್ನಡ ಗಜಲ್ ರಚನೆಕಾರರ ರಚನೆಗಳಿಗೆ ದನಿ ನೀಡಿದ ಕರ್ನಾಟಕದ ಮೊದಲ ರಾಗ ಸಂಯೋಜಕರೂ ಹೌದು.
>
> ■ ಡಾ.ಸಿದ್ಧರಾಮ ಹೊನ್ಕಲ್

ಗಜಲ್ ಗಾಯನ ವಾಟ್ಸಾಪ್ ಗುಂಪನ್ನು ತೆರೆದು ಧ್ವನಿ ಬಯಸಿದ ಅಕ್ಷರಗಳಿಗೊಂದು ಮಧುರ ದನಿ ಅಭಿಯಾನದಿಂದ ಡಾ.ಶ್ರೀಶೈಲ್ ಮಾದಣ್ಣವರ ಮೂಲಕ ಶ್ರೇಷ್ಠವಾದ ಗಾಯನಗಳಮೂಲಕಮನಗೆದ್ದವರುಎಂದು ಶ್ಲಾಘಿಸಿದರು. ತಮ್ಮದೇ ರಚನೆಯ ಎರಡು ಕನ್ನಡ ಗಜಲ್ ಗಳನ್ನು ಸಭಿಕರಿಗೆ ಕೇಳಿಸಿ ಗಜಲ್ ಹಾಡಿನೊಂದಿಗೆ ಹೆಜ್ಜೆಹಾಕಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನ ಗೌರವ ಕಾರ್ಯದರ್ಶಿ ಮುರ್ತುಜಾ ಆನೆ ಹೊಸೂರ ಕಾರ್ಯಕ್ರಮದ ಸಂಘಟನೆಯ ರೀತಿಯನ್ನು ಶ್ಲಾಘಿಸಿ ಸಂಜು ಕೋಳೂರು ಅವರಿಗೆ ಉಜ್ವಲ ಭವಿಷ್ಯ ಹಾರೈಸಿದರು.

ಸನ್ಮಾನ ಕಾರ್ಯಕ್ರಮದಲ್ಲಿ ಆಯೋಜಕ ಸಂಜು ಕೋಳೂರ ದಂಪತಿಗಳ ಜೊತೆ ಡಾ.ಶ್ರೀಶೈಲ್ ಮಾದಣ್ಣವರ ರವರನ್ನು ಸನ್ಮಾನಿಸಲಾಯಿತು.

ಧಾರವಾಡದ ಹಿರಿಯ ರಂಗಕರ್ಮಿ ಅರವಿಂದ ಕುಲಕರ್ಣಿ ಹಾಗೂ ಪ್ರಸಿದ್ಧ ಸಂಗೀತ ಗಾಯಕ ಶ್ರೀಧರ ಕುಲಕರ್ಣಿ ಹಾಗೂ ಕೇಂದ್ರ ಸಾಹಿತ್ಯ ವೇದಿಕೆ ಹಳಿಯಾಳ ತಾಲೂಕಾಧ್ಯಕ್ಷೆ ಭಾರತಿ ನಲವಡೆ, ಕನ್ನಡ ಸಾಹಿತ್ಯ ಪರಿಷತ್ ನ ಹಳಿಯಾಳ ಘಟಕದ ಅಧ್ಯಕ್ಷೆ ಸುಮಂಗಲಾ ಅಂಗಡಿ, ಹಿರಿಯ ಗಜಲ್ ಸಾಹಿತಿ ಹಮೀದಾ ಬೇಗಂ ದೇಸಾಯಿ ಸಂಕೇಶ್ವರ, ಬೆಳಗಾಂವ್ ನ ಜ್ಯೋತಿ ಮಾಳಿ, ಸುನಂದಾ ಪುರಾಣಿಕ, ಸುಮಿತ್ರಾ ಕೋಳೂರ,ರಾಚಪ್ಪ ಧನಗರ, ಶಿವಾನಂದ ನಾಗೂರ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶ್ರೀಪಾದ ಭಟ್ಟ ಕಾರ್ಯಕ್ರಮ ನಿರೂಪಿಸಿದರು. ವೇದಿಕೆ ಹಾಗೂ ಆಸನದ ವ್ಯವಸ್ಥೆಯನ್ನು ಕ್ರಷ್ ಪ್ಲಾಯ್ ಇವೆಂಟ್ ಮೆನೆಜಮೆಂಟ್ ನ ಸುಮನ ಜಿವೋಜಿ ಹಾಗೂ ಸಕ್ಕು ಗೌಡ ಅಚ್ಚುಕಟ್ಟಾಗಿ ನಿರ್ವಹಿಸಿದರು.

ದ್ವಿತೀಯ ಪಿಯು ಪರೀಕ್ಷೆ ಸಿದ್ಧತೆ ಪೂರ್ಣ

ಮುಂಡಗೋಡ: ದ್ವಿತೀಯ ಪಿಯುಸಿ ಪರೀಕ್ಷೆ ಫೆ. 28 ರಿಂದ ಆರಂಭವಾಗಲಿದ್ದು, ಶಿಕ್ಷಣ ಇಲಾಖೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಈ ಬಾರಿ 748 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಫೆ. 28ರಿಂದ ಮಾ.17ರವರೆಗೆ ದ್ವಿತೀಯ ಪರೀಕ್ಷೆ ನಡೆಯಲಿದೆ. ತಾಲೂಕಿನಲ್ಲಿ ನಾಲ್ಕು ಪದವಿ ಪೂರ್ವ ಕಾಲೇಜುಗಳಿದ್ದು, ಇದರಲ್ಲಿ ಮಳಗಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಲೊಯೊಲಾ ಸಂಯುಕ್ತ ಪದವಿ ಪೂರ್ವ ಕಾಲೇಜು ಮತ್ತು ಮುರಾರ್ಜಿ ವಸತಿ ಶಾಲೆ ಹಾಗೂ ಸರಕಾರಿ ಪದವಿ ಪೂರ್ವ ಕಾಲೇಜು ಮುಂಡಗೋಡ ತಾಲೂಕನಲ್ಲಿ ಎರಡು ಪರೀಕ್ಷಾ ಕೇಂದ್ರವನ್ನು ಮಾಡಿದ್ದು, ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕೇಂದ್ರದಲ್ಲಿ 469 ವಿದ್ಯಾರ್ಥಿಗಳು ಮತ್ತು ಲೊಯೊಲಾ ಪದವಿ ಪೂರ್ವ ಕಾಲೇಜನ ಪರೀಕ್ಷಾ ಕೇಂದ್ರದಲ್ಲಿ 279 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.



ಶನಿವಾರ ನಡೆಯುವ ಕನ್ನಡ ಭಾಷೆಯ ಪರೀಕ್ಷೆಗೆ 640 ವಿದ್ಯಾರ್ಥಿಗಳು ಉತ್ಸಕರಾಗಿದ್ದಾರೆ. ಮುಂಡಗೋಡದ ಜೂನಿಯರ ಕಾಲೇಜ್‌ನಲ್ಲಿ 15 ಪ್ಲಸ್ 1 ಕೊಠಡಿ, ಲೊಯೊಲಾ ಕಾಲೇಜಿನಲ್ಲಿ 11 ಪ್ಲಸ್ 1 ಕೊಠಡಿಯನ್ನು ತೆಗೆದುಕೊಳ್ಳಲಾಗಿದೆ. ಈ ಎಲ್ಲಾ ಕೊಠಡಿಗಳಿಗೆ ಸಿಸಿ ಕ್ಯಾಮಾರಾ ಮತ್ತು ಗಡಯಾರವನ್ನು ಅಳವಡಸಲಾಗಿದೆ. ಪರೀಕ್ಷೆಗೆ ಯಾವುದೇ ಅಡೆತಡೆ ಆಗದಂತೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಪರೀಕ್ಷಾ ಕೇಂದ್ರಕ್ಕೆ ಪಿಯು ಬೋರ್ಡ್ನಿಂದ ವೀಕ್ಷಕರ ತಂಡದವರನ್ನು ನೇಮಿಸಲಾಗಿದೆ ಎಂದು ಪಿಯು ಕಾಲೇಜ ಪ್ರಾ.ಜಿ.ಕೆ ಕಡೆಮನಿ ಹೇಳಿದರು.

ಕಿರುಸುದ್ದಿ

ಕುರಿ, ಮೇಕೆ ಘಟಕ ಸ್ಥಾಪನೆಗೆ ಅರ್ಜಿ ಆಹ್ವಾನ

ಹಾವೇರಿ : ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ 2025-26ನೇ ಸಾಲಿನ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆ ಕುರಿ, ಮೇಕೆ ಘಟಕ ಸ್ಥಾಪನೆಗೆ ಅರ್ಜಿ ಆಹ್ವಾನಿಸಲಾಗಿದೆ. ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ (10+1) ಕುರಿ, ಮೇಕೆ ಘಟಕ ಸ್ಥಾಪಿಸಲು ನಿಗಮದಲ್ಲಿ ನೊಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸದಸ್ಯರು, ಮತ್ತು ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು, ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡಿರುವ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.ವಿಶೇಷ ಘಟಕ ಯೋಜನೆ (14 ಕುರಿ/ಮೇಕೆ ಘಟಕ) ಹಾಗೂ ಗಿರಿಜನ ಉಪ ಯೋಜನೆ ಗಳನ್ನು ಸ್ಥಾಪಿಸಲು ಜಿಲ್ಲೆಗೆ ಒಟ್ಟು 22 ಗುರಿಗಳಿದ್ದು, ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಫಲಾನುಭವಿಗಳು ನಿಗದಿತ ಅರ್ಜಿ ನಮೂನೆಯನ್ನು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಹಾವೇರಿ ಕಚೇರಿಯಿಂದ ಪಡೆದುಕೊಂಡು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಮಾ.12ರೊಳಗಾಗಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಹಾವೇರಿ ಕಚೇರಿ ಸಲ್ಲಿಸಬೇಕು ಎಂದು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನಿಗಮದ ಕಚೇರಿ ಸಂಪರ್ಕಿಸಲು ಕೋರಲಾಗಿದೆ.

ಪಲ್ಲಕ್ಕಿ ಉತ್ಸವ ಇಂದು

ಗದಗ: ಬೆಟಗೇರಿಯ ಹಳೇಬನಶಂಕರಿದೇವಿ ದೇವಸ್ಥಾನದಲ್ಲಿ ಫೆ.27 ರಂದು ಸಂಜೆ 6ಕ್ಕೆ ದೇವಾಂಗ ಮಹಿಳಾ ಮಂಡಳ ಸದಸ್ಯರಿಂದ ಲಲಿತ ಸಹಸ್ರ ನಾಮಾವಳಿ, ಭಜನೆ, ಬನಶಂಕರಿದೇವಿಯ ಪಲ್ಲಕ್ಕಿ ಉತ್ಸವ ಹಮ್ಮಿಕೊಳ್ಳಲಾಗಿದೆ. ಪಲ್ಲಕ್ಕಿ ಉತ್ಸವದ ಪ್ರಸಾದ ಸೇವೆ ನಾರಾಯಣಪ್ಪ ಕಂಗೂರಿ ಹಾಗೂ ಕುಟುಂಬ ವರ್ಗದವರು ವಹಿಸಿಕೊಂಡಿದ್ದಾರೆ ಎಂದು ಹಳೇಬನಶಂಕರಿದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ ಪದಾಧಿಕಾರಿಗಳು ತಿಳಿಸಿದ್ದಾರೆ.

ಆರೋಗ್ಯ ಶಿಬಿರ ಕಾರ್ಯಕ್ರಮ

ಗದಗ: ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪೂರ, ಗದಗ-ಬೆಟಗೇರಿ ಸಂಸ್ಥೆ ಮತ್ತು ರಕ್ತ ತಪಾಸಣಾ ಕೇಂದ್ರ, ಬೆಟಗೇರಿ-ಗದಗ ಸಹಯೋಗದೊಂದಿಗೆ ಸಂಸ್ಥೆಯ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ಬುಧವಾರ ಆರೋಗ್ಯ ಶಿಬಿರ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ನಿರ್ದೇಶಕಿ ಸುಮಲತ ಜಂಟಿ, ಡಾ.ಶಕುಂತಲಾ ತೋಟರ್, ಕಿರಣ ಕರಿಗಾರ ಹಾಗೂ ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಮತ್ತು ಸಂಸ್ಥೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅವಧಿ ವಿಸ್ತರಣೆ

ಗದಗ: ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ರ ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಂದ, ಶುಲ್ಕ ಮರುಪಾವತಿ ಯೋಜನೆಯ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ಮಾ.5 ರವರೆಗೆ ವಿಸ್ತರಿಸಲಾಗಿದೆ.

ಸಭೆ ನಾಳೆ

ಮುಂಡರಗಿ: ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ ತಾಲೂಕು ಘಟಕದ ಪದಾಧಿಕಾರಿಗಳ ಹಾಗೂ ಅಜೀವ ಸದಸ್ಯರ ಸಭೆಯನ್ನು ಫೆ.28 ರ ಬೆಳಗ್ಗೆ 11.45ಕ್ಕೆ ಶಾಸಕರ ಮಾದರಿ ಕೇಂದ್ರಶಾಲೆಯಲ್ಲಿ (ಎಂ.ಸಿ.ಎಸ್) ಮಾಸಿಕ ಸಭೆ ಕರೆಯಲಾಗಿದೆ ಎಂದು ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಎಸ್.ಎಸ್. ಕಲಕೇರಿ ತಿಳಿಸಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ತಾಲೂಕು ಘಟಕದ ಅಧ್ಯಕ್ಷ ಆರ್.ಬಿ.ಹಕ್ಕಂಡಿ ವಹಿಸಿಕೊಳ್ಳುವರು. ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ಈಶ್ವರಪ್ಪ ಹಂಚಿನಾಳ ಹಾಗೂ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಬಿ.ಕೆ.ಜಯಲಕ್ಷ್ಮೀ ಮುಖ್ಯ ಅತಿಥಿಗಳಾಗಿ ಆಗಮಿಸುವುರು. ಫೆಬ್ರುವರಿ ತಿಂಗಳಲ್ಲಿ ಜನಿಸಿದ ನಮ್ಮ ಸಂಘದ ಅಜೀವ ಸದಸ್ಯರುಗಳ ಹುಟ್ಟುಹಬ್ಬ ಆಚರಿಸಲಾಗುವುದು. ನಮ್ಮ ಸಂಘದ ನಿವೇಶನನಿಧಿ / ವಾರ್ಷಿಕ ವಂತಿಗೆ ನೀಡಿ ರಸೀದಿ ಪಡೆದುಕೊಳ್ಳಲು ತಿಳಿಸಿದ್ದಾರೆ.



ಹಾನಗಲ್ಲ: ತಾಲೂಕಿನ ಅರಳೇಶ್ವರ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಸುತ್ತೂರು ಜಗದ್ಗುರು ಈಶಾನೇಶ್ವರ ಒಡೆಯರ್ ಶ್ರೀಗಳು, ನಿಜಲಿಂಗ ಶಿವಾಚಾರ್ಯರು ಹಾಗೂ ಪುಟ್ಟಮ್ಮ ಶಿವನಗೌಡರ ಬಸನಗೌಡರ ದತ್ತಿ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ ವಿದ್ಯಾರ್ಥಿಗಳಿಗಾಗಿ ವಚನ ಕಂಠ ಪಾಠ ಸ್ಪರ್ಧೆ ಹಾಗೂ ಬಹುಮಾನ ವಿತರಣೆ ಸಮಾರಂಭವನ್ನು ನಗರ ಘಟಕದ ಗೌರವಾಧ್ಯಕ್ಷ ವಕೀಲ ರವಿಬಾಬು ಪೂಜಾರ ಉದ್ಘಾಟಿಸಿದರು.

ವಾಹನ ಸಂಚಾರ ಸಮೀಕ್ಷೆ ಫೆ.28ರವರೆಗೆ

ಹಾವೇರಿ: ಲೋಕೋಪಯೋಗಿ ಇಲಾಖೆಯು 2026 ನೇ ಸಾಲಿನ ರಸ್ತೆ ವಾಹನ ಸಂಚಾರ ಸಮೀಕ್ಷೆ ಹಮ್ಮಿಕೊಂಡಿದ್ದು, ವಾಹನ ಸಂಚಾರ ಸಾಂದ್ರತೆ ಬೆಳವಣಿಗೆ ತೀವ್ರತೆಯನ್ನು ಗಮನಿಸಿ ರಸ್ತೆಗಳ ಮೇಲ್ಮೈಯನ್ನು ಅಭಿವೃದ್ಧಿ ಪಡಿಸಲು ರಸ್ತೆಯ ಅಗಲೀಕರಣ ಹಾಗೂ ರಸ್ತೆಗಳನ್ನು ಮೇಲ್ದರ್ಜೇಗೇರಿಸಲು ಉತ್ತರ ವಲಯದ ವ್ಯಾಪ್ತಿಯಲ್ಲಿನ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಓಡಾಡುವ ವಾಹನಗಳ ಸಂಚಾರದ ಸಮೀಕ್ಷೆಯನ್ನು ಕೈಗೊಳ್ಳಲಾಗುತ್ತಿದೆ ಎಂದು ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ. ವಾಹನ ಸಂಚಾರ ವಿವರಗಳನ್ನು ಸಂಗ್ರಹಿಸಲು ಲೋಕೋಪಯೋಗಿ ಇಲಾಖೆ ಉತ್ತರ ವಲಯದ ವ್ಯಾಪ್ತಿಯಲ್ಲಿ 7 ಜಿಲ್ಲೆ, 9 ವಿಭಾಗಗಳಲ್ಲಿ 1484 ಸಮೀಕ್ಷೆ ಕೇಂದ್ರಗಳಲ್ಲಿ (ಕೌಂಟ ಪೋಸ್ಟ್‌ಗಳು) ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಿ ಫೆ.26 ರಂದು ಬೆಳಗ್ಗೆ 6 ಗಂಟೆಯಿಂದ ಪ್ರಾರಂಭಿಸಿ ಫೆ.28 ರ ಬೆಳಗ್ಗೆ 6 ಗಂಟೆಯ ವರೆಗೆ 2 ದಿನಗಳ ಕಾಲ ನಡೆಸಲಾಗುವುದು. ಜಿಲ್ಲೆಯ ಹಾವೇರಿ, ಹಾನಗಲ್, ಹಿರೇಕೆರೂರ, ರಾಟಿಹಳ್ಳಿ, ಬ್ಯಾಡಗಿ, ರಾಣೇಬೆನ್ನೂರ್ ಶಿಗ್ಗಾಂವ ಹಾಗೂ ಸವಣೂರ ಈ ಭಾಗಗಳಲ್ಲಿ ಸಂಚಾರದ ಸಮೀಕ್ಷೆಯನ್ನು ಯಶಸ್ವಿಯಾಗಿ ನಡೆಸಲು ಎಲ್ಲ ವಾಹನ ಚಾಲಕರು ಮತ್ತು ಸಾರ್ವಜನಿಕರು ಸಹಕರಿಸುವಂತೆ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಎಂಜನೀಯರ್ ನಿಂಗನಗೌಡ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾನಗಲ್ಲ: ಪಟ್ಟಣದ ಲೊಯೋಲ ವಿಕಾಸ ಕೇಂದ್ರದಲ್ಲಿ ಆಯೋಜಿಸಿದ ಅಪೌಷ್ಠಿಕ ಮಕ್ಕಳಿಗೆ ಪೌಷ್ಠಿಕ ಆಹಾರ ಕಿಟ್ ವಿತರಣೆ ಹಾಗೂ ಆರೋಗ್ಯ ತಪಾಸಣೆ ನಡೆಯಿತು. ಈ ವೇಳೆ ಲೊಯೋಲ ವಿಕಾಸ ಕೇಂದ್ರದ ಸಹ ನಿರ್ದೇಶಕ ಫಾ.ಜೇಸನ್, ಡಾ.ಎಸ್.ಆರ್ ಕಿತ್ತೂರಮಠ, ಸುವರ್ಣ ಜಡಿಮಠ ಮತ್ತಿತರರಿದ್ದರು.

60 ವರ್ಷ ಗತಿಸಿದರೂ ಸಿಗದ ನೆಮ್ಮದಿಯ ನೆಲೆ

ಶಾಶ್ವತ ಹಕ್ಕುಪತ್ರ ಸಿಗುವುದೆಂದು?

ಜಿ.ವಿ.ದೀಪಾವಳಿ

ದಿಗಂತ ವಿಶೇಷ

ರಾಣೇಬೆನ್ನೂರ: ಬಡತನದಲ್ಲಿ ಕೂಲಿ ನಾಲಿ ಮಾಡಿ ಸರ್ಕಾರಿ ಜಾಗೆಯಲ್ಲಿ ಮನೆಯನ್ನು ನಿರ್ಮಿಸಿಕೊಂಡು ಸುಮಾರು 60 ವರ್ಷಗಳು ಗತಿಸಿದರೂ ಶಾಶ್ವತ ನೆಲೆ ಇಲ್ಲದಂತಹ ಪರಿಸ್ಥಿತಿ ತಾಲೂಕಿನ ರಾಹುತನಕಟ್ಟಿ ಗ್ರಾಪಂ ವ್ಯಾಪ್ತಿಯ ಗೋವಿಂದ ಬಡಾವಣೆಯಲ್ಲಿ ಕಂಡು ಬಂದಿದೆ. ಇದರಿಂದಾಗಿ ಇಲ್ಲಿಯ ನಿವಾಸಿಗಳು ಸಾಕಷ್ಟು ಬಾರಿ ಸರ್ಕಾರಕ್ಕೆ ಗಮನ ತಂದರೂ ಪ್ರಯೋಜನ ಮಾತ್ರ ಶೂನ್ಯ.

1972 ರಲ್ಲಿ ಸರ್ವೇ ನಂ 667 ಮತ್ತು 668 ರಲ್ಲಿ ಈ ಗೋವಿಂದ ಬಡಾವಣೆ ಎಂಬ ಗ್ರಾಮ ರಚನೆಯಾಗಿದೆ.ಆದರೆ ಈ ಗೋವಿಂದ ಬಡಾವಣೆಯ ಗ್ರಾಮದಲ್ಲಿ ಲಂಬಾಣಿಯರು ವಾಸವಾಗಿರುವುದರಿಂದ ಈ ಗ್ರಾಮವನ್ನು ಕಂದಾಯ ಗ್ರಾಮವಾಗಿ ಮಾಡಬೇಕು ಎಂಬುದು ಇಲ್ಲಿಯ ನಿವಾಸಿಗಳ ಕೋರಿಕೆಯಾಗಿದೆ. ಆದರೆ 667 ಮತ್ತು 668 ಸರ್ವೇ ನಂಬರ್‌ನಲ್ಲಿ ಕೆಲ ಅರಣ್ಯ ಜಾಗೆ ಹಾಗೂ ಸರಕಾರಿ ಜಾಗೆ ಇದೆ. ಆದ್ದರಿಂದ ಸರ್ಕಾರ ಜೇಂಟಿ ಸರ್ವೇ ಮಾಡಿ 60 ರಿಂದ 70 ವರ್ಷಗಳ ಕಾಲ ವಾಸವಾಗಿರುವ ಇಲ್ಲಿಯ ನಿವಾಸಿಗಳಿಗೆ ಪಟ್ಟಾ ನೀಡಬೇಕು ಎಂಬುದು ಗ್ರಾಮಸ್ಥರ ಅಳಲಾಗಿದೆ.

ಈ ಬಡಾವಣೆಯಲ್ಲಿ ಒಟ್ಟು 490 ಮನೆಗಳು ನಿರ್ಮಾಣವಾಗಿವೆ ಅವುಗಳಲ್ಲಿ 134 ಮನೆಗಳಿಗೆ ಮಾತ್ರ ಹಕ್ಕುಪತ್ರ ನೀಡಿದೆ. ಇನ್ನೂಳಿದ 356 ಮನೆಗಳಿಗೆ ಹಕ್ಕುಪತ್ರ ನೀಡಿಲ್ಲ, ಇದರಿಂದಗಿ ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಎಂಬಂತೆ ಸರ್ಕಾರ ಇಲ್ಲಿಯ ನಿವಾಸಿಗಳಿಗೆ ಮಾಡಿದೆ. ವಿಪರ್ಯಾಸವೆಂದರೆ ಗ್ರಾಮ ರಚನೆಯಾದಾಗಿನಿಂದಲೂ ಇಲ್ಲಿಯ ನಿವಾಸಿಗಳು ಗ್ರಾಪಂಗೆ ನೀರಿನ ತೆರಿಗೆ, ಮನೆ ತೆರಿಗೆ, ಕರೆಂಟ್ ಬಿಲ್ ಸೇರಿದಂತೆ ಅನೇಕ ತೆರಿಗೆಗಳನ್ನು ಕಟ್ಟುತ್ತಾ ಬಂದರೂ ಇವರಿಗೆ ಶಾಶ್ವತ ನೆಲೆ ಇಲ್ಲದಂತಾಗಿರುವುದು ಬೇಸರದ ಸಂಗತಿಯಾಗಿದೆ. ಸರ್ಕಾರ ಸಾಕಷ್ಟು ಹಗರಣದಲ್ಲಿಯೇ ಬಡವರ ನಿರ್ಗತಿಕರಿಗೆ ಶಾಶ್ವತ ಹಕ್ಕುಪತ್ರ ವಿತರಣೆಯನ್ನು ಸಮರ್ಪಕವಾಗಿ ನಿಭಾಯಿಸದೆ ಇತ್ತೀಚೆಗೆ ಭೂ ಗ್ಯಾರಂಟಿ ಸಮರ್ಪಣಾ ಜೊತೆಗೆ ಸಾಧನಾ ಸಮಾವೇಶವನ್ನು ಹಮ್ಮಿಕೊಂಡಿತ್ತು ಇದು ನಿಜಕ್ಕೂ ಯಾವ ಪುರುಷಾರ್ಥಕ್ಕಾಗಿ ಎಂಬುದನ್ನು ಪ್ರಜ್ಞಾವಂತರು ಆಡಿಕೊಳ್ಳುವ ಮಾತುಗಳಾಗಿವೆ.

ಇಲ್ಲಿಯ ತೊಡಕುಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಶಾಸಕರು ಮತ್ತು ಜನಪ್ರತಿನಿಧಿಗಳು ಎಚ್ಚೆತ್ತುಕೊಂಡು ಇಲ್ಲಿಯ ನಿವಾಸಿಗಳಿಗೆ ಹಕ್ಕುಪತ್ರ ನೀಡಿದರೆ ನಿಜಕ್ಕೂ ನಿಮ್ಮ ಸೇವೆಯ ಕಾರ್ಯ ಶ್ಲಾಘನೀಯವಾಗಿರುತ್ತದೆ ಜೊತೆಗೆ ನಿವಾಸಿಗಳಿಗೆ ನೆಮ್ಮದಿಯ ಬದುಕು ರೂಪಿಸಿದಂತಾಗುತ್ತದೆ.



> ನಾವು 60 ವರ್ಷಗಳಿಂದ ಇಲ್ಲಿ ವಾಸ ಆಗೇವ್ರಿ, ಕೆಲವ್ರಿಗೆ ಮಾತ್ರ ಪಟ್ಟಾ ಕೊಟ್ಟಾರಿ ನಮಗೆ ಕೊಡಾಕ ಬರಲ್ಲ ಅಂತಾರ್ರಿ, ಹಿಂಗಾದ್ರ, ನಾವು ಹೆಂಗ ನೆಮ್ಮದಿಯಿಂದ ಇಲ್ಲಿ ವಾಸ ಮಾಡಬೇಕ್ರಿ, ಆದಷ್ಟು ಬೇಗ ನಮಗೂ ಪಟ್ಟಾ ಕೊಡಬೇಕ್ರಿ, ಅವರಿಗೆ ಮುಣ್ಯ ಬರತೈತಿ ನೋಡ್ರಿ.
> ■ ರುಕ್ಮವ್ವ ಲಮಾಣಿ, ಗೋವಿಂದ ಬಡಾವಣೆಯ ನಿವಾಸಿ

> ನಾವು 60 ವರ್ಷಗಳಿಂದ ವಾಸವಾಗಿದ್ದೇವೆ ನಮಗೆ ಪಟ್ಟಾ ನೀಡಬೇಕು. ಫಾರೆಸ್ಟ್ ಲ್ಯಾಂಡ್ ಅಂತಾರೆ ಇಷ್ಟು ವರ್ಷ ಇದೇವಿ ನಾವು ಎಲ್ಲಿಗೆ ಹೋಗಬೇಕು? ನಮಗೂ ಹಕ್ಕು ಪತ್ರ ನೀಡಬೇಕು ಇಲ್ಲವಾದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಬಳಿ ನಿವಾಸಿಗಳಿಂದ ಬೃಹತ್ ಪ್ರತಿಭಟನೆ ಕೈಗೊಳ್ಳಲಾಗುವುದು.
> ■ ಲಕ್ಷ್ಮಣ ನಾಯಕ್, ಗೋವಿಂದ ಬಡಾವಣೆ ನಿವಾಸಿ

> ಫಾರೆಸ್ಟ್ ಲ್ಯಾಂಡ್ ಇರುವುದರಿಂದ ಅಲ್ಲಿಯ ನಿವಾಸಿಗಳಿಗೆ ಪಟ್ಟಾ ಕೊಡಲು ಬರುವುದಿಲ್ಲ, ಇಲ್ಲಿ ಒಟ್ಟು ಮೂರು ಸರ್ವ ನಂಬರ್ ಇದ್ದು, ಅದರಲ್ಲಿ ಒಂದು ಸರ್ವೇ ನಂಬರ್‌ನಲ್ಲಿ ಸರ್ಕಾರಿ ಜಾಗೆ ಇರೋದ್ರಿಂದ ಅವರಿಗೆ ಕೊಟ್ಟಿದೇವೆ. ಇನ್ನೊಂದು ಸರ್ವ ನಂಬರ್ ಜಾಗೆಯಲ್ಲಿ ಯಾರೂ ಇಲ್ಲ, ಈಗ ನಿವಾಸಿಗಳು ಇರೂ ಸರ್ವೇ ನಂಬರ್ ಫಾರೆಸ್ಟ್‌ಗೆ ಸಂಬಂಧಪಟ್ಟಿದ್ದು ಹೀಗಾಗಿ ನಮಗೆ ಪಟ್ಟಾ ಕೊಡಲು ಬರುವುದಿಲ್ಲ.
> ■ ಆರ್ ಎಚ್ ಭಾಗವಾನ, ತಹಶೀಲ್ದಾರ್ ರಾಣೇಬೆನ್ನೂರ

ಜಯಂತಿಗಳ ಅರ್ಥಪೂರ್ಣ ಆಚರಣೆ ಸಿದ್ಧತೆಗೆ ಎಡಿಸಿ ಸೂಚನೆ



ಹಾವೇರಿ: ಜಗದ್ಗುರು ರೇಣುಕಾಚಾರ್ಯ ಹಾಗೂ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಕಾರ್ಯಕ್ರಮ ಅರ್ಥಪೂರ್ಣ ಆಚರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಗಳ ಕಚೇರಿ ಸಭಾಂಗಣದಲ್ಲಿ ಜಗದ್ಗುರು ರೇಣುಕಾಚಾರ್ಯ ಹಾಗೂ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಕಾರ್ಯಕ್ರಮ ಪೂರ್ವ ಸಿದ್ಧತಾ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಗದ್ಗುರು ರೇಣುಕಾಚಾರ್ಯ ಜಯಂತಿ ಮಾ.1ರಂದು ಬೆಳಗ್ಗೆ 11 ಗಂಟೆಗೆ ಹಾವೇರಿ ನಗರದ ಜಗದ್ಗುರು ರೇಣುಕ ಮಂದಿರ (ನಡುವಿನಮಠ)ದಲ್ಲಿ ಹಾಗೂ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಕಾರ್ಯಕ್ರಮ ಮಾ.3ರಂದು ಬೆಳಗ್ಗೆ 11 ಗಂಟೆಗೆ ಹಾವೇರಿ ನಗರದ ಗಾಂಧಿ ಭವನದಲ್ಲಿ ಆಚರಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಈ ಎರಡು ಜಯಂತಿ ಕಾರ್ಯಕ್ರಮ ಗಳ ಆಮಂತ್ರಣ ಪತ್ರಿಕೆ, ಆಸನ ವ್ಯವಸ್ಥೆ, ಉಪನ್ಯಾಸಕರ ನೇಮಕ, ಉಪಹಾರ ವ್ಯವಸ್ಥೆ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಅಚ್ಚುಕಟ್ಟಾಗಿ ಮಾಡುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ಅವರು ಜಯಂತಿ ಆಚರಣೆ ಕುರಿತು ಸರ್ಕಾರದ ಮಾರ್ಗಸೂಚಿಗಳ ಕುರಿತು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ತಾತ್ಕಾಲಿಕ ಮಾರ್ಗ ಬದಲಾವಣೆಗೆ ಡಿಸಿ ಆದೇಶ

ಹಾವೇರಿ: ಕೆಶಿಪ್ 3ರ ಯೋಜನೆಯಡಿ ಗದಗ-ಹೊನ್ನಾಳಿ ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿ ಹಿನ್ನಲೆಯಲ್ಲಿ ಮಾ.31ರವರೆಗೆ ರಾಣೇಬೆನ್ನೂರು ತಾಲೂಕು ದೇವರಗುಡ್ಡ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆಯಲ್ಲಿ ಸಾರ್ವಜನಿಕ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಗದಂತೆ ಬದಲಿ ಮಾರ್ಗಗಳಲ್ಲಿ ಸಂಚರಿಸಲು ತಾತ್ಕಾಲಿಕವಾಗಿ ಮಾರ್ಗ ಬದಲಾವಣೆ ಮಾಡಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ.

ಉತ್ತಮ ಹವ್ಯಾಸ ರೂಢಿಸಿಕೊಳ್ಳಲು ವಚನಗಳು ಸಹಕಾರಿ: ಪೂಜಾರ

ಹಾನಗಲ್ಲ: ಭವಿಷ್ಯದ ಬದುಕನ್ನು ಸುಂದರಗೊಳಿಸಿಕೊಳ್ಳುವ ಸಾತ್ವಿಕ ಚಿಂತನೆಯನ್ನೊಳಗೊಂಡ ವಚನಗಳು ನಮ್ಮ ಮಕ್ಕಳಲ್ಲಿ ಉತ್ತಮ ಹವ್ಯಾಸಗಳನ್ನು ರೂಢಿಸಿ, ಉತ್ತಮ ಭವಿಷ್ಯಕ್ಕೆ ಪ್ರೇರಣೆಯಾಗುವ ಶಕ್ತಿ ಹೊಂದಿವೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಹಾನಗಲ್ಲ ನಗರ ಘಟಕದ ಗೌರವಾಧ್ಯಕ್ಷ ವಕೀಲ ರವಿಬಾಬು ಪೂಜಾರ ತಿಳಿಸಿದರು.

ಹಾನಗಲ್ಲ ತಾಲೂಕಿನ ಅರಳೇಶ್ವರ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಸುತ್ತೂರು ಜಗದ್ಗುರು ಈಶಾನೇಶ್ವರ ಒಡೆಯರ್ ಶ್ರೀಗಳು, ನಿಜಲಿಂಗ ಶಿವಾಚಾರ್ಯರು ಹಾಗೂ ಪುಟ್ಟಮ್ಮ ಶಿವನಗೌಡರ ಬಸನಗೌಡರ ದತ್ತಿ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ ವಿದ್ಯಾರ್ಥಿಗಳಿಗಾಗಿ ವಚನ ಕಂಠ ಪಾಠ ಸ್ಪರ್ಧೆ ಹಾಗೂ ಬಹುಮಾನ ವಿತರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದ ಹೆಸರಿನಲ್ಲಿ ಕೇವಲ ಹಣ ಮಾಡುವ ಮಾರ್ಗದರ್ಶನ ದೊರೆಯುತ್ತಿದೆ. ನಮ್ಮ ಕುಟುಂಬಗಳು ಪ್ರೀತಿ ಸ್ನೇಹದಿಂದ ದೂರವಾಗುತ್ತಿವೆ. ಧರ್ಮ ಸಂಸ್ಕಾರಗಳು ಟೀಕೆಯ ವಿಷಯಗಳಾಗುತ್ತಿವೆ. ಇದಕ್ಕೆಲ್ಲ ತೆರೆ ಎಳೆಯಲು ವಚನ ಸಾಹಿತ್ಯ ಒಳ್ಳೆಯ ಪಾಠ. ಮಕ್ಕಳಿಗೆ ಬಾಲ್ಯದಿಂದಲೇ ವಚನ ಸಂಸ್ಕಾರದ ಅಗತ್ಯವಿದೆ ಎಂದರು.

ಜಿಲ್ಲಾಧ್ಯಕ್ಷ ಪ್ರೊ.ಮಾರುತಿ ಶಿಡ್ಲಾಪೂರ ಮಾತನಾಡಿದರು. ಸಾಹಿತಿ ಡಾ.ಎಂ.ಪ್ರಸನ್ನಕುಮಾರ ಪ್ರಾಸ್ತಾವಿಕವಾಗಿ ಮಾತನಾಡಿದರು.ಶಾಲಾಭಿವೃದ್ಧಿಸಮಿತಿಅಧ್ಯಕ್ಷೆ ವಿದ್ಯಾ ಡಂಬಳಪ್ಪನವರ ಅಧ್ಯಕ್ಷತೆವಹಿಸಿದ್ದರು. ಮುಖ್ಯೋಪಾಧ್ಯಾಯ ವಾಯ್.ಡಿ.ಹೊಸಮನಿ ಮುಖ್ಯ ಅತಿಥಿಗಳಾಗಿದ್ದರು. ಶಿಕ್ಷಕ ಎಸ್.ವಿ.ಹೊಸಮನಿ, ಸುಸ್ಮಿತಾ ಹೀರೂರ ಇದ್ದರು.

ವಚನ ಕಂಠಪಾಠ ಸ್ಪರ್ಧೆಯಲ್ಲಿ ನಿಖಿತಾ ಚಿಕ್ಕೇರಿ ಪ್ರಥಮ, ಈಶ್ವರಿ ಬಿಡೇದ (ದ್ವಿತೀಯ), ನಂದಿತಾ ತವರಿ (ತೃತೀಯ) ಬಹುಮಾನ ಪಡೆದರು. ಸ್ಪರ್ಧೆಯಲ್ಲಿ 112 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ವಿವಿಧ ಕಾಮಗಾರಿಗೆ ಭೂಮಿಪೂಜೆ

ಹಾನಗಲ್ಲ: ತಾಲೂಕಿನ ಮಲಗುಂದ ಗ್ರಾಪಂ ವ್ಯಾಪ್ತಿಯಲ್ಲಿ 75 ಲಕ್ಷ ರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಮಲಗುಂದ ಗ್ರಾಮದಲ್ಲಿ 55 ಲಕ್ಷ ರೂ. ಹಾಗೂ ಯತ್ತಿನಹಳ್ಳಿ ಮ ಆಡೂರು ಗ್ರಾಮದಲ್ಲಿ 20 ಲಕ್ಷರೂ. ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ, ಹಾಲು ಉತ್ಪಾದಕರ ಸಹಕಾರಿ ಸಂಘದ ನೂತನ ಕಟ್ಟಡ ನಿರ್ಮಾಣ ಸೇರಿದಂತೆ ಇತರ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡದರು.

ಗ್ರಾಮೀಣಪ್ರದೇಶದಸರ್ವತೋಮುಖಅಭಿವೃದ್ಧಿಗೆಚಾಲನೆನೀಡಲಾಗಿದೆ. ಪ್ರಮುಖವಾಗಿ ಆರೋಗ್ಯ ಕ್ಷೇತ್ರದಲ್ಲಿ ಹೆಚ್ಚು ಅನುದಾನ ದೊರಕಿಸಿ ಆರೋಗ್ಯ ಕೇಂದ್ರಗಳಿಗೆ ಅಗತ್ಯ ಕಟ್ಟಡ, ಇತರ ಸೌಲಭ್ಯ ಕಲ್ಪಿಸಲಾಗುತ್ತಿದೆ. ವಿದ್ಯುತ್ ಕೇಂದ್ರಗಳ ನಿರ್ಮಾಣದ ಮೂಲಕ ಭವಿಷ್ಯದಲ್ಲಿನ ವಿದ್ಯುತ್ ಅಭಾವ ತಗ್ಗಿಸಲು ಶ್ರಮ ವಹಿಸಲಾಗಿದೆ. ಕಳೆದ 40-50 ವರ್ಷಗಳಿಂದ ಪರಿಹಾರ ಕಾಣದೇ ಹಾಗೆಯೇ ಉಳಿದಿದ್ದ ಸಾರ್ವಜನಿಕ ಸಮಸ್ಯೆಗಳನ್ನು ಆದ್ಯತೆಯ ಮೇಲೆ ಪರಿಹರಿಸಲಾಗುತ್ತಿದೆ ಎಂದು ಶಾಸಕ ಮಾನೆ ತಿಳಿಸಿದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ



ಮಂಜು ಗೊರಣ್ಣನವರ, ದೇವೇಂದ್ರಪ್ಪ ಹುಲ್ಲಾಳ, ಚಿದಾನಂದಯ್ಯ ಹಿರೇಮಠ, ತಿಪ್ಪಣ್ಣ ದೊಡ್ಡಕೋವಿ, ಗುತ್ತೆಪ್ಪ ತಳವಾರ, ಶಿವು ತಳವಾರ, ಗಜೇಂದ್ರ ಕಲ್ಲಾಪುರ, ಮಾರ್ತಾಂಡಪ್ಪ ಕೂಸನೂರ, ಚಂದ್ರು ವಡ್ಡರ, ಸುರೇಶ ತಳವಾರ, ಫಕ್ಕೀರೇಶ ಗುಡ್ಡದವರ, ಸುರೇಶ ಡೊಮ್ಮನಾಳ, ಮಂಜು ತಳವಾರ, ಫಕ್ಕೀರಪ್ಪ ತಳವಾರ, ಉಮೇಶ ತಳವಾರ ಮತ್ತಿತರರಿದ್ದರು.

ಇಂದು ವಿಶಿಷ್ಟಚೇತನರಿಗೆ ತ್ರಿಚಕ್ರವಾಹನ ವಿತರಣಾ ಕಾರ್ಯಕ್ರಮ

ಹಾವೇರಿ: ಜಿಲ್ಲೆಯ ನೋಂದಾಯಿತ ಕಾರ್ಖಾನೆಗಳ ನಿಧಿಯಿಂದ ವಿಕಲಚೇತನರಿಗೆ ಯಂತ್ರಚಾಲಿತ ತ್ರಿಚಕ್ರವಾಹನ ವಿತರಣಾ ಕಾರ್ಯಕ್ರಮ ಫೆ.27ರಂದು ಬೆಳಗ್ಗೆ 11ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ಜರುಗಲಿದೆ. ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಘನ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ.

ಕಾರ್ಮಿಕ ಸಚಿವರಾದ ಸಂತೋಷ ಲಾಡ್ ಹಾಗೂ ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅವರ ಗೌರವ ಉಪಸ್ಥಿತಿಯಲ್ಲಿ, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಸೈಯದ್ ಅಜೀಮಪೀರ್ ಖಾದ್ರಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ.ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ. ಹಿರೇಮಠ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಮೈದೂರ ಅವರು ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಪಂ. ಉಪಕಾರ್ಯದರ್ಶಿ ರುಚಿ ಬಿಂದಲ್, ಎಸ್ಪಿ ಯಶೋಧ ವಂಟಗೋಡಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ವಿನಯಾ ಕಟೋಕರ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಆಶು ನದಾಫ್ ಇತರರು ಪಾಲ್ಗೊಳ್ಳಲಿದ್ದಾರೆ.

ಹೋಳಿ ಹಬ್ಬ: ಇಂದಿನಿಂದ ವಿಶೇಷ ಕಾರ್ಯಕ್ರಮಗಳು

ಹಾವೇರಿ: ಯಾಲಕ್ಕಿ ನಗರಿ, ಮರಿಕಲ್ಯಾಣ ಖ್ಯಾತಿಯ ಹಾವೇರಿ ನಗರದಲ್ಲಿ ಫೆ.27ರಿಂದ ಮಾ.4ರವರೆಗೆ ಹಾವೇರಿ ಹೋಳಿ ಹಬ್ಬ-2026 ಪ್ರಯುಕ್ತ ಅಡ್ಡಸೋಗಿನ ಮೆರವಣಿಗೆ, ಓಕಳಿ ಬಂಡಿ, ನಗೆ ಹಬ್ಬದಂತಹ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಸ್ಥಳೀಯರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಹೋಳಿ ಹಬ್ಬವನ್ನು ಯಶಸ್ವಿಗೊಳಿಸುವಂತೆ ಹೋಳಿ ಆಚರಣಾ ಸಮಿತಿ ಅಧ್ಯಕ್ಷ ವೀರಣ್ಣ ಹೇರೂರ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ನಾಲ್ಕೈದು ದಿನಗಳ ಕಾಲ ಹೋಳಿ ಅಂಗವಾಗಿ ವಿಶೇಷ ಮನರಂಜನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಫೆ.27ರಂದು ಸಂಜೆ ಕಾಮನ ಪ್ರತಿಷ್ಠಾಪನೆ, ಫೆ.28ರಂದು ಸಂಜೆ 7ಕ್ಕೆ ನಗರದ ಹಾನಗಲ್ ರಸ್ತೆಯ ಎಪಿಎಂಸಿ ಮಾರುಕಟ್ಟೆಯಲ್ಲಿ ಮಂದ್ಯಾಗ ಮಲ್ಲಿ ಸಂದ್ಯಾಗ ಗಿಲ್ಲಿ ಎಂಬ ಬೆಳದಿಂಗಳ ನಗೆ ಹಬ್ಬ ಜಿಲ್ಲಾ ಕಲಾಬಳಗದ ಕೆ.ಆರ್ ಹಿರೇಮಠ ಮತ್ತು ತಂಡದವರಿಂದ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಭಾಗವಹಿಸಿ ಚಾಲನೆ ನೀಡಲಿದ್ದು, ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.



ಮಾ.2ರಂದು ರಾತ್ರಿ 7ಕ್ಕೆ ನಗರದ ಸುಭಾಸ್ ಸರ್ಕಲ್‌ನಲ್ಲಿ ಜೀವಂತ ಕಾಮ ರತಿ ನಗಿಸುವ ಸ್ಪರ್ಧೆ, ನಂತರ ಸಂಗೀತಾ ಕಮತಗಿ ಇವರಿಂದ ಜೋಗತಿ ನೃತ್ಯ ಕೂಡ ನಡೆಯಲಿದ್ದು, ಈ ಕಾರ್ಯಕ್ರಮಕ್ಕೆ ಮಾಜಿ ಶಾಸಕ ನೆಹರೂ ಓಲೇಕಾರ ಚಾಲನೆ ನೀಡುವರು, ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮಾ.3ರಂದು ಬೆಳಗ್ಗೆ ಗೌಡರು, ತಹಶೀಲ್ದಾರರು, ಊರಿನ ಪ್ರಮುಖರೊಂದಿಗೆ ಹಳೆ ಚಾವಡಿ ಬಳಿ ಚಾವಡಿ ಕಾಮಣ್ಣನ ಪ್ರತಿಷ್ಠಾಪನೆ ನಡೆಯಲಿದ್ದು, ಸಂಜೆ 7ಕ್ಕೆ ನಗರದ ಗಾಂಧಿ ರಸ್ತೆಯ ಪ್ಯಾಟಿ ಬಸವಣ್ಣ ದೇವರ ದೇವಸ್ಥಾನದಲ್ಲಿ ಅಡ್ಡ ಸೋಗಿನ ಸ್ಪರ್ಧೆಗೆ ಚಾಲನೆ ನೀಡಲಾಗುತ್ತದೆ ಎಂದರು.

ಮಾ.4ರಂದು ಪ್ರತಿವರ್ಷದ ಸಂಪ್ರದಾಯದಂತೆ ಹರಿಜನ ಕೇರಿಯಿಂದ ಬೆಂಕಿ ಕೆಂಡ ತಂದು ಕಾಮದಹನ ಮಾಡಲಾಗುವುದು. ಮಧ್ಯಾಹ್ನ 12ಕ್ಕೆ ಮುನ್ಸಿಪಲ್ ಹೈಸ್ಕೂಲ್ ರಸ್ತೆಯ ಆಂಜನೇಯ ದೇವಸ್ಥಾನ ಮುಂಭಾಗದಲ್ಲಿ (ಸುವರ್ಣ ಬ್ಯಾಂಕ್ ಎದುರಿಗೆ) ಚೆಡ್ಡಿದೋಸ್ತ ಬಳಗದಿಂದ ರೇನ್ ಡ್ಯಾನ್ಸ್ ನಡೆಯಲಿದೆ. ಆದ್ದರಿಂದ ನಗರದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಶಿವರಾಜ ಮತ್ತಿಹಳ್ಳಿ, ಬಸವರಾಜ ಚಾಬೀನ, ವಿಜಯಕುಮಾರ ಕೂಡ್ಲಪ್ಪನವರ, ಶಿವಲಿಂಗಪ್ಪ ಕಲ್ಯಾಣಿ, ಕಿರಣ ಕೊಳ್ಳಿ, ಹನುಮಂತಪ್ಪ ತಳವಾರ, ಶಂಭುಲಿಂಗ ಹತ್ತಿ, ಕರಬಸಪ್ಪ ಹಲಗಣ್ಣನವರ ಉಪಸ್ಥಿತರಿದ್ದರು.

ಮಾ.1ಕ್ಕೆ ರೇಣುಕಾಚಾರ್ಯ ಜಯಂತಿ

ಹಾವೇರಿ: ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಗದ್ಗುರು ರೇಣುಕಾಚಾರ್ಯ ಸೇವಾ ಸಮಿತಿ ಸಹಯೋಗದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಾ. 1ರಂದು ಬೆಳಗ್ಗೆ 11 ಗಂಟೆಗೆ ಹಾವೇರಿ ನಗರದ ಜಗದ್ಗುರು ರೇಣುಕ ಮಂದಿರ (ನಡುವಿನಮಠ)ದಲ್ಲಿ ಜರುಗಲಿದೆ.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಗೌರವಾನ್ವಿತ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ.

ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅವರ ಗೌರವ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಸೈಯದ್ ಅಜೀಮಪೀರ್ ಖಾದ್ರಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ.ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ. ಹಿರೇಮಠ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಮೈದೂರ ಅವರು ಭಾಗವಹಿಸಲಿದ್ದಾರೆ. ನಿವೃತ್ತ ಪ್ರಾಚಾರ್ಯ ಪಿ.ಸಿ. ಹಿರೇಮಠ ಅವರು ಉಪನ್ಯಾಸಕರಾಗಿ ಪಾಲ್ಗೊಳ್ಳಲಿದ್ದಾರೆ.

ಇಂದು ಬೃಹತ್ ಸಮಾವೇಶ

ಹುಬ್ಬಳ್ಳಿ: ಜೆಡಿಎಸ್ ಬೆಳ್ಳಿ ಹಬ್ಬದ ಅಂಗವಾಗಿ ಫೆ.27ರಂದು ವಿಜಯಪುರದಲ್ಲಿ ಕಿತ್ತೂರು ಕರ್ನಾಟಕ ಭಾಗದ ಪದಾಧಿಕಾರಿಗಳ ಹಾಗೂ ಕಾರ್ಯಕರ್ತರ ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜೆಡಿಎಸ್ ಹುಬ್ಬಳ್ಳಿ-ಧಾರವಾಡ ಮಹಾನಗರ ಜಿಲ್ಲಾ ಘಟಕದ ಅಧ್ಯಕ್ಷ ಗುರುರಾಜ ಹುಣಶಿಮರದ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದ್ದು, ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲಾಗದೆ ಪರದಾಡುತ್ತಿದೆ. ಎರಡೂವರೆ ವರ್ಷದಲ್ಲಿ ಒಂದೇ ಒಂದು ಸರ್ಕಾರ ಉದ್ಯೋಗಿಗಳ ನೇಮಕಾತಿ ನಡೆದಿಲ್ಲ, ಧಾರವಾಡದಲ್ಲಿ ವಿದ್ಯಾರ್ಥಿಗಳು ಹಾಗೂ ಉದ್ಯೋಗಾಂಕ್ಷಿಗಳು ಧಂಗೆ ಎದ್ದಿದ್ದು, ಮುಂಬರುವ ದಿನಗಳಲ್ಲಿ ರಾಜ್ಯದಾದ್ಯಂತ ವ್ಯಾಪಿಸಿದರೂ ಅಚ್ಚರಿಯಿಲ್ಲ, ಮುಂಬರುವ ಬಜೆಟ್‌ನಲ್ಲಿ ಕನಿಷ್ಠ 1 ಲಕ್ಷ ಉದ್ಯೋಗ ಭರ್ತಿ ಹಾಗೂ ಧಾರವಾಡ ಜಿಲ್ಲೆಗೆ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಘೋಷಣೆ ಮಾಡಬೇಕು ಎಂದರು. ಮುಖಂಡರಾದ ವೀರಭದ್ರಪ್ಪ ಹಾಲಹರವಿ, ನವೀನಕುಮಾರ ಮಡಿವಾಳರ, ಬಾಷಾಸಾಬ್ ಮುದ್ಗಲ್, ಸಿದ್ದುಮಹಾಂತ ಒಡೆಯರ, ಶಂಕರ ಪವಾರ, ಶಾಬಾಜ್ ಇದ್ದರು.

ಕಿರುಸುದ್ದಿ

ಫೆ.28ರಂದು ಅಂತಾರಾಷ್ಟ್ರೀಯ ಸಮ್ಮೇಳನ

ಸವದತ್ತಿ: ಇಲ್ಲಿನ ಕೆ.ಎಲ್.ಇ.ಸಂಸ್ಥೆಯ ಎಸ್.ವಿ.ಎಸ್.ಬೆಳ್ಳುಬ್ಬಿ ಮಹಾವಿದ್ಯಾಲಯದಲ್ಲಿ ಫೆ.28ರಂದು ಸಾಹಿತ್ಯ ಮತ್ತು ಸಮಾಜ ವಿಜ್ಞಾನದಲ್ಲಿ ಆಧುನಿಕೋತ್ತರ ಸಮಸ್ಯೆಗಳ ಕುರಿತ ಬಹುಶಿಸ್ತೀಯ ದೃಷ್ಟಿಕೋನ ಎನ್ನುವ ವಿವಿಧ ವಿಷಯಾಧಾರಿತ ಅಂತರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ.ಈ ಸಮ್ಮೇಳನವನ್ನು ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ವಿರೂಪಾಕ್ಷಪ್ಪ ಮಾಮನಿ ಉದ್ಘಾಟಿಸಲಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕರಾದ ಡಾ.ಎನ್.ಎಚ್.ಕಲ್ಲೂರ ಮುಖ್ಯ ಅತಿಥಿಗಳಾಗಿ, ಹಾವೇರಿ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ಎಸ್.ಟಿ.ಬಾಗಲಕೋಟಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ. ಶ್ರೀಲಂಕಾದ ಈಸ್ಟರ್ನ್ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಶ್ರೀಕರುಣಾಕರನ್ ದಿಕ್ಸೂಚಿ ಮಾತುಗಳನ್ನಾಡಲಿದ್ದಾರೆ. ಪ್ರಾಚಾರ್ಯ ಡಾ.ಎನ್.ಆರ್.ಸವತೀಕರ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ,

ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯರಾದ ಬಿ.ವಿ.ಮಲಗೌಡರ ಉಪಸ್ಥಿತರಿರಲಿದ್ದಾರೆ.ನಂತರ ನಡೆಯುವ ತಾಂತ್ರಿಕ ಗೋಷ್ಠಿಯಲ್ಲಿ ವಿವಿಧ ರಾಜ್ಯಗಳ ವಿಶ್ವವಿದ್ಯಾಲಯ ಮತ್ತು ಮಹಾವಿದ್ಯಾಲಯಗಳಿಂದ ಆಗಮಿಸಿದ ಪ್ರಾಧ್ಯಾಪಕರು ಮತ್ತು ಸಂಶೋಧನಾರ್ಥಿಗಳು ಪ್ರಬಂಧ ಮಂಡಿಸಲಿದ್ದಾರೆ. ಸಂಜೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯರಾದ ಉಮೇಶ್ ಬಾಳಿಯವರು ಮುಖ್ಯ ಅತಿಥಿಗಳಾಗಿ, ಸವದತ್ತಿಯ ಎಸ್.ಕೆ.ಇ.ಸಂಸ್ಥೆಯ ಕಾರ್ಯಾಧ್ಯಕ್ಷರಾದ ಸದಾಶಿವ ಎಸ್.ಕೌಜಲಗಿ ಮತ್ತು ಸವದತ್ತಿ ನಗರ ಸಭೆಯ ಸದಸ್ಯರಾದ ಶಿವಾನಂದ ಸಿ.ಹೂಗಾರ ಅವರು ಗೌರವ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಪ್ರಾಚಾರ್ಯ ಡಾ.ಎನ್.ಆರ್.ಸವತೀಕರ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ : ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು, ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ 4.0 ಅಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿರುವ 22 ಸರ್ಕಾರಿ ಕಾಲೇಜುಗಳ ಮೂಲಕ Web Developer ಹಾಗೂ Data Analysis Associate ವೃತ್ತಿಗಳಡಿ ಅಲ್ಪಾವಧಿ ಕೌಶಲ್ಯ ತರಬೇತಿಯನ್ನು ಆಯೋಜಿಸಲಾಗುತ್ತಿದ್ದು, ಆಸಕ್ತ ಅಭ್ಯರ್ಥಿಗಳು ಅರ್ಜಿಯನ್ನು ಸರ್ಕಾರದ ಅಧಿಕೃತ https://www.skillindiadigital.gov.in ಪೋರ್ಟಲ್ ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ, ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯೋಧ ಸಾವು

ಸಂಕೇಶ್ವರ: ಸಮೀಪದ ಕಣಗಲಾ ಗ್ರಾಮದ ಯೋಧ ಅಮಿತ ಅಶೋಕ ಕುಟಕೋಳಿ(39) ಗುರುವಾರ ಮಧ್ಯ ರಾತ್ರಿ ನವದೆಹಲಿಯ ಏಮ್ಸ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಅಲ್ಪಕಾಲದ ಅನಾರೋಗ್ಯದಿಂದ ಬಳಲುತಿದ್ದ ಅವರನ್ನು ಕಳೆದ ವಾರ ನವದೆಹಲಿಯ ಏಮ್ಸ



ಆಸ್ಪತ್ರೆಗೆ ದಾಖಿಲು ಮಾಡಲಾಗಿತ್ತು. ಶುಕ್ರವಾರ ಅವರ ಅಂತ್ಯಕ್ರಿಯೆಯು ಸ್ವ ಗ್ರಾಮ ಕಣಗಲಾದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ. ಮೃತರು ತಾಯಿ, ಪತ್ನಿ, ಮಗ ಹಾಗೂ ಇಬ್ಬರು ಸಹೋದರಿಯರನ್ನು ಅಗಲಿದ್ದಾರೆ.

ಅಪರಿಚಿತ ವ್ಯಕ್ತಿ ಸಾವು

ಬೆಳಗಾವಿ: ಚಿಂಚಲಿ ರೈಲು ನಿಲ್ದಾಣದ ಹತ್ತಿರ ಫೆಬ್ರವರಿ 26ರಂದು ಯಾವುದೋ ಚಲಿಸುವ ರೈಲಿನಿಂದ ಅಪರಿಚಿತ ವ್ಯಕ್ತಿ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದಾನೆ. ಈ ಬಗ್ಗೆ ಬೆಳಗಾವಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಅಂದಾಜು ವಯಸ್ಸು 35-40 ವರ್ಷ, 5-6 ಎತ್ತರ, ಸಾದಗಪ್ಪು ಮೈ ಬಣ್ಣ ಮೈಯಿಂದಾ ತೆಳ್ಳಗೆ, ಉದ್ದ ಮುಖ, ಚೂಪಾದ ಮೂಗೂ, ತಲೆಯಲ್ಲಿ ಕಪ್ಪು ಕೂದಲು, ಸಣ್ಣಗೆ ಮೀಸೆ ದಾಡಿ ಬಿಟ್ಟಿರುತ್ತಾನೆ. ಬೂದಿ ಗುಲಾಬಿ ಬಣ್ಣದ ಟೀ ಶರ್ಟ, ನೀಲಿ ಬಣ್ಣದ ನೈಟ್ ಪ್ಯಾಂಟ್ ಧರಿಸಿರುತ್ತಾನೆ. ಈ ರೀತಿ ಚಹರೆಯುಳ್ಳ ಅಪರಿಚಿತ ವ್ಯಕ್ತಿಯ ಮೃತನ ರಕ್ತ ಸಂಬಂಧಿಗಳು ಯಾರಾದರೂ ಪತ್ತೆಯಾದರೆ ಬೆಳಗಾವಿ ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಅಥವಾ ರೈಲ್ವೆ ಪೊಲೀಸ್ ನಿಯಂತ್ರಣ ಕೊಠಡಿ ಸಂಪರ್ಕಿಸಬಹುದಾಗಿದೆ ಎಂದು ಬೆಳಗಾವಿ ರೈಲ್ವೆ ಪೊಲೀಸ್ ಠಾಣೆ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ತೆಲಸಂಗ: ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಪ್ರತಿ ರೈತರಿಗೆ ಎಕರೆಗೆ ಕನಿಷ್ಠ 1 ಲಕ್ಷ ರೂಪಾಯಿ ಬೆಳೆ ಸಾಲ ವಿತರಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತೆಲಸಂಗ ಘಟಕದ ವತಿಯಿಂದ ಗ್ರಾಮದ ಉಪತಹಸೀಲ್ದಾರ ರಾಜಶೇಖರ ವಳಸಂಗ ಮೂಲಕ ಜಿಲ್ಲಾ ಸಹಕಾರಿ ಬ್ಯಾಂಕ್‌ನ ಪ್ರಧಾನ ಕಚೇರಿಗೆ ಮನವಿ ಸಲ್ಲಿಸಲಾಯಿತು.

ರೈತರಿಗೆ ಎಕರೆಗೆ 1 ಲಕ್ಷ ರೂ. ಬೆಳೆ ಸಾಲ ನೀಡಿ

ತೆಲಸಂಗ: ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ರೈತರ ಹಿತ ಕಾಯುವ ಬದಲು ಅಧಿಕ ಲಾಭಕ್ಕಾಗಿ ವ್ಯಾಪಾರಸ್ಥರಿಗೆ ಮತ್ತು ಕೈಗಾರಿಕೆಗಳಿಗೆ ಹೆಚ್ಚಿನ ಸಾಲ ನೀಡುತ್ತಿದೆ. ಇದನ್ನು ನಿಲ್ಲಿಸಿ, ಪ್ರತಿ ರೈತರಿಗೆ ಎಕರೆಗೆ ಕನಿಷ್ಠ 1 ಲಕ್ಷ ರೂಪಾಯಿ ಬೆಳೆ ಸಾಲ ವಿತರಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತೆಲಸಂಗ ಘಟಕ ಆಗ್ರಹಿಸಿದೆ.

ಗ್ರಾಮದ ಉಪತಹಸೀಲ್ದಾರ ರಾಜಶೇಖರ ವಳಸಂಗ ಮೂಲಕ ಜಿಲ್ಲಾ ಸಹಕಾರಿ ಬ್ಯಾಂಕ್‌ನ ಪ್ರಧಾನ ಕಚೇರಿಗೆ ಮನವಿ ಸಲ್ಲಿಸಿದ ರೈತ ಮುಖಂಡರು, ಬ್ಯಾಂಕ್‌ನ ಇತ್ತೀಚಿನ ಧೋರಣೆಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರವು ಅರ್ಹ ರೈತರಿಗೆ 5 ಲಕ್ಷ ರೂಪಾಯಿಗಳವರೆಗೆ ಸಾಲ ನೀಡಲು ನಿರ್ದೇಶನ ನೀಡಿದ್ದರೂ, ಬ್ಯಾಂಕ್ ಮಾತ್ರ ರೈತರಿಗೆ ಅತ್ಯಲ್ಪ ಪ್ರಮಾಣದ ಸಾಲ ನೀಡುತ್ತಿದೆ. ಇದರಿಂದ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಹೋರಾಟದ ಎಚ್ಚರಿಕೆ: ರೈತರ ಈ ನ್ಯಾಯಯುತ ಬೇಡಿಕೆಗೆ ಬ್ಯಾಂಕ್ ಆಡಳಿತ ಮಂಡಳಿ ತಕ್ಷಣ ಸ್ಪಂದಿಸಬೇಕು. ಒಂದು ವೇಳೆ ಈ ಮನವಿಯನ್ನು ನಿರ್ಲಕ್ಷಿಸಿದರೆ ಹೋರಾಟ ಮಾಡುವ ಎಚ್ಚರಿಕೆಯನ್ನು ರೈತರು ನೀಡಿದ್ದಾರೆ.

ಸ್ಥಳೀಯ ರೈತ ಸಂಘದ ಅಧ್ಯಕ್ಷ ಸುಬಾಸ ಖೊಬ್ರಿ, ಉಪಾಧ್ಯಕ್ಷ ಹಣಮಂತ ಕೊಟ್ಟಲಗಿ ಸೇರಿದಂತೆ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತೆಲಸಂಗ ಗ್ರಾಮ ಘಟಕದ ಪದಾಧಿಕಾರಿಗಳು, ರೈತರು ಉಪಸ್ಥಿತರಿದ್ದರು.



ಬೈಲಹೊಂಗಲ: 2026-27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಕಿತ್ತೂರು ಪ್ರಾಧಿಕಾರಕ್ಕೆ ಕನಿಷ್ಠ 200 ಕೋಟಿ ರೂ. ಅನುದಾನ ಮಂಜೂರು ಮಾಡುವಂತೆ ವೀರ ರಾಣಿ ಕಿತ್ತೂರು ಚನ್ನಮ್ಮನವರ ಸ್ಮರಣೋತ್ಸವ ಸಮಿತಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ಈ ಕುರಿತು ಉಪವಿಭಾಗಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹಣಕಾಸು ಸಚಿವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ನ್ಯಾಯವಾದಿ ಎಫ್.ಎಸ್. ಸಿದ್ದನಗೌಡರ, ಮಹೇಶ ಹರಕುಣಿ, ಬಿ.ಎಂ. ಚಿಕ್ಕನಗೌಡರ, ಸಿದಗೌಡ ಮೊದಗಿ, ಬಿ.ಬಿ. ಸಂಗನಗೌಡರ, ಮಲ್ಲಿಕಾರ್ಜುನ ಹುಂಬಿ, ಶಂಕರ ಕರಿಕಟ್ಟಿ, ಅಶೋಕ ಗುಂಡ್ಲೂರ, ವೀರಣ್ಣ ಕರೀಕಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಮರ್ಪಕ ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ ನೀಡಿ: ಶಿಂಧೆ

ಬೆಳಗಾವಿ : ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು ಹಾಗೂ ಎಲ್ಲ ಗ್ರಾಮಗಳಿಗೂ ಸಮರ್ಪಕವಾಗಿ ಕುಡಿಯುವ ನೀರಿನ ಪೂರೈಕೆ ಮಾಡಬೇಕು ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ, ಹಮ್ಮಿಕೊಂಡಿದ್ದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಲ್ಲ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ ಕುಂದುಕೊರತೆಗಳ ಮೇಲ್ವಿಚಾರಣೆಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಂಜಿನಿಯರ್‌ಗಳನ್ನು ನಿಯೋಜಿಸಬೇಕು. ಗ್ರಾಮ ಪಂಚಾಯತಿ ಕಾರ್ಯಾಲಯದ ನಾಮಫಲಕ ಅಥವಾ ಗೋಡೆಯ ಮೇಲೆ ಸಂಬಂಧಪಟ್ಟ ಎಂಜಿನಿಯರ್ ಗಳ ಮೊಬೈಲ್ ಸಂಖ್ಯೆಯನ್ನು ಬರೆಯಿಸಬೇಕು ಎಂದು ನಿರ್ದೇಶನ ನೀಡಿದರು.

ಕುಡಿಯುವ ನೀರು ಹಾಗೂ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ದೂರುಗಳು ಬಂದರೇ ಸಂಬಂಧಪಟ್ಟ ಎಂಜಿನಿಯರ್ ಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಹೀಗಾಗಿ, ಇಂಜಿನಿಯರ್ ಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ಸಾರ್ವಜನಿಕರಿಂದ ದೂರುಗಳು ಬಂದರೆ ಕೂಡಲೇ ಸ್ಪಂದಿಸಬೇಕು. ಸಂಬಂಧಪಟ್ಟ ಗ್ರಾಪಂ ಅಭಿವೃದ್ಧಿ



» ಕುಡಿಯುವ ನೀರು ಹಾಗೂ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ದೂರುಗಳು ಬಂದರೇ ಸಂಬಂಧಪಟ್ಟ ಎಂಜಿನಿಯರ್ ಗಳನ್ನೇ ಹೊಣೆಗಾರರನ್ನಾಗಿಸಲು ಸೂಚನೆ

» ಸಮರ್ಪಕ ಕಸ ವಿಲೇವಾರಿ ಮಾಡಿ

ಅಧಿಕಾರಿಗಳೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದರು.ಗ್ರಾಮ ಪಂಚಾಯತಿಗಳಿಗೆ ಆರ್‌ಓ ಪ್ಲ್ಯಾಂಟ್ ಗಳ ಹಸ್ತಾಂತರ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಯಾವುದಾದರು ಗ್ರಾಮದಲ್ಲಿ ಕುಡಿಯುವ ನೀರಿನ ಪೂರೈಕೆಯಲ್ಲಿ ಸಮಸ್ಯೆಯಾದರೆ ಟ್ಯಾಂಕರ್ ಗಳ ಮೂಲಕ ನೀರು ಪೂರೈಸಬೇಕು. ಅಗತ್ಯಬಿದ್ದರೇ ಮಾತ್ರ ಬೋರವೆಲ್ ಗಳನ್ನು ಕೊರೆಯಿಸಲು ಕ್ರಮವಹಿಸಬೇಕು. ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಡ್ಯಾಮ್ ಗಳಲ್ಲಿ ನೀರಿನ ಮಟ್ಟ ಎಷ್ಟಿದೆ ಎಂಬುದರ ಕುರಿತು ಪ್ರತಿದಿನ ಮಾಹಿತಿ ಪಡೆಯಬೇಕು ಎಂದು ಸೂಚಿಸಿದರು.

ನೀರಿನ ಮಾದರಿ ಪರೀಕ್ಷೆ ನಡೆಸಿ

ಎಲ್ಲ ಗ್ರಾಮಗಳಲ್ಲಿ ನೀರಿನ ಮಾದರಿ ಪರೀಕ್ಷೆ ಕೈಗೊಳ್ಳಬೇಕು. ನೀರಿನ ಟ್ಯಾಂಕರ್ ಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಬೇಕು. ಸ್ವಚ್ಛಗೊಳಿಸಿರುವ ಕುರಿತು ದಿನಾಂಕಗಳನ್ನು ಬರೆಯಿಸಬೇಕು. ನೀರು ಕಲುಷಿತವಾಗದಂತೆ ಕ್ರಮವಹಿಸಬೇಕು. ರೋಗ-ರುಜಿನಗಳು ಹರಡದಂತೆ ಎಚ್ಚರಿಕೆ ವಹಿಸಬೇಕು ಎಂದು ಸೂಚನೆ ನೀಡಿದರು.

ಶ್ರಮದಾನ ಕೈಗೊಳ್ಳಿ : ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಪ್ರತಿ ಶನಿವಾರ ತಮ್ಮ ವ್ಯಾಪ್ತಿಯ ಗ್ರಾಮಗಳಲ್ಲಿ ಶ್ರಮದಾನ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ನಿರ್ದೇಶನ ನೀಡಿದರು.

ಈ ವೇಳೆ ಸಭೆಯಲ್ಲಿ ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ರವಿ ಬಂಗಾರೆಪ್ಪನವರ್, ಜಿಪಂ ಉಪಕಾರ್ಯದರ್ಶಿ (ಆಡಳಿತ) ಬಸವರಾಜ ಹೆಗ್ಗನಾಯಕ್, ಮುಖ್ಯ ಯೋಜನಾ ನಿರ್ದೇಶಕ ಗಂಗಾಧರ ದಿವಟರ್, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಳಗಾವಿ ವಿಭಾಗದ ಕಾರ್ಯಪಾಲಕ ಅಭಿಯಂತರ ಕಿರಣ ಘೋರ್ಪಡೆ, ಚಿಕ್ಕೋಡಿ ವಿಭಾಗದ ಕಾರ್ಯಪಾಲಕ ಅಭಿಯಂತರ ಪಾಂಡುರಂಗರಾವ್, ಎಲ್ಲ ತಾಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಿಬ್ಬಂದಿ ಹಾಜರಿದ್ದರು.

ನಿಷ್ಠೆ, ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ

ಹುಕ್ಕೇರಿ: ನಿಷ್ಠೆ, ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ ಕಲಿತ ಶಾಲೆಗೂ, ಪಾಲಕರಿಗೂ ಹೆಸರು ತರಬೇಕೆಂದು ಪ್ರಧಾನ ದಿವಾಣಿ ನ್ಯಾಯಾಧೀಶ ಆದಿತ್ಯ ಕಲಾಲ ಹೇಳಿದರು.

ಇತ್ತೀಚೆಗೆ ನಡೆದ ತಾಲೂಕಿನ ರಕ್ಷಿ ಗ್ರಾಮದ ಗುಡ್ ಶೆಪರ್ಡ್ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಬೆಳಕಿಗೆ ತರಲು ವಾರ್ಷಿಕೋತ್ಸವ ಮಹತ್ವ ವಹಿಸುತ್ತದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಕೆ.ಬಿ.ಕುರಬೇಟ, ಪ್ರಧಾನಕಾರ್ಯದರ್ಶಿ ಎಸ್.ಜಿ.ನದಾಫ ಮಾತನಾಡಿ, ಪಾಲಕರು ಸಂಜೆ ಮೂರು ಗಂಟೆ ಟಿವಿ ಮತ್ತು ಮೊಬೈಲ್ ಬಳಕೆ ನಿಲ್ಲಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಬೇಕು ಎಂದರು.

ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು ಮಾತನಾಡಿ, ಉನ್ನತ ಗುಣಮಟ್ಟದ ಶಾಲೆಗಳಿಗೆ ಮಕ್ಕಳ ಪ್ರವೇಶಾತಿ ಕೊಡಿಸುವುದರ ಜತೆಗೆ ಪಾಲಕರು ಪ್ರತಿನಿತ್ಯ ಎರಡು ತಾಸುಗಳಾದರು ಕಲಿಕೆಗೆ ಸಹಕರಿಸಬೇಕು. ಅಂದರೆ ಅವರೊಂದಿಗೆ ಸಮಯ ಕಳೆಯಬೇಕು. ಆಗ ಮಾತ್ರ ಪಾಲಕರ ಶ್ರಮ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಸಂಸ್ಥೆಯ ಪ್ರಾಚಾರ್ಯ ಡಾ.ಸದಾನಂದ ಕುರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಾರಂಭದಲ್ಲಿ ಮಕ್ಕಳು ರಚಿಸಿದ ಕಲಾಕೃತಿಗಳನ್ನು ಅತಿಥಿಗಳು ವೀಕ್ಷಿಸಿದರು. ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಜಿನೇಂದ್ರ ನಿಲಜಗಿ, ತಾಲೂಕಾ ದೈಹಿಕ ಶಿಕ್ಷಣಾಧಿಕಾರಿ ಎ.ಆಯ್.ಕೋಟಿವಾಲೆ, ವ್ಯವಸ್ಥಾಪಕ ಕೃಷ್ಣಪ್ಪಾ ಬ್ಯಾಕೂಡ, ಪತ್ರಕರ್ತ ಬಾಬು ಸುಂಕದ, ವಕೀಲ ಬಿ.ಆಯ್.ಅಲಗೂರಿ ಮತ್ತಿತರರಿದ್ದರು.



ಡಾ.ರವಿ ಇಚಲಕರಂಜಿ ಮನೆಗೆ ಜಿಲ್ಲಾಧಿಕಾರಿ ಭೇಟಿ

ಹಾರೂಗೇರಿ: ನರ ರೋಗ ತಜ್ಞರಾದ ಡಾ.ರವಿ ಇಚಲಕರಂಜಿ ಅವರ ಮನೆಗೆ ಬೆಳಗಾವಿ ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ಅವರು ಆತ್ಮೀಯತೆಯ ಭೇಟಿ ನೀಡಿ, ಕುಶಲೋಪರಿ ಮಾತನಾಡಿದರು. ಈ ಸಂದರ್ಭದಲ್ಲಿ ಹೃದಯ ತಜ್ಞರಾದ ಡಾ. ಎಲ್ ಎಸ್ ಜಂಬಗಿ,ಪುರಸಭೆ ಸದಸ್ಯರಾದ ಸಂತೋಷ ಸಿಂಗಾಡಿ, ಪಿಎಸ್‌ಐ ಮಾಳಪ್ಪ ಪೂಜೇರಿ, ಗಜು ಜಂಬಗಿ, ರವಿ ಹಂದಿಗುಂದ,ಹಣಮಂತ ಚಿಕ್ಕೋಡಿ ಹಾಗೂ ಇಚಲಕರಂಜಿ ಕುಟುಂಬಸ್ಥರು ಉಪಸ್ಥಿತರಿದ್ದರು.



ಹುಕ್ಕೇರಿ ಶ್ರೀಗಳಿಗೆ ಕಲ್ಪವೃಕ್ಷಶ್ರೀ ಪ್ರಶಸ್ತಿ: ಅಭಿನಂದನೆ



ರಾಯಬಾಗ: ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಹಾವೇರಿ ಜಿಲ್ಲೆಯ ಸವಣೂರು ದೊಡ್ಡ ಹುಣಸೆ ಕಲ್ಮಠದಲ್ಲಿ ಜರುಗಿದ ಶರಣರ ಸಂಸ್ಕೃತಿ ಸಮಾರಂಭದಲ್ಲಿ ಈಚೆಗೆ ಕಲ್ಪವೃಕ್ಷ ಶ್ರೀ ಪ್ರಶಸ್ತಿ ಪ್ರದಾನ ಮಾಡಿದ ಹಿನ್ನೆಲೆಯಲ್ಲಿ ಚಿತ್ರದುರ್ಗದ ಶಿವಶರಣ ಮಾದಾರ ಚೆನ್ನಯ್ಯ ಸೇವಾ ಸಮಿತಿ ರಾಜ್ಯ ಉಪಾಧ್ಯಕ್ಷ ಹಾಗೂ ಮಾಲಿಂಗೇಶ್ವರ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಅರುಣ್ ಐಹೊಳೆ ಹಾಗೂ ವಿವೇಕಾನಂದ ಯಮಕನಮರಡಿ, ಶ್ರೀಮಂತ ಕಾಂಬಳೆ, ಸುಭಾಷ್ ಮಲ್ಲಪ್ಪಗೊಳ, ದಯಾನಂದ ಬಂಬಲಾಡಿ, ಬರಮಪ್ಪ ಪೂಜಾರ, ಸಂಜೀವ ಮೈಶಾಳೆ, ಪ್ರಕಾಶ ತೇರದಾಳೆ, ಅಪ್ಪಾಸಾಬ ಕೆಂಗಣ್ಣವರ, ಸಂಗನಗೌಡ ಐಹೊಳೆ, ರಿತೇಶ್ ಐಹೊಳೆ, ಮಾರುತಿ ಮಾಂಗ, ಅಜಿತ ಮಾಂಗ, ನೀಲಪ್ಪ ಐಹೊಳೆ ಅಭಿನಂದನೆ ಸಲ್ಲಿಸಿದರು

ರಸ್ತೆ ಸುಧಾರಣಾ ಕಾಮಗಾರಿಗೆ ಭೂಮಿಪೂಜೆ

ರಾಯಬಾಗ: ರೈತರು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವ ದೃಷ್ಟಿಯಿಂದ ರಸ್ತೆಗಳ ಸುಧಾರಣಾ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ ಎಂದು ಶಾಸಕ ಡಿ.ಎಮ್.ಐಹೊಳೆ ಹೇಳಿದರು.

ತಾಲೂಕಿನ ನಂದಿಕುರಳಿ ಗ್ರಾಮದಿಂದ ನಸಲಾಪೂರಕ್ಕೆ ಹೋಗುವ ರಸ್ತೆಗೆ ಲೋಕೋಪಯೋಗಿಇಲಾಖೆಯಿಂದ ಮಂಜೂರಾದ 1.25 ಲಕ್ಷರೂ. ವೆಚ್ಚದ ರಸ್ತೆ ಡಾಂಬರೀಕರಣ ಹಾಗೂ ರಸ್ತೆ ಸುಧಾರಣಾ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಶಾಸಕರು ರೈತರು, ಸಾರ್ವಜನಿಕರು ಯಾವುದೇ ತಾರತಮ್ಯ ಮಾಡದೇ ವಿಶಾಲ ಮನೋಭಾವನೆಯಿಂದ ರಸ್ತೆಗೆ ಹೆಚ್ಚಿನ ಭೂಮಿಕೊಟ್ಟು ರಸ್ತೆ ಅಗಲೀಕರಣ ಆಗುವ ಹಾಗೆ ಸಹಕರಿಸಬೇಕು. ರಸ್ತೆ ಅಗಲೀಕರಣದಿಂದ ಅಪಘಾತಗಳನ್ನು ತಡೆಯಬಹುದಾಗಿದೆ ಎಂದರು.



ಈ ಸಂದರ್ಭದಲ್ಲಿ ಪೃಥ್ವಿರಾಜ ಜಾಧವ, ಪ್ರಧಾನಿ ಉಪ್ಪಾರ, ದಸ್ತಗೀರ ಮುಲ್ತಾನಿ, ಅಂಕುಶ ದತ್ತವಾಡೆ, ಬಾಬು ವಂಜೇರಿ, ನಾರಾಯಣ ಮಿರ್ಜೆ, ಸುನೀಲ ಬಿದರಿ, ಮಂಜುನಾಥ ಸಂಗೋಟೆ, ಅಣ್ಣಪ್ಪ ಸಂಗೋಟೆ, ರಾಯಪ್ಪಗೊಂಡೆ,ಆರ್.ಬಿ.ಶಹಾರೆ, ಕೃಷ್ಣಾ ದತ್ತವಾಡೆ, ಸಾವಂತ ಮೋರೆ, ಗಿರೀಶ ಬಿಸ್ಲಾಪೂರ, ಆರ್.ಬಿ.ವ್ಂನ್ಂವ್ಡ್ನರ್, ರಾಜುಡಂಗ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಕಾತ್ರಾಳ ಪಿಎಂಶ್ರೀ ಶಾಲೆಗೆ ಪ್ರಶಸ್ತಿ

ಕಾಗವಾಡ: ಪ್ರಕೃತಿ ಮಿಷನ್ ಯೋಜನೆಯ ಅಡಿಯಲ್ಲಿ ತಾಲೂಕಿನ ಕಾತ್ರಾಳ ಪಿಎಂಶ್ರೀ ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ರಾಜ್ಯಮಟ್ಟದ ಉತ್ತಮ ಶಾಲೆ ಪ್ರಶಸ್ತಿಗೆ ಆಯ್ಕೆಯಾಗಿದೆ. ಯೋಜನೆಯಡಿ ರಾಜ್ಯದ 5,000 ಪ್ರಾಥಮಿಕ ಮತ್ತು ಪ್ರೌಢಶಾಲೆಯೊಳಗೆ 10 ಶಾಲೆಗಳು ಆಯ್ಕೆಯಾಗಿವೆ.

ಬೆಂಗಳೂರಿನ ವಿಕಾಸಸೌಧದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶಿಕ್ಷಣ ಸಚಿವರಾದ ಮದು ಬಂಗಾರಪ್ಪ ರವರು ಪ್ರಶಸ್ತಿ ಪ್ರದಾನ ಮಾಡಿದರು.

ಶಾಲೆಯ ಮುಖ್ಯೋಪಾಧ್ಯಾಯರಾದ ಸಂಜೀವ ಕೋಳಿ, ಶಿಕ್ಷಕರಾದ ಗೌಡಪ್ಪ ಸಡ್ಡಿ, ಪ್ರಕೃತಿ ಮಿಷನ್ ಸಂಚಾಲಕ ವಿಠ್ಠಲ ಗುಬಚೆ, ಪ್ರಕೃತಿ ಮಿಷನ್ ಹಸಿರು ನಾಯಕರಾದ ಸ್ನೇಹಾ ಸುಖಿಮಾರ ಮಾದರ, ಸ್ನೇಹಾ ಸುನಿಲ ಮಾದರ, ಸೂರಜ ಕಾಂಬಳೆ, ಸಮರ್ಥ ಮಾದರ, ಸಮರ್ಥ ಸಂಗಾಪೂರೆ ಪ್ರಶಸ್ತಿಯನ್ನು ಸ್ವೀಕರಿಸಿದರು.

ಪ್ರಶಸ್ತಿ ಸ್ವೀಕರಿಸಿ ಶಾಲೆಗೆ ಆಗಮಿಸಿದ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಗ್ರಾಮದ ಮುಖಂಡರು, ಪಾಲಕರು, ತಾಯಂದಿರು, ಯುವಕರೆಲ್ಲರೂ ಸೇರಿ ಭವ್ಯವಾಗಿ ಸ್ವಾಗತ ಕೋರಿದರು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ರವಿ ಕಾಂಬಳೆ, ಗಂಗೂಬಾಯಿ ಶಿಂಧೆ, ಸಂಜು ಮುದವಿ, ಬಸು ಮುದವಿ, ರಾಮಾ ಯಂಡೋಳಿ, ಸಂಜು ಮಾನೆ, ಎಮ್.ಎಲ್. ಹವಳೆ, ಅಣ್ಣಾಸಾಬ ಕಾಂಬಳೆ, ಕಿರಣ ಕಾಂಬಳೆ, ಆಸೀಫ ನದಾಫ ಗ್ರಾಮಸ್ಥರು, ಶಿಕ್ಷಕ ವೃಂದ, ವಿದ್ಯಾರ್ಥಿಗಳು ಇತರರು ಇದ್ದರು.



ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ

ಬೈಲಹೊಂಗಲ: ಅಂಗನವಾಡಿ ಕೇಂದ್ರವು ಮಕ್ಕಳ ಪ್ರಾಥಮಿಕ ಶಿಕ್ಷಣ ಹಾಗೂ ಪೌಷ್ಟಿಕ ಆಹಾರ ವಿತರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಉತ್ತಮ ಮೂಲಸೌಕರ್ಯ ಕಲ್ಪಿಸುವ ಮೂಲಕ ಮಕ್ಕಳ ಭವಿಷ್ಯಕ್ಕೆ ಬಲವಾದ ಅಡಿಪಾಯ ಹಾಕುವುದು ನಮ್ಮ ಆದ್ಯತೆ ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ನಗರದ ವಿನಾಯಕ ನಗರದಲ್ಲಿರುವ ಅಂಗನವಾಡಿ ಕೇಂದ್ರದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಮಕ್ಕಳಿಗೆ ಸುರಕ್ಷಿತ ಮತ್ತು ಸೌಲಭ್ಯಯುತ ವಾತಾವರಣದಲ್ಲಿ ಶಿಕ್ಷಣ ಹಾಗೂ ಪೌಷ್ಟಿಕ ಆಹಾರ ಸೌಲಭ್ಯ ದೊರಕುವಂತೆ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಿ.ಡಿ.ಪಿ.ಓ ಅರುಣಕುಮಾರ, ಶಿವಾನಂದ ಮಡಿವಾಳರ, ಗಿರೀಶ ಹರಕುಣಿ, ಸಕ್ರಿ ಪ್ರಮೋದ ಹಿರೇಮಠ, ಎಸ್.ಬಿ. ಹೊನ್ನಾವರ, ಡಿ.ಎಂ. ಬೂದಿಹಾಳ, ವಿ.ಬಿ. ಮಠದ, ವಿ.ಎನ್. ಕಾಪಸಿ, ಬಸನಗೌಡ ಪಾಟೀಲ, ಈರಣ್ಣ ಬೆಳಗಾವಿ, ಅಂಗನವಾಡಿ ಮೇಲ್ವಿಚಾರಕಿಯರು ಹಾಗೂ ಕಾರ್ಯಕರ್ತೆಯರು ಉಪಸ್ಥಿತರಿದ್ದರು.



ಪಂಪ್‌ಸೆಟ್ ಕೇಬಲ್ ಕಳ್ಳತನ: ಆಕ್ರೋಶ



ಯರಗಟ್ಟಿ: ಯರಗಟ್ಟಿ ಹಾಗೂ ರೈನಾಪೂರ ಗ್ರಾಮಗಳ 10ಕ್ಕೂ ಹೆಚ್ಚು ರೈತರ ಪಂಪ್‌ಸೆಟ್‌ಗಳ ಕೇಬಲ್ ಮಂಗಳವಾರ ರಾತ್ರಿ ಕಳ್ಳತನವಾಗಿದ್ದು, ರೈತರು ಕಂಗಾಲಾಗಿದ್ದಾರೆ.

ಕೇಬಲ್ ಜತೆ ನೀರು ಮೇಲೆತ್ತಲು ಬಿಟ್ಟಿರುವ ಕೇಬಲ್ ಸಹ ಹಾಳು ಮಾಡಿದ್ದಾರೆ. ಒಂದೇ ರಾತ್ರಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಕೇಬಲ್ ಕಳ್ಳತನವಾಗಿದೆ. ಕಳೆದ ಮೂರು ತಿಂಗಳಿನಲ್ಲಿ ಮೂರು ಬಾರಿ ಕಳ್ಳತನವಾಗಿದೆ. ಪ್ರತಿ ವರ್ಷ ನಾಲ್ಕೈದು ಬಾರಿ ಕಳ್ಳತನವಾಗುತ್ತಿದೆ ಎಂದು ರೈತರು ನೋವು ತೋಡಿಕೊಂಡರು. ಗ್ರಾಮಸ್ಥರು ಪೊಲೀಸರಿಗೆ ದೂರು ನೀಡಿದ್ದು ಕೂಡಲೇ ಕಳ್ಳರನ್ನು ಪತ್ತೆ ಹಚ್ಚಿ ಕಳವು ತಪ್ಪಿಸುವಂತೆ ಒತ್ತಾಯಿಸಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಈ ವೇಳೆ ಸಂತೋಷ ಹಾದಿಮನಿ, ಸುರೇಶ ಬಂಟನೂರ, ಗೋಪಾಲ ಕಡೇಮನಿ, ನಿಖಿಲ ಪಾಟೀಲ, ಮುದ್ದಪ್ಪ ಪೂಜೇರ, ಫಕ್ರುಸಾಬ ನದಾಫ, ಹರೀಶ ಹಪಳಿ, ನಜೀರ ನದಾಫ, ಪ್ರವೀಣ ಬೆಣ್ಣಿ, ಮಂಜುನಾಥ ಬಾವಿಹಾಳ, ಪಾಂಡು ಕಳ್ಳಿಗುದ್ದಿ, ರಾಜು ಕಾರೆಪ್ಪನ್ನವ, ಪ್ರಕಾಶ ಮಾಳಗಿ, ಜಗದೀಶ ಕಳ್ಳಿಗುದ್ದಿ, ಸೋಮಲಿಂಗ ನಂಜನ್ನವರ, ವಾಸು ಹುರಕನ್ನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಅಕ್ರಮ ಮದ್ಯ ಮಾರಾಟ: ಓರ್ವನ ಬಂಧನ

ಬೆಳಗಾವಿ: ನಗರದಲ್ಲಿರುವ ಉದ್ಯಮ ಭಾಗದ ಅರುಣ ಎಂಜಿನೀಯರಿಂಗ್ ಫ್ಯಾಕ್ಟರಿ ಏರಿಯಾ ಪ್ರದೇಶದ ರಸ್ತೆಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಗೋವಾ ಮೂಲದ ಮದ್ಯ ಮಾರಾಟ ಮಾಡುತ್ತಿದ್ದ

ಓರ್ವನನ್ನು ಪೊಲೀಸರು ಬಂಧಿಸಿದ್ದಾರೆ. ಪರಮೇಶ್ವರ ದೇವಪ್ಪ ನಾಯಿಕ (50) ಬಂಧಿತ ಆರೋಪಿ. 4,760 ಮೌಲ್ಯದ 12 ಲೀಟರ್ ನಷ್ಟು ಅಕ್ರಮ ಮದ್ಯ ಹಾಗೂ 3,550 ನಗದು ಹಣ ವಶಕ್ಕೆ ಪಡೆದಿದ್ದಾರೆ. ಉದ್ಯಮಬಾಗ ಪೊಲೀಸ್ ಠಾಣೆಯ ಪಿಎಸ್ಐ ಕಿರಣ ಸಿ ಹೊನಕಟ್ಟಿ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸತ್ಯ ಶುದ್ಧ ಕಾಯಕದ ರೈತನಿಂದ ಅಭಿವೃದ್ಧಿ

ಹಾರೂಗೇರಿ: ಭ್ರಷ್ಟ ಅಧಿಕಾರಿಗಳಿಂದ ಇನ್ನೂ ಬೇಕು ಇನ್ನೂ ಬೇಕು ಅನ್ನೋ ಮನಸ್ಥಿತಿಯಲ್ಲಿರುವ ಆಸೆ ತುಂಬಿರುವ ಮನುಷ್ಯನಿಂದ ಈ ದೇಶವನ್ನು ಬದುಕಿಸಲು ಆಗಲ್ಲ ಹೊರತು ಸತ್ಯ ಶುದ್ಧ ಕಾಯಕ ಮಾಡುವ ರೈತನಿಂದ ಈ ದೇಶ ಬದುಕುತ್ತದೆ

ಮುಮ್ಮಿಗಟ್ಟಿಯ ಪೂಜ್ಯರಾದ ಬಸವಾನಂದ ಶ್ರೀಗಳು ಹೇಳಿದರು.

ಪಟ್ಟಣದ ಬಸವಬ್ಯಾಕೂಡ ರಸ್ತೆಯ ನಿಶ್ಚಿಂತ ನೆಲೆಯಲ್ಲಿ ಜರುಗುತ್ತಿರುವ ಶರಣ ವಿಚಾರ ವಾಹಿನಿಯ 36 ನೆಯ ವಾರ್ಷಿಕೋತ್ಸವದ ಶರಣ ಸಂಸ್ಕೃತಿ ಉತ್ಸವದ 3ನೇ ದಿನದ ಸಮಾರಂಭ ಹಾಗೂ ಲಿಂ.ಮಾತೋಶ್ರೀ ಶಾರದಾ ತಾಯಿ ಮಠಪತಿ ಅವರ ಸ್ಮರಣೋತ್ಸವದಲ್ಲಿ ಪ್ರತಿದಿನದಂತೆ ಪ್ರವಚನಗೈದರು.

ಕಂತಿ ಲಿಂಗಗಳನ್ನ ನೀಡುವ ಚಿಕ್ಕೊಪ್ಪದ ಸೇವಾರತ್ನ ಪ್ರಶಸ್ತಿ ಪುರಸ್ಕೃತ ಚನ್ನಪ್ಪ ನರಸನ್ನವರ ಮಾತನಾಡಿದರು. ಶರಣ ವಿಚಾರ ವಾಹಿನಿಯ ಅಧ್ಯಕ್ಷರಾದ ಶರಣ ಐ.ಆರ್. ಮಠಪತಿಯವರು ಪ್ರಣವ ಪಂಚಾಕ್ಷರಿ ಮಂತ್ರದೊಂದಿಗೆ ಶರಣು ಸಮರ್ಪಿಸಿದರು.

ಈ ಸಂದರ್ಭದಲ್ಲಿ ಶರಣ ಎಂ ಕೆ ಪಾಟೀಲ ಅಧ್ಯಕ್ಷತೆ ವಹಿಸಿ ಆತ್ಮ ಶುದ್ಧವಾಗಲು ಆಧ್ಯಾತ್ಮ ಜೊತೆಗಿರಬೇಕು ಎಂದರು.

ಈ ಸಂದರ್ಭದಲ್ಲಿ ಬೆಳಗಾವಿಯ ಈರಣ್ಣ ಇಡಿಯಾಳ,ಪುಂಡಲೀಕ ಇಂಗಳಿ , ಎಸ್ ಎಲ್ ಪಾಟೀಲ, ಸಂಚಾಲಕರಾದ ಎಸ್. ಎಲ್. ಬಾಡಗಿ, ಈರಪ್ಪ ಲಡಬುಡೆ, ಮುಗೆಪ್ಪ ಟಕ್ಕಣ್ಣವರ, ಬಿ ವಿ ಬಿರಾದಾರ, ಡಾ. ಬಿ ಎಂ ಹೊಸಪೇಟೆ ಹಾಗೂ ಕದಳಿ ಮಹಿಳಾ ವೇದಿಕೆ ತಾಯಂದಿರು ಮುಂತಾದವರು ಉಪಸ್ಥಿತರಿದ್ದರು. ಸುರಭಿ ಮೊಕಾಶಿ ಸಂಗೀತ ಸೇವೆಗೈದರು. ವಿಶ್ವನಾಥ ಮಠಪತಿ ಮಹಾಪ್ರಸಾದ ಸೇವೆ ಸಲ್ಲಿಸಿದರು.



ಕಿರುಸುದ್ದಿ

ಫೆ.27ರಂದು ರಥೋತ್ಸವ

ಮುರಗೋಡ: ಶತಾಯುಷಿ ಲಿಂಗೈಕ್ಯ ಮಹಾಂತ ಅಜ್ಜನ 54ನೇ ಜಾತ್ರಾ ಮಹೋತ್ಸವದ ಅಂಗವಾಗಿ ಫೆಬ್ರುವರಿ 27ರಂದು ಶುಕ್ರವಾರ ರಥೋತ್ಸವ ನಡೆಯಲಿದೆ. ಪರಮ ತಪಸ್ವಿ ಪವಾಡ ಪುರುಷರಾದ ಶ್ರೀ ಮಹಾಂತ ಶಿವಯೋಗಿಗಳು ಕರ್ನಾಟಕದ ಮೂಗುತಿಯಂತಿರುವ ಬೆಳಗಾವಿ ಜಿಲ್ಲೆಯ ಐತಿಹಾಸಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಪ್ರಸಿದ್ಧಿ ಪಡೆದಿರುವ ಪುಣ್ಯಭೂಮಿಯಾಗಿದೆ. ಪ್ರಸ್ತುತ ಪೀಠಾಧ್ಯಕ್ಷರಾದ ಶ್ರೀ ನೀಲಕಂಠ ಮಹಾಸ್ವಾಮಿಗಳು ಶ್ರೀ ಗುರುವಿನಂತೆ ತ್ರಿಕಾಲ ಪೂಜಾ ನಿಷ್ಠರಾಗಿ 15ಕ್ಕೂ ಹೆಚ್ಚು ಮಠಾಧೀಶರಿಗೆ ಅನುಗ್ರಹ ದೀಕ್ಷೆ ನೀಡಿ ಹಾಗೂ ಸಂಸ್ಕೃತ ವೈದಿಕ ಕ್ಷೇತ್ರದಲ್ಲಿ ಸಾವಿರಾರು ಸಾಧಕರನ್ನು ತಯಾರು ಮಾಡಿದ್ದಾರೆ. ತಮ್ಮ 60ನೇ ವರ್ಷದ ಹುಟ್ಟು ಹಬ್ಬದ ಆಚರಣೆಯಲ್ಲಿ ಪಂಚವಟಿ ಎಂಬ ಧಾರ್ಮಿಕ ಕ್ಷೇತ್ರವನ್ನು ಸ್ಥಾಪಿಸಿ ಅದರ ಅಡಿಯಲ್ಲಿ ಗೋಶಾಲೆ ಧ್ಯಾನ ಮಂದಿರ ಯಾತ್ರಾ ನಿವಾಸ ಈ ರೀತಿ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡು ಮುನ್ನಡೆಸುತ್ತಿದ್ದಾರೆ. ಪ್ರಸ್ತುತ ಶ್ರೀ ಮಹಾಂತ ಶಿವಯೋಗಿಗಳವರ 54ನೇ ವರ್ಷದ ಜಾತ್ರಾ ಮಹೋತ್ಸವದ ಹಾಗೂ ರಥೋತ್ಸವದಲ್ಲಿ ನಾಡಿನ ಪ್ರತಿಷ್ಠಿತ ಮಠಾಧೀಶರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯಮಾನ್ಯರು, ಭಕ್ತರು ಭಾಗಿಯಾಗಲಿದ್ದಾರೆ.

ಪಾಲಿಕೆ ಪರಿಷತ್ ಸಭೆ ಮಾ.2 ರಂದು

ಬೆಳಗಾವಿ : ಬೆಳಗಾವಿ ಮಹಾನಗರ ಪಾಲಿಕೆಯ ಪರಿಷತ್ ಸಭೆ ಮಾರ್ಚ 2ರಂದು ಬೆಳಿಗ್ಗೆ 11 ಗಂಟೆಗೆ ಪರಿಷತ್ ಸಭಾಗೃಹದಲ್ಲಿ ನಡೆಯಲಿದೆ ಎಂದು ಮಹಾನಗರ ಪಾಲಿಕೆ ಪರಿಷತ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.28ರಂದು ಶೈಕ್ಷಣಿಕ ಮಹಾ ಸಮ್ಮೇಳನ

ರಾಯಬಾಗ: ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು 55 ವರ್ಷಗಳನ್ನು ಪೂರೈಸಿರುವ ಪ್ರಯುಕ್ತ ಫೆ.28ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾ ಅಧ್ಯಕ್ಷ ವಿಷ್ಣು ಬಿ ಆರಗೆ ತಿಳಿಸಿದರು.ನಗರದ ಪತ್ರಿಕಾ ಗೋಷ್ಠಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಅಂದು ಧನ್ಯತಾ ಸಮಾರಂಭ, ಸಂಘದ ಸುವರ್ಣ ಮಹೋತ್ಸವ ಹಾಗೂ ಗುರುವಂದನಾ ಸಮಾರಂಭವನ್ನೂ ಆಯೋಜಿಸಲಾಗಿದೆ ಎಂದರು. ಸಮ್ಮೇಳನವನ್ನು ಸಿ ಎಂ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ, ಸಚಿವ ಮಧು ಬಂಗಾರಪ್ಪ ಸೇರಿ ವಿವಿಧ ಸಚಿವರು, ಶಾಸಕರು ಭಾಗವಹಿಸಲಿದ್ದಾರೆ. ಶಿಕ್ಷಕರ ಖಾಲಿ ಹುದ್ದೆ ಭರ್ತಿ, ಪ್ರಾಥಮಿಕ ಶಾಲಾ ಶಿಕ್ಷಕ ಹುದ್ದೆಯಿಂದ ಪ್ರೌಢಶಾಲಾ ಸಹಶಿಕ್ಷಕ ವೃಂದ ಗ್ರೇಡ್-1 ಹುದ್ದೆಗಳಿಗೆ ಬಡ್ತಿ ನೀಡುವುದು ಸೇರಿದಂತೆ ಸುಮಾರು 27 ಹಕ್ಕೊತ್ತಾಯಗಳನ್ನು ಮಂಡಿಸಿ ಸಿಎಂಗೆ ಮನವಿ ಸಲ್ಲಿಸಲಾಗುವುದು.ಪ್ರಧಾನ ಕಾರ್ಯದರ್ಶಿ ಎಸ್ ಡಿ ರಾಯಮಾನೆ, ಎಂ ಬಿ ಬಡಿಗೇರ, ಸಿ ಆರ್ ಪೂಜಾರಿ, ಶ್ರೀಧರ ಚೌಗಲಾ, ಶಾರದಾ ಬಿ ಎಲ್, ಆನಂದಪ್ಪ. ಎ ಎಸ್ ಹಸುರೆ, ಕೆ ಎಸ್ ದಳವಾಯಿ, ವೀಣಾ ಬಿ ಎಸ್, ನಾಯ್ಕ ಪಾಟೀಲ, ಅಶೋಕ ಕವಲಗುಡ್ಡ, ಎಂ. ಸಿ. ಐಹೊಳೆ, ಶೀಲಾ ಚೌಗಲಾ, ಬಿ ಎಸ್ ವಿಭೂತಿ ಹಾಗೂ ಇತರರಿದ್ದರು.

ಗಟಾರ್ ನಿರ್ಮಾಣಕ್ಕೆ ನಿವಾಸಿಗಳ ಮನವಿ

ಬೈಲಹೊಂಗಲ: ಪಟ್ಟಣದ ಮುರಗೋಡ ರಸ್ತೆಗೆ ಹೊಂದಿಕೊಂಡಿರುವ ಪಡಮದ ಚಾಳದ ನಿವಾಸಿಗಳು ಮೂಲಭೂತ ಸೌಕರ್ಯಗಳ ಕೊರತೆಯನ್ನು ಉಲ್ಲೇಖಿಸಿ ಪುರಸಭೆ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಪಡಮದ ಚಾಳದಲ್ಲಿ ಸುಮಾರು 3540 ಕುಟುಂಬಗಳು ಕಳೆದ 10 ವರ್ಷಗಳಿಂದ ವಾಸವಾಗಿದ್ದು, ಇಂದಿಗೂ ಸರಿಯಾದ ರಸ್ತೆ ಮತ್ತು ಗಟಾರು ವ್ಯವಸ್ಥೆ ಇಲ್ಲದೆ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ. ಚಾಳದ ರಸ್ತೆ ಸುಮಾರು ಒಂದು ಅಡಿ ತಗ್ಗು-ದಿನ್ನೆಗಳಿಂದ ಕೂಡಿದ್ದು ಸಂಪೂರ್ಣ ಹದಗೆಟ್ಟಿದೆ. ಬೇಸಿಗೆಯಲ್ಲಿಯೇ ಸಂಚಾರ ಕಷ್ಟಕರವಾಗಿದ್ದು, ಮಳೆಗಾಲದಲ್ಲಿ ತಗ್ಗುಗಳು ಕಾಣಿಸದೆ ಸಂಚಾರ ದುರ್ಲಭವಾಗುತ್ತದೆ ಎಂದು ನಿವಾಸಿಗಳು ಅಳಲು ತೋಡಿಕೊಂಡಿದ್ದಾರೆ.

ಬಸವರಾಜ ಕೋಟಗಿ, ಎಸ್.ಎಂ. ಪಡಮದ, ಅನ್ನಪೂರ್ಣ ವಕ್ಕುಂದ, ಐಶ್ವರ್ಯ ಕಡನ್ನವರ, ಸಂಜನಾ ಪಡಮದ ಸೇರಿದಂತೆ ಹಲವು ನಿವಾಸಿಗಳು ಸಹಿ ಹಾಕಿ ಮನವಿ ಸಲ್ಲಿಸಿದ್ದಾರೆ.

ಸ್ಥಳೀಯರು ತಮ್ಮ ಸಮಸ್ಯೆಗೆ ಶೀಘ್ರ ಪರಿಹಾರ ದೊರಕುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಚನ್ನಮ್ಮನ ಕಿತ್ತೂರು: ನೂತನವಾಗಿ ಆರಂಭವಾದ ಎಸ್ ಜೆ ಇಂಟರ್ ನ್ಯಾಶನಲ್ ಹೊಟೇಲ್ ಉಡುಪಿ ವೈಭವಗೆ ಆಗಮಿಸಿದ ವಿಧಾನ ಪರಿಷತ್ ಸದಸ್ಯ ಲಖನ್ ಜಾರಕಿಹೊಳಿ ಅವರನ್ನು ಅಭಿಮಾನಿಗಳು ಹೂಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು.
ಸಮಾಜ ಸೇವಕ, ಕಾಂಗ್ರೇಸ್ ಮುಖಂಡ ಹಬೀಬ ಶಿಲೇದಾರ, ಪ್ರಭಾಕರ ಶೆಟ್ಟಿ, ಗುಣಾಕಾರ ಶೆಟ್ಟಿ, ಕುಮಾರ ಹಿರೇಮಠ, ಮಕಬುಲ್ ಸನದಿ, ಬಾಬಾಜಾನ್, ಬಸನಗೌಡ ಪಾಟೀಲ, ಕಲ್ಲಯ್ಯ ಹಿರೇಮಠ, ಮಡಿವಾಳಿ ನಾಯ್ಕರ, ಅಬ್ದುಲ್ ಮುಲ್ಲಾ, ಸದ್ದಾಂ ಕಿತ್ತೂರ ಇದ್ದರು.

ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ

ಕುಡಚಿ: ಸಮೀಪದ ಯಲ್ಪಾರಟ್ಟಿ ಗ್ರಾಮದ ಶ್ರೀ ಅರಣ್ಯಸಿದ್ದೇಶ್ವರ ಜಾತ್ರಾ ಮಹೋತ್ಸವದಲ್ಲಿ ಭಕ್ತರಿಗೆ ಡಾ. ರವಿ ಇಚಲಕರಂಜಿ ಕಲ್ಪಿಸಿದ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕರಾದ ಮಹೇಂದ್ರ ತಮ್ಮಣ್ಣವರ ಅವರು ಉದ್ಘಾಟಿಸಿದರು. ಬೆಳಗಾವಿಯ ಖ್ಯಾತ ನರರೋಗ ತಜ್ಞರಾದ ಡಾ. ರವಿ ಇಚಲಕರಂಜಿ ಅವರು ಅರಣ್ಯ ಫೌಂಡೇಶನ್ ಮೂಲಕ ಜಾತ್ರೆಗೆ ಆಗಮಿಸುವ ಭಕ್ತಾದಿಗಳಿಗೆ ಉಚಿತ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಕೊಡುಗೆಯಾಗಿ ನೀಡಿದ್ದಾರೆ. ಜಾತ್ರೆಯ ಸಂದರ್ಭದಲ್ಲಿ ಭಕ್ತರ ದಾಹ ತಣಿಸಲು ಇಂತಹ ಜನಪರ ಕಾರ್ಯ ಹಮ್ಮಿಕೊಂಡ ಡಾ. ರವಿ ಇಚಲಕರಂಜಿ ಅವರ ಸೇವೆಯನ್ನು ಶಾಸಕರು ಮತ್ತು ಸಾರ್ವಜನಿಕರು ಶ್ಲಾಘಿಸಿದರು. ಸೇವೆಯ ಮಹತ್ವ: ಜಾತ್ರೆಯಂತಹ ಜನದಟ್ಟಣೆಯ ಸಂದರ್ಭದಲ್ಲಿ ಭಕ್ತರಿಗೆ ಕುಡಿಯುವ ನೀರಿನ ತೊಂದರೆಯಾಗಬಾರದೆಂಬ ಉದ್ದೇಶದಿಂದ ಅರಣ್ಯ ಫೌಂಡೇಶನ್ ಈ ಸಮಾಜಮುಖಿ ಕಾರ್ಯ ಹಮ್ಮಿಕೊಂಡಿದೆ. ಅವರ ಈ ಉದಾತ್ತ ಕಾರ್ಯಕ್ಕಾಗಿ ಗ್ರಾಮದ ಮುಖಂಡರು ಮತ್ತು ಭಕ್ತಾದಿಗಳು ಡಾ. ರವಿ ಇಚಲಕರಂಜಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗಜು ಜಂಬಗಿ, ರುದ್ರಪ್ಪ ಗುಡೋಡಗಿ, ಸದಾಶಿವ ಖಿವಟಕೊಪ್ಪ, ಅಶೋಕ್ ಸವದಿ, ಚಾಮರಾಜ ಒಡೆಯರ್, ಮಲಕಾರಿ ದಳವಾಯಿ, ಈರಪ್ಪ ಇಚಲಕರಂಜಿ, ಶ್ರೀಕಾಂತ್ ಗುಡೋಡಗಿ ಪಿಎಸ್ಐ ಮಾಳಪ್ಪ ಪೂಜೇರಿ ಸೇರಿದಂತೆ ಅನೇಕ ಗಣ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.



ಕುಡಚಿ:ಸಮೀಪದ ಯಲ್ಪಾರಟ್ಟಿ ಗ್ರಾಮದ ಶ್ರೀ ಅರಣ್ಯಸಿದ್ದೇಶ್ವರ ಜಾತ್ರಾ ಮಹೋತ್ಸವದಲ್ಲಿ ಭಕ್ತರಿಗೆ ಡಾ. ರವಿ ಇಚಲಕರಂಜಿ ಕಲ್ಪಿಸಿದ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕರಾದ ಮಹೇಂದ್ರ ತಮ್ಮಣ್ಣವರ ಅವರು ಉದ್ಘಾಟಿಸಿದರು.

ಹೋಳಿಗೆ ಕುಂದಾನಗರಿ ಸಜ್ಜು

ಬಾಳಗೌಡ ಪಾಟೀಲ

ಬೆಳಗಾವಿ: ನಗರದಾದ್ಯಂತ ಮಾ.3ರಂದು ನಡೆಯುವ ಹೋಳಿ ಹುಣ್ಣಿಮೆಯ ಸಂಭ್ರಮದ ಬಣ್ಣದಾಟಕ್ಕೆ ಕುಂದಾನಗರಿ ಸಜ್ಜಾಗಿದೆ.

ಗಡಿನಾಡು ಬೆಳಗಾವಿಯಲ್ಲಿ ಪ್ರತಿ ಹಬ್ಬವನ್ನೂ ವಿಶಿಷ್ಟವಾಗಿ ಅದ್ದೂರಿಯಿಂದ ಆಚರಿಸಲಾಗುತ್ತಿದೆ. ಇದರಲ್ಲಿ ಹೋಳಿ ಹುಣ್ಣಿಮೆಯೂ ಒಂದು. ಹುಣ್ಣಿಮೆ ಮುನ್ನಾ ದಿನವಾದ ಸೋಮವಾರ ರಾತ್ರಿ ಕಾಮಣ್ಣನ ಮೂರ್ತಿ ದಹಿಸಿದ ಜನರು, ಮಂಗಳವಾರ ಸಂತಸದಿಂದ ಓಕುಳಿ ಹಬ್ಬದ ಬಣ್ಣವಾಡಲಿದ್ದಾರೆ. ಮಕ್ಕಳು, ಯುವಕ ಯುವತಿಯರು, ಮಹಿಳೆಯರು ಸೇರಿದಂತೆ ಎಲ್ಲ ವಯೋಮಾನದವರೂ ಬಣ್ಣದೋಕುಳಿಯಲ್ಲಿ ಮಿಂದೇಳಲಿದ್ದಾರೆ.

ಈ ಸಂಭ್ರಮವನ್ನು ನೋಡಲು ಎರಡು ಕಣ್ಣುಗಳು ಸಾಲದು, ಪ್ರತಿ ವರ್ಷದಂತೆ ನಗರದ ತಿಳಕವಾಡಿಯ ಲೀಲೆ ಮೈದಾನದಲ್ಲಿ ಹೋಳಿ ಹಬ್ಬದ ಸಂಭ್ರಮಾಚರಣೆಗೆ ಪುರುಷ ಹಾಗೂ ಮಹಿಳಾ ಎರಡು ಪ್ರತ್ಯೇಕವಾಗಿ ವಿಭಾಗಗಳನ್ನಾಗಿ ಮಾಡಿ, ಡಿಜೆ ಸೌಂಡ್ ಗೆ ಸ್ಟೆಪ್ ಹಾಕುವುದರ ಮೂಲಕ ವಿವಿಧ ಬಗೆಯ ಬಣ್ಣಗಳನ್ನು ಎರಚ್ಚಿಕೊಂಡು ಸಂಭ್ರಮಾಚರಣೆ ಆಚರಿಸಲಿದ್ದಾರೆ.

ಮಾರುಕಟ್ಟೆ ಪ್ರದೇಶಕ್ಕೆ ಬಗೆಬಗೆಯ ವಿನ್ಯಾಸಗಳ ಪಿಚಕಾರಿಗಳು, ಮಕ್ಕಳು ಮತ್ತು ಯುವಕರು ಬಳಸುವ ಮುಖವಾಡಗಳು ಲಗ್ಗೆ ಇಟ್ಟಿವೆ. ಪಿಚಕಾರಿಗಳ ದರ 20 ರಿಂದ 1,350 ರ ವರೆಗೆ ಇದ್ದರೆ, ಮುಖವಾಡಗಳು 100 ರಿಂದ 250 ರ ವರೆಗೆ ಮಾರಾಟವಾಗುತ್ತವೆ. ಪ್ರತಿ ಪ್ಯಾಕೆಟ್ ಬಣ್ಣದ ಸರಾಸರಿ ದರ 10 ರಿಂದ 50, 80ರವರೆಗೆ ಇದೆ.

ಹೋಳಿ ಹಬ್ಬದಲ್ಲಿ ಬಾರಿಸುವ ಡಮರುಗಳಿಗೆ ಭಾರಿ ಬೇಡಿಕೆ ಇದೆ. ಸಣ್ಣ ಡಮರುಗಳಿಗೆ 350 ರಿಂದ ಮಧ್ಯಮ ಪ್ರಮಾಣದ ವರೆಗೆ 1200 ರೂ. ಗಳ ವರೆಗೆ ಇವೇ ಬೆಲೆಯನ್ನು ಲೆಕ್ಕಿಸದೆ ಕರಿದಿಯಲ್ಲಿ ತೊಡಗಿದ ಜನತೆಯೂ ಬಣ್ಣದೋಕುಳಿಯ ಹಬ್ಬಕ್ಕೆ ಬೇಕಾಗಿರುವ ವಸ್ತುಗಳ ಕರಿದಿಯಲ್ಲಿ ಬಿಜಿಯಾಗಿದ್ದಾರೆ.

ಹೋಳಿ ಹಬ್ಬದ ಸಂಭ್ರಮಾಚರಣೆಯ ವೇಳೆ ಯಾವುದು ಅಹಿತಕರ ಘಟನೆಗಳು ನಡೆಯದಂತೆ ನಗರಾಧ್ಯಂತ ಪ್ರಮುಖ ಸ್ಥಳಗಳಲ್ಲಿ ಪೊಲೀಸರು ಭಾರಿ ಕಟ್ಟೆಚ್ಚರ ವಹಿಸಿ ಬಂದೂಬಸ್ತ್ ಮಾಡಿಕೊಂಡಿದ್ದಾರೆ.

ಒಟ್ಟರೆಯಾಗಿ ಈ ಬಾರಿ ಬೆಳಗಾವಿ ನಗರ ಸೇರಿದಂತೆ ಗ್ರಾಮೀಣ ಭಾಗದಲ್ಲೂ ವಿಜೃಂಭಣೆಯಿಂದ ಹೋಳಿ ಹಬ್ಬವನ್ನು ಆಚರಣೆ ಜನತೆಯು ಸಿದ್ದತೆಗಳನ್ನು ಮಾಡಿಕೊಂಡಿದೆ.



ಹೋಳಿ ಹಬ್ಬದ ಅಂಗವಾಗಿ ಮಾರುಕಟ್ಟೆ ಬಗೆಬಗೆಯ ಡಮರು, ಹಲಗೆಗಳು ಲಗ್ಗೆ ಇಟ್ಟಿವೆ.

ಈ ಬಾರಿಯು ಜತೆಯು ಹಬ್ಬಕ್ಕೆ ಬೇಕಾಗಿರುವ ವಸ್ತುಗಳ ಖರೀದಿ ಮಾಡುವುದಕ್ಕೆ ಮುಗಿಬೀಳುತ್ತಿದ್ದಾರೆ. ಕಳೆದ ಬಾರಿಗಿಂತ ಈ ಬಾರಿ ವ್ಯಾಪಾರ ಹೆಚ್ಚಾಗುವ ಸಾಧ್ಯತೆ ಇದೆ.
■ ದೀಪಾ ಪಾಟೀಲ ವ್ಯಾಪಾರಸ್ಥೆ ಬೆಳಗಾವಿ ನಗರ.

ಕಳೆದ ಬಾರಿಗಿಂತ ಈ ಬಾರಿ ವ್ಯಾಪಾರ ಸ್ವಲ್ಪ ಮಟ್ಟಗೆ ಕಡಿಮೆ ಇದೆ. ಸಣ್ಣ ಡಮರುಗಳಿಗೆ 350 ರಿಂದ ಮಧ್ಯಮ ಪ್ರಮಾಣದ ವರೆಗೆ 1200 ರೂ. ಗಳ ವರೆಗೆ ಮಾರಾಟ ಮಾಡುತ್ತಿದ್ದೇವೆ. ಹೋಳಿ ಹಬ್ಬ ಒಂದು ದಿನ ಮುಂಚ್ಚಿತವಾಗಿ ಡಮರುಗಳ ಬೇಡಿಕೆ ಹೆಚ್ಚಾಗುತ್ತದೆ.
■ ಕಿಶೋರ್ ರಾಜಸ್ಥಾನಿ ಮಾರವಾಡಿ, ಡಮರು ವ್ಯಾಪಾರಸ್ಥ

ರೈತರ ಏಳಿಗೆಯೇ ನನ್ನ ಜೀವನದ ಧ್ಯೇಯ

ತೆಲಸಂಗ: ಅಧಿಕಾರ, ಆಸ್ತಿ ಮತ್ತು ಅಂತಸ್ತು ಯಾವುದೂ ಶಾಶ್ವತವಲ್ಲ, ನಿಸ್ವಾರ್ಥ ಸೇವೆಯ ಮೂಲಕ ಜನರ ಅಭಿವೃದ್ಧಿಗೆ ಶ್ರಮಿಸಿದರೆ ಮಾತ್ರ ಮಾಡಿದ ಕೆಲಸಗಳು ಶಾಶ್ವತವಾಗಿ ಮಾತನಾಡುತ್ತವೆ ಎಂದು ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಗುರುವಾರ ಸಮೀಪದ ಕೊಟ್ಟಲಗಿ ಗ್ರಾಮದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಜಿಲ್ಲಾ ಪಂಚಾಯತ್ ಬೆಳಗಾವಿ ಹಾಗೂ ತಾಲೂಕು ಪಂಚಾಯತ್ ಅಥಣಿ ಇವುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ನೂತನ ಪಶು ಚಿಕಿತ್ಸಾಲಯದ ಉದ್ಘಾಟನಾ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ನೆರವೇರಿಸಿ ಅವರು ಮಾತನಾಡಿದರು. ಗಡಿಭಾಗದ ಬರಡು ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಮೂಲಕ ರೈತರಲ್ಲಿ ಆರ್ಥಿಕ ಶಕ್ತಿ ತುಂಬಿದ ತೃಪ್ತಿ ನನಗಿದೆ. ಅಮ್ಮಾಜೇಶ್ವರಿ ಕೊಟ್ಟಲಗಿ ಏತ ನೀರಾವರಿ ಯೋಜನೆಯಡಿ ಕೆರೆ ತುಂಬಿಸುವ ಕಾರ್ಯ ಅತಿ ಶೀಘ್ರದಲ್ಲೇ ಪೂರ್ಣಗೊಂಡು, ರೈತರ ಭೂಮಿಗೆ ನೀರು ಹರಿಯಲಿದೆ. ಅಥಣಿಕ್ಷೇತ್ರವನ್ನು ರಾಜ್ಯದಲ್ಲೇ ಮಾದರಿ ಕ್ಷೇತ್ರವನ್ನಾಗಿ ಮಾಡುವುದೇ ನನ್ನ ಕನಸು, ಜಾನುವಾರುಗಳ ಸಂಖ್ಯೆ ಕ್ಷೀಣಿಸುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಶಾಸಕರು, ಕೃಷಿ ಪ್ರಧಾನ ರಾಷ್ಟದಲ್ಲಿ ಕೃಷಿಕರಿಗೆ ಮೊದಲ ಆದ್ಯತೆ ಸಿಗಬೇಕು. ಪ್ರತಿಯೊಬ್ಬ ರೈತರೂ ದನ-ಕರುಗಳನ್ನು ಸಾಕಿ, ಹೈನುಗಾರಿಕೆಯನ್ನು ಉಪಕಸುಬನ್ನಾಗಿ ಮಾಡಿಕೊಂಡರೆ ಆರ್ಥಿಕ ಸ್ವಾವಲಂಬನೆ ಸಾಧಿಸಲು ಸಾಧ್ಯ. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದಲ್ಲಿ ನೂತನ ಪಶು ಚಿಕಿತ್ಸಾಲಯಗಳು ಪಶುಗಳ ಆರೋಗ್ಯ ರಕ್ಷಣೆಗೆ ವರದಾನವಾಗಲಿವೆ. ರೈತರೇ ನನ್ನ ಆಸ್ತಿ, ಅವರ ಏಳಿಗೆಗಾಗಿ ನನ್ನ ಜೀವನವನ್ನೇ ಮೀಸಲಿಟ್ಟಿದ್ದೇನೆ ಎಂದು ಹೇಳಿದರು.

ಮಾಜಿ ಜಿಪಂ ಸದಸ್ಯ ಸಿದರಾಯ ಯಲ್ಲಡಗಿ, ವಿನಾಯಕ ಬಾಗಡೆ, ಶಿವಾನಂದ ಗೋಲಬಾವಿ, ದಾನೇಶ್ವರ ಕಾಂಬಳೆ, ಕುಮದಿನಿ ಶಿವಣಗೋಳ, ಅಪ್ಪಾಸಾಬ ಬಿರಾದರ, ಗುರುಬಸು ಬಂಡರಗೊಟ್ಟಿ, ರವಿ ಹಂಜಿ, ಶಿವಾನಂದ ತೇಲಿ, ಗುರುಮುಗ್ಗವರ, ಸುರೇಶ ಖಿಡಕಿ, ಸಿದ್ದು ದೊಡ್ಡನಿಂಗಪ್ಪಗೋಳ, ಶತೀಶ ಉಪಾಸೆ, ರಘೂ ದೊಡ್ಡನಿಂಗಪ್ಪಗೋಳ ಸೇರಿದಂತೆ ಪಶುಪಾಲನಾ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮದ ಪ್ರಮುಖರು ಮತ್ತು ಅಪಾರ ಸಂಖ್ಯೆಯ ರೈತರು ಉಪಸ್ಥಿತರಿದ್ದರು.



ಖಾನಾಪುರ ಬಂದ್ ಸಂಪೂರ್ಣ ಯುಶಸ್ವಿ

ಖಾನಾಪುರ: ಪಟ್ಟಣದ ಹೊರವಲಯದ ಗೋವಾ ಕ್ರಾಸ್ ನಿಂದ ಮರಾಠಾ ಮಂಡಳ ಡಿಗ್ರಿ ಕಾಲೇಜ್ ವರೆಗಿನ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಯ ವಿಳಂಬ ಧೋರಣೆ ಮತ್ತು ಅಸಮರ್ಪಕ ಕಾಮಗಾರಿಯನ್ನು ಖಂಡಿಸಿ ಪಟ್ಟಣದ ಹಾಗೂ ಸುತ್ತಮುತ್ತಲಿನ ಭಾಗದ ನಾಗರಿಕರು, ವ್ಯಾಪಾರಸ್ಥರು, ಸಾರ್ವಜನಿಕರು ಗುರುವಾರ ಕರೆ ನೀಡಿದ್ದ ಖಾನಾಪುರ ಪಟ್ಟಣ ಬಂದ್ ಸಂಪೂರ್ಣ ಯಶಸ್ವಿಯಾಯಿತು.

ಅಸಮರ್ಪಕ ಕಾಮಗಾರಿ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡೆಸಿದ ನಾಗರಿಕರು ಮತ್ತು ವ್ಯಾಪಾರಸ್ಥರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ಕೈಗೊಂಡರು.

ತಹಶೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಶಿವಸ್ಮಾರಕ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ನಿರ್ಮಿಸಿ ವ್ಯವಸ್ಥೆಯ ವಿರುದ್ಧ ಹರಿಹಾಯ್ದರು.

ಬಂದ್ ಹಿನ್ನಲೆಯಲ್ಲಿ ಇಡೀ ದಿನ ಪಟ್ಟಣದಲ್ಲಿ ಎಲ್ಲ ರೀತಿಯ ವ್ಯಾಪಾರ ವಹಿವಾಟುಗಳನ್ನು ಸ್ಥಗಿತಗೊಂಡಿತ್ತು. ಪ್ರತಿಭಟನಾಕಾರರನ್ನು ಭೇಟಿಯಾದ ತಹಶೀಲ್ದಾರ್ ದುಂಡಪ್ಪ ಕೋಮಾರ ಮತ್ತು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸಂತೋಷ ಕುರಬೆಟ್, ಒಂದು ವಾರದ ಒಳಗೆ ಒಂದು ಭಾಗದ ರಸ್ತೆಯನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸುವ ಬಗ್ಗೆ ಮತ್ತು ರಸ್ತೆಯ ವಿವಿಧೆಡೆ ಇರುವ ಅಡಚಣೆಗಳನ್ನು ದೂರಗೊಳಿಸುವ ಬಗ್ಗೆ ಲೋಕೋಪಯೋಗಿ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚಿಸಿದರು.

ಮಧ್ಯಾಹ್ನದ ಬಳಿಕ ಶಾಸಕ ವಿಠ್ಠಲ ಹಲಗೇಕರ ಅಧಿಕಾರಿಗಳ ಸಭೆ ನಡೆಸಿ ಈ ವಿಷಯವಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಸೂಚನೆ ನೀಡಿದರು.

ಶಾಸಕರು ಮತ್ತು ತಹಶೀಲ್ದಾರರಿಂದ ಕಾಮಗಾರಿಗೆ ಇರುವ ಅಡಚಣೆಗಳನ್ನು ದೂರಗೊಳಿಸುವ ಭರವಸೆ ಸಿಕ್ಕ ಬಳಿಕ ಪ್ರತಿಭಟನಾಕಾರರು ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಹಿಂಪಡೆದರು. ಮಹಾಂತೇಶ ರಾಹೂತ, ಚಂದ್ರು ಹೊಸಮನಿ, ಶಿವಶಂಕರ ಕಟ್ಟಿಮನಿ, ಆದರ್ಶ ರಾಹೂತ, ವಿನೋದ ಉಂಡಿ, ಪ್ರದೀಪ ಶೆಟ್ಟಿ, ಲೋಕೇಶ ಕಲಬುರ್ಗಿ, ಮಲ್ಲೇಶಿ ಪೋಳ ಸೇರಿದಂತೆ ನಾಗರಿಕರು, ವ್ಯಾಪಾರಸ್ಥರು ಹಾಗೂ ಸ್ಥಳೀಯರು ಇದ್ದರು.

ಮಾ.11ರಿಂದ ಉಗ್ರ ಹೋರಾಟದ ಎಚ್ಚರಿಕೆ



ಪ್ರತಿಯೊಬ್ಬರೂ ಸಂವಿಧಾನ ಓದಿರಿ: ಚಿದಾನಂದ

ಅಥಣಿ: ಡಾ.ಬಾಬಾಸಾಹೇಬ ಅಂಬೇಡ್ಕರ್ ರಚಿಸಿದ ಸಂವಿಧಾನದ ಆಧಾರದ ಮೇಲೆ ದೇಶದ ಆಡಳಿತ ನಡೆಯುತ್ತಿದೆ ಎಂದು ಕಾಂಗ್ರೆಸ್ ಯುವ ಮುಖಂಡ ಚಿದಾನಂದ ಸವದಿ ಹೇಳಿದರು.

ಅವರು ನಗರದ ರಾಯಲ್ ಪಂಕ್ಷಣ ಸಭಾ ಭವನದಲ್ಲಿ ನಡೆದ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಅಥಣಿ ಘಟಕ ವತಿಯಿಂದ ಹಮ್ಮಿಕೊಂಡಿದ ರಾಜ್ಯ ಮಟ್ಟದ ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿ, ಪ್ರತಿಯೊಬ್ಬರೂ ಸಂವಿಧಾನ ಓದಬೇಕು. ಸಂಘಟನೆಯೂ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆ ಏರ್ಪಡಿಸುವ ಮೂಲಕ ರಾಜ್ಯದಲ್ಲಿಯೇ ಮಾದರಿ ಕಾರ್ಯ ಮಾಡಿದೆ ಎಂದರು.


ಅಬಕಾರಿ ಜಂಟಿ ಆಯುಕ್ತರಾದ ಫಕೀರಪ್ಪ ಭಲವಾದಿ ಮಾತನಾಡಿದರು.

ಮಹಾರಾಷ್ಟ್ರ ರಾಜ್ಯದ ವಿಧಾನ ಪರಿಷತ ಸದಸ್ಯ ಇಂದ್ರಿಶ ನಾಯಿಕವಾಡಿ, ಡಾ. ಭಾರತಿ ಜಾಧವ,, ರಮೇಶ ಸಿಂದಗಿ ಹಾಗೂ ರಾವಸಾಹೇಬ ಐಹೊಳೆ ಮಾತನಾಡಿದರು. ಬೀದರ ಹಾಲಹಳ್ಳಿ ಬುದ್ಧ ವಿಹಾರದ ದೇವನಾಂಪ್ರಿಯ ಬಂತೇಜಿಗಳು ಆಶೀರ್ವಾದ ವಚನ ಮಾಡಿದರು. ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು. ಸಾಂಗ್ಲಿ ಕುಪವಾಡ ಮಿರಜ್ ಮಹಾನಗರ ಪಾಲಿಕೆ ಸದಸ್ಯ ರೇಖಾ ಕಾಂಬಳೆ, ಅಥಣಿ ಕ್ಷೇತ್ರ ಶಿಕ್ಷಣ ಅಧಿಕಾರಿ ಎಮ್ ಆರ್ ಮುಂಜೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜ ಪ್ರಾಂಶುಪಾಲ ವಿಲಾಸ ಕಂಬಳೆ, ಶ್ವೇತ ವಿವೇಕ ಕಾಂಬಳೆ, ಕಾಗವಾಡ ಸಿಡಿಪಿಓ ರವೀಂದ್ರ ಗುಡಗೇನ್ನವರ,ಸದಾಶಿವ ಮಾಂಗ, ಜಿಲ್ಲಾ ಸಂಚಾಲಕ ಶ್ರೀಕಾಂತ ತಳವಾರ, ಜಿಲ್ಲಾ ಸಂಘಟನಾ ಸಂಚಾಲಕ ಸಂಜಯ ತಳವಲಕರ, ಅಥಣಿ ತಾಲೂಕಾ ಸಂಚಾಲಕ ರವಿ ಕಾಂಬಳೆ, ಮಚ್ಚೇಟದ್ರ ಖಾಟಡೆಕರ, ಕುಮಾರ ಬನಸೋಡೆ,ಕಾಗವಾಡ ಸಂಚಾಲಕ ಸಚೀನ ಪೂಜಾರಿ, ಪರಸುರಾಮ ಚುಬಚಿ, ಪತ್ರಕರ್ತರ ಸಂಜು ಕಾಂಬಳೆ, ಮಲ್ಲಿಕಾರ್ಜುನ ಬಂಗೇನ್ನವರ, ಪುರಸಭೆ ಸದಸ್ಯ ಕಲ್ಲೇಶ ಮಡ್ಡಿ, ದಿಲೀಪ ಕಾಂಬಳೆ, ಭೀರಪ್ಪ ಕಾಂಬಳೆ, ಸಂತೋಷ ಕಾಂಬಳೆ, ಶ್ರೀನಿವಾಸ ಪಟ್ಟಣ, ಅಮೀನ ಜಾತಗಾರ, ಸದಾಶಿವ ವಾಘಮೋರೆ ಹಾಗೂ ಬಾಲಕೃಷ್ಣ ಭಜೇಂತ್ರಿ ಇದ್ದರು.



ಕವಿ ಸಲೀಮ್ ದೇಸಾಯಿ ರಚಿತ ಅಸಲಿ ಮಕಾನ್ ಪುಸ್ತಕ ಲೋಕಾರ್ಪಣೆ

ಕುಡಚಿ: ಪಟ್ಟಣದಲ್ಲಿ ಅಸಲಿ ಮಕಾನ್ ಪುಸ್ತಕವನ್ನು ರಾಯಬಾಗ ಪಟ್ಟಣದ ಇಕರಾ ಪ್ರೌಢಶಾಲೆ ಅಧ್ಯಕ್ಷರಾದ ಹಾಜಿ ಸೋಹೆಲ ಅಬ್ಬಾಸ್ ಮುಲ್ಲಾ ಅವರು ಲೋಕಾರ್ಪಣೆಗೊಳಿಸಿದರು. ಚಿಕ್ಕೋಡಿ ತಾಲೂಕಿನ ಹಿರೆಕೂಡಿ ಗ್ರಾಮದ ಇಕರಾ ಪ್ರೌಢಶಾಲೆ ಶಿಕ್ಷಕ ಸಲೀಮ್ ದೇಸಾಯಿ ರಚಿತ ಅಸಲಿ ಮಕಾನ್ ಎಂಬ ಪುಸ್ತಕವನ್ನು ಲೋಕಾರ್ಪಣೆಗೊಳಿಸಿದರು.ಈ ಸಂದರ್ಭದಲ್ಲಿ ರಾಯಬಾಗ ಗ್ರೇಡ್ 2 ತಹಶೀಲ್ದಾರ್ ಡಿ.ಎಸ್.ಜಮಾದಾರ, ಜಿತೇಂದ್ರ ಉಪ್ಪಾರ ಮುಖ್ಯ ಅತಿಥಿಯಾಗಿ ಭಾಗಿಯಾಗಿದ್ದರು. ಜಾಕೀರಹುಸೇನ್ ಮುಲ್ಲಾ, ನದಾಫ, ಶಿಕ್ಷಕಿ ಡಾಂಗೆ ಇತರರು ಉಪಸ್ಥಿತರಿದ್ದರು.



ಶ್ರಮಿಕ ವಸತಿ ಶಾಲೆಗೆ ಭೂಮಿಪೂಜೆ ನೆರವೇರಿಸಿದ ಶಾಸಕ

ಚನ್ನಮ್ಮನ ಕಿತ್ತೂರು: ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಮುಂದಿನ ವರ್ಷದ ಜೂನ್‌ನಿಂದ ಒಳ್ಳೆಯ ಸುಸಜ್ಜಿತ ಕಟ್ಟಡ ಹೊಂದಿರುವ ಉಚಿತವಾಗಿ ಉತ್ತಮ ಶಿಕ್ಷಣ ನೀಡುವ ಶ್ರಮಿಕ ವಸತಿ ಶಾಲೆ ಪ್ರಾರಂಭವಾಗುತ್ತದೆ ಎಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಪಕ್ಕದ ಕೆಐಡಿಬಿ ನಿವೇಶನದಲ್ಲಿ ಕಾರ್ಮಿಕ ಇಲಾಖೆಯಿಂದ ಮಂಜೂರಾದ ಸುಮಾರು ರೂ.36.75 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವ ಶ್ರಮಿಕ ವಸತಿ ಶಾಲೆಯ ಭೂಮಿ ಪೂಜೆ ನೆರವೇರಸಿಮಾತನಾಡಿ, ಇಲ್ಲಿ ಸುಮಾರು ಆರು ನೂರು ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯಲು ಅನುಕೂಲವಾಗುವುದು. 6ನೇ ತರಗತಿಯಿಂದ ಪಿಯುಸಿವರೆಗೆ ಉಚಿತ ಶಿಕ್ಷಣ ದೊರೆಯುತ್ತದೆ. ಈ ಶಾಲೆಯು ಕಾರ್ಮಿಕ ಸಚಿವರಾದ ಸಂತೋಷ ಲಾಡ್ ಅವರ ಸಹಕಾರದಿಂದ ನಮ್ಮಲ್ಲಿ ಮಂಜೂರಾಗಿದ್ದು, ಅವರಿಗೆ ಅಭಿನಂದನೆಗಳು ಈ ಪ್ರದೇಶದಲ್ಲಿಯೇ ಒಂದು ಕಾಲೋನಿ ಮಾಡಿ ಮನೆ ಇಲ್ಲದ ಸುಮಾರು ಮೂರು ನೂರು ಬಡಜನರಿಗೆ ಪಟ್ಟಣ ಪಂಚಾಯತಿಯಿಂದ ನಿವೇಶನ ಕೊಟ್ಟು ಮನೆಯನ್ನು ಕಟ್ಟಿಕೊಡುವ ಯೋಜನೆ ಇದ್ದು, ಸದ್ಯದಲ್ಲಿಯೇ ನೆರವೇರಲಿದೆ ಮತ್ತು ಇನ್ನೂ ಹಲವಾರು ಯೋಜನೆಗಳು ಹಂತ ಹಂತವಾಗಿ ಬರಲಿವೆ ಎಂದರು.

ರಾಜಗುರು ಸಂಸ್ಥಾನ ಕಲ್ಮಠದ ಮ'ಡಿವಾಳ'ರಾಜಯೋಗಿಂದ್ರ' ಸ್ವಾಮೀಜಿ ಮಾತನಾಡಿ, ಶಾಸಕರಿಗೆ ಮುಂದಾಲೋಚನೆಯ ಗುರಿ ಇದೆ ಯಾವ ಕಾರ್ಯವನ್ನು ಎಲ್ಲಿ ಮಾಡಿದರೆ ಸೂಕ್ತ ಎಂಬುದನ್ನು ಅರಿತುಕೊಂಡು ತಾಲೂಕಾಸ್ಪತ್ರೆಯನ್ನು ಪಟ್ಟಣದ ಸಮೀಪ ಮತ್ತು ಈ ವಸತಿ ಶಾಲೆಯನ್ನು ಈ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಿಸುತ್ತಿದ್ದಾರೆ ಮತ್ತು ಶಾಸಕರ ಆಸಕ್ತಿಯಿಂದ ಸರಕಾರವು ಜಿಲ್ಲೆಗೆ ಒಂದು ಕೊಡುವ ಈ ಶ್ರಮಿಕ ವಸತಿ ಶಾಲೆಯನ್ನು ಕಿತ್ತೂರಿಗೆ ತಂದದ್ದು ಅವರ ಜಾಣಕ್ಷತೆಯನ್ನು ಎತ್ತಿ ತೋರಿಸುತ್ತದೆ ಎಂದರು.

ನಿಚ್ಚಣಕಿ ಮಡಿವಾಳೇಶ್ವರ ಮಠದ ಪಂಚಾಕ್ಷರಿ ಸ್ವಾಮೀಜಿ ಮಾತನಾಡಿದರು.

ಪಪಂ ಅಧ್ಯಕ್ಷ ಜೈಸಿದ್ದರಾಮು ಮಾರಿಹಾಳ, ಸ್ಥಾಯಿ ಸಮೀತಿ ಅಧ್ಯಕ್ಷ ಎಂ.ಎಫ್. ಜಕಾತಿ, ಮಸಸ ಕಾರ್ಖಾನೆಯ ಉಪಾಧ್ಯಕ್ಷ ಶಿವನಗೌಡ ಪಾಟೀಲ, ನಿರ್ದೇಶಕ ಶಂಕರ ಹೊಳಿ, ಇಇ ಮಲ್ಲಪ್ಪ ತುಮ್ಮಲಮಟ್ಟಿ, ಎಇಇ ಅರುಣಕುಮಾರ ಮುಖಂಡರಾದ ಸುನೀಲ ಘೀವಾರಿ, ಅಷ್ಪಾಕ್ ಹವಾಲ್ದಾರ, ಬಸವರಾಜ ಸಂಗೊಳ್ಳಿ, ಕೃಷ್ಣಾ ಬಾಳೇಕುಂದರಗಿ, ಚಂದ್ರಗೌಡ ಪಾಟೀಲ, ರಮೇಶ ಮೊಕಾಶಿ, ಶಂಕರ ಬಡಿಗೇರ, ಅಷ್ಪಾಕ ಸುತಗಟ್ಟಿ, ಮಂಜುನಾಥ ಗಂಗಪ್ಪನವರ ಸೇರಿದಂತೆ ಹಲವಾರು ಮುಖಂಡರು ಉಪಸ್ಥಿತರಿದ್ದರು.



ನೂತನ ಶಾಲೆಗಳು, ರಸ್ತೆಗಳು ಸೇರಿದಂತೆ ಹತ್ತು ಹಲವಾರು ಯೋಜನೆಗಳ ಮೂಲಕ ಕ್ಷೇತ್ರವು ಅಭಿವೃದ್ಧಿಯತ್ತ ಸಾಗುತ್ತಿದೆ ಕಿತ್ತೂರು ನಾಲ್ಕು ದಿಕ್ಕುಗಳಲ್ಲಿ ಸರ್ವಾಂಗೀಣ ಅಭಿವೃದ್ಧಿಯಾಗಬೇಕು ಇದಕ್ಕೆ ಶಾಸಕರ ಜೊತೆಗೆ ಎಲ್ಲರೂ ಕೈ ಜೋಡಿಸಬೇಕು.
■ ಮಡಿವಾಳರಾಜಯೋಗಿಂದ್ರ ಸ್ವಾಮೀಜಿ, ರಾಜಗುರು ಸಂಸ್ಥಾನ ಕಲ್ಮಠ

ಶೀಘ್ರದಲ್ಲೇ ಬೆಂಗಳೂರಿನಲ್ಲಿ ಸಭೆ: ಜಾರಕಿಹೊಳಿ

ಬೆಳಗಾವಿ: ಬೆಳಗಾವಿ ಎಪಿಎಂಸಿ ಸಗಟು ತರಕಾರಿ ಮಾರುಕಟ್ಟೆಗೆ ದೇಶದಲ್ಲಿಯೇ ಒಳ್ಳೆಯ ಹೆಸರು ಇದ್ದು, ಈ ಹೆಸರನ್ನು ಉಳಿಸುವ ಜವಾಬ್ದಾರಿ ಎಪಿಎಂಸಿ ಮತ್ತು ಜೈ ಕಿಸಾನ್ ಖಾಸಗಿ ಮಾರುಕಟ್ಟೆ ವರ್ತಕರ ಮೇಲಿದೆ ಎಂದು ಲೋಕೋಪಯೋಗಿ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಗುರುವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬೆಳಗಾವಿ ಎಪಿಎಂಸಿ ಸಗಟು ತರಕಾರಿ ಮಾರುಕಟ್ಟೆ ಮತ್ತು ಜೈ ಕಿಸಾನ್ ಖಾಸಗಿ ಮಾರುಕಟ್ಟೆ ವರ್ತಕರ ವಿವಾದ ಬಗೆಹರಿಸಲು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಕರೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು,

ಶೀಘ್ರದಲ್ಲಿಯೇ ಎಪಿಎಂಸಿ, ಜೈ ಕಿಸಾನ್ ಮಾರುಕಟ್ಟೆ ವರ್ತಕರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಬೆಂಗಳೂರಿನಲ್ಲಿ ಕೃಷಿ ಮಾರುಕಟ್ಟೆ ಶಿವಾನಂದ ಪಾಟೀಲ್ ಅವರೊಂದಿಗೆ ಸಭೆಯನ್ನು ಆಯೋಜಿಸಿ, ಆ ಸಭೆ ನಿಮ್ಮನ್ನು ಆಹ್ವಾನಿಸುತ್ತೇನೆ. ಸದ್ಯಕ್ಕೆ ಖಾಸಗಿ ಮಾರುಕಟ್ಟೆಯಿಂದ ಎಪಿಎಂಸಿ ಆವರಣಕ್ಕೆ ಸ್ಥಳಾಂತರಗೊಂಡ ವರ್ತಕರಿಗೆ ಖಾಲಿ ಇರುವ ಮಳಿಗೆಗಳನ್ನು ಹಂಚಿಕೆ ಮಾಡಲು ಎಪಿಎಂಸಿ ಕಾರ್ಯದರ್ಶಿಗೆ ಸೂಚಿಸಿದರು.

ರೈತರ ಹಿತದೃಷ್ಟಿಯಿಂದ ಎಪಿಎಂಸಿ ವ್ಯಾಪ್ತಿಯಲ್ಲೇ ಮತ್ತೊಂದು ಪೂರಕ ಸಗಟು ತರಕಾರಿ ಮಾರುಕಟ್ಟೆ ಆವರಣ ಸ್ಥಾಪಿಸುವ ಬಗ್ಗೆ ಎಪಿಎಂಸಿ ಸಚಿವರು, ಸರ್ಕಾರದ ಮಟ್ಟದಲ್ಲಿ ಚರ್ಚಿಸುತ್ತೇನೆ. ನಾವು ಯಾರ ಪರನೂ ಇಲ್ಲ. ಯಾರ ವಿರುದ್ಧವೂ ಇಲ್ಲ, ಈ ಹಿಂದೆ ಶಾಮನೂರು ಶಿವಶಂಕರಪ್ಪನವರು ಸಚಿವರಿದ್ದಾಗ ಬೆಳಗಾವಿ ಎಪಿಎಂಸಿ ಸಗಟು ತರಕಾರಿ ಮಾರುಕಟ್ಟೆಗೆ 17 ಕೋಟಿ ರೂ. ಅನುದಾನ ತಂದು ಮಾರುಕಟ್ಟೆಯನ್ನು ಅಭಿವೃದ್ಧಿಗೊಳಿಸಿದ್ದೇವೆ ಎಂದು ತಿಳಿಸಿದರು.

ಎಪಿಎಂಸಿ, ಜೈ ಕಿಸಾನ್ ಖಾಸಗಿ ಮಾರುಕಟ್ಟೆ ವರ್ತಕರ ಸಮಸ್ಯೆ ಇಂದು ಅಥವಾ ನಾಳೆ ಬಗೆಹರಿಯುವ ವಿಷಯವಲ್ಲ, ಆದಕಾರಣ ಎರಡು ಮಾರುಕಟ್ಟೆ ವರ್ತಕರು ಹೊಂದಾಣಿಕೆಯಿಂದ ವ್ಯಾಪಾರ ಮಾಡಿಕೊಂಡು ಹೋಗಬೇಕೆಂದು ಸಚಿವರು ತಿಳಿಸಿದರು.

ಈ ವೇಳೆ ಶಾಸಕ ಆಸೀಫ್ ಸೇಠ್, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಬೆಳಗಾವಿ ನಗರ ಪೊಲೀಸ್ ಆಯುಕ್ತ ಭೂಷಣ್ ಗುಲಾಬರಾವ್ ಬೋರಸೆ, ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಸೇರಿದಂತೆ ಎಪಿಎಂಸಿ ಕಾರ್ಯದರ್ಶಿ ವಿಶ್ವನಾಥರೆಡ್ಡಿ ಸೇರಿದಂತೆ ಎಪಿಎಂಸಿ, ಜೈ ಕಿಸಾನ್ ಖಾಸಗಿ ಮಾರುಕಟ್ಟೆ ವರ್ತಕರು ಸೇರಿದಂತೆ ಹಲವರು ಇದ್ದರು.



ಎಪಿಎಂಸಿ, ಜೈ ಕಿಸಾನ್ ಮಾರುಕಟ್ಟೆ ವರ್ತಕರ ಸಮಸ್ಯೆ

ಕಿರುಸುದ್ದಿ

ಇಂದಿನಿಂದ ಕೋಟಿ ಜಪಯಜ್ಞ

ಬೀಳಗಿ: ಸದ್ಗುರು ಶ್ರದ್ಧಾನಂದ ಶ್ರೀಗಳ ಬ್ರಹ್ಮವಿದ್ಯಾಶ್ರಮ ಸುಕ್ಷೇತ್ರ, ಬನ್ನಿದಿನ್ನಿ ಗ್ರಾಮದಲ್ಲಿ ವಿಶ್ವಶಾಂತಿಗಾಗಿ ಕೋಟಿ ಜಪಯಜ್ಞ ಮತ್ತು 19ನೇ ವಾರ್ಷಿಕೋತ್ಸವ ಕಾರ್ಯಕ್ರಮ ಫೆ.27ರಿಂದ ಮಾ.1ರ ವರೆಗೆ ಜರುಗಲಿದೆ ಎಂದು ಅನಗವಾಡಿ ಪೂರ್ಣಾನಂದ ಮಹಾಮುನಿ ಆಶ್ರಮದ ಮಾತೋಶ್ರೀ ಅನಸೂಯಾತಾಯಿ ಹೇಳಿದರು. ಅನಗವಾಡಿ ಗ್ರಾಮದ ಪೂರ್ಣಾನಂದ ಮಹಾಮುನಿ ಆಶ್ರಮದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಫೆ.27ರಂದು ಬೆಳಗ್ಗೆ 6ರಿಂದ ಶಿವಮಹಿಮ್ನ ಸ್ತೋತ್ರದೊಂದಿಗೆ ರುದ್ರಾಭಿಷೇಕ ಹಾಗೂ ಜಪಯಜ್ಞ ಪ್ರಾರಂಭವಾಗುವುದೆಂದು ತಿಳಿಸಿದರು. ಮಾ.27ರಂದು ಬೆಳಗ್ಗೆ ಕಾಲ ಕರ್ಮ ಮಾಯೆ, ಸಂಜೆ ದರ್ಮತ್ ಅರ್ಥ ಪ್ರಭಾವತಿ, ಫೆ.28ರಂದು ಬೆಳಗ್ಗೆ ದುರಿತ ಕರ್ಮ ವಲ್ಲದಿರು, ಸಂಜೆ ಪುಣ್ಯಶ್ಚ ಫಲ ನಿಶ್ಚಿಂತಿ, ಫೆ.1ರಂದು ಗುರುಕರುಣೆ ವಿಷಯ ಮೇಲೆ ವಿವಿಧ ಪೂಜ್ಯರಿಂದ ಪ್ರವಚನ ನಡೆಯಲಿದೆ ಎಂದು ತಿಳಿಸಿದರು.

ಪ್ರವಚನ ಕಾರ್ಯಕ್ರಮದ ಸಾನ್ನಿಧ್ಯವನ್ನು ಇಬ್ರಾಹಿಂಪೂರದ ಅಭಿನವ ರೇವಣಸಿದ್ಧೇಶ್ವರ ಸ್ವಾಮಿಗಳು ವಹಿಸುವರು. ಮಾತೋಶ್ರೀ ಅನಸೂಯಾತಾಯಿ ನೇತೃತ್ವ ವಹಿಸುವರು. ಮುರನಾಳದ ಜಗನ್ನಾಥ ಸ್ವಾಮಿಗಳು, ನಿರಂಜನಯ್ಯ ಸ್ವಾಮಿಗಳು ಅಧ್ಯಕ್ಷತೆ ವಹಿಸುವರು. ತುಳಸಿಗೇರಿಯ ಓಂಕಾರೇಶ್ವರ ಸ್ವಾಮಿಗಳು, ವಿದ್ಯಾಗಿರಿಯ ವಿಶ್ವರಾಜೇಂದ್ರ ಸ್ವಾಮಿಗಳು, ಬುದ್ನಿಯ ಸಿದ್ಧಾನಂದ ಸ್ವಾಮಿಗಳು, ಯಾಳವಾರದ ಕಾಶಿನಾಥ ಸ್ವಾಮಿಗಳು, ವರ್ಚಗಲ್‌ದ ಜಗದೀಶ ಸ್ವಾಮಿಗಳು ಸೇರಿ ಇತರರು ಪಾಲ್ಗೊಳ್ಳುವರು. ಮಾ.1ರಂದು ಬೆಳಗ್ಗೆ ರುದ್ರಾಭಿಷೇಕ, ಪ್ರವಚನ, ಪೂಜ್ಯರ ಪಾದಪೂಜೆ ಹಾಗೂ ಮಹಾಪ್ರಸಾದದೊಂದಿಗೆ ಕಾರ್ಯಕ್ರಮ ಮಹಾಮಂಗಲಗೊಳ್ಳುವುದೆಂದು ಹೇಳಿದರು.

ಕುಂದುಕೊರತೆ ಸಭೆ ಇಂದು

ಬೀಳಗಿ: ಮತಕ್ಷೇತ್ರದ ಶಾಸಕ ಜೆ.ಟಿ.ಪಾಟೀಲ ಫೆ.27ರಂದು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ಬೆಳಗ್ಗೆ 10.30 ಗಂಟೆಗೆ ಕುಂದರಗಿ ಗ್ರಾಮದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸಾರ್ವಜನಿಕರ ಕುಂದುಕೊರತೆ ಸಭೆ, ಮಧ್ಯಾಹ್ನ 12.30 ಗಂಟೆಗೆ ಚಿಕ್ಕಾಲಗುಂಡಿ ಗ್ರಾಮದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸಾರ್ವಜನಿಕರ ಕುಂದುಕೊರತೆಗಳ ಸಭೆ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ಕಾತರಕಿ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಕೊಠಡಿ ಉದ್ಘಾಟನೆ ಸಮಾರಂಭ ಜರುಗಲಿದೆ. ಸಂಜೆ 4 ಗಂಟೆಗೆ ಸುನಗ ಗ್ರಾಮದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸಾರ್ವಜನಿಕರ ಕುಂದು ಕೊರತೆಗಳ ಸಭೆ ನಡೆಯಲಿದೆ. ಸಂಜೆ 6 ಗಂಟೆಗೆ ಬನ್ನಿದಿನ್ನಿ ಗ್ರಾಮದಲ್ಲಿ ನಡೆಯುವ ವಿಶ್ವಶಾಂತಿಗಾಗಿ ಜಪಯಜ್ಞ ಹಾಗೂ 19ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವರೆಂದು ಶಾಸಕರ ಆಪ್ತಕಾರ್ಯದರ್ಶಿ ವೆಂಕಟೇಶ ಜಂಬಗಿ ತಿಳಿಸಿದ್ದಾರೆ.

ಮಾ.3ರಿಂದ ಪಾದಯಾತ್ರೆ

ಗುಳೇದಗುಡ್ಡ: ತಾಲೂಕಿನ ಖಾಜಿಬೂದಿಹಾಳ ಗ್ರಾಮದಿಂದ ಪ್ರತಿವರ್ಷದಂತೆ ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಮಾ.3ರಿಂದ ಪಾದಯಾತ್ರೆ ಆರಂಭವಾಗಲಿದೆ. ನಿರಂತರವಾಗಿ ಗ್ರಾಮದಿಂದ ಶ್ರೀಶೈಲಕ್ಕೆ ಪಾದಯಾತ್ರೆ ನಡೆಯುತ್ತಿದ್ದು, ಈ ವರ್ಷದ ಪಾದಯಾತ್ರೆ 30ನೇ ವರ್ಷಕ್ಕೆ ಕಾಲಿಟ್ಟಿದೆ ಎಂದು ಪಾದಯಾತ್ರೆಯ ಸಂಚಾಲಕ ಸಂಗಮೇಶ ಸಾಳಗುಂದಿ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಅವರು, ಖಾಜಿಬೂದಿಹಾಳ ಗ್ರಾಮದಿಂದ ಮಾ. 3ರಂದು ಹೊರಡುವ ಪಾದಯಾತ್ರೆ, ಕೆಲವಡಿ, ತಿಮ್ಮಸಾಗರ, ಕೋಟೆಕಲ್ಲ, ಗುಳೇದಗುಡ್ಡ, ಪರ್ವತಿ, ಹುನಗುಂದ, ಮುದಗಲ್ಲ, ಮಸ್ಕಿ, ಚಿಕ್ಕಲಪರ್ವಿ, ಮಂತ್ರಾಲಯ, ಕರ್ನೂಲ, ನಾಗಲೂಟಿ, ಗಂಗನಪಲ್ಲಿ, ಅಡಿಕೇಶ್ವರ ಮೂಲಕ ಮಾ. 16 ರಂದು ಪಾದಯಾತ್ರೆ ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನ ತಲುಪಲಿದೆ. ಪಾದಯಾತ್ರಿಗಳಿಗೆ ಲಗೇಜ್ ಹಾಕಲು ವಾಹನ ಸೌಲಭ್ಯ ಮಾಡಲಾಗಿದ್ದು, ಪಾದಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯ ಭಕ್ತರು ಭಾಗವಹಿಸುವಂತೆ ಅವರು ಕೋರಿದ್ದಾರೆ.

ಸಂಬಾಳಮಠ ಸಂಗೀತ ಕಾರ್ಯಕ್ರಮ



ಲೋಕಾಪುರ: ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ಬೆಳವಡಿ ಗ್ರಾಮದಲ್ಲಿ ಫೆ. 28, ಮಾ.1ರಂದು ಜರಗುವ ವೀರರಾಣಿ ಬೆಳವಡಿ ಮಲ್ಲಮ್ಮನ ಉತ್ಸವ-2026 ಕಾರ್ಯಕ್ರಮದಲ್ಲಿ ಫೆ.28ರಂದು ರಾತ್ರಿ 7.25ಕ್ಕೆ ಲೋಕಾಪುರ ಪಟ್ಟಣದ ಕಲಾವಿದ ಮಲ್ಲಯ್ಯಾ ಸಂಬಾಳಮಠ ಹಾಗೂ ಹಾರ್ಮೋನಿಯಂ ಸಾಥ್ ಕಲಾವಿದೆ ಮಂಜುಳಾ ಸಂಬಾಳಮಠ, ತಬಲಾ ಸಾಥ್ ಮಲ್ಲಿಕಾರ್ಜುನ ನಾವಿ ಸಂಗಡಿಗರು ಸುಗಮ ಸಂಗೀತ ಕಾರ್ಯಕ್ರಮ ನೀಡಲಿದ್ದಾರೆ.



ಗಲಗಲಿ: ಗ್ರಾಮದಿಂದ ಸುಕ್ಷೇತ್ರ ಶ್ರೀಶೈಲಕ್ಕೆ ಪಾದಯಾತ್ರೆ ತೆರಳುತ್ತಿದ್ದು, ಅದಕ್ಕೂ ಪೂರ್ವದಲ್ಲಿ ಪ್ರತಿ ವರ್ಷದಂತೆ ಮಲ್ಲಯ್ಯನ ಕಂಬಿಯೊಂದಿಗೆ ಭಕ್ತರ ಮನೆಗಳಿಗೆ ತೆರಳಿ ಪೂಜೆಯೊಂದಿಗೆ ಕಂತಿ ಭಿಕ್ಷೆ ಸ್ವೀಕರಿಸಲಾಯಿತು. ಶಿವಕುಮಾರ ಶಾಸ್ತ್ರಿಗಳು ಸರಗಣಾಚಾರಿ ಮಠ, ಅಶೋಕ ಹೂಗಾರ, ಸಂಗಪ್ಪ ಕುಟುಕನಕೇರಿ, ಮಹಾಲಿಂಗ ತೊರಲಿ ಇದ್ದರು.

ವಾರ್ಷಿಕ ಸ್ನೇಹ ಸಮ್ಮೇಳನ ನಾಳೆ

ಲೋಕಾಪುರ: ಸಮೀಪದ ಮುದ್ದಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಫೆ.28ರಂದು ಶನಿವಾರ ಸಂಜೆ 6ಕ್ಕೆ ಕಲಶ್ರೀ, ವಾರ್ಷಿಕ ಸ್ನೇಹ ಸಮ್ಮೇಳನ-2026 ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಲೋಕಾಪುರ ಜ್ಞಾನೇಶ್ವರಮಠದ ಪೀಠಾಧಿಕಾರಿ ಬ್ರಹ್ಮಾನಂದ ಸ್ವಾಮಿಗಳು ಹಾಗೂ ಮುದ್ದಾಪುರದ ಗದಗಯ್ಯ ಬಸನಿಂಗಯ್ಯ ಹಿರೇಮಠ ಸ್ವಾಮಿಜಿ ಸಾನಿಧ್ಯ ವಹಿಸುವರು. ಎಸ್‌ಡಿಎಂಸಿ ಅಧ್ಯಕ್ಷ ದ್ಯಾವಪ್ಪ ಲ.ನಾಯಕ ಅಧ್ಯಕ್ಷತೆ ವಹಿಸುವರು. ಬಿಇಒ ಸಮೀರ ಮುಲ್ಲಾ ಉದ್ಘಾಟಿಸುವರು. ಮಾರುತಿ ಕರೆನ್ನವರ, ಅಶೋಕ ಪಟ್ಟಣಶೆಟ್ಟಿ, ಸದಾಶಿವ ಮಾಳಿ, ಅಶೋಕ ಪೂಜಾರ, ಪರಶುರಾಮ ಹಂಚಾಟೆ, ಬಸವರಾಜ ನಾಯಕ, ವೀರಭದ್ರಯ್ಯ ಜಂಬಗಿ, ರಾಜೇಸಾಬ ಯಡಹಳ್ಳಿ, ರುದ್ರಪ್ಪ ಜಾಡರ, ಪ್ರಕಾಶ ಶಿರಸಂಗಿ, ಅಶೋಕ ಆರಗಂಜಿ, ಆಡಿವೆಪ್ಪ ಛಬ್ಬಿ, ಎಚ್.ಪಿ.ಪೂಜಾರ, ಶಿವಾಜಿ ದೇವಗಿರಿ, ಸುರೇಶ ರಡ್ಡಿ, ನಿಶಾಂತ ಹೊಸೂರು, ಶ್ರೀಶೈಲ ಹಿರೇಮಠ, ಸದಾಶಿವ ಹಂಚಾಟೆ, ವಿಜಯಕುಮಾರ ಕಮತಗಿ, ಸಲೀಮ ಕೊಪ್ಪದ, ಪಿಡಿಒ ಶಿವಾನಂದ ನರಸನ್ನವರ, ರಾಮಕೃಷ್ಣರಾವ್ ಕೋತಾ, ಪೂಜಾ ಉದಮಡಿ, ಸುರೇಶ ಹಂಚಾಟೆ, ಬಿ.ಎಸ್.ಪೂಜಾರ, ಸಿದ್ದು ಹೂಗಾರ, ಹಸನಡೋಂಗ್ರಿ ಮಹಾಲಿಂಗಪೂರ, ಶ್ರೀನಿವಾಸ ಬಬಲಾದಿ, ಸೈದುಸಾಬ ಯಡಹಳ್ಳಿ, ನಬೀಸಾಬ ಹಾಜಿಭಾಯಿ, ಗಂಗಯ್ಯಾ ಮಠಪತಿ, ನಾಗಪ್ಪ ತೇಲಿ, ಸೈಯ್ಯದಸಾಬ ಸರಕಾವಸ್, ಫಕ್ರುಸಾಬ ಸರಕಾವಸ್, ಶ್ರೀಕಾಂತ ಶಿಂಧೆ, ದ್ಯಾವಪ್ಪ ನಾಯಕ, ಸೈಯ್ಯದ ಮಾದರ, ಶಂಕರ ಭಜಂತ್ರಿ ಪಾಲ್ಗೊಳುವರೆಂದು ಎಸ್‌ಡಿಎಂಸಿ ಅಧ್ಯಕ್ಷ ದ್ಯಾವಪ್ಪ ನಾಯಕ, ಉಪಾಧ್ಯಕ್ಷ ಸಿದ್ದಪ್ಪ ಮಾಳಿ ಹಾಗೂ ಪದನಿಮಿತ್ತ ಸದಸ್ಯ ಡಾ.ಸಿದ್ದಣ್ಣ ಬಾಡಗಿ ತಿಳಿಸಿದ್ದಾರೆ.



ರಬಕವಿ-ಬನಹಟ್ಟಿ: ಹೋಳಿ ಹಬ್ಬದ ನಿಮಿತ್ತ ಮಾ.4ರಂದು ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ನೇತೃತ್ವದಲ್ಲಿ ರಂಗ ಹುಣ್ಣಿಮೆ ಬಣ್ಣದೋಕುಳಿ ಕಾರ್ಯಕ್ರವದ ನಿಮಿತ್ತ ಗುರುವಾರ ಪರಿಕರ ಬಿಡುಗಡೆಗೊಳಿಸಲಾಯಿತು. ರಾಜು ಬಗನಾಳ, ಹರ್ಷವರ್ಧನ ಪಟವರ್ಧನ, ಸಂಜು ಜೋತಾವರ, ಬಸವರಾಜ ರಾಯರ, ಪ್ರಭು ಗಸ್ತಿ, ಸಂಗಮೇಶ ಮಡಿವಾಳ, ಸುರೇಶ ಪಾಟೀಲ, ಇರ್ಷಾದ ಮೋಮಿನ್, ಕಿರಣ ಕರಲಟ್ಟಿ, ಸದಾಶಿವ ಗೋಂದಕರ ಸೇರಿದಂತೆ ಅನೇಕರಿದ್ದರು.

ಪಂಕಾ ಮಸೀದಿಗೆ ಶಾಶ್ವತ ಶೀಲ್‌ಡೌನ್‌ಗೆ ಒತ್ತಾಯ | ಹೊಸಕೇರಿ ಹೇಳಿಕೆ

ಬೇಡಿಕೆ ಈಡೇರದಿದ್ದರೆ ಮತ್ತೆ ಹೋರಾಟ

ಬಾಗಲಕೋಟೆ: ಹಿಂದೂಗಳ ಮೆರವಣಿಗೆಯಲ್ಲಿ ಕಲ್ಲು ತೂರಾಟಕ್ಕೆ ಸಂಬಂಧಿಸಿದಂತೆ ಪಂಕಾ ಮಸೀದಿಗೆ ಶಾಶ್ವತವಾಗಿ ಶೀಲ್‌ಡೌನ್ ಮಾಡಬೇಕು. ಕಮಿಟಿ ಜನರನ್ನು ಬಂಧಿಸಬೇಕು. ಮತಾಂಧ ಮುಸ್ಲಿಂರನ್ನು ಬಂಧನ ಮಾಡಿ ಪ್ರಕರಣ ದಾಖಲಿಸಬೇಕು. ಹಿಂದೂ ಸಮಾಜ ಹದಿನೈದು ದಿನ ಗಡುವು ನೀಡಲಿದೆ. ಈ ವೇಳೆಯಲ್ಲಿ ಬೇಡಿಕೆ ಈಡೇರದಿದ್ದರೆ ಮತ್ತೆ ಹಿಂದೂಗಳು ಹೋರಾಟಕ್ಕೆ ಅಣಿಯಾಗಲಿದ್ದಾರೆ ಎಂದು ಹಿಂದೂ ಜಾಗರಣ ವೇದಿಕೆ ಉತ್ತರ ಪ್ರಾಂತ ಸಹ ಸಂಯೋಜಕ ಶ್ರೀಕಾಂತ ಹೊಸಕೇರಿ ಪೊಲೀಸ್ ಇಲಾಖೆಗೆ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದರು.

ನವನಗರದ ಜಿಲ್ಲಾ ಆಡಳಿತ ಭವನದ ಎದುರು ಹಿಂದೂ ರಕ್ಷಣಾ ಸಮಿತಿಯಿಂದ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪಂಕಾ ಮಸೀದಿಗೆ ಬೀಗ ಹಾಕಿ ಮತಾಂಧ ಶಕ್ತಿಗಳನ್ನು ಬಂಧಿಸಿ ಎಂದರೆ ಪೊಲೀಸ್ ಇಲಾಖೆ ಬಾಗಲಕೋಟೆಯಲ್ಲಿ ಶೀಲ್‌ಡೌನ್ ಮಾಡಿದರು. ಹಿಂದೂಸಮಾಜಶಾಂತಿಯುತವಾಗಿದ್ದು, ಸಂಸ್ಕೃತಿ ಗೌರವಿಸುವ ಸಮಾಜವಾಗಿದೆ. ಆದರೆ ಪೊಲೀಸರ ಲಾಠಿ, ನೋಟಿಸ್‌ಗೆ ಹೆದರುವವರು ನಾವಲ್ಲ ಎಂದರು.

ಛತ್ರಪತಿಶಿವಾಜಿಮಹಾರಾಜರಮೆರವಣಿಗೆಯನ್ನು ಹತ್ತಿಕ್ಕಲು ಪಂಕಾ ಮಸೀದಿಯ ಮುಖ್ಯಸ್ಥರು, ಮಸೀದಿ ಅಧ್ಯಕ್ಷರು ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು ನೀಡಿದ ಪರಿಣಾಮ ಹಿಂದೂಗಳನ್ನು ಕೆರಳಿಸುವ ಕೆಲಸ ಮಾಡಿದ್ದಾರೆ. ಹಿಂದೂಗಳ ಮೆರವಣಿಗೆಯಲ್ಲಿ ಕಲ್ಲು, ಚಪ್ಪಲಿ ತೂರಿದವರಿಗೆ ಮುದ್ದು ಮಾಡುವ ಬದಲು ಲಾಠಿ ರುಚಿ ತೋರಿಸಿದ್ದರೆ ಇಷ್ಟೊಂದು ಪೊಲೀಸ್ ಇಲಾಖೆ ಹರಸಾಹಸ ಪಡುವ ಅಗತ್ಯವಿರಲಿಲ್ಲ ಎಂದು ಹೇಳಿದರು.

ಮೆರವಣಿಗೆ ವೇಳೆ ಎಷ್ಟಿಗೂ ಕಲ್ಲು ಬಿದ್ದಿದೆ.



> ಹಿಂದೂಗಳ ಭಾವನೆಗಳನ್ನು ಕೆರಳಿಸಲು ಹಾಗೂ ಹಿಂದೂಗಳ ಮೆರವಣಿಗೆ ಮೇಲೆ ದಾಳಿ ಮಾಡುವವರನ್ನು ಸುಮ್ಮನೆ ಬಿಡುವುದಿಲ್ಲ. ಸ್ವಾತಂತ್ರ್ಯ ಸಿಕ್ಕಾಗ ದೇಶ ವಿಭಜನೆ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಮುಸ್ಲಿಂ ಸಮುದಾಯದವರನ್ನು ಕಳಿಸಿದ್ದರೆ ಇಂತಹ ಘಟನೆಗಳು ಮೇಲಿಂದ ಮೇಲೆ ಭಾರತದಲ್ಲಿ ನಡೆಯುತ್ತಿರಲಿಲ್ಲ.
>
> ■ ಅಶೋಕ ಲಿಂಬಾವಳಿ, ಹಿಂದೂ ರಕ್ಷಣಾ ಸಮಿತಿ ಮುಖಂಡ

ಆದರೂ ಪೊಲೀಸ್ ಇಲಾಖೆಗೆ ಸಿಟ್ಟು ಬರಲಿಲ್ಲ ಆದರೆ ಹಿಂದೂಗಳ ಹೋರಾಟವನ್ನು ರಾಜಕೀಯ ಕುತಂತ್ರದಿಂದ ಹತ್ತಿಕ್ಕುವ ಕೆಲಸ ಮಾಡಿದರು ಎಂದರು.

ಜಿಪಂ ಮಾಜಿ ಅಧ್ಯಕ್ಷ ಹೂವಪ್ಪ ರಾಠೋಡ ಮಾತನಾಡಿ, ಮಸೀದಿಯಲ್ಲಿದ್ದುಕೊಂಡು ಹಿಂದೂಗಳ ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸುತ್ತಿರುವುದನ್ನು ನೋಡಿದರೆ ನಮ್ಮವರು ಮನಸ್ಸು ಮಾಡಿದರೆ ತಾಯಂದಿರುವ ಸಾಕು ನಿಮ್ಮನ್ನು ಮಟ್ಟಹಾಕಲು. ಮುಂದಿನ ದಿನಗಳಲ್ಲಿ ಮುಸ್ಲಿಂ ಸಮುದಾಯದವರಿಗೆ ಕಷ್ಟವಾಗಲಿದೆ. ಉದ್ಧಟತನ ತೋರಿಸಿದರೆ ಸರಳ ಬಿಡುವುದಿಲ್ಲ. ಹಿಂದೂಗಳು ಕಾಂಗ್ರೆಸ್‌ಗೆ ಮತ ಹಾಕಿ ನೋವು ಅನುಭವಿಸುಂತಹ ಸ್ಥಿತಿಯನ್ನು ಕಾಂಗ್ರೆಸ್ ಸರ್ಕಾರ ತಂದಿಟ್ಟಿದೆ. ಇದರ ವಿರುದ್ಧ ಹಿಂದೂಗಳು ಹೋರಾಟಕ್ಕೆ ಸಿದ್ಧರಾಗಿದ್ದಾರೆ. ನಮ್ಮನ್ನು ಹತ್ತಿಕ್ಕುವ ತಂತ್ರ ಬಿಡಿ. ಸಮಾಜ ಶಬ್ದವನ್ನು ನಿಲ್ಲಿಸಿ ಎಂದು ಪೊಲೀಸ್ ಇಲಾಖೆಗೆ ಎಚ್ಚರಿಕೆ ನೀಡಿದರು.

ಹಿಂದೂ ಸಮಾಜದ ಮುಖಂಡ ರಾಜು ನಾಯ್ಕರ ಮಾತನಾಡಿದರು. ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯ ಸಭೆ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಮಾಜಿ ಶಾಸಕ ರಾಜಶೇಖರ ಶೀಲವಂತ, ಪ್ರಭು ಹಡಗಲಿ, ಎಂ.ಆರ್. ಸಿಂಧೆ, ಶಿವು ಮೇಲ್ನಾಡ, ಅಶೋಕ ಮುತ್ತಿನಮಠ, ಬಸವರಾಜ ಯಕಂಚಿ, ಕುಮಾರಸ್ವಾಮಿ ಹಿರೇಮಠ, ಕಿರಣ್ ಪವಾಡಶೆಟ್ಟರ, ಸುರೇಶ ಮಾಗಿ, ಸಂಗಪ್ಪ ಗಾಣಿಗೇರ, ಶಶಿಕಲಾ ಮಜ್ಜಗಿ, ಉಮೇಶ ಹಂಚಿನಾಳ, ಬಸವರಾಜ ಹುನಗುಂದ, ಸುರೇಶ ಮಾಗಿ ಸೇರಿದಂತೆ ಅನೇಕರು ಭಾಗಿಯಾಗಿದ್ದರು.

ಪತ್ರಕರ್ತರ ಹಲಗೆ ಮೇಳಕ್ಕೆ ಡಿಸಿ ಸಂಗಪ್ಪ ಚಾಲನೆ

ಬಾಗಲಕೋಟೆ: ದೇಶದಲ್ಲಿ ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದುಕೊಂಡಿರುವ ಬಾಗಲಕೋಟೆ ಹೋಳಿ ಹಬ್ಬದ ಹಲಗೆ ಮಜಲನ್ನು ಉಳಿಸಿ ಬೆಳೆಸುವಂತಹ ಕೆಲಸ ಬಾಗಲಕೋಟೆಯ ಜನರಿಂದ ಆಗಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಯುವ ಪತ್ರಕರ್ತ ದಿ.ಪ್ರಕಾಶ ಗುಳೇದಗುಡ್ಡ ವೇದಿಕೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಲಗೆ ಮಜಲು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಹೋಳಿ ಹಬ್ಬವನ್ನು ಎಲ್ಲರೂ ಸಹೋದರರಂತೆ ಸ್ನೇಹಮಯವಾಗಿ ಆಚರಿಸಬೇಕು ಎಂದು ಹೇಳಿದರು.

ಜಿಪಂ ಸಿಇಒ ಶಶಿಧರ ಕುರೇರ ಮಾತನಾಡಿ, ಹಬ್ಬಗಳೆಂದರೆ ನಮ್ಮ ಸಂಸ್ಕೃತಿಯ ಪ್ರತಿಬಿಂಬಿಸುತ್ತದೆ. ನಮ್ಮಲ್ಲಿರುವ ಸಾಮರಸ್ಯ, ಸಂತಸ ಹಾಗೂ ಸಮಾಜದಲ್ಲಿ ಒಳ್ಳೆಯ ಬಾಳ್ವೆ ಮಾಡಲು ಹಬ್ಬಗಳು ದೇಶದಲ್ಲಿ ಆಚರಣೆಯಲ್ಲಿವೆ. ಹಬ್ಬಗಳ ಪ್ರಾಮುಖ್ಯತೆಯನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕಾದ ಅಗತ್ಯವಿದೆ ಎಂದು ಹೇಳಿದರು.

ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಮಾತನಾಡಿ, ಸಾಮಾರಸ್ಯ, ಎಲ್ಲ ಸಮಾಜವನ್ನು ಒಳಗೊಂಡು ಆಚರಣೆ ಮಾಡುವ ಹಬ್ಬ ಹೋಳಿಯಾಗಿದೆ. ನಗರದಲ್ಲಿ ಶಾಂತಿ ಸುವ್ಯವಸ್ಥೆ ಇದ್ದು ಎಲ್ಲರೂ ಹಬ್ಬವನ್ನು ಉತ್ಸಾಹದಿಂದ ಆಚರಿಸಬೇಕು. ಯಾರೂ ಶಾಂತಿಗೆ ಭಂಗವನ್ನು ಉಂಟು ಮಾಡದೇ ಹಬ್ಬ ಆಚರಿಸಬೇಕು ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ಈಶ್ವರ ಶೆಟ್ಟರ ಮಾತನಾಡಿ, ಬಾಗಲಕೋಟೆ ಹೋಳಿ ಹಬ್ಬವನ್ನು ಜಾತಿ, ಮತ, ಬೇಧಭಾವ ಇಲ್ಲದೇ ಎಲ್ಲರೂ ಒಗ್ಗೂಡಿಕೊಂಡು ಸೌಹಾರ್ದತೆಯಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಹೋಳಿ ಹಬ್ಬಕ್ಕೆ ಬಾಗಲಕೋಟೆಯಲ್ಲಿ ತನ್ನದೇಯಾದ ವೈಶಿಷ್ಟತೆ ಇದ್ದು ಇದನ್ನು ಉಳಿಸಿಕೊಂಡು ಹೋಗಬೇಕಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷ ಮಹೇಶ ಅಂಗಡಿ ಮಾತನಾಡಿ, ಹಿರಿಯ ಪತ್ರಕರ್ತ ದಿ.ರಾಮ ಮನಗೂಳಿಯವರು ಹೋಳಿ ಹಬ್ಬವನ್ನು ಉಳಿಸಿಕೊಂಡು ಹೋಗಲು ಬಾಗಲಕೋಟೆಯ ಜನತೆಯ ಜತೆಗೆ ಪತ್ರಕರ್ತರು ಆಚರಿಸಿಕೊಂಡು ಹೋಗಬೇಕು ಎಂದು ಭದ್ರಬುನಾದಿ ಹಾಕಿಕೊಟ್ಟರು ಎಂದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಗದೀಶ ಗಾಣಿಗೇರ ಸ್ವಾಗತಿಸಿದರು. ಕಾರ್ಯಕಾರಿಣಿ ಸದಸ್ಯ ಮಂಜುನಾಥ ತಳವಾರ ನಿರೂಪಿಸಿದರೆ ಕೃಷ್ಣಾ ಹಾದಿಮನಿ ವಂದಿಸಿದರು. ಮುನ್ನ ಹಲಗೆಗಳಿಗೆ ಕಾರ್ಯಕಾರಿಣಿ ಸದಸ್ಯ ಅಭಯ ಮನಗೂಳಿ ಪೂಜೆ ನೆರವೇರಿಸಿದರು. ಪತ್ರಕರ್ತರು ಭಾಗವಹಿಸಿದ್ದರು.



ಪರಿಶುದ್ಧ ಮನಸ್ಸಿನಿಂದ ದೇವರ ದರ್ಶನ ಮಾಡಿ

ತೇರದಾಳ: ದೇವರನ್ನು ಅತ್ಯಂತ ಸಮೀಪದಿಂದ ದರ್ಶನ ಮಾಡಬೇಕು. ಅಥವಾ ಸ್ವತಃ ಕೈಗಳಿಂದ ಮುಟ್ಟಿ ದರ್ಶನ ಮಾಡಬೇಕು ಅಂದಾಗ ಅದು ನಿಜವಾದ ದರ್ಶನ ಎನ್ನುವ ಯೋಚನೆ ನಿಮ್ಮ ತಲೆಯಿಂದ ತೆಗೆದುಹಾಕಿ. ಪರಿಶುದ್ಧವಾದ ಮನಸ್ಸಿನಿಂದ ಮನಮುಟ್ಟಿ ದರ್ಶನ ಮಾಡಿದರೆ ಅದುವೇ ನಿಜವಾದ ದರ್ಶನವಾಗುತ್ತದೆ. ಇದರಿಂದ ನೀವು ಸಾಕ್ಷಾತ ಮಲ್ಲಯ್ಯನನ್ನೇ ಮುಟ್ಟಿ ದರ್ಶನ ಮಾಡಿದಂತಾಗುತ್ತದೆ ಎಂದು ಶ್ರೀಶೈಲ ಪೀಠದ 1008 ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು ಹೇಳಿದರು.

ಪಟ್ಟಣದ ಅಲ್ಲಮಪ್ರಭು ಸೇವಾ ಸಮಿತಿ ಹಾಗೂ ಪ್ರಭುಲಿಂಗೇಶ್ವರ ಅನ್ನಪ್ರಸಾದ ವಿತರಣಾ ಸಮಿತಿ ಸಂಯುಕ್ತಾಶ್ರಯದಲ್ಲಿ ಪ್ರಭುಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಯುಗಾದಿ ಉತ್ಸವ ನಿಮಿತ್ತ ಹಮ್ಮಿಕೊಂಡ ಪೂರ್ವಭಾವಿ ಸಭೆಯಲ್ಲಿ ಸಾನ್ನಿಧ್ಯನುಡಿಗಳನ್ನಾಡಿದ ಅವರು, ಪ್ರತಿ ವರ್ಷ ಭಕ್ತಾದಿಗಳಿಗೆ ನೀರಿನ ಸಮಸ್ಯೆಯಾಗುತ್ತಿರುವುದನ್ನು ನಾವು ಗಮನಿಸಿದ್ದೇವೆ. ಕಾರಣ ಈ ಬಾರಿ ಶ್ರೀಶೈಲಕ್ಕೆ ಬರುವ ಭಕ್ತಾದಿಗಳಿಗೆ ನೀರಿನ ದಾಹ ತಣಿಸಲು ಪ್ರತಿ 5 ಕೀಮಿ. ಅಂತರದಲ್ಲಿ ಕುಡಿಯಲು ನೀರಿನ ವ್ಯವಸ್ಥೆಯನ್ನು ದೇವಸ್ಥಾನ ಕಮೀಟಿಯವರು ಮಾಡುವರು ಎಂದರು.

ಕ್ಷೇತ್ರಕ್ಕೆ ಬರುವ ಬಕ್ತಾದಿಗಳು ಪ್ಲಾಸ್ಟಿಕಗಳನ್ನು ವರ್ಜ್ಯ ಮಾಡಬೇಕು, ಎಲ್ಲಿಬೇಕಾದಲ್ಲಿ ಕಸ ಚೆಲ್ಲದೆ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಿ, ವನ್ಯಜೀವಿಗಳಿಗೆ ತೊಂದರೆ ನೀಡದೆ ಅರಣ್ಯ ನಿಯಮಗಳನ್ನು



ಪಾಲಿಸಬೇಕು. ಅದು ಅಲ್ಲದೆ ಭಕ್ತಾದಿಗಳು ಯುಗಾದಿ ಸಂದರ್ಭದಲ್ಲಿ 6 ನೇ ತಾರಿಖಿನಿಂದ 20 ನೇ ತಾರಿಖಿನ ಅವಧಿಯಲ್ಲಿ ಒಂದು ಬಾರಿ ಮಾತ್ರ ಮಲ್ಲಯ್ಯನ ದರ್ಶನ ಮಾಡಲು ಅವಕಾಶವಿದೆ. ಸುಕ್ಷೇತ್ರಕ್ಕೆ ಹಲವಾರು ರಾಜ್ಯಗಳಿಂದ ಲಕ್ಷಾಂತರ ಭಕ್ತರು ಬರುವ ಕಾರಣ ಬಕ್ತರೆಲ್ಲರೂ ಸಹಕರಿಸಬೇಕು ಎಂದರು.

ಶಾಸಕ ಸಿದ್ದು ಸವದಿ ಮಾತನಾಡಿದರು. ಬೆಳಗ್ಗೆ ಭ್ರಮರಾಂಭ ಮಲ್ಲಿಕಾರ್ಜುನ ಶೋಭಾ ಯಾತ್ರೆ ಜರುಗಿತು. ಸಂಜೆ ಮಂತ್ರಯಾಗದೊಂದಿಗೆ ಭ್ರಮರಾಂಭ ಮಲ್ಲಿಕಾರ್ಜುನ ಸ್ವಾಮಿಯವರ ಕಲ್ಯಾಣ ಉತ್ಸವ ಜರುಗಿತು. ಗಂಗಾಧರ ಮರಿದೇವರು ಸಾನ್ನಿಧ್ಯ ವಹಿಸಿದ್ದರು. ಎಂ.ಶ್ರೀನಿವಾಸರಾವ ಅಧ್ಯಕ್ಷತೆ ವಹಿಸಿದ್ದರು. ಭ್ರಮರಾಂಭ ಮಲ್ಲಿಕಾರ್ಜುನ ದೇವಸ್ಥಾನದ ಪ್ರಧಾನ ಅರ್ಚಕರು ಹಾಗೂ ಸಿಬ್ಬಂದಿ ಮತ್ತು ಪ್ರವೀಣ ನಾಡಗೌಡ, ರಾಮಣ್ಣ ಹಿಡಕಲ್, ನಿಂಗಪ್ಪ ಮಾನಗಾವಿ, ಅಪ್ಪು ಮಂಗಸೂಳಿ, ಅಶೋಕ ಅಳಗೊಂಡ, ಮಹಾಂತೇಶ ಪಂಚಾಕ್ಷರಿ, ಸದಾಶಿವ ಹೊಸಮನಿ, ಸಂತೋಷ ಜಮಖಂಡಿ ಸೇರಿದಂತೆ ಸಾಕಷ್ಟು ಪ್ರಮುಖರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಶೈಕ್ಷಣಿಕ ಬದುಕಿನಲ್ಲಿ ಕ್ರಿಯಾಶೀಲರಾಗಲಿ: ಜೆಟಿಪಾ

ಬೀಳಗಿ: ವಿದ್ಯಾರ್ಥಿಗಳು ಶೈಕ್ಷಣಿಕ ಬದುಕಿನಲ್ಲಿ ಕ್ರಿಯಾಶೀಲರಾಗಿರಬೇಕು. ಶಿಸ್ತು, ಸಮಯ ಪಾಲನೆಯನ್ನು ಜೀವನದುದ್ದಕ್ಕೂ ಅಳವಡಿಸಿಕೊಳ್ಳಬೇಕು. ಉಪನ್ಯಾಸಕರು ಹೇಳಿದ ಪಾಠವನ್ನು ಅರ್ಥೈಸಿಕೊಂಡು ಧೈರ್ಯದಿಂದ ಪರೀಕ್ಷೆ ಎದುರಿಸಿ ಹೆಚ್ಚಿನ ಅಂಕಗಳನ್ನು ಪಡೆದು ಸಾಧನೆ ಮಾಡಬೇಕೆಂದು ಶಾಸಕ ಜೆ.ಟಿ.ಪಾಟೀಲ ಸಲಹೆ ನೀಡಿದರು.

ಪಟ್ಟಣದ ತಾಲೂಕು ಆಸ್ಪತ್ರೆ ಹತ್ತಿರದ ನಿರಾಣಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಪಂಚಾಯತ, ಪಂಚಾಯತ ರಾಜ್ ಇಂಜನೀಯರಿಂಗ್ ಉಪ ವಿಭಾಗ ಬೀಳಗಿ ವತಿಯಿಂದ 2024-25ನೇ ಸಾಲಿನ 5054 ರಡಿ ರಾಜ್ಯದಲ್ಲಿ ಸುರಿದ ಮಳೆ ಮತ್ತು ಪ್ರವಾಹದಿಂದಾಗಿ ಹಾನಿಗೊಂಡ ಗ್ರಾಮೀಣ ರಸ್ತೆ ಕಾರ್ಯಕ್ರಮದಡಿ ಅಂದಾಜು 40 ಲಕ್ಷ ರೂ. ವೆಚ್ಚದಲ್ಲಿ ಬೀಳಗಿ ತಾಲೂಕು ಆಸ್ಪತ್ರೆಯಿಂದ ನಿರಾಣಿ ಪದವಿ ಪೂರ್ವ ಕಾಲೇಜಿಗೆ ಹೋಗುವ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಇದಕ್ಕೂ ಪೂರ್ವ ತೆಗ್ಗಿ-ಶಿವಾಪೂರ ರಸ್ತೆ ಮರು ಡಾಂಬರೀಕರಣ ಕಾಮಗಾರಿ, ಬಿಸನಾಳ ಗ್ರಾಮದಿಂದ ಬೂದಿಹಾಳ ಎಸ್.ಜಿ. ಗ್ರಾಮದ ರಸ್ತೆ ಡಾಂಬರೀಕರಣ ಕಾಮಗಾರಿ, ಯಡಹಳ್ಳಿ ಗ್ರಾಪಂದಿಂದ ಗಲಗಲಿ ಕೂಡುವ ರಸ್ತೆ ಡಾಂಬರೀಕರಣ ಕಾಮಗಾರಿ ಹಾಗೂ ಯಡಹಳ್ಳಿಯ ಸ್ಮಶಾನಕ್ಕೆ ಹೋಗುವ ರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕ ಜೆ.ಟಿ.ಪಾಟೀಲ ಭೂಮಿ ಪೂಜೆ ನೆರವೇರಿಸಿದರು.



ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ಅಣವೀರಯ್ಯ ಪ್ಯಾಟೀಮಠ, ಪಡಿಯಪ್ಪ ಕರಿಗಾರ, ಸಿದ್ದು ಸಾರಾವರಿ, ಯಮನಪ್ಪ ರೊಳ್ಳಿ, ಬಸವರಾಜ ಹಳ್ಳದಮನಿ, ಶಿವಾನಂದ ಮಾದರ, ಹುಸನಪ್ಪ ಹಾದಿಮನಿ, ಸುನೀಲ ಚವ್ಹಾಣ, ಸಿಎನ್‌ಎನ್ ಪಿಯು ಕಾಲೇಜಿನ ಪ್ರಾಚಾರ್ಯರಾದ ಪಿ.ಬಿ.ಬಡಿಗೇರ, ಎಸ್.ಆರ್.ನಿರಾಣಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ ಪ್ರಾಚಾರ್ಯರಾದ ಆರ್. ಪಿ. ರಜಪೂತ, ಸಿವಿಲ್ ವಿಭಾಗದ ಮುಖ್ಯಸ್ಥ ಸುದೀಂದ್ರ ಏರಿ, ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥ ಆರ್.ಎ.ನದಾಫ, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಗೌಸ್ ಸಲವತ್ತಿ, ವಿದ್ಯುನ್ಮಾನ ವಿಭಾಗದ ಮುಖ್ಯ ವಾಸೀಂ ಜಹಾಗೀರದಾರ, ವಿಜ್ಞಾನ ವಿಭಾಗದ ಮುಖ್ಯಸ್ಥ ರಾಜಕುಮಾರ ತಾಳಿಕೋಟಿ ಸೇರಿದಂತೆ ಬೋಧಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ಮೂಲ ಸೌಲಭ್ಯಕ್ಕೆ ಆದ್ಯತೆ: ಕುಂಬಳಾವತಿ

ಕಮತಗಿ: ಪಟ್ಟಣ ಪಂಚಾಯತಿ 202627ನೇ ಸಾಲಿನ ವಾರ್ಷಿಕ ಬಜೆಟ್‌ಅನ್ನು ಅಧ್ಯಕ್ಷ ಬಸವರಾಜ ಕುಂಬಳಾವತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿದರು. ಈ ಬಾರಿ ಒಟ್ಟು 17,91,08,950 ಆದಾಯ ಹಾಗೂ ?17,86,58,950 ವೆಚ್ಚವನ್ನು ಅಂದಾಜಿಸಲಾಗಿದ್ದು, 4.50 ಲಕ್ಷ ಉಳಿತಾಯ ನಿರೀಕ್ಷಿಸಲಾಗಿದೆ ಎಂದು ಅವರು ತಿಳಿಸಿದರು.

ಈ ವೇಳೆ ಮಾತನಾಡಿದ ಅವರು, ಜನವರಿ 8ರಂದು ಬಜೆಟ್ ಪೂರ್ವಭಾವಿ ಸಭೆ ನಡೆಸಿ ಸಾರ್ವಜನಿಕರಿಂದ ಸಲಹೆ ಸೂಚನೆಗಳನ್ನು ಸ್ವೀಕರಿಸಲಾಗಿತ್ತು. ಸಾರ್ವಜನಿಕರ ಅಭಿಪ್ರಾಯಗಳನ್ನು ಪರಿಗಣಿಸಿ ಅಭಿವೃದ್ಧಿ ಕೇಂದ್ರಿತ ಹಾಗೂ ಸಮತೋಲನ ಬಜೆಟ್ ರೂಪಿಸಲಾಗಿದೆ ಎಂದು ಹೇಳಿದರು. ಪಟ್ಟಣದ ಮೂಲ ಸೌಕರ್ಯಗಳಿಗೆ ಈ ಬಾರಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಕುಡಿಯುವ ನೀರು ಪೂರೈಕೆ ಸುಧಾರಣೆ, ಸ್ವಚ್ಛತಾ ಕಾರ್ಯಗಳ ಬಲಪಡಿಕೆ, ಬೀದಿ ದೀಪಗಳ ನಿರ್ವಹಣೆ, ರಸ್ತೆ ಹಾಗೂ ಚರಂಡಿ ಕಾಮಗಾರಿಗಳು, ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮತ್ತು ಉದ್ಯಾನವನಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅನುದಾನ ಮೀಸಲಿಡಲಾಗಿದೆ. ಘನತ್ಯಾಜ್ಯ ವಿಲೇವಾರಿ ಘಟಕವನ್ನು ಸುಧಾರಿಸಲು ಅಗತ್ಯ ಯಂತ್ರೋಪಕರಣಗಳ



ಅಳವಡಿಕೆ ಹಾಗೂ ವೈಜ್ಞಾನಿಕ ವಿಲೇವಾರಿಗೆ ವಿಶೇಷ ಅನುದಾನ ನಿರೀಕ್ಷಿಸಲಾಗಿದೆ. ಜೊತೆಗೆ ಪಟ್ಟಣ ಪಂಚಾಯತ ಕಾರ್ಯಾಲಯದ ನೂತನ ಕಟ್ಟಡ ನಿರ್ಮಾಣಕ್ಕೂ ಯೋಜನೆ ರೂಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪಟ್ಟಣದ ಸರ್ವಾಂಗೀಣ ಅಭಿವೃದ್ಧಿ ಹಾಗೂ ಜನಸೌಕರ್ಯಗಳ ವೃದ್ಧಿಗೆ ಆದ್ಯತೆ ನೀಡುವ ಉದ್ದೇಶದಿಂದ ಈ ಬಜೆಟ್ ಸಿದ್ಧಪಡಿಸಲಾಗಿದೆ ಎಂದು ಅಧ್ಯಕ್ಷರು ಹೇಳಿದರು. ಉಪಾಧ್ಯಕ್ಷೆ ನೇತ್ರಾವತಿ ನಿಂಬಲಗುಂದಿ, ಸದಸ್ಯರಾದ ರಮೇಶ ಜಮಖಂಡಿ, ದೇವಿಪ್ರಸಾದ ನಿಂಬಲಗುಂದಿ, ಚಂದಪ್ಪ ಕುರಿ, ಪ್ರಕಾಶ ಶಿನ್ನೂರ, ಹುಚ್ಚವ್ವ ಹಗೇದಾಳ, ಮುಖ್ಯಾಧಿಕಾರಿ ಎಫ್.ಎನ್.ಹುಲ್ಲಿಕೇರಿ ಸೇರಿದಂತೆ ನಾಮನಿರ್ದೇಶಿತ ಸದಸ್ಯರು, ಆಶ್ರಯ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗಳು ಪವಿತ್ರ ಕ್ಷೇತ್ರ: ಆನಂದ ದೇವರು

ಜಮಖಂಡಿ: ಸರ್ಕಾರಿ ಶಾಲೆಗಳು ಸಮಾಜದ ಪ್ರತಿಯೊಬ್ಬ ಮಗುವಿಗೂ ಶಿಕ್ಷಣದ ಅವಕಾಶ ನೀಡುವ ಪವಿತ್ರ ಕ್ಷೇತ್ರಗಳಾಗಿವೆ. ನಿಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸಬೇಕು ಎಂದು ಓಲೆ ಮಠದ ಆನಂದ ದೇವರು ತಿಳಿಸಿದರು.

ಸಮೀಪದ ಹುನ್ನೂರು ಗ್ರಾಮದ ಪಿಎಂಶ್ರೀ ಸರ್ಕಾರಿ ಮಾದರಿ ಪ್ರಾಥಮಿಕಶಾಲಾಆವರಣದಲ್ಲಿನಡೆದ ವಾರ್ಷಿಕೋತ್ಸವ ಹಾಗೂ ಪಿಎಂಶ್ರೀ ಉತ್ಸವ ಉದ್ಘಾಟಿಸಿ ಮಾತನಾಡಿದ ಅವರು. ಮಕ್ಕಳನ್ನು ಉತ್ತಮ ಶಿಕ್ಷಣದ ಮಾರ್ಗದಲ್ಲಿ ನಡೆಸುವುದು ಪಾಲಕರ ಮಹತ್ತರ ಹೊಣೆಗಾರಿಕೆ. ಮಕ್ಕಳಿಗೆ ಉತ್ತಮ ಸಂಸ್ಕಾರವನ್ನು ಪಾಲಕರು ಕೊಡಬೇಕು ಇಂದಿನ ಮಕ್ಕಳು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ತಾಲೂಕನ್ನು ವ್ಯಸನಮುಕ್ತವನ್ನಾಗಿ ಮಾಡಬೇಕಾಗಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ ಬಸಣ್ಣವರ, ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಬಾಗೆನ್ನವರ,



ಚಂದ್ರಶೇಖರ ಸಾವಳಗಿ ಮಾತನಾಡಿದರು. ಶಿವಪುತ್ರಯ್ಯ ಸಿದ್ದಗಿರಿಮಠ, ವಿಶ್ವನಾಥ ಶಾಸ್ತ್ರಿ ಕೊಣ್ಣೂರಮಠ ನೇತೃತ್ವದಲ್ಲಿ ಮಕ್ಕಳು ತಮ್ಮ ಪಾಲಕರ ಪಾದಪೂಜೆ ಮಾಡಿ ಗೌರವ ಸಮರ್ಪಿಸಿದರು.

ನಾರಾಯಣ ಕುಲಕರ್ಣಿ, ಪಿಕೆಪಿಎಸ್ ಅಧ್ಯಕ್ಷ ಶಂಕರ ಓಣಿ, ಅಪ್ಪಣ್ಣ ಜನವಾಡ, ಪಿಡಿಒ ಮಲ್ಲಪ್ಪ ರೂಗಿ, ಹನುಮಂತ ಭೂಷಣ್ಣವರ, ಸಿ.ಜಿ ಕಡಕೋಳ ಇವರನ್ನು ಸನ್ಮಾನಿಸಲಾಯಿತು.

ಶಿಕ್ಷಣ ಇಲಾಖೆಯ ಉಪನಿರ್ದೇಶಕ ಅಜಿತ ಮಣ್ಣಿಕೇರಿ, ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಂಗಪ್ಪ ಲಾಯನ್ನವರ, ಬಿ. ಆರ್. ಪಿರಮೇಶ ಅವಟಿ, ಚನ್ನಪ್ಪ ಬಿರಾದಾರ, ಎಸ್.ಡಿ.ಎಂ.ಸಿ ಅಧ್ಯಕ್ಷ ಮಂಜುನಾಥ ತೇಲಿ, ಉಪಾಧ್ಯಕ್ಷೆ ಗೀತಾ ಕುಳ್ಳೊಳ್ಳಿ, ಸದಸ್ಯ ಗಿರಮಲ್ಲಪ್ಪ ಜನವಾಡ, ಪ್ರಕಾಶ್ ಚನಾಳ, ಬುಜಬಲಿ ಪಟ್ಟಣ, ಗಿರೀಶ ಗೌಳಿ, ಭಗವಂತ ಸಂತಿ, ಗೋವಿಂದ ಭೋಜಪ್ಪಗೋಳ, ಭಾರತಿ ಗುಡೆನ್ನವರ, ಲಕ್ಕವ್ವ ವಗ್ಗರ, ಕವಿತಾ ಮಡಿವಾಳ, ಸವಿತಾ ಕಲಾದಗಿ, ಕಮಲಾ ಗುರವ, ವನಜಾ ಚಿಂಚಖಂಡಿ, ಶ್ರೀದೇವಿ ಮಧುರಖಂಡಿ,

ಇ ಕೆವೈಸಿ ಸರ್ವರ್ ಸಮಸ್ಯೆ: ಪರದಾಟ

ಕಲಾದಗಿ: ರೈತರು ತಮ್ಮ ಭೂ ಹಿಡುವಳಿ ದಾಖಲೆಗಳನ್ನು ಇ ಕೆವೈಸಿ ಮಾಡಿಸಲು ಗುರುವಾರವೇ ಕೊನೆಯ ದಿನವಾಗಿದ್ದರಿಂದ ಕೃಷಿ ಇಲಾಖೆಯ ವಿವಿಧ ಸೌಲಭ್ಯಗಳನ್ನು ಪಡೆಯಲು ಕಳೆದ ನಾಲ್ಕೈದು ದಿನಗಳಿಂದ ಗ್ರಾಮದ ರೈತ ಸಂಪರ್ಕ ಕೇಂದ್ರದ ಕಚೇರಿಗಳಲ್ಲಿ ಗಂಟೆಗಟ್ಟಲೆ ಕಾದು ನಿಂತರು ಸರ್ವರ ಸಮಸ್ಯೆಯಿಂದಾಗಿ ರೈತರು ಪರದಾಡಿದರು. ಗ್ರಾಮದ ನವಗ್ರಾಮ ವ್ಯಾಪ್ತಿಯಲ್ಲಿರುವ ರೈತ ಸಂಪರ್ಕ ಕೇಂದ್ರದಲ್ಲಿ ಬೆಳಗ್ಗೆಯಿಂದ ಸರತಿ ಸಾಲು ನಿಂತ ರೈತರ ಇ ಕೆವೈಸಿ ಮಾಡಬೇಕಾದರೆ ಸರ್ವರ ಸಮಸ್ಯೆಯಿಂದ ಆಗೊಂದು ಈಗೊಂದು ಮುಗಿಯುತ್ತಿರುವುದರಿಂದ ಇನ್ನುಳಿದ ರೈತರು ಇಕೆವೈಸಿ ಮಾಡಿಸಲಾಗದೇ ಸುಸ್ತಾಗಿ ಹೋದರು. ಕೇಂದ್ರ ಸರ್ಕಾರದಿಂದ ಕೊಡಮಾಡುವ ಪಿಎಂ ಕಿಸಾನ ಸೇರಿದಂತೆ ಕೃಷಿ ಸಂಬಂಧಿತ ವಿವಿಧ ಸೌಲಭ್ಯಗಳನ್ನು ಪಡೆಯಲು ಸರ್ಕಾರದ ಮಾನದಂಡಗಳ ಪ್ರಕಾರ ಎಫ್‌ಐಡಿ, ಫ್ರೂಟ್ ಹಾಗೂ ಭೂ ಹಿಡುವಳಿ ಸೇರಿದಂತೆ ಇತ್ಯಾದಿ ದಾಖಲಾತಿಯನ್ನು ಸಿಂಕ್ರೋನೈಜ್ ಮಾಡಬೇಕಿರುವುದರಿಂದ ರೈತರು ಕಳೆದ ನಾಲ್ಕೈದು ದಿನಗಳಿಂದ ರೈತ ಸಂಪರ್ಕ ಕೇಂದ್ರದತ್ತ ದೌಡಾಯಿಸುತ್ತಿದ್ದರೂ ಕೇಂದ್ರದ ಅಧಿಕಾರಿಗಳು ಸರ್ವರ ಇಲ್ಲ ನಾಳೆ ಬನ್ನಿ ಎನ್ನುವುದು ಸಾಮಾನ್ಯವಾಗಿದೆ. ಸರ್ವರ ಕೈಕೊಡುತ್ತಿರುವುದರಿಂದ ರೈತರಿಗೆ ಈ ಬಗ್ಗೆ ಮೊದಲೇ ಜಾಗೃತಿ ಮೂಡಿಸಿದ್ದರೆ ಇಷ್ಟು ಗೊಂದಲವಾಗುತ್ತಿರಲಿಲ್ಲ ಹಾಗಾಗಿ ಇನ್ನಷ್ಟು ಹೆಚ್ಚು ದಿನಗಳವರೆಗೆ ದಿನಾಂಕ ವಿಸ್ತರಣೆ ಮಾಡಬೇಕೆಂದು ಇಲಾಖೆಯ ಅಧಿಕಾರಿಗಳಿಗೆ ರೈತರ ಆಗ್ರಹವಾಗಿದೆ.



ಹೆಚ್ಚುತ್ತಿರುವ ಅಪಘಾತಗಳು: ಸಂಚಾರ ನಿಯಮ ಪಾಲಿಸಿ

ಗೋಪಾಲ ಪಾಟೀಲ

ಜಮಖಂಡಿ: ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಅಪಘಾತಕ್ಕೆ ಬಲಿಯಾದವರ ಸಂಖ್ಯೆ ಹೇಳತಿರದು. ಯುವಕರು, ವಯಸ್ಕರು, ಮಹಿಳೆಯರು ಅಪಘಾತದಲ್ಲಿ ಜೀವತೆತ್ತಿದ್ದಾರೆ. ಕಳೆದೆರಡು ದಿನದ ಹಿಂದೆ ಮುಧೋಳ ರಸ್ತೆಯ ಹತ್ತಿರ ನಡೆದ ಟ್ರ್ಯಾಕ್ಟರ್ ಅಪಘಾತದಲ್ಲಿ ನಾಲ್ವರು ದುರ್ಮರಣ ಹೊಂದಿ ಹತ್ತಾರು ಜನರು ಗಾಯಗೊಂಡಿದ್ದು, ಮಾಸುವ ಮುನ್ನವೇ ಜಮಖಂಡಿ ಹೊರ ರಸ್ತೆಯಲ್ಲಿ ಬಾಲಕರ ಅಪಘಾತದಲ್ಲಿ ಬಾಲಕನ ಕಾಲು ತುಂಡರಿಸಿದ ಘಟನೆ ನಡೆದಿದೆ.

ಇಂತಹ ಅಪಘಾತಗಳಿಗೆ ರಸ್ತೆಗಳು ಕಾರಣವಾದರೂ ಏನು? ಕಾನೂನು ವ್ಯವಸ್ಥೆಯ ವೈಫಲ್ಯವೋ ಅಥವಾ ಮಕ್ಕಳ ಕೈಗೆ ವಾಹನ ನೀಡುವ ಪಾಲಕರ ವೈಫಲ್ಯವೋ ತಿಳಿಯದಾಗಿದೆ. ಈ ಅಪಘಾತಗಳಿಗೆ ನಿಖರ ಕಾರಣ ಹುಡುಕುತ್ತಾ ಹೋದರೆ ನಗರ ಪ್ರದೇಶಗಳಲ್ಲಿ ಪಾದಚಾರಿ ರಸ್ತೆಗಳ ಅತಿಕ್ರಮಣ, ಆಗ ಪಾದಚಾರಿಗಳಿಗೆ ಮುಖ್ಯ ರಸ್ತೆಯೇ ಉಪಯೋಗಕ್ಕೆ ಬರುತ್ತದೆ. ನಗರ ಪ್ರದೇಶದಗಳಲ್ಲಿ ಅಪಘಾತಗಳಿಗೆ ಕಡಿವಾಣ ಹಾಕಬೇಕಾದರೆ ಅದಕ್ಕೆ ನಗರಸಭೆ ಮತ್ತು ಪೊಲೀಸ್ ಇಲಾಖೆಯು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಜನರಿಗೆ ಅರಿವು ನೀಡಿ ಪಾದಚಾರಿ ರಸ್ತೆಗಳನ್ನು ಅತಿಕ್ರಮಣದಿಂದ ತೆರವುಗೊಳಿಸಿ ಪಾದಚಾರಿ ಸಂಚಾರಕ್ಕೆ ಮುಕ್ತಗೊಳಿಸುವುದು ಸೂಕ್ತ. ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ

> ಅಪಘಾತಗಳಿಗೆ ಕಡಿವಾಣ ಹಾಕಲು ನಮ್ಮ ಸಿಬ್ಬಂದಿ ಶ್ರಮಿಸುತ್ತಿದೆ. ಆದರೆ ಸಾರ್ವಜನಿಕರೂ ಸಹ ನಮ್ಮೊಂದಿಗೆ ಸಹಕರಿಸಬೇಕು. ಮಕ್ಕಳ ಕೈಗೆ ವಾಹನ ನೀಡಬಾರದು. ಜೊತೆಗೆ ಹೆಲ್ಮೆಟ್ ಧರಿಸುವದು, ಮೊಬೈಲ್ ರೈಡಿಂಗ್, ವೀಲ್‌ಸ್ಟಂಟ್ ಮಾಡಬಾರದು. ಅದಕ್ಕಾಗಿ ಸಾಕಷ್ಟು ಬಾರಿ ತಿಳಿಸಿದ್ದೇವೆ.
>
> ■ ಮಲ್ಲಪ್ಪ ಮಡ್ಡಿ, ವೃತ್ತ ನಿರೀಕ್ಷಕ

ಆರಕ್ಷಕ ಇಲಾಖೆಯ ಮಾಹಿತಿ ಪ್ರಕಾರ 2022ರಲ್ಲಿ 118 ಅಪಘಾತಗಳು ಸಂಭವಿಸಿವೆ. ಇದರಲಲಿ 59 ಮರಣ, 2023ರಲ್ಲಿ 122 ಅಪಘಾತ 48 ಮರಣ, 2024ರಲ್ಲಿ 109 ಅಪಘಾತ 58 ಮರಣ, 2025ರಲ್ಲಿ 117 ಅಪಘಾತ 49 ಮರಣ ಹೀಗೆ ಒಟ್ಟು ನಾಲ್ಕು ವರ್ಷದಲ್ಲಿ 466 ಅಪಘಾತದಲ್ಲಿ 203 ಸಾವು ಸಂಭವಿಸಿವೆ ಎಂದು ತಿಳಿದು ಬಂದಿದೆ.

ರಸ್ತೆಯಲ್ಲಂತೂ ಅಪಘಾತಗಳು ನಡೆಯಲು ಅವೈಜ್ಞಾನಿಕ ಗತಿರೋಧಕಗಳು, ಅತಿಯಾದ ವೇಗ ಚಾಲನೆ ಪ್ರಾಪ್ತರ ವಾಹನ ಚಾಲನೆ ಅದರ ಜೊತೆಗೆ ಜಾಲಿವೀಲ ರೈಡಿಂಗ್, ಮೊಬೈಲ್ ರೈಡಿಂಗ್ ಇದಕ್ಕೆಲ್ಲ ಕಾರಣವೆನ್ನಬಹುದು. ಇದಕ್ಕೆ ಕಡಿವಾಣ ಹಾಕಬೇಕಾದರೆ ಪೊಲೀಸ್ ಮತ್ತು ಸಾರಿಗೆ ಇಲಾಖೆಯವರು ಮಾತ್ರ ಮನಸ್ಸು ಮಾಡಬೇಕು.

ಕಿರುಸುದ್ದಿ

ಸಿದ್ದಪ್ಪ ಬಿಂಜಗೇರಿಗೆ ಪ್ರಶಸ್ತಿ



◆**ವಿಜಯಪುರ:** ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಹಮ್ಮಿಕೊಂಡ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಅಭಿನಂದನಾ ಸಮಾರಂಭದಲ್ಲಿ ಜಿಲ್ಲೆಯ ಹೆಸ್ಕಾಂ ಅಧೀಕ್ಷಕ ಅಭಿಯಂತರ ಸಿದ್ದಪ್ಪ ಬಿಂಜಗೇರಿ ಅವರಿಗೆ ಗೃಹಜ್ಯೋತಿ ಅಭಿನಂದನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕರ್ನಾಟಕ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಸಕ್ರೀಯವಾಗಿ ಭಾಗವಹಿಸಿ ಸಮರ್ಪಕವಾಗಿ ಕಾರ್ಯನಿರ್ವಹಿಸಿದ್ದಕ್ಕಾಗಿ ಸಿದ್ದಪ್ಪ ಬಿಂಜಗೇರಿ ಅವರಿಗೆ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಅಭಿನಂದನಾ ಪತ್ರ ನೀಡಿ ಗೌರವಿಸಿದರು. ಶಾಸಕ ಸಿ.ಎಸ್.ನಾಡಗೌಡ, ಜಿಲ್ಲಾಧಿಕಾರಿ ಆನಂದ ಕೆ.ಇದ್ದರು.

ಪಾದ ಪೂಜೆ ಇಂದು

◆**ಆಲಮೇಲ:** ಪಟ್ಟಣದ ವಿಶ್ವೇಶ್ವರ ಬಾಲಭಾರತಿ ಅನುದಾನಿತ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಬೆಳಗ್ಗೆ 10.30ಕ್ಕೆ ಮಾತಾ ಪಿತೃ ಪಾದ ಪೂಜೆ ಹಾಗೂ ಅಮ್ಮನ ಕೈ ತುತ್ತು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕುಂಟೋಜಿ ಹಿರೇಮಠ ಯಂಕಂಚಿಯ ಅಭಿನವ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸುವರು. ಸಿಂದಗಿ ಕ್ಷೇತ್ರ ಶಿಕ್ಷಣಾಧಿಕಾರಿ ಮಹಾಂತೇಶ ಯಡ್ರಾಮಿ ಉದ್ಘಾಟಿಸುವರು. ಸಂಸ್ಥೆಯ ಅಧ್ಯಕ್ಷ ಎಸ್.ಐ.ಜೋಗೂರ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ವಿಜಯಪುರದ ಹಿರಿಯ ಸಾಹಿತಿ ಶಂಕರ ಬೈಚಬಾಳ, ಇಂಡಿ ಜಿಆರ್‌ಜಿ ಮಹಾವಿದ್ಯಾಲಯದ ಪ್ರಾಚಾರ್ಯ ಶ್ರೀಶೈಲ ಸಣ್ಣಕ್ಕಿ, ಪದ್ಮರಾಜ ಮಹಿಳಾ ಕಾಲೇಜಿನ ಉಪನ್ಯಾಸಕಿ ಹೇಮಾ ಹಿರೇಮಠ ಉಪಸ್ಥಿತರಿರುವರು. ವಿಶೇಷ ಸನ್ಮಾನಿತರಾಗಿ ಆಲಮೇಲ ತಾಲೂಕಿನ ಕಾನಿಪ ಅಧ್ಯಕ್ಷ ಅವಧೂತ ಬಂಡಗರ, ಅತಿಥಿಗಳಾಗಿ ವಿಶ್ವೇಶ್ವರ ದೇವಸ್ಥಾನ ಕಮಿಟಿಯ ಸದಸ್ಯರು ಕಾಮಣ್ಣ ಕಲ್ಲೂರ, ಶಿಕ್ಷಣ ಸಂಯೋಜಕ ಎಂ.ಪಿ.ಭಿಸ್ಸೆ, ಬಿಆರ್‌ಪಿ ಎಸ್.ಎಸ್.ಬಿರಾದಾರ, ಸಿಆರ್‌ಪಿ ರಾಜೇಶ್ವರಿ ಬಿರಾದಾರ ಹಾಗೂ ಶಾಲೆಯ ಆಡಳಿತ ಮಂಡಳಿಯ ಸದಸ್ಯರು ಮತ್ತು ಪಾಲಕರು ಉಪಸ್ಥಿತರಿರುವವರೆಂದು ಮುಖ್ಯಗುರುಮಾತೆ ಲಕ್ಷ್ಮೀಪುತ್ರ ಕಿರನಳ್ಳಿ ತಿಳಿಸಿದರು.

ಇಂದು ಸ್ನೇಹ ಸಮ್ಮೇಳನ

◆**ಬಸವನಬಾಗೇವಾಡಿ:** ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ಬಸವೇಶ್ವರ ದೇವಾಲಯ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ನೇತೃತ್ವದಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ 2025-26ನೇ ಸಾಲಿನ ಪ್ರತಿಭಾ ಪುರಸ್ಕಾರ ಬಸವೇಶ್ವರ ದೇವಾಲಯ ಅಂತರಾಷ್ಟ್ರೀಯ ಶಾಲೆಯ ಆವರಣದಲ್ಲಿ ಫೆ.27ರಂದು ಸಂಜೆ 5 ಗಂಟೆಗೆ ನಡೆಯಲಿದೆ. ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ಗುರುನಾಥ ದಡ್ಡೆ ಅಧ್ಯಕ್ಷತೆವಹಿಸುವರು, ಎಂದು ಶಾಲೆಯ ಮುಖ್ಯಗುರು ವಾಯ್.ಎನ್.ಮಿಣಜಗಿ, ಎಸ್‌ಡಿಎಂಸಿ ಅಧ್ಯಕ್ಷ ಅನೀಲ ಅಗರವಾಲ ಉದ್ಘಾಟಿಸುವರು, ಸಹಕಾರಿ ಮಹಾಮಂಡಳ ನಿರ್ದೇಶಕ ಆಯ್.ಸಿ.ಪಟ್ಟಣಶೆಟ್ಟಿ, ಎಸ್‌ಡಿಎಂಸಿ ಉಪಾಧ್ಯಕ್ಷ ಎಸ್.ಎಸ್.ಝಳಕಿ, ಶಿಕ್ಷಣ ಸಂಯೋಜಕಿ ಎ.ಎಸ್.ಗುಬ್ಬಾ, ಬಿಆರ್‌ಸಿ ಎಂ.ವಿ.ಗಬ್ಬೂರ, ಸಮೂಹ ಸಂಪನ್ಮೂಲ ವ್ಯಕ್ತಿ ಬಸವರಾಜ ಚನಗೊಂಡ ಉಪಸ್ಥಿತರಿರುವರು, ಇದೇ ಸಂದರ್ಭದಲ್ಲಿ 2024-25ನೇ ಸಾಲಿನ ಪ್ರತಿಭಾನ್ವಿತ ವಿದ್ಯಾರ್ಥಿನಿ ನಿಖಿತಾ ಬಿರಾದಾರ ಅವಳನ್ನು ಸನ್ಮಾನಿಸಲಾಗುವುದು ಎಂದು ಶಾಲೆಯ ಮುಖ್ಯಗುರು ವಾಯ್.ಎನ್.ಮಿಣಜಗಿ ತಿಳಿಸಿದ್ದಾರೆ.

ಕನ್ನಡ ಭಾಷೆಗೆ ದ್ರೋಹ

◆**ಬಸವನಬಾಗೇವಾಡಿ:** ರಾಜ್ಯ ಸರ್ಕಾರದ ಅಧಿಕೃತ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಉರ್ದು ಭಾಷೆಯಲ್ಲಿ ಮುದ್ರಣ ಮಾಡಿರುವುದು ಕನ್ನಡ ಭಾಷೆಗೆ ಮಾಡಿದ ದ್ರೋಹವಾಗಿದೆ ಎಂದು ಕಸಾಪ ನಿಕಟಪೂರ್ವ ಅಧ್ಯಕ್ಷ, ಹಂಗರಗಿ ಚನ್ನಬಸವೇಶ್ವರ ಪ್ರತಿಷ್ಠಾನ ಅಧ್ಯಕ ವಿವೇಕಾನಂದ ಕಲ್ಯಾಣಶೆಟ್ಟಿ ಕಳವಳ ವ್ಯಕ್ತಪಡಿಸಿದರು. ರಾಜ್ಯದ ಅಧಿಕೃತ ಭಾಷೆಯಾದ ಕನ್ನಡದಲ್ಲಿ ಪ್ರತಿಯೊಂದು ಆಮಂತ್ರಣ ಪತ್ರಿಕೆ ಮುದ್ರಣ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಸಚಿವರು ದಿನಪತ್ರಿಕೆಯ ಜಾಹೀರಾತುಗಳನ್ನು ಉಲ್ಲೇಖಿಸಿ ಸಮರ್ಥನೆ ಮಾಡಿಕೊಳ್ಳುತ್ತಾರೆ. ಆಮಂತ್ರಣ ಪತ್ರಿಕೆಗೂ ಜಾಹೀರಾತಿಗೂ ವ್ಯತ್ಯಾಸವಿದೆ. ಹಿಂದಿ ಭಾಷೆ ಬಗ್ಗೆ ವಿರೋಧ ವ್ಯಕ್ತಪಡಿಸುವ ಕನ್ನಡಪರ ಸಂಘಟನೆಗಳು ಈ ವಿಷಯದಲ್ಲಿ ಮೌನವಾಗಿರುವುದು ಏಕೆ? ಎನ್ನುವುದು ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ. ರಾಜ್ಯ ಸರ್ಕಾರವು ರಾಜ್ಯದ ಜನತೆ ಕ್ಷಮೆಯನ್ನು ಕೇಳಬೇಕು. ಕನ್ನಡದ ಮುಖ್ಯಮಂತ್ರಿ ಕರೆಸಿಕೊಳ್ಳುವ ಸಿ.ಎಂ ಸಿದ್ದರಾಮಯ್ಯನವರು ಈ ಕುರಿತು ಸ್ಪಷ್ಟೀಕರಣ ನೀಡಬೇಕು. ಎಲ್ಲ ಸಾಹಿತಿಗಳು ಹಾಗೂ ಕನ್ನಡ ಪರ ಸಂಘಟನೆಗಳು ಒಂದಾಗಿ ಖಂಡಿಸಬೇಕೆಂದು ಒತ್ತಾಯಿಸಿದರು.





ಝಳಕಿ: ಸಮೀಪದ ಲೋಣಿ ಬಿಕೆ ಗ್ರಾಮದಲ್ಲಿ ಸಮರ್ಪಣ ಅಭಿವೃದ್ಧಿ ಸೇವಾ ಸಂಸೆಯಿಂದ ಯುವಕರಿಗೆ ಕ್ರೀಡೆ ವಾಲಿಬಾಲ್ ಪಂದ್ಯ ಆಡಿಸುವ ಮೂಲಕ ಎಚ್‌ಐವಿ ಜಾಗೃತಿ ಮೂಡಸಲಾಯಿತು. ಮೇಲ್ವಿಚಾರಕ ಶ್ರೀಶೈಲ ಕೋಳಿ ಎಚ್‌ಐವಿ ಸೋಂಕಿನ ಜಾಗೃತಿ ಮೂಡಿಸಿ ಗೆದ್ದ ತಂಡಕ್ಕೆ ಬಹುಮಾನ ವಿತರಿಸಲಾಯಿತು. ಗ್ರಾಮದ ಯುವಕರು ಭಾಗವಹಿಸಿದ್ದರು.

ವಿಬಿ ಜಿ ರಾಮ್ ಜಿ ಯೋಜನೆ ಖಂಡಿಸಿ ಪ್ರತಿಭಟನೆ

◆**ವಿಜಯಪುರ:** ನರೇಗಾ ಯೋಜನೆ ಮಾರ್ಪಾಡುಗೊಳಿಸಿ ಕಾರ್ಮಿಕರ ಹಾಗೂ ಗ್ರಾಮೀಣ ಬಡಜನತೆಯ ಹಕ್ಕುಗಳನ್ನು ಕೇಂದ್ರ ಬಿಜೆಪಿ ಸರ್ಕಾರ ದಮನ ಮಾಡುತ್ತಿದೆ ಎಂದು ಆರೋಪಿಸಿದ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ಕೆಪಿಸಿಸಿ ಸದಸ್ಯ ಅಬ್ದುಲ್ ಹಮೀದ ಮುಶ್ರೀಫ್ ಮಾತನಾಡಿ, ಬಿಜೆಪಿ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತ ಈ ಹಿಂದೆ ಕಾಂಗ್ರೆಸ್ ಪಕ್ಷದ ಜನಪ್ರಿಯ ಜನಪರ, ಬಡವರಪರ, ಶೋಷಿತರಪರ, ರೈತಪರ ಯೋಜನೆಗಳು ಕ್ರಮಬದ್ಧವಾಗಿ ಮುಗಿಸುವುದರಲ್ಲಿ ತಲ್ಲೀನವಾಗಿದ್ದು, ಇದು ಜನವಿರೋಧಿ ಸರ್ಕಾರವಾಗಿದೆ. ಈ ಸರ್ಕಾರ ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾಪುರುಷರ ಹೆಸರುಗಳು ಶಾಶ್ವತವಾಗಿ ತೆಗೆಯುವ ಹುನ್ನಾರ ನಡೆಸಿದೆ, ಮಹಾತ್ಮ ಗಾಂಧಿಯವರ ಹೆಸರು ತೆಗೆದು ವಿಬಿಜಿ ರಾಮಜಿ ಎಂದು ಹೆಸರಿಟ್ಟು ಮಹಾತ್ಮ ಗಾಂಧೀಜಿಯವರಿಗೆ ಮಾಡಿದ ಅಪಮಾನವಿದು, ಕೇಂದ್ರ ಸರ್ಕಾರದ ಈ ಕೃತ್ಯ ಜನ ಎಂದಿಗೂ ಮರೆಯಲಾರರು ಎಂದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮೊಹ್ಮದರಫೀಕ್ ಟಪಾಲ, ಕೆಪಿಸಿಸಿ ವಕ್ತಾರ ಎಸ್.ಎಂ.ಪಾಟೀಲ ಗಣಿಹಾರ, ನಗರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಮೀರಹ್ಮದ ಬಕ್ಷಿ, ಜಲನಗರ ಬ್ಲಾಕ್ ಅಧ್ಯಕ್ಷೆ ಆರತಿ ಶಹಾಪುರ, ಜಿಲ್ಲಾ ಉಪಾಧ್ಯಕ್ಷ ವೈಜನಾಥ ಕರ್ಪೂರಮಠ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರಮಿಜಾ ನದಾಫ್, ಶಬ್ಬೀರ ಜಾಗೀರದಾರ, ಚಾಂದಸಾಬ ಗಡಗಲಾವ, ಆಜಾದ್ ಪಟೇಲ, ಕನ್ನಾನ ಮುಶ್ರೀಫ್, ವಿಜಯಕುಮಾರ ಘಾಟಗೆ ಇದ್ದರು.



ವಿಜಯಪುರ: ನರೇಗಾ ಯೋಜನೆ ಮಾರ್ಪಾಡುಗೊಳಿಸಿ ಕಾರ್ಮಿಕರ ಹಾಗೂ ಗ್ರಾಮೀಣ ಬಡಜನತೆಯ ಹಕ್ಕುಗಳನ್ನು ಕೇಂದ್ರ ಬಿಜೆಪಿ ಸರ್ಕಾರ ದಮನ ಮಾಡುತ್ತಿದೆ ಎಂದು ಆರೋಪಿಸಿದ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ಹೊನ್ನಮಲ್ಲ ಸಾರವಾಡ, ಅಪ್ಪು ಪೂಜಾರಿ, ಅಲ್ಲಾಬಕ್ಷ ಬಡೆಪೀರ, ವಸಂತ ಹೊನಮೊಡೆ, ಎಂ.ಎಂ. ಮುಲ್ಲಾ, ಫಯಾಜ ಕಲಾದಗಿ, ಪೀರಾ ಜಮಖಂಡಿ, ಶರಣಪ್ಪ ಯಕ್ಕುಂಡಿ, ಪರಶುರಾಮ ಹೊಸಮನಿ, ವಿರೇಶ ಕಲಾಲ, ಲಾಲಸಾಬ ಕೊರಬು, ಆನಂದ ಜಾಧವ ಇದ್ದರು.

ಜಿಲ್ಲಾಮಟ್ಟದ ಬ್ಯಾಂಕರ್ಸ್ ಕಾರ್ಯಾಗಾರ | ಜಿಪಂ ಸಿಇಒ ರಿಷಿ ಆನಂದ ಸಲಹೆ

ಮಹಿಳೆಯರು ಸಬಲೀಕರಣಗೊಳ್ಳಲಿ

◆**ವಿಜಯಪುರ:** ಗ್ರಾಮೀಣ ಮಹಿಳೆಯರ ಸಬಲೀಕರಣ ಉದ್ದೇಶದಿಂದ ಸರ್ಕಾರ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ ಜಾರಿಗೆ ತಂದಿದ್ದು, ಇಂತಹ ಯೋಜನೆಗಳ ಸದುಪಯೋಗ ಪಡೆದುಕೊಂಡು, ಗ್ರಾಮೀಣ ಮಹಿಳೆಯರು ಆರ್ಥಿಕ ಸಬಲೀಕರಣಗೊಳ್ಳಬೇಕು ಎಂದು ಜಿಪಂ ಸಿಇಒ ರಿಷಿ ಆನಂದ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಹಮ್ಮಿಕೊಂಡ ಜಿಲ್ಲಾಮಟ್ಟದ ಬ್ಯಾಂಕರ್ಸ್ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ದೇಶದಲ್ಲಿ ಶೇ.70 ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದು, ಗ್ರಾಮ ಅಭಿವೃದ್ಧಿ ಅವಶ್ಯಕತೆಯಿದೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆಯಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ಒಕ್ಕೂಟ ರಚಿಸಿ, ಅವುಗಳನ್ನು ಸಾಂಸ್ಥಿಕ ಮತ್ತು ಆರ್ಥಿಕ ಬಲವರ್ಧನೆ ಮಾಡುವುದರ ಜತೆಗೆ ಸಮುದಾಯ ಬಂಡವಾಳ ನಿಧಿ, ಸುತ್ತು ನಿಧಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ತನ್ಮೂಲಕ ಗ್ರಾಮೀಣ ಪ್ರದೇಶದ ಮಹಿಳೆಯರು ಆರ್ಥಿಕವಾಗಿ ಸಬಲೀಕರಣ ಹೊಂದಲು ಸಾಧ್ಯವಾಗುತ್ತದೆ ಎಂದರು.

ಸ್ವ-ಸಹಾಯ ಸಂಘಗಳ ಬಲವರ್ಧನೆಗೆ ಬ್ಯಾಂಕ್ ವತಿಯಿಂದ ಸ್ವ-ಸಹಾಯ ಸಂಘಗಳ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯುವುದು ಹಾಗೂ ಅವರಿಗೆ ಸಾಲ ಸೌಲಭ್ಯ ಒದಗಿಸುವುದರ ಜೊತೆಗೆ ಸ್ವ-ಸಹಾಯ ಸಂಘಗಳ ಮಹಿಳೆಯರ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಬ್ಯಾಂಕ್ ವ್ಯವಸ್ಥಾಪಕರಿಗೆ ಸೂಚಿಸಿದರು.



> ಮುಂಬರುವ ಮಾರ್ಚ್ ತಿಂಗಳೊಳಗಾಗಿ ಹೆಚ್ಚಿನ ಪ್ರಮಾಣದಲ್ಲಿ ಗ್ರಾಮೀಣ ಭಾಗದ ಸ್ವ- ಸಹಾಯ ಗುಂಪಿನ ಮಹಿಳೆಯರಿಗೆ ಸಾಲ ವಿತರಿಸಿ, ಈ ಮೂಲಕ ಮಹಿಳೆಯರು ಆರ್ಥಿಕವಾಗಿ ಸದೃಢರಾಗಲು ಅನುಕೂಲವಾಗುತ್ತದೆ.
> ■ ರಿಷಿ ಆನಂದ ಜಿಪಂ ಸಿಇಒ, ವಿಜಯಪುರ

ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ಬ್ಯಾಂಕ್ ಖಾತೆ ಮಾಡಿಸುವುದು. ಬ್ಯಾಂಕ್ ವ್ಯವಹಾರದ ನಿಯಮಗಳನ್ನು ಪರಿಚಯಿಸುವುದು ಹಾಗೂ ಸ್ವ- ಸಹಾಯ ಸಂಘಗಳ ಮುಖೇನ ಸಾಲ ಪಡೆದುಕೊಂಡು ಮರುಪಾವತಿಸುವ ಮಾರ್ಗಸೂಚಿಗಳನ್ನು ಹೇಳಿಕೊಡಬೇಕು ಎಂದರು.

ಜಿಪಂ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಮಾತನಾಡಿ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 6,198 ಸಂಘಗಳಿದ್ದು, ಅವುಗಳಿಗೆ ವಿವಿಧ ಇಲಾಖೆಗಳಡಿ ಸಿಗುವ ಸೌಲತ್ತುಗಳನ್ನು ಒಗ್ಗೂಡಿಸುವ ಮೂಲಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದ್ದು, ಗ್ರಾಮ ಪಂಚಾಯತಿ ಮಟ್ಟದಲ್ಲಿ ಒಕ್ಕೂಟಗಳನ್ನು ರಚನೆ ಮಾಡಿ ಸಾಂಸ್ಥಿಕ ಬಲವರ್ಧನೆ ಮಾಡುವ ಕಾರ್ಯವನ್ನು ಮಾಡಲಾಗುತ್ತಿದೆ. ಹೊಸ ಸಂಘಗಳ ಬ್ಯಾಂಕ್ ಖಾತೆಗಳನ್ನು ತೆರೆಯುವುದರ ಕುರಿತು ಹಾಗೂ ಬ್ಯಾಂಕ್ ಸಾಲ ವಿತರಿಸುವ ಕುರಿತು ಜಿಲ್ಲೆಯ ಪ್ರಗತಿಯನ್ನು ಆದ್ಯತೆಯ ಮೇರೆಗೆ ಎಲ್ಲ ಸಂಘಗಳಿಗೆ ಬ್ಯಾಂಕ್ ಸಾಲ ವಿತರಿಸಲು ಸೂಚಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ನವಲ್ ಕಿಶೋರ್ ಸಿಂಗ್, ಬ್ಯಾಂಕ್ ವ್ಯವಸ್ಥಾಪಕರು, ಶಾಖೆಯ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು, ಜಿಲ್ಲಾ ವ್ಯವಸ್ಥಾಪಕರು, ತಾಲೂಕು ಮಟ್ಟದ ಸಿಬ್ಬಂದಿ,, ಲೀಡ್ ಬ್ಯಾಂಕಿನ ಸಿಬ್ಬಂದಿ ಇದ್ದರು.

ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸಿ

◆**ಚಡಚಣ:** ಝಳಕಿ ಗ್ರಾಮದ ಸುತ್ತಮುತ್ತಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಪದೇಪದೇ ವಿದ್ಯುತ್ ತಂತಿಗಳು ತುಂಡಾಗಿ ರಸ್ತೆ ಮೇಲೆ ಬೀಳುತ್ತಿರುವ ಹಿನ್ನೆಲೆ, ಅವುಗಳ ಬದಲಾಗಿ ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಚಡಚಣ ಹೆಸ್ಕಾಂ ಎಇಇ ಅವರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಕ್ಷಣಾ ವೇದಿಕೆಯ ವಲಯ ಅಧ್ಯಕ್ಷ ರವಿಕುಮಾರ ಹೂಗಾರ್ ಮಾತನಾಡಿ, ರಾಷ್ಟ್ರೀಯ ಹೆದ್ದಾರಿಯಲ್ಲಿ 24 ಗಂಟೆಯೂ ವಾಹನ ಸಂಚಾರ ಇರುವುದರಿಂದ ತುಂಡಾಗುವ ಕಳಪೆ ವಿದ್ಯುತ್ ತಂತಿಗಳು ಸಾರ್ವಜನಿಕರ ಜೀವಕ್ಕೆ ಭಾರೀ ಅಪಾಯ ಉಂಟುಮಾಡುತ್ತಿವೆ. ಆದ್ದರಿಂದ ತುರ್ತಾಗಿ ಹಳೆಯ ತಂತಿಗಳನ್ನು ಬದಲಿಸಿ, ಪರ್ಯಾಯವಾಗಿ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸುವ ಮೂಲಕ ಮುಂದಿನ ವಿದ್ಯುತ್ ಅವಘಡಗಳನ್ನು ತಪ್ಪಿಸಬೇಕೆಂದು ಒತ್ತಾಯಿಸಿದರು.

ಝಳಕಿ ಗ್ರಾಮವು ಶಾಲೆ-ಕಾಲೇಜುಗಳು ಹಾಗೂ ಸಾರಿಗೆ ವ್ಯವಸ್ಥೆಯ ಪ್ರಮುಖ ಕೇಂದ್ರವಾಗಿರುವುದರಿಂದ ಸುತ್ತಲಿನ ಗ್ರಾಮಗಳಲ್ಲಿ ಲೈನ್ ಫಾಲ್ಟ್ ಉಂಟಾದರೆ ಝಳಕಿಯಲ್ಲೂ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದೆ. ಹೀಗಾಗಿ ಝಳಕಿ ಗ್ರಾಮಕ್ಕೆ ಪ್ರತ್ಯೇಕ ಫೀಡರ್ ವ್ಯವಸ್ಥೆ ಕಲ್ಪಿಸಬೇಕೆಂದು ಮನವಿ ಮಾಡಿದರು.



ರೈತರ ಟ್ರಾನ್ಸ್‌ಫಾರ್ಮರ್‌ಗಳು (ಟಿ.ಸಿ) ಮೇಲಿಂದ ಮೇಲೆ ಸ್ಫೋಟಗೊಳ್ಳುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿ, ತಕ್ಷಣ ಕ್ರಮ ಕೈಗೊಂಡು ಅನಾಹುತಗಳನ್ನು ತಪ್ಪಿಸಬೇಕು. ಈ ಎಲ್ಲಾ ಸಮಸ್ಯೆಗಳನ್ನು ಒಂದು ವಾರದೊಳಗೆ ಬಗೆಹರಿಸದಿದ್ದರೆ ರಾತ್ರಿ ವೇಳೆ ಹೆದ್ದಾರಿ ತಡೆದು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ರಾಘವೇಂದ್ರ ಕೆಂಗಾರ, ಪಿಂಟು ಹಾಡಸಂಗೆ, ಅಶೋಕ ಕಾಪ್ಸೆ, ಅಮೋಘ ಢಾಳೆ, ಉಮೇಶ ಕಾರಕಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಈ ಕುರಿತು ಪ್ರತಿಕ್ರಿಯಿಸಿದ ಎಇಇ ವಿಜಯಕುಮಾರ ಹವಾಲ್ದಾರ ಅವರು, ಹೆದ್ದಾರಿ ಕ್ರಾಸಿಂಗ್ ಪ್ರದೇಶಗಳಲ್ಲಿ ವಿದ್ಯುತ್ ತಂತಿಗಳು ರಸ್ತೆ ಮೇಲೆ ಬೀಳದಂತೆ ತಂತಿ ಗಾರ್ಡ್‌ಗಳನ್ನು ತಕ್ಷಣ ಅಳವಡಿಸಲು ಝಳಕಿ ಶಾಖಾಧಿಕಾರಿಗಳಿಗೆ ಸೂಚಿಸಲಾಗಿದೆ. ಮುಂದಿನ ದಿನಗಳಲ್ಲಿ ರಸ್ತೆ ಕ್ರಾಸಿಂಗ್ ಭಾಗಗಳಲ್ಲಿ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸುವ ಕುರಿತು ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದರು.

ಸ್ವಸ್ಥ ಭಾರತ ಶ್ರೇಷ್ಠ ಭಾರತ ವಾಕ್‌ಥಾನ್ ಇಂದು

◆**ವಿಜಯಪುರ:** ರಾಜೀವ್ ಗಾಂಧಿ ಆರೋಗ್ಯ ವಿವಿ ಸಂಲಗ್ನಗೊಂಡಿರುವ ನರ್ಸಿಂಗ್, ವೈದ್ಯಕೀಯ ಸೇರಿದಂತೆ ವಿವಿಧ ಕಾಲೇಜುಗಳ ಆಶ್ರಯದಲ್ಲಿ ಸ್ವಸ್ಥ ಭಾರತ ಶ್ರೇಷ್ಠ ಭಾರತ ಎಂಬ ಧ್ಯೇಯದ ಅಡಿಯಲ್ಲಿ ಫೆ.27ರಂದು ವಾಕ್‌ಥಾನ್ ಆಯೋಜಿಸಲಾಗಿದ್ದು, 5 ಸಾವಿರ ವಿದ್ಯಾರ್ಥಿಗಳು ಈ ನಡಿಗೆಯಲ್ಲಿ ಭಾಗವಹಿಸುವ ಜೊತೆಗೆ ಅಂಗಾಂಗ ದಾನದ ವಾಗ್ದಾನ ಮಾಡಲಿದ್ದಾರೆ ಎಂದು ರಾಜೀವ್ ಗಾಂಧಿ ವೈದ್ಯಕೀಯ ವಿವಿ ಸಿನೆಟ್ ಸದಸ್ಯ ಡಾ.ಸಂತೋಷ ಇಂಡಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಅಡೊಯಲ್ಲಿ ಡಾ.ಭಗವಾನ ಬಿಸಿ ಸಾಮಾಜಿಕ ಕಳಕಳಿಯಿಂದ ಮೊದಲ ಬಾರಿಗೆ ಜಾಗೃತಿ ಮೂಡೊಸುವ ಕೆಲಸ ಮಾಡಿದ್ದಾರೆ. ಅಂಗಾಂಗ ದಾನ ಜಾಗೃತಿ ಮೂಡಿಸಲಾಗುತ್ತಿದೆ. ಓರ್ವ ವ್ಯಕ್ತಿ ಮರಣದ ನಂತರವೂ 8 ಜನರಿಗೆ ಜೀವದಾನ ಮಾಡಬಹುದಾಗಿದೆ. ನಶಾಮುಕ್ತ ಭಾರತ, ನಶಾ ಮುಕ್ತ ಕರ್ನಾಟಕ, ನಶಾ ಮುಕ್ತ ಕ್ಯಾಂಪಸ್ ವಾಕಥಾನ್ ಮಾಡಲಾಗಿದೆ ಎಂದರು.

ಜಾಥಾಗೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಚಾಲನೆ ನೀಡಲಿದ್ದು, ಸಚಿವ ಶಿವಾನಂದ ಪಾಟೀಲ, ಸಂಸದ ರಮೇಶ ಜಿಗಜಣಗಿ ಸೇರಿದಂತೆ ಎಲ್ಲ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಸಿದ್ದೇಶ್ವರ ದೇವಾಲಯದಿಂದ ಆರಂಭಗೊಳ್ಳುವ ವಾಕ್‌ಥಾನ್ ಗಾಂಧಿವೃತ್ತ, ಬಸವೇಶ್ವರ ಸರ್ಕಲ್, ಅಂಬೇಡ್ಕರ್ ಕ್ರೀಡಾಂಗಣಕ್ಕೆ ತಲುಪಲಿದೆ.

ಕಾರ್ಯಕ್ರಮಕ್ಕೆ ಕುಲಪತಿ ಡಾ.ಭಗವಾನ್ ಆಗಮಿಸಲಿದ್ದು, ವಿಶ್ವವಿದ್ಯಾಲಯದ ಎಲ್ಲಾ ಸಿಂಡಿಕೇಟ್ ಸದಸ್ಯರು, ಸೆನೆಟ್ ಸದಸ್ಯರು, ಡೀನರು, ಜಿಲ್ಲಾ ಆಡಳಿತದ ಹಿರಿಯ ಅಧಿಕಾರಿಗಳು, ಅಧ್ಯಾಪಕರು, ಆರೋಗ್ಯ ವೃತ್ತಿಪರರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಲಿದ್ದಾರೆ ಎಂದರು.

ಆರ್‌ಕೆಎಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶಂಭುಲಿಂಗಯ್ಯ ಕರ್ಪೂರಮಠ ಮಾತನಾಡಿ, ರಾಜೀವ್ ಗಾಂಧಿ ವಿವಿ ಸಂಯೋಜಿತ ಎಲ್ಲ ಕಾಲೇಜುಗಳು ಭಾಗವಹಿಸಲಿದ್ದಾರೆ. ಫೆ.27ರಂದು ಸ್ವಸ್ಥ ಭಾರತ ಶ್ರೇಷ್ಠ ಭಾರತ ಎಂದು ವಾಕಥಾನ್ ಆಯೋಜನೆ ಮಾಡಲಾಗಿದೆ. ಜಿಲ್ಲೆಯಿಂದ ಸಂಯೋಜಿತಗೊಂಡ 27 ಸಂಸ್ಥೆಗಳ 5000ಕ್ಕೂ ಅಧಿಕ ವಿದ್ಯಾರ್ಥಿಗಳು ಅಂಗಾಂಗ ದಾನಕ್ಕೆ ವಾಗ್ದಾನ ಮಾಡಲಿದ್ದಾರೆ ಎಂದರು.

ಡಾ.ಎನ್.ಎಂ. ರುದ್ರಗೌಡರ ಮಾತನಾಡಿದರು. ಅಲ್ ಅಮೀನ್ ವೈದ್ಯಕೀಯ ವಿವಿ ಪ್ರಾಚಾರ್ಯ ಡಾ.ಮೊಹ್ಮದ್ ಶಫೀ, ಡಾ.ಪ್ರಭಾವತಿ ಕಾಳೆ, ಪ್ರಕಾಶ ಸಿದ್ದಪುರ, ಡಾ.ಸುರೇಶ ಲೋಣಿ ಇದ್ದರು.



ಡಾ.ಅಂಬೇಡ್ಕರ್ ಮೂರ್ತಿ ಭಗ್ನ: ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

◆**ಸಿಂದಗಿ:** ತಾಲೂಕಿನ ಕಕ್ಕಳಮೇಲಿ ಗ್ರಾಮದಲ್ಲಿ ಸೆ. 15, 2019ರಂದು ಡಾ.ಬಿ.ಆರ್.ಅಂಬೇಡ್ಕರ್‌ವರ ಮೂರ್ತಿ ಭಗ್ನಗೊಳಿಸಿದ ಕೀಡಿಗೇಡಿಗಳ ಮೇಲೆ ಕ್ರಮ ಜರುಗಿಸುವಂತೆ ನಾನಾ ಬೇಡಿಕೆಗಳನ್ನು ಇಟ್ಟು ಕರ್ನಾಟಕ ದಲಿತ ಸಂಘರ್ಷ ಸಮಿತಿ ಮುಖಂಡರು ಮಂಗಳವಾರ ಗ್ರಾಮದಿಂದ ಸಿಂದಗಿ ನಗರದವರೆಗೆ ಪಾದಯಾತ್ರೆ ಕೈಗೊಂಡು ಗುರುವಾರ ತಾಲೂಕು ಆಡಳಿತ ಸೌಧದಲ್ಲಿ ಇಂಡಿ ಡಿವೈಎಸ್‌ಪಿ ಹಾಗೂ ತಾಲೂಕು ಗ್ರೇಡ್-2 ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಈ ವೇಳೆ ದಸಂಸ ರಾಜ್ಯ ಸಂಘಟನಾ ಸಂಚಾಲಕ ರಮೇಶ ಆಸಂಗಿ, ಬೆಳಗಾವಿ ವಿಭಾಗ ಸಂಚಾಲಕ ವಿನಾಯಕ ಗುಣಸಾಗರ, ಜಿಲ್ಲಾ ಸಂಚಾಲಕ ಅಶೋಕ ಚಲವಾದಿ, ಜಿಲ್ಲಾ ಸಂಘಟನಾ ಸಂಚಾಲಕ ಶರಣು ಸಿಂಧೆ, ಮಂಜುನಾಥ ಯಂಟಮಾನ ಮಾತನಾಡಿ, ಅಂಬೇಡ್ಕರ್ ಅವರ ಮೂರ್ತಿ ಭಗ್ನಗೊಳಿಸಿದ ಆರೋಪಿಗಳನ್ನು ಕೂಡಲೇ ಬಂಧಿಸಿ ಅವರ ಹೆಸರುಗಳನ್ನು ಬಹಿರಂಗಪಡಿಸಬೇಕು. 7 ವರ್ಷದ ಹಿಂದೆ ನಡೆದ ಪ್ರಕರಣ ತನಿಖೆಯಲ್ಲಿ ನಿರ್ಲಕ್ಷ್ಯ ತೋರಿದ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿ, ಕೃತ್ಯ ಎಸಗಿದ ಕಿಡಿಗೇಡಿಗಳ ಮೇಲೆ ದೇಶ ದ್ರೋಹದ ಪ್ರಕರಣ ದಾಖಲಿಸಿ ಸರಕಾರ ಅವರುಗಳ ಆಸ್ತಿಯನ್ನು ಜಪ್ತು ಮಾಡಿಕೊಂಡು ಗಡಿಪಾರು ಆದೇಶ ಹೊರಡಿಸಬೇಕು ಎಂದು ಬೇಡಿಕೆ ಇಟ್ಟರು.

ಮನವಿ ಸ್ವೀಕರಿಸಿದ ಇಂಡಿ ಡಿವೈಎಸ್‌ಪಿ ಸದಾಶಿವ ಕಟ್ಟಿಮನಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರವರ ಮೂರ್ತಿ ಭಗ್ನಗೊಳಿಸಿದ ಕೃತ್ಯ ನಡೆಯಬಾರದಿತ್ತು.



ಈ ಪ್ರಕರಣದಲ್ಲಿ ತಮ್ಮ ವೈಯಕ್ತಿಕ ದ್ವೇಶ ಸಾಧಿಸಲು ಬಾಬಾ ಸಾಹೇಬರ ಅನುಯಾಯಿ ಎಂದು ಹೇಳಿಕೊಳ್ಳುವ ದಲಿತ ವ್ಯಕ್ತಿಗಳು ಭಾಗಿಯಾಗಿದ್ದಾರೆ. ಈಗ ವಿಚಾರಣೆ ನಡೆಸಲಾಗುತ್ತಿದೆ. ಈ ಪ್ರಕರಣ ವಿಚಾರಣಾ ಹಂತದಲ್ಲಿದೆ ಪೊಲೀಸ್ ಇಲಾಖೆ ಪಾರದರ್ಶಕತೆಯಿಂದ ಕಾರ್ಯ ನಿರ್ವಹಣೆ ಮಾಡುತ್ತಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತದೆ ಎಂದರು.

ದಲಿತ ಮುಖಂಡ ಶ್ರೀಕಾಂತ ಸೋಮಜಾಳ, ಲಕ್ಕಪ್ಪ ಬಡಿಗೇರ, ಪೀರಪ್ಪ ಕಟ್ಟಿಮನಿ ಶ್ರೀಶೈಲ ಚಾಲವಾದಿ, ಶ್ರೀನಿವಾಸ ಓಲೇಕಾರ, ಸಂತೋಷ ಕಾಂಬಳೆ, ಪರಶುರಾಮ ಕಾಂಬಳೆ, ಯಲ್ಲು ಕೋರಳ್ಳಿ, ಪ್ರಕಾಶ ಗುಡಿಮನಿ, ಪರಶುರಾಮ ದಿಂಡವಾರ, ಲಕ್ಕಪ್ಪ ಬಡಿಗೇರ, ಮಂಜು ಯಂಟಮಾನ, ರಾಜು ಸಿಂದಗೇರಿ, ಮೋಹನ ಬರಗಾಲ, ಬಿ.ಎಸ್.ತಳವಾರ, ಸುರೇಶ ನಡಗಡ್ಡಿ, ಬಸಮ್ಮ ದೊಡಮನಿ ಸೇರಿದಂತೆ ಮುಖಂಡರು, ಅಭಿಮಾನಿಗಳು ಇದ್ದರು.

ಫಲಾನುಭವಿಗಳ ಮನೆ ಅನ್‌ಬ್ಲಾಕ್‌ಗೆ ಆಗ್ರಹ

◆**ನಾಲತವಾಡ:** ಪಟ್ಟಣ ಪಂಚಾಯತಿ ವ್ಯಾಪ್ತಿಯ ರಾಜೀವ ಗಾಂಧಿ ವಸತಿ ನಗರ ವಸತಿ ನಿಗಮದಿಂದ 2018-19ನೇ ಸಾಲಿನ 550 ಪೈಕಿ 161 ಮನೆಗಳು ಬ್ಲಾಕ್ ಆಗಿದ್ದು, ಫಲಾನುಭವಿಗಳು ಮನೆಗಳನ್ನು ಕಟ್ಟಡ ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ಫಲಾನುಭವಿಗಳಿಗೆ ತುಂಬಾ ತೊಂದರೆಯಾಗಿದ್ದು, ಕಾರಣ ಬ್ಲಾಕ್ ಆಗಿರುವ ಫಲಾನುಭವಿಗಳನ್ನು ಅನ್ ಬ್ಲಾಕ್ ಮಾಡಬೇಕೆಂದು ಆಗ್ರಹಿಸಿದರು. ಮುದ್ದೇಬಿಹಾಳ ತಾಲೂಕಿನ ನಾಲತವಾಡ ಪಟ್ಟಣ ಪಂಚಾಯತಿಯಿಂದ ವಿಜಯಪುರ ಜಿಲ್ಲಾ ಕಚೇರಿ ಮುಖಾಂತರ ಜುಲೈ 2025ರಂದು ಬ್ಲಾಕ್ ಆಗಿರುವ ಮನೆಗಳನ್ನು ಅನ್ ಬ್ಲಾಕ್ ಮಾಡಬೇಕೆಂದು ಪತ್ರ ಕಳಿಸಿರುತ್ತಾರೆ. ಆದರೆ 7 ತಿಂಗಳ ಕಾಲ ಗತಿಸಿದರೂ ಯಾವುದೇ ರೀತಿಯ ಸಮಸ್ಯೆಗೆ ಪರಿಹಾರ ದೊರಕಿರುವುದಿಲ್ಲ, ಅತೀ ಜರೂರಾಗಿ ಅನ್ ಬ್ಲಾಕ್ ಮಾಡಿ ಹಾಗೂ ಸಾಕಷ್ಟು ಫಲಾನುಭವಿಗಳು ಮನೆಗಳ ನಿರ್ಮಿಸಿಕೊಂಡು ಸಾಲ ಮಾಡಿಕೊಂಡು ಬಡ್ಡಿ ಕಟ್ಟುವಂತಾಗಿದೆ. ಆದ್ದರಿಂದ ಜಿಪಿಎಸ್ ಆದ ಎಲ್ಲಾ ಫಲಾನುಭವಿಗಳ ಸಹಾಯಧನ ಮೊತ್ತ ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿದರು. ಶಶಿಧರ ಬಂಗಾರಿಗೌಡ್ರ, ಗಿರೀಶಗೌಡ ಪಾಟೀಲ, ಚಂದ್ರಶೇಖರ ಗಂಗನಗೌಡ್ರ. ಸಂಗಮೇಶ ಮೇಟಿ, ಸಂಗನಗೌಡ ಕುಳಗೇರಿ, ಬಸವರಾಜ ಹಂಪನಗೌಡ, ಮುತ್ತು ಭೋವಿ, ಆನಂದ ಗೌಡರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ದೊರಕದಿದ್ದರೆ ಫಲಾನುಭವಿಗಳೊಂದಿಗೆ ತಮ್ಮ ಕಚೇರಿ ಎದುರು ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದರು.

ಮಾ.1ಕ್ಕೆ ಹಿಂದೂ ಸಮ್ಮೇಳನ

◆**ನಿಡಗುಂದಿ:** ಪಟ್ಟಣದ ಹಿಂದೂ ಸಮ್ಮೇಳನ ಸಂಚಲನಾ ಸಮಿತಿಯಿಂದ ಮಾ.1ರಂದು ಹಿಂದೂ ಸಮ್ಮೇಳನ ಹಾಗೂ ಬೃಹತ್ ಶೋಭಾಯಾತ್ರೆ ಹಮ್ಮಿಕೊಳ್ಳಲಾಗಿದೆ. ಅಂದು ಮಧ್ಯಾಹ್ನ 3ಕ್ಕೆ ಪಟ್ಟಣದ ಗ್ರಾಮದೇವತೆ ದೇವಸ್ಥಾನದಿಂದ ವಿನಾಯಕ ನಗರದ ಗಣಪತಿ ಗುಡಿ ಹತ್ತಿರದ ವೇದಿಕೆವರೆಗೆ ಬೃಹತ್ ಶೋಭಾಯಾತ್ರೆ ನಡೆಯಲಿದೆ. ಸಂಜೆ 5.30ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಪಟ್ಟಣದ ರುದ್ರೇಶ್ವರ ಮಠದ ರುದ್ರಮುನಿ ಶ್ರೀಗಳು ದಿವ್ಯ ಸಾನ್ನಿಧ್ಯ ಹಾಗೂ ಅಧ್ಯಕ್ಷತೆ ವಹಿಸುವರು. ಮನಗೂಳಿಯ ಅಭಿನವ ಸಂಗನಬಸವ ಶ್ರೀಗಳು, ಮುರನಾಳದ ಜಗನ್ನಾಥ ಶ್ರೀಗಳು, ಇಟಗಿಯ ಗುರುಶಾಂತವೀರ ಶ್ರೀಗಳು, ಮುತ್ತಗಿಯ ನರಹರಿ ಆಚಾರ್ಯರು, ಪಟ್ಟಣದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿವಿಯ ರೇಣುಕಾ ಅಕ್ಕ ಸಾನ್ನಿಧ್ಯ ವಹಿಸುವರು. ಸಮಾಜ ಸೇವಕ ಡಾ.ಹನುಮಂತ ಮಳಲಿ ದಿಕ್ಸೂಚಿ ಭಾಷಣ ಮಾಡುವರು.

2ನೇ ದಿನಕ್ಕೆ ಮುಂದುವರಿದ ಧರಣಿ



◆**ತಾಳಿಕೋಟೆ:** ತಾಲೂಕಿನ ಮೇಲೆಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳ ವಿರೋಧಿಸಿ ತಾಳಿಕೋಟಿ ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸುವಂತೆ ಒತ್ತಾಯಿಸಿ ತಾಳಿಕೋಟೆ ತಾಲೂಕು ಹೋರಾಟ ಸಮಿತಿ ವತಿಯಿಂದ ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಗುರುವಾರ ಎರಡನೆ ದಿನಕ್ಕೆ ಕಾಲಿಟ್ಟಿದೆ.

ಎರಡನೇ ದಿನ ದಲಿತ ಸಂಘರ್ಷ ಸಮಿತಿ ಹಾಗೂ ಅಂಬೇಡ್ಕರ್ ಸಮಾಜ ತಾಳಿಕೋಟೆ ಈ ಹೋರಾಟಕ್ಕೆ ಬೆಂಬಲಿಸಿ ಸತ್ಯಾಗ್ರಹ ನಡೆಸಿದರು.

ಎಸ್.ಬಿ.ಕಟ್ಟಿಮನಿ, ಆರ್.ಎಸ್.ಪಾಟೀಲ (ಕುಚಬಾಳ) ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ವಿಜಯಸಿಂಗ್ ಹಚೇರಿ ಪ್ರಕಾಶ ಹಚೇರಿ, ಮುದಕಪ್ಪ ಬಡಿಗೇರ ನಾಗೇಶ್ ಕಟ್ಟಿಮನಿ, ಮಹೇಶ ಚಲವಾದಿ, ರವಿ ಕಟ್ಟಿಮನಿ ಮಹಾಂತೇಶ ಕಟ್ಟಿಮನಿ, ಬಸವರಾಜ ಬಿಸನಾಳ, ಸಿದ್ದು ಕಟ್ಟಿಮನಿ, ಯಶವಂತ ಕುಚುಬಾಳ ಶಂಕರ ಪಡಸಾಲಿ ರಾಮಣ್ಣ ಕಟ್ಟಿಮನಿ, ರಾಜು ಅಲ್ಲಪುರ, ನೀಲಪ್ಪ ಕಟ್ಟಿಮನಿ, ಪರಶುರಾಮ ನಾವದಗಿ, ಕಾಶಿನಾಥ ಹಡಗಿನಾಳ, ಗುರಪ್ಪ ಚಲವಾದಿ, ರಾಘು ಪಡಸಾಲಿ ಕಾಶಿನಾಥ ಕಟ್ಟಿಮನಿ, ಸಿದ್ದು ಅಸಂತಪುರ, ಸಂಜು ಬರದೇನಾಳ,ಲಾಡಪ್ಪ ಮುಖಿಹಾಳ, ಪರಶುರಾಮ ಮಾದರ, ನಿಂಗನಗೌಡ ದೇಸಾಯಿ, ಗಣ್ಯರು ಉಪಸ್ಥಿತರಿದ್ದರು.

ಮಹಾಸಮ್ಮೇಳನಕ್ಕೆ ಸಾವಿರಾರು ಶಿಕ್ಷಕರು ಭಾಗಿ

◆**ವಿಜಯಪುರ:** ಬೆಂಗಳೂರಿನಲ್ಲಿ ಫೆ.28ರಂದು ರಾಜ್ಯ ಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ, ಧನ್ಯತಾ ಸಮಾರಂಭ, ಸಂಘದ ಸುವರ್ಣ ಮಹೋತ್ಸವ ಹಾಗೂ ಗುರುವಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯಿಂದ ಸಾವಿರಾರು ಶಿಕ್ಷಕರು ಪಾಲ್ಗೊಳ್ಳಲಿದ್ದಾರೆ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಜಿಲ್ಲಾ ಅಧ್ಯಕ್ಷ ಅರ್ಜುನ ಲಮಾಣಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಗಿ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಸುವರ್ಣ ಸಂಭ್ರಮ ಲೋಕಾರ್ಪಣೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೆರವೇರಿಸಲಿದ್ದು, ಸಚಿವ ಮಧು ಬಂಗಾರಪ್ಪ ಬಾಲ ಸಾಂತ್ವನ ನಿಧಿ ಯೋಜನೆ ಲೋಕಾರ್ಪಣೆ ಮಾಡಲಿದ್ದಾರೆ ಎಂದರು. ಸಚಿವರಾದ ರಾಮಲಿಂಗರೆಡ್ಡಿ, ಡಾ.ಜಿ.ಪರಮೇಶ್ವರ, ಎಚ್.ಕೆ.ಪಾಟೀಲ, ಸತೀಶ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳಕರ್, ಎನ್ ಚಲುವರಾಯಸ್ವಾಮಿ, ಮಾಜಿ ಉಪ ಸಭಾಪತಿ ಪುಟ್ಟಣ್ಣ, ಭೈರತಿ ಸುರೇಶ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದರು. ದೈಹಿಕ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಅಲ್ಲಾಭಕ್ಷ ವಾಲಿಕಾರ, ಜಿಲ್ಲಾ ಅಧ್ಯಕ್ಷ ಶರಣಬಸು ಬೇನೂರ, ಅಶೋಕ ಚನ್ನಬಸು, ಅಶೋಕ ಬೂದಿಹಾಳ ಇದ್ದರು.



ತಾಯಿ, ಶಿಕ್ಷಕರ ಋಣ ತೀರಿಸಲು ಸಾಧ್ಯವಿಲ್ಲ



◆**ವಿಜಯಪುರ:** ಜಗತ್ತಿನಲ್ಲಿ ತಾಯಿ ಋಣ ಹಾಗೂ ಕಲಿಸಿದ ಶಿಕ್ಷಕನ ಋಣ ಯಾವ ಕಾಲಕ್ಕೂ ತೀರಿಸಲು ಸಾಧ್ಯವಿಲ್ಲ ಎಂದು ಮನಗೂಳಿ ಹಿರೇಮಠ ಅಭಿನವ ಸಂಗನಬಸವ ಶಿವಾಚಾರ್ಯರು ಹೇಳಿದರು.

ಬಸವನಬಾಗೇವಾಡಿ ತಾಲೂಕಿನ ಮನಗೂಳಿಯ ಎಸ್.ಬಿ. ಪಾಟೀಲ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದ 2003-04ನೇ ಸಾಲಿನ ಎಸ್ ಎಸ್‌ಎಲ್‌ಸಿ ಹಾಗೂ 2005-06ನೇ ಸಾಲಿನ ಪಿಯುಸಿ ವಿದ್ಯಾರ್ಥಿಗಳಿಂದ ಹಮ್ಮಿಕೊಂಡ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ದೇಶದ ಭವಿಷ್ಯದ ಪೀಳಿಗೆಯನ್ನು ತಮ್ಮ ಜ್ಞಾನದಿಂದ ಶ್ರೀಮಂತ ಗೊಳಿಸುವ ಮುಖಾಂತರ ದೇಶದ ಅಡಿಪಾಯ ನಿರ್ಮಿಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ ಎಂದರು.

ಶಿಕ್ಷಕ ಎಸ್.ಎಸ್. ಬಿರಾದಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈಗಿನ ವಿದ್ಯಾರ್ಥಿಗಳು ವ್ಯರ್ಥ ಸಮಯ ಹಾಳು ಮಾಡುತ್ತಿದ್ದಾರೆ. ಕೊಟ್ಟ ಸಮಯವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕು ಎಂದರು.

ಶಿಕ್ಷಕ ಬಿ.ಬಿ.ಲಗಟಿಗೆರ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಎಂ.ಎಸ್.ಮಾದರ, ಸಿ.ಬಿ.ಸಜ್ಜನ, ಬಿ.ಎಚ್.ಹಿರೇಮಠ, ಎಂ.ಬಿ.ಗುಮ್ಮಡಿ, ಎಸ್.ಬಿ.ಬಿರಾದಾರ, ಪಿ.ಟಿ.ರಾಠೋಡ. ಆರ್.ಕೆ.ಹನಗಂಡಿ, ಎಂ.ಎಸ್. ನಾಯಕ ಇದ್ದರು.

ಸಮಾಜದ ಸಂಘಟನೆಗೆ ಮಹಾಸಭೆ ಬದ್ಧ

◆**ಮುದ್ದೇಬಿಹಾಳ:** ವೀರಶೈವ ಲಿಂಗಾಯತ ಮಹಾಸಭೆ ಸಮಾಜ ಸಂಘಟನೆ ಹಾಗೂ ಪ್ರಗತಿಗೆ ಕಟಿ ಬದ್ಧವಾಗಿದ್ದು, ಕೆಲವರಲ್ಲಿ ಭಿನ್ನಾಭಾವ ಬಿಟ್ಟರೆ ಸಂಘಟನೆಯಲ್ಲಿ ಮಹತ್ತರ ಪ್ರಗತಿ ಆಗುತ್ತಿದೆ. ಬರುವ ದಿನಗಳಲ್ಲಿ ಸಮಾಜದ ಎಲ್ಲರೂ ಒಗ್ಗಟ್ಟು ಪ್ರದರ್ಶಿಸುವ ಕಾಲ ದೂರವಿಲ್ಲ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಯುವ ಘಟಕದ ರಾಜ್ಯ ಉಪಾಧ್ಯಕ್ಷ ಸಂಕಲ್ಪ ಶೆಟ್ಟರ ವಿಶ್ವಾಸ ವ್ಯಕ್ತಪಡಿಸಿದರು.



ಢವಳಗಿ ಗ್ರಾಮದ ಮಡಿವಾಳೇಶ್ವರ ಜಾತ್ರೆಯ ಸಂದರ್ಭದಲ್ಲಿ ಸ್ಥಳಿಯ ಪ್ರವಾಸಿ ಮಂದಿರಕ್ಕೆ ಆಗಮಿಸಿದ ವೇಳೆ ಮಾತನಾಡಿ, ಹಾನಗಲ್ಲ ಕುಮಾರ ಸ್ವಾಮಿಗಳು, ಭೀಮಣ್ಣ ಖಂಡ್ರೆ, ಶಾಮನೂರು ಶಿವಶಂಕರಪ್ಪ ಸೇರಿದಂತೆ ಮಹಾನ ನಾಯಕರು ಬಸವಣ್ಣನ ಶರಣ ತತ್ವದಲ್ಲಿ ಕಟ್ಟಿ ಬೆಳೆಸಿದ ವೀರಶೈವ ಲಿಂಗಾಯತ ಮಹಾನ್ ಸಂಘಟನೆಯಾಗಿ ಬೆಳೆಯುತ್ತಿದೆ. ಅದಕ್ಕೆ ಯಾರ ಹಂಗೂ ಬೇಕಾಗಿಲ್ಲ, ಸಮಾಜದ ಆಶಯವೇ ಅದರ ಬೆನ್ನೆಲುಬು ಆಗಿದೆ. ಸಮಾಜದ ಕಡು ಬಡವರ ಏಳಿಗೆಗಾಗಿ ಯಾವ ಯೋಜನೆ ಹಾಕಿಕೊಳ್ಳಬೇಕು ಎಂದು ಸಂಘಟನೆ ಸದಾ ಚಿಂತಿಸುತ್ತದೆ ಎಂದು ಹೇಳಿದರು.

ಸಮಾಜದ ಮುಖಂಡರಾದ ಪ್ರಭು ಕಡಿ, ಸಿದ್ದರಾಜು ಹೊಳಿ, ಪ್ರಭುಗೌಡ ಕಲಬುರ್ಗಿ, ಸಂಗಣ್ಣ ಕಂಚಾಣಿ, ರಾಜು ಬಳ್ಳೊಳ್ಳಿ, ಅಶೋಕ ಚಟ್ಟೆರ, ಜಗದೀಶ ಲಕ್ಷಟ್ಟಿ, ಸಂತೋಷ ನೈನೆಗಲಿ, ಬಸವರಾಜ ದಡ್ಡಿ, ನಾಗರಾಜ ಶೆಟ್ಟರ, ನವೀನ ಮೋಟಗಿ, ಮುತ್ತಣ್ಣ ಕಡಿ, ಮಹಾಂತೇಶ ಕಂಠಿ, ಲೋಹಿತ ನಾಲತವಾಡ ಉಪಸ್ಥಿತರಿದ್ದರು.

ಕಿರುಸುದ್ದಿ

ನೂತನ ರಾಜ್ಯಾಧ್ಯಕ್ಷರ ಪದಗ್ರಹಣ ನಾಳೆ



ಗಂಗಾವತಿ: ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸೇವಾ ಸಂಘಕ್ಕೆ ನೂತನವಾಗಿ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ಶೈಲಾ ಕೆ.ಡಿಯವರ ಪದಗ್ರಹಣ ಕಾರ್ಯಕ್ರಮವನ್ನು ಗಂಗಾವತಿಯಲ್ಲಿ ನಡೆಸಲಾಗುವುದು ಎಂದು ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ರಗಡಪ್ಪ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸೇವಾ ಸಂಘದ ವತಿಯಿಂದ ಬುಧವಾರ ಹಮ್ಮಿಕೊಂಡ ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು.

ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸೇವಾ ಸಂಘಕ್ಕೆ ನೂತನವಾಗಿ ರಾಜ್ಯಾಧ್ಯಕ್ಷೆಯಾಗಿ ಶೈಲಾ. ಕೆ.ಡಿ ಯವರು ಅವಿರೋಧವಾಗಿ ಫೆ.17ರಂದು ಆಯ್ಕೆಯಾಗಿದ್ದಾರೆ. ಇವರು ಸಂಘಕ್ಕೆ ಪ್ರಥಮ ಮಹಿಳಾ ರಾಜ್ಯಾಧ್ಯಕ್ಷೆಯಾಗಿದ್ದು, ಅವರ ಪದಗ್ರಹಣ ಕಾರ್ಯಕ್ರಮವನ್ನು ಗಂಗಾವತಿ ನಗರದ ಅಮರ ಜ್ಯೋತಿ ಕಲ್ಯಾಣ ಮಂಟಪದಲ್ಲಿ ಫೆ.28ರಂದು 11ಕ್ಕೆ ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತಿದೆ. ಪ್ರತಿಯೊಬ್ಬರು ಸಹ ಪದಗ್ರಹಣ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕ ಎಂದು ಹೇಳಿದರು.ಸಂಘಟನೆಯ ತಾಲೂಕು ಅಧ್ಯಕ್ಷ ವಾಯಿದ್ ಖಾನ್, ಉಪಾಧ್ಯಕ್ಷ ನಾಗರಾಜ, ಖಜಾಂಚಿ ರಾಮಣ್ಣ, ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಇತರರಿದ್ದರು.

ಈ ವೇಳೆ ಗಂಗಾವತಿಯ ಪತ್ರಿಕಾ ಭವನದಲ್ಲಿ ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸೇವಾ ಸಂಘಕ್ಕೆ ನೂತನವಾಗಿ ರಾಜ್ಯಾಧ್ಯಕ್ಷರ ಪದಗ್ರಹಣ ಕಾರ್ಯಕ್ರಮದ ಆಮಂತ್ರಣವನ್ನು ಬಿಡುಗಡೆ ಮಾಡಲಾಯಿತು.

ರೈತನಿಗೆ ಕಳಕಪ್ಪ ಕಂಬಳಿ ಧನಸಹಾಯ



ಯಲಬುರ್ಗಾ: ರೈತ ಮುಖಂಡ ಅಜ್ಜಪ್ಪ ಬಂಡ್ಡಿ ಎನ್ನುವವರಿಗೆ ಸೇರಿದ ಎತ್ತು ಅಕಾಲಿಕ ಮಳೆಯಿಂದ ಇತ್ತೀಚೆಗೆ ಸಿಡಿಲು ಬಡಿದು ಮೃತಪಟ್ಟ ಘಟನೆ ತಾಲೂಕಿನ ಹುಲ್ಲೇಗುಡ್ಡ ಗ್ರಾಮದಲ್ಲಿ ನಡೆದ ಸುದ್ದಿ ತಿಳಿದು ಸಮಾಜ ಸೇವಕ ಕಳಕಪ್ಪ ಕಂಬಳಿ ಅವರು ರೈತನ ಮನೆಗೆ ಭೇಟಿ ನೀಡಿ ವ್ಯಯಕ್ತಿಕ ಧನಸಹಾಯ ನೀಡಿ ಮನವೀಯತೆ ಮೆರೆದರು.

ಬಳಿಕ ಸಮಾಜ ಸೇವಕ ಕಳಕಪ್ಪ ಕಂಬಳಿ ಮಾತನಾಡಿ, ರೈತನ ಕೃಷಿ ಚಟುವಟಿಕೆಗೆ ಆಸರೆಯಾಗಿದ್ದ ಎತ್ತು ಸಿಡಿಲಿಗೆ ಮೃತಪಟ್ಟಿರುವುದು ರೈತನಿಗೆ ತುಂಬಲಾರದ ನಷ್ಟವಾಗಿದೆ. ರ್ಯತರು ಮಳೆಗಾಲದಲ್ಲಿ ಜನುವಾರುಗಳನ್ನು ಕಾಳಜಿಯಿಂದ ಸುರಕ್ಷಿತ ಜಾಗದಲ್ಲಿ ಕಾಪಾಡಿಕೊಳ್ಳಬೇಕು ಎಂದು ಧೈರ್ಯ ತುಂಬಿದರು.ಗ್ರಾಪಂ ಮಾಜಿ ಅಧ್ಯಕ್ಷ ಬಾಳಪ್ಪ ಬಂಡ್ಡಿ, ದುರ್ಗನಗೌಡ ಪಾಟೀಲ, ಯಂಕಪ್ಪ ಜುಟ್ಲರ್, ಸಂಗಮೇಶ ಪೂಜರ, ಹನುಮಗೌಡ ಪಾಟೀಲ, ಯಮನೂರಪ್ಪ, ಚನ್ನಬಯ್ಯ ಚಿತ್ರಮಠ ಮತ್ತಿತರರು ಇದ್ದರು.

ವ್ಯಕ್ತಿ ಕಾಣೆ: ಪತ್ತೆಗೆ ಸಹಕರಿಸಲು ಮನವಿ

ಗಂಗಾವತಿ: ಜಯನಗರ ಸತ್ಯನಾರಾಯಣ ಪೇಟೆಯ ಶಶಾಂಕ್ (25) ಫೆ.6ರಂದು ರಾತ್ರಿ 9.30 ಕ್ಕೆ ಮೈಸೂರಿಗೆ ಕೆಲಸಕ್ಕಾಗಿ ಹೋಗಿದ್ದು, ವಾಪಸ್ ಮನೆಗೆ ಬಂದಿರುವುದಿಲ್ಲ. ಈ ಬಗ್ಗೆ ಗಂಗಾವತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ವ್ಯಕ್ತಿಯ ಚಹರೆ ವಿವರ: ವ್ಯಕ್ತಿಯು 5.6 ಅಡಿ ಎತ್ತರವಿದ್ದು, ದುಂಡು ಮುಖ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಕಾಣೆಯಾದಾಗ ಲಟ್ ಬ್ಲೂ ಕಲರ್ ಶರ್ಟ್, ಗ್ರೇ ಕಲರ್ ಜೀನ್ಸ್ ಪ್ಯಾಂಟ್ ಧರಿಸಿದ್ದರು. ಕನ್ನಡ, ಹಿಂದಿ, ಇಂಗ್ಲಿಷ್ ಭಾಷೆಯನ್ನು ಮಾತನಾಡುತ್ತಾರೆ.ಮೇಲ್ಕಂಡ ಚಹರೆಯ ವ್ಯಕ್ತಿಯ ಕುರಿತು ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಗಂಗಾವತಿ ನಗರ ಪೊಲೀಸ್ ಠಾಣೆಗೆ ಮತ್ತು ಕೊಪ್ಪಳ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಬಹುದು. ಅಥವಾ ಜಿಲ್ಲಾ ಪೊಲೀಸ್ ಅಧೀಕ್ಷಕರು: 08539-230111 ಸಂಪರ್ಕಿಸಿ ಮಾಹಿತಿ ನೀಡುವಂತೆ ಗಂಗಾವತಿ ಪೊಲೀಸ್ ಠಾಣೆ ಪ್ರಕಟಣೆ ಕೋರಿದೆ.





ಕೊಪ್ಪಳ: ನಗರದ ಭಾಗ್ಯನಗರ ರಸ್ತೆಯ ಬಾಲಾಜಿ ಫಂಕ್ಷನ್ ಹಾಲ್‌ನಲ್ಲಿ ಗುರುವಾರ ಜೆಡಿಎಸ್ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ ಹಾಗೂ ಸಂಘಟನಾ ಸಭೆ ಜರುಗಿತು. ಜೆಡಿಎಸ್ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ್ ಹಾಗೂ ಜೆಡಿಎಸ್ ಜಿಲ್ಲಾಧ್ಯಕ್ಷ ಸುರೇಶ್ ಭೂಮರಡ್ಡಿ ಸೇರಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀರಾಮನಗರ: ಜಿಲ್ಲಾ ಮಟ್ಟದ ಸಭೆ

ಶ್ರೀರಾಮನಗರ: ಸಮೀಪದ ಮರಳಿಯ ಶ್ರೀಗಂಗಾಪರಮೇಶ್ವರಿ ದೇವಸ್ಥಾನದ ಸಮುದಾಯ ಭವನದಲ್ಲಿ ಗುರುವಾರ ರಾಷ್ಟ್ರೀಯ ಸಂಘರ್ಷ ಸಮಿತಿಯ ಕೊಪ್ಪಳ ಜಿಲ್ಲೆಯ ಸಭೆ ಜರುಗಿತು.

ಸಂಘಟನೆಯ ರಾಜ್ಯ ಕಾರ್ಯಾಧ್ಯಕ್ಷರಾದ ವೀರಕುಮಾರಗಡಾದ ಅವರು ಪಿಂಚಣಿ ಹೆಚ್ಚು ಮಾಡಲು ಸಂಘಟಿತ ಹೋರಾಟದ ಮುಖಾಂತರ ಸಾಧ್ಯ ಎಂದು ತಿಳಿಸಿದರು. ಉಪಾಧ್ಯಕ್ಷರಾದ ಚನ್ನಬಸಯ್ಯ ಮಾತನಾಡಿ, ದಿನಾಂಕ 9, 10 ಹಾಗೂ 11 ಮಾರ್ಚ್‌ನಲ್ಲಿ ನಡೆಯುವ ಹೋರಾಟದಲ್ಲಿ ಪಾಲ್ಗೊಂಡು ಯಶಸ್ವಿ ಮಾಡಬೇಕೆಂದು ಕರೆ ನೀಡಿದರು. ಮಾಹಿತಿ ಸಂಚಾಲಕರಾದ ಅನೀಲ ಇನಾಮದಾರ ಅವರು ವಾರ್ಷಿಕ ಚಂದಾ, ಅಜೀವ ಚಂದಾದಾರರಾಗಬೇಕೆಂದು ವಿನಂತಿಸಿದರು. ಇನ್ನುಳಿದ ಶಾಂತಿನಾಥ ಪಾಟೀಲ್, ಗುಂಡಪ್ಪ ತೊಂತನಾಳ, ಎಸ್.ಎಸ್.ಅಲಸುಂಡಿ, ಜಿಲ್ಲಾ ಅಧ್ಯಕ್ಷರಾದ ಮಹಮ್ಮದ್ ಶ್ಯಾಮೀದ, ಮೌನೇಶ್ ಪತ್ತಾರ ಆಗಮಿಸಿದ್ದರು. ಸಕ್ಕರೆ ಕಾರ್ಖಾನೆಯ ನಿವೃತ್ತ ಕಾರ್ಮಿಕರು, ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು, ಸಹಕಾರಿ ಇಲಾಖೆ ಮತ್ತು ಸಾರಿಗೆ ಇಲಾಖೆಯ ನಿವೃತ್ತ ನೌಕರದಾರರು ಭಾಗವಹಿಸಿದ್ದರು. ರಮೇಶ್ ಕುಲಕರ್ಣಿ, ಮೌನಪ್ಪ ನಾಯಕ, ವೀರಯ್ಯಸ್ವಾಮಿ, ಮುದಗಲ್ ಬಸಪ್ಪ, ಎಂ. ಹೊನ್ನಪ್ಪ, ಬಸಪ್ಪ ಉಮಲೂಟಿ, ಆಲಮಯ್ಯ, ಶಿವರಾಜ್ ಹಾಗೂ ಸುಭಾನಿ ಇವರ ಮುಂದಾಳತ್ವದಲ್ಲಿ ಯಶಸ್ವಿಯಾಗಿ ನಡೆಯಿತು ಎಂದು ಸಂಘಟಕರಾದ ಶಾಂತಿನಾಥ ಪಾಟೀಲ್ ತಿಳಿಸಿದರು.



ಶ್ರೀರಾಮನಗರ: ಸಮೀಪದ ಮರಳಿಯ ಶ್ರೀಗಂಗಾಪರಮೇಶ್ವರಿ ದೇವಸ್ಥಾನದ ಸಮುದಾಯ ಭವನದಲ್ಲಿ ಗುರುವಾರ ರಾಷ್ಟ್ರೀಯ ಸಂಘರ್ಷ ಸಮಿತಿಯ ಕೊಪ್ಪಳ ಜಿಲ್ಲೆಯ ಸಭೆ ಜರುಗಿತು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ

ಹಕ್ಕುಪತ್ರ ವಿತರಿಸಿದ ಹಿಟ್ನಾಳ್

ಕೊಪ್ಪಳ: ಭೂ ಗ್ಯಾರಂಟಿ ನಮ್ಮ ಸರ್ಕಾರದ ಆರನೇ ಗ್ಯಾರಂಟಿ ಎಂದು ಶಾಸಕ ಕೆ.ರಾಘವೇಂದ್ರ ಹಿಟ್ನಾಳ್ ಹೇಳಿದರು.

ಹಳೇಕನಕಾಪುರ, ಕನಕಾಪುರ ತಾಂಡ, ಹೊಸ ಕನಕಾಪುರ, ಗಿಣಗೇರಿ, ಬಸಾಪುರ, ಕುಟುಗನಹಳ್ಳಿ, ಕಿಡದಾಳ ಹಾಗೂ ಬೆಳವಿನಾಳ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅಡಿಗಲ್ಲು ನೆರವೇರಿಸಿ ಮಾತನಾಡಿದರು.

ತಾಲೂಕಿನ ಅನೇಕ ಗ್ರಾಮಗಳಲ್ಲಿ ಕಂದಾಯ ಇಲಾಖೆಯಡಿಯಲ್ಲಿ ಭೂ ವಿಷಯಕ್ಕೆ ಸಂಭಂಧಿಸಿದಂತೆ ಹಕ್ಕುಪತ್ರ ವಿತರಣೆ ಹಲವಾರು ಕಾರಣಗಳಿಂದ ತಡವಾಗಿದ್ದರಿಂದ ಜಿಲ್ಲಾಧಿಕಾರಿಗಳ ಜೊತೆ ಈ ವಿಷಯದ ಕುರಿತು ಅನೇಕ ಸಭೆ ನಡೆಸಿದ್ದರ ಫಲವಾಗಿ ಎಲ್ಲಾ ಗ್ರಾಮಗಳಲ್ಲಿ ಭೂ ಗ್ಯಾರಂಟಿಗೆ ಸಂಬಂಧಿಸಿದ ಹಕ್ಕುಪತ್ರಗಳನ್ನು ವಿತರಣೆ ಮಾಡುವ ಕೆಲಸ ಮಾಡುತ್ತಿದ್ದೇವೆ. ಕಂದಾಯ ಇಲಾಖೆ ಅಧಿಕಾರಿಗಳು ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಇಂದು ಗಿಣಗೇರಿಯಲ್ಲಿ 40, ಕುಟುಗನಹಳ್ಳಿಯಲ್ಲಿ 37 ಹಕ್ಕು ಪತ್ರ ಇಂದು ವಿತರಣೆ ಮಾಡಿದ್ದೇವೆ ಎಂದರು.



ಗಿಣಗೇರಿ ಗ್ರಾಮಕ್ಕೆ ನೂತನವಾಗಿ ಮಂಜೂರು ಆಗಿರುವ ಕೆ.ಪಿ. ಎಸ್ ಶಾಲೆ ನಿರ್ಮಾಣದ 1 ಕೋಟಿ ವೆಚ್ಚದ ಕಾಮಗಾರಿಗೆ ಅಡಿಗಲ್ಲು ನೆರವೇರಿಸಿದರು.

ಕೊಪ್ಪಳ ತಾಲೂಕಿನ ಬೆಳವಿನಾಳ ಗ್ರಾಮದಲ್ಲಿ 20 ಲಕ್ಷ ವೆಚ್ಚದಲ್ಲಿ ವಾಲ್ಮೀಕಿ ಭವನ ನಿರ್ಮಾಣದ ಕಾಮಗಾರಿಗೆ ಅಡಿಗಲ್ಲು ಹಾಗೂ 12 ಲಕ್ಷ ವೆಚ್ಚದಲ್ಲಿ ವಾಲ್ಮೀಕಿ ಭವನ ಉದ್ಘಾಟಿಸಿದರು.

ಮಾಜಿ ಜಿಲ್ಲಾಪಂಚಾಯತ್ ಸದಸ್ಯರಾದ ಗೂಳಪ್ಪ ಹಲಿಗೇರಿ, ಗ್ಯಾರಂಟಿ ಸಮಿತಿ ತಾಲೂಕ ಅಧ್ಯಕ್ಷ ಬಾಲಚಂದ್ರನ್ ಮುನಿರಬಾದ್, ಗಾಳೆಪ್ಪ ಪೂಜಾರ್ ,ರಾಮಣ್ಣ ಕಲ್ಲನ್ನವರ್, ಸುಬ್ಬಣ್ಣಚಾರ್, ನಾಗರಾಜ ಚಳ್ಳೊಳ್ಳಿ, ಹನಮಂತ ಜಲವರ್ಧನಿ,ಹನಮೇಶ ಹೊಸಳ್ಳಿ, ಚಂದಪಾಶ ಕಿಲ್ಲೆದರ್, ಲಕ್ಷ್ಮಣ್ ಡೊಳ್ಳಿನ, ಮುದಿಯಪ್ಪ ಆದೋನಿ, ಪಂಪಣ್ಣ ಪೂಜಾರ್, ನಿಂಗಪ್ಪ ಮಜ್ಜಿಗಿ, ಹನಮಂತಪ್ಪ ವಾಲ್ಮೀಕಿ, ರಮೇಶ ಕಿಡದಾಳ, ಗ್ಯಾನಪ್ಪ ಬಸಾಪುರ, ಗೋವಿಂದ ಚೌಡ್ಕಿ, ಬಸುರೆಡ್ಡಿ ಬೆಳವಿನಾಳ, ರಂಜಿತ ಚವಾಣ್,ಖಾದರ್ ಸಾಬ್, ಸುಮಂಗಲ ಇಂದಿರಗಿ, ಇಒ ದುಂಡೇಶ ತುರಾದಿ, ತಹಸೀಲ್ದಾರ್ ಬಸವರಾಜ, ಮಲ್ಲು ಪೂಜಾರ್, ಪರಶುರಾಮ್ ಕೆರೆಹಳ್ಳಿ, ಆನಂದ ಮುಗುಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಫಲಿತಾಂಶ ಸುಧಾರಣೆಗೆ ಕ್ರಮ ಕೈಗೊಳ್ಳಿ: ಶಾಸಕ

ಕುಷ್ಟಗಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಶಿಕ್ಷಣ ಇಲಾಖೆಯ ವತಿಯಿಂದ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗಾಗಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಹಾಗೂ ಸಹ ಶಿಕ್ಷಕರ ಪ್ರಗತಿ ಪರಿಶೀಲನಾ ಸಭೆ ಬುಧವಾರ ನಡೆಯಿತು.

ಶಾಸಕ ದೊಡ್ಡನಗೌಡ ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಫಲಿತಾಂಶ ಸುಧಾರಣೆಯಾಗುವುದು ಯಾವಾಗ. ಎಸ್ಸೆಸ್ಸೆಲ್ಸಿ ಕಳೆದ ವರ್ಷದ ಫಲಿತಾಂಶದಲ್ಲಿ ಕೊಪ್ಪಳ 32 ಸ್ಥಾನದಲ್ಲಿ ಇತ್ತು. ಆದರೆ, ಈ ಸಾರಿ ಜಿಲ್ಲೆ ನಮ್ಮ ಕಡೆ ತಿರುಗಿ ನೋಡುವಂತೆ ಸುಧಾರಣೆ ಮಾಡಬೇಕು. ಫಲಿತಾಂಶ ಕಡಿಮೆಯಾಗಲು ಕಾರಣವೇನು. ಫಲಿತಾಂಶ ಸುಧಾರಣೆ ಕ್ರಮ ಕೈಗೊಳ್ಳಬೇಕು. ತಂದೆ, ತಾಯಿಗಿಂತ ಹೆಚ್ಚು ಗೌರವಿಸುವುದು ಶಿಕ್ಷಕರನ್ನು ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಗೌಡ ಪಾಟೀಲ್ ಮಾತನಾಡಿ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಫಲಿತಾಂಶಗೆ ಮಿಷಿನ್ 40+ ಜಾರಿಗೆ ತರಲಾಗಿದೆ. ಮಕ್ಕಳ ಕಲಿಕಾ ಸಾಮರ್ಥ್ಯವನ್ನು ನೋಡಿ, ಅವರ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು. ಗ್ರಾಮೀಣ ಭಾಗದ ಮಕ್ಕಳು ಕಲಿಕೆಯಲ್ಲಿ ಹಿಂದು ಉಳಿಯಬಾರದು. ಶೈಕ್ಷಣಿಕವಾಗಿ ಉತ್ತಮವಾಗಿ ತಾಲೂಕು ಅಭಿವೃದ್ಧಿಯಾಗಬೇಕು. ಕಳೆದ ವರ್ಷಕ್ಕಿಂತ ಈ ವರ್ಷ ತಾಲೂಕಿನ ಸರಾಸರಿ ಫಲಿತಾಂಶ ಹೆಚ್ಚಳವಾಗಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ಬಸಾಪೂರ ಮಾತನಾಡಿ, ಇದೇ ಮಾರ್ಚ 18 ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ಪ್ರಾರಂಭವಾಗುತ್ತವೆ. ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆಯಾಗಬೇಕು. ಆದರತ್ತ ಶಿಕ್ಷಕರು ಗಮನ ಹರಿಸಬೇಕು. ಮಗುವಿನ ಮಾನಸಿಕ ಒತ್ತಡವನ್ನು ತಿಳಿದುಕೊಂಡು ವಿದ್ಯಾರ್ಥಿಗಳೊಂದಿಗೆ ಸ್ನೇಹಿತನಾಗಿ ಅವರಂತೆ ವರ್ತನೆ ಮಾಡಬೇಕು. ವಿದ್ಯಾರ್ಥಿಗಳ ಆರೋಗ್ಯದ ಕಡೆ ಗಮನ ಹರಿಸಬೇಕು. ವಿದ್ಯಾರ್ಥಿಗಳಿಗೆ ಮಾನಸಿಕ ಧೈರ್ಯ ನೀಡಬೇಕು ಎಂದರು.

ಜಿಪಂ ಮಾಜಿ ಸದಸ್ಯ ಫಕೀರಪ್ಪ ಚಳಗೇರಿ, ಕ್ಷೇತ್ರ ಸಮನ್ವಧಿಕಾರಿ ಜಗೀಶಪ್ಪ ಮೆಣೇಧಾಳ, ಎಂ.ಎಂ.ಗೊಣ್ಣಗಾರ, ನೀಲನಗೌಡ ಹೊಸಗೌಡ್ರು ಸೇರಿದಂತೆ ತಾಲೂಕಿನ ಎಲ್ಲಾ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಇದ್ದರು. ಡಾ.ಜೀವನಸಾಬ ಬಿನ್ನಾಳ ನಿರ್ವಹಿಸಿದರು.



ಮುಖ್ಯಮಂತ್ರಿ ಚಿನ್ನದ ಪದಕಕ್ಕೆ ಭಾಜನ

ಕುಷ್ಟಗಿ: ಪಟ್ಟಣದ ಗೃಹ ರಕ್ಷಕ ದಳದ ಸಿನಿಯರ್ ಪ್ಲಟೂನ್ ಕಮಾಂಡರ್ ರವಿಂದ್ರಸಾ ಬಾಕಳೆ ಅವರಿಗೆ 2025ನೇ ಸಾಲಿನ ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ.

ಗೃಹರಕ್ಷಕದಳ ಮತ್ತು ಪೌರರಕ್ಷಣಾ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವವರಿಗೆ ಕೊಡಲ್ಪಡುವ ಮುಖ್ಯಮಂತ್ರಿ ಚಿನ್ನದ ಪದಕ ಪ್ರಶಸ್ತಿಗೆ ಕುಷ್ಟಗಿ ಪಟ್ಟಣದ ರವಿಂದ್ರಸಾ ಬಾಕಳೆ ಭಾಜನರಾಗಿದ್ದಾರೆ.



ರಾಜ್ಯದ ಪಟ್ಟಿಯಲ್ಲಿರುವ 21 ಅಧಿಕಾರಿ/ಸಿಬ್ಬಂದಿ ಗೃಹರಕ್ಷಕದಳ ಹಾಗೂ 9 ಪೌರರಕ್ಷಣಾ ಸಿಬ್ಬಂದಿಗಳನ್ನು ಸೇರಿ ಒಟ್ಟಾರೆಯಾಗಿ 30 ಅಧಿಕಾರಿ/ಸಿಬ್ಬಂದಿಗೆ ಮುಖ್ಯಮಂತ್ರಿಯವರ ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ. ಮುಖ್ಯ ಮಂತ್ರಿಯವರ ಚಿನ್ನದ ಪದಕ ಪುರಸ್ಕೃತರಿಗೆ ತಲಾ ರೂ. 5,000 ರೂ.ರಂತೆ ನಗದು ಬಹುಮಾನವನ್ನು ನೀಡಲಾಗುವುದು ಎಂದು ಆರಕ್ಷಕ ಮಹಾನಿರ್ದೇಶಕರು ಗೃಹ ರಕ್ಷಕದಳದ ಮಹಾ ನಿರ್ದೇಶಕರು ಮಹಾ ಸಮಾದೇಷ್ಟರು ಮತ್ತು ನಿರ್ದೇಶಕರು ಪೌರರಕ್ಷಣೆ ಇಲಾಖೆಯವರು ತಿಳಿಸಿದ್ದಾರೆ.

ವಿದ್ಯುತ್ ದರ ಪರಿಷ್ಕರಣೆ ವಿಚಾರಣಾ ಸಭೆ

ಕಲಬುರಗಿ: ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ)ದ ವತಿಯಿಂದ ನೀರಾವರಿ ಪಂಪ್‌ಸೆಟ್‌ಗಳು, ವಾಣಿಜ್ಯ ಹಾಗೂ ಕೈಗಾರಿಕಾ ಗ್ರಾಹಕರಿಗೆ ಸಂಬಂಧಿಸಿದ 2025-26ನೇ ಆರ್ಥಿಕ ವರ್ಷದ ವಿದ್ಯುತ್ ದರ ಪರಿಷ್ಕರಣೆ ಕುರಿತ ಸಾರ್ವಜನಿಕ ವಿಚಾರಣಾ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲಾಯಿತು.

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ) ಸಲ್ಲಿಸಿರುವ ಅರ್ಜಿಯ ಹಿನ್ನೆಲೆಯಲ್ಲಿ, ದರ ಪರಿಷ್ಕರಣೆ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಅಭಿಪ್ರಾಯಗಳು ಮತ್ತು ಆಕ್ಷೇಪಣೆಗಳನ್ನು ಆಲಿಸಲು ಆಯೋಗ ಈ ವಿಚಾರಣಾ ಸಭೆಯನ್ನು ಆಯೋಜಿಸಿತ್ತು. ನೀರಾವರಿ ಪಂಪ್‌ಸೆಟ್‌ಗಳು, ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಗೆ ಅನ್ವಯಿಸುವ ದರ ಪರಿಷ್ಕರಣೆ ಕುರಿತು ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಿತು.

ಆನ್‌ಲೈನ್ ಮೂಲಕ ಹಾಗೂ ಜೆಸ್ಕಾಂನ ನಿಗಮ ಕಚೇರಿಯ ಸಭಾಂಗಣದಲ್ಲಿ ಆಫ್‌ಲೈನ್ ಮೂಲಕ ಭಾಗವಹಿಸಿದ ಗ್ರಾಹಕರು, ವಿದ್ಯುತ್ ದರ ಏರಿಕೆ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಕೆಲವರು ದರ ಏರಿಕೆಯಿಂದ ಸಾಮಾನ್ಯ ಜನತೆ ಮತ್ತು ಸಣ್ಣ ಕೈಗಾರಿಕೆಗಳ ಮೇಲೆ ಆಗುವ ಆರ್ಥಿಕ ಭಾರವನ್ನು ಉಲ್ಲೇಖಿಸಿ, ಪರಿಷ್ಕರಣೆಯಲ್ಲಿ ಸಮತೋಲನ ಕಾಯ್ದುಕೊಳ್ಳುವಂತೆ ಮನವಿ ಮಾಡಿದರು. ಇನ್ನೂ ಕೆಲವರು ವಿದ್ಯುತ್ ಸರಬರಾಜಿನ ಗುಣಮಟ್ಟ, ವ್ಯತ್ಯಯಗಳು ಹಾಗೂ ಮೂಲಸೌಕರ್ಯ ಸಂಬಂಧಿತ ಸಮಸ್ಯೆಗಳ ಕುರಿತು ಪ್ರಶ್ನೆಗಳು ಎತ್ತಿದರು.

ವ್ಯಕ್ತವಾದ ಅಭಿಪ್ರಾಯಗಳು ಮತ್ತು ಆಕ್ಷೇಪಣೆಗಳನ್ನು ಪರಿಗಣಿಸಿ ಅಂತಿಮ ಆದೇಶ ಹೊರಡಿಸಲಾಗುವುದು ಎಂದು ಕೆಇಆರ್‌ಸಿ ಅಧ್ಯಕ್ಷರಾದ ಪಿ. ರವಿಕುಮಾರ್ ತಿಳಿಸಿದರು.

ಕೆಇಆರ್‌ಸಿ ಸದಸ್ಯರಾದ (ಕಾನೂನು) ಹೆಚ್.ಕೆ. ಜಗದೀಶ್, ಸದಸ್ಯರಾದ ಜಾವೇದ್ ಅಖ್ತರ್ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಉಪಸ್ಥಿತರಿದ್ದು ಹಾಗೂ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ಕೃಷ್ಣ ಬಾಜಪೇಯಿ, ನಿರ್ದೇಶಕರು (ತಾಂತ್ರಿಕ) ಚಂದ್ರಕಾಂತ ಪಾಟೀಲ್ ಹಾಗೂ ಮುಖ್ಯ ಹಣಕಾಸು ಅಧಿಕಾರಿ ಬಿ.ಎಚ್. ಶಿವಶಂಕರ ಸೇರಿದಂತೆ ಅಧಿಕಾರಿಗಳು ಮತ್ತು ಸಾರ್ವಜನಿಕರು ನಿಗಮ ಕಚೇರಿಯ ಸಭಾಂಗಣದಲ್ಲಿ ಪಾಲ್ಗೊಂಡಿದ್ದರು.



ಮಂಗಳೇಶ್ವರ ರಥೋತ್ಸವ ಅದ್ದೂರಿ

ಕುಕನೂರು: ತಾಲೂಕಿನ ಮಂಗಳೂರು ಗ್ರಾಮದ ಶ್ರೀಮಂಗಳೇಶ್ವರ ಮಹಾ ರಥೋತ್ಸವವು ಗುರುವಾರ ಸಂಜೆ 5ಗಂಟೆಗೆ ಸುತ್ತ ಮುತ್ತಲಿನ ಸಾವಿರಾರು ಭಕ್ತಾಧಿಗಳ ಜಯ ಘೋಷದೊಂದಿಗೆ ಅದ್ದೂರಿಯಾಗಿ ನೆರವೇರಿತು.

ಗ್ರಾಮದ ಆರಾಧ್ಯ ದೈವ ಮಂಗಳೇಶ್ವರಸ್ವಾಮಿಯ ಜಾತ್ರಾ ಮಹೋತ್ಸವದ ಅಂಗವಾಗಿ ದೇವ ಸ್ಥಾನದಲ್ಲಿ ಸ್ವಾಮಿಗೆ ವಿಶೇಶ ಪೂಜಾ, ವಿಧಿ, ವಿಧಾನ. ರುದ್ರಾಭಿಷೇಕ ಕಾರ್ಯಕ್ರಮಗಳು ಜರುಗಿದವು. ಜಾತ್ರೆ ನಿಮಿತ್ತ ಫೆ.20ರಿಂದಲೇ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿವೆ. ಗುರುವಾರ ಮಂಗಳೇಶ್ವರನಿಗೆ ಅಭಿಷೇಕ, ಅನ್ನ ಸಂತರ್ಪಣೆ 5 ಗಂಟೆಗೆ ಮಹಾ ರಥೋತ್ಸವ ಜರುಗಿತು.



ಶೇಖರ್ ಗೌಡ್ರ ಮಾಲಿಪಾಟೀಲ, ಶೇಖರ್ ಗೌಡ್ರ ಪೊಲೀಸ್‌ಪಾಟೀಲ, ಸಿದ್ದನಗೌಡ್ರ ಕಿರ್ತಿಗೌಡ್ರ, ಮಲ್ಲಪ್ಪ ಶಿವಸಿಂಪರ್, ವಿಶ್ವನಾಥ ಮರಿಬಸಪ್ಪನವರ್, ವೀರಭದ್ರಪ್ಪ ಸುಂಕದ, ಮೃತ್ಯುಂಜಯ ಪಾಟೀಲ, ರುದ್ರಗೌಡ್ರ ಪಾಟೀಲ, ಈಶಪ್ಪ ಹೂಗಾರ, ಮಂಜುನಾಥ ಹೂಗಾರ, ಮಂಗಳೇಶ ತೊದಲರ್, ಈರಣ್ಣ ಯಮ್ಮಿ, ಜಗದೀಶ ಉಮಚಗಿ, ಮುದಕಪ್ಪ ಉಮಚಗಿ, ಮುದಕಪ್ಪ ಬ್ಯಾಳಿ, ಮೈಲಾರಪ್ಪ ಹ್ಯಾಟಿ, ಶಿವಣ್ಣ ಕಂದಗಲ್, ಬಸಪ್ಪ ಕರಡಿ, ಎಂ.ಬಿ. ಆಳವಂಡಿ, ನೀಲನಗೌಡ ಪೋಲಿಸ್ ಪಾಟೀಲ್, ರೇವಣಸಿದ್ದಯ್ಯ ಹಿರೇಮಠ, ಅಶೋಕ ತೋಟದ, ಎಂ.ಎ. ದೇಸಾಯಿ, ಶರಣಪ್ಪ ಹ್ಯಾಟಿ, ಪ್ರಶಾಂತ ಆಳವಂಡಿ, ಶರಣಗೌಡ ಓಜನಳ್ಳಿ, ವೀರಪಾಕ್ಷಪ್ಪ ಮಹಾಂತ, ಈರಣ್ಣ ಹಳ್ಳಿಕೇರಿ ಸೇರಿದಂತೆ ಗ್ರಾಮದ ಸರ್ವ ಸದ್ಭಕ್ತರು, ಮುಖಂಡರು, ಹಿರಿಯರು, ದೇವಸ್ಥಾನ ಸಮಿತಿಯವರು, ವಿವಿಧ ಯುವಕ ಸಂಘಟನೆಗಳು, ಮಹಿಳಾ ಸಂಘದವರು ಹಾಜರಿದ್ದರು.

ಜಾತ್ರಾ ಮಹೋತ್ಸವದಲ್ಲಿ ಯಾವುದೇ ಅವಘಡಗಳು ಜರುಗದಂತೆ ಸೂಕ್ತ ಪೊಲೀಸ್ ಬಿಗಿ ಬಂದೋಬಸ್ತನ್ನು ಕುಕನೂರು ಠಾಣೆಯ ಪಿಎಸ್ಐ ಟಿ.ಗುರುರಾಜ ನಿಯೋಜಿಸಿದ್ದರು.

ಕಲಿಕೆಗೆ ಒತ್ತು ನೀಡಿ: ರೇಣುಕಾ ಬಾಗಲಿ

ಯಲಬುರ್ಗಾ: ಪ್ರತಿಯೊಂದು ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜತೆಗೆ ಒಳ್ಳೆಯ ಜೀವನಕ್ಕೆ ಅವಶ್ಯವಾದ ನೈತಿಕ ಮೌಲ್ಯಗಳನ್ನು ನೀಡಲಾಗುತ್ತದೆ' ಎಂದು ಮುಖ್ಯ ಶಿಕ್ಷಕರು ರೇಣುಕಾ ಬಾಗಲಿ ಹೇಳಿದರು.

ತಾಲೂಕಿನ ಮುಧೋಳ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸರಸ್ವತಿ ಪೂಜೆ ಹಾಗೂ 7ನೇ ತರಗತಿ ವಿದ್ಯಾರ್ಥಿಗಳ ಬಿಳ್ಕೊಡುಗೆ ಕಾರ್ಯಕ್ರಮದ ಸಮಾರಂಭದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಕಲಿಕೆಗೆ ಹೆಚ್ಚು ಒತ್ತು ನೀಡಬೇಕು. ಗುರು ಹಿರಿಯರಿಗೆ ಗೌರವ ನೀಡುವಂತವರಾಗಬೇಕು. ಓದಿನಲ್ಲಿ ಸಾಧನೆಗೈದು ಗ್ರಾಮ ಮತ್ತು ತಾಲೂಕಿಗೆ ಕೀರ್ತಿ ತರಬೇಕೆಂದು ಸಲಹೆ ನೀಡಿದರು.

ಎಸ್‌ಡಿಎಂಸಿ ಅಧ್ಯಕ್ಷರು ಹುಮೇಶ್ ಹವಳದ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಪ್ರತಿ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಪ್ರತಿ ವಿದ್ಯಾರ್ಥಿಗೂ ಲಭ್ಯವಾಗಲಿ. ಈ ದಿಸೆಯಲ್ಲಿ ಶಿಕ್ಷಕರು ಹೆಚ್ಚಿನ ಮುತುವರ್ಜಿ ವಹಿಸಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಬೇಕು ಮತ್ತು ಜೀವನದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕಾರಯುತ ಶಿಕ್ಷಣವನ್ನು ನೀಡುವ ಹೊಣೆಗಾರಿಕೆ ಪ್ರಾಥಮಿಕ ಶಾಲೆ ಶಿಕ್ಷಕರಿಗೆ ಹಾಗೂ ಪೋಷಕರು ಮೇಲಿದೆ ಎಂದರು.

ಎಸ್‌ಡಿಎಂಸಿ ಸದಸ್ಯರು ತಿಮ್ಮಣ್ಣ ವಡ್ಡರ, ಮಲ್ಲೇಶ್ ಅಡಗುಡಿ, ವಿಶ್ವನಾಥ್ ಶಿರುರಮಠ, ಸುರೇಶ ಹುನಗುಂದ, ರಸೂಲ್ ಜಂಜೇಲಿ, ರೇಣುಕಾ ಅಮರಾಗೋಳ, ಕಸ್ತೂರೆವ್ವ ಉಂಡಿ ಭಾಗವಹಿಸಿದ್ದರು. ಶಿಕ್ಷಕರು ಮಾಲತೇಶ್ ಮುಗುನೂರ್, ನೀಲಮ್ಮ ತೋಟಗಂಟಿ, ರೇಣುಕಾ ಚಿಕ್ಕರಗುಂದ, ಬಿ.ಎಸ್.ಎಂ.ಕೌಶಲ್ಯ, ದ್ಯಾಮಣ್ಣ ಕಾಡಣ್ಣವರ, ಶಿಕ್ಷಕ ಶ್ರೀಕಾಂತ್ ಮಾಸಗಟ್ಟಿ, ನಿಜಲಿಂಗಪ್ಪ ಕರಡಿ ನಿರೂಪಿಸಿದರು. ಅಡುಗೆ ಸಿಂಬಂದಿ ಹಾಗೂ ಪಾಲಕರು ಮಕ್ಕಳು ಉಪಸ್ಥಿತರಿದ್ದರು.



3 ದಿನ ಮೂಲ ಜ್ಯೋತಿರ್ಲಿಂಗದ ದರ್ಶನ: ಶ್ರೀಗಳು

ಕಲಬುರಗಿ: ಗುಜರಾತ್‌ನ ಪವಿತ್ರ ಸೋಮನಾಥ ದೇವಾಲಯದ ಮೇಲೆ ನಡೆದ ಆಕ್ರಮಣದ ವೇಳೆ ಸಂರಕ್ಷಿಸಲ್ಪಟ್ಟ ಜ್ಯೋತಿರ್ಲಿಂಗದ ಮೂಲ ಅಂಶಗಳ ಪವಿತ್ರ ದರ್ಶನಕ್ಕೆ ಕಲಬುರಗಿ ನಗರದಲ್ಲಿ ಸಕಲ ಸಿದ್ಧತೆ ಮಾಡಿಕೊಂಡಿದ್ದು, ರವಿಶಂಕರ್ ಗುರೂಜಿ ಅವರ ಆಶ್ರಮದ ವತಿಯಿಂದ ಫೆ.27ರಿಂದ ಮಾ.4ರವರೆಗೆ ನಗರದ ವಿವಿಧೆಡೆ ಈ ಐತಿಹಾಸಿಕ 'ಶಿವಲಿಂಗ'ಗಳ ದರ್ಶನ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಶರಣಾನಂದ ಸ್ವಾಮೀಜಿ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕ್ರಿ.ಶ.1026ರಲ್ಲಿ ಮೊಹಮ್ಮದ್ ಘಜನಿಯು ಸೋಮನಾಥ ದೇವಾಲಯ ಧ್ವಂಸಗೊಳಿಸಿದಾಗ, ಅಲ್ಲಿದ್ದ ಅಗ್ನಿಹೋತ್ರಿ ಪುರೋಹಿತರು ಲಿಂಗದ ಪವಿತ್ರ ಚೂರುಗಳನ್ನು ರಹಸ್ಯವಾಗಿ ಸಂಗ್ರಹಿಸಿದ್ದರು. ತಲೆಮಾರುಗಳಿಂದ ಗೌಪ್ಯವಾಗಿ ಸಂರಕ್ಷಿಸಲ್ಪಟ್ಟ ಈ ಲಿಂಗದ ಭಾಗಗಳಿಗೆ ಶಿವಲಿಂಗದ ಆಕಾರ ನೀಡಲಾಗಿದ್ದು, ಇದೀಗ ಭಕ್ತರ ದರ್ಶನಕ್ಕೆ ಲಭ್ಯವಿದೆ ಎಂದು ತಿಳಿಸಿದರು.

ಫೆ.27ರಂದು ಶರಣಬಸವೇಶ್ವರ ದೇವಸ್ಥಾನದ ಶಿವಾನುಭವ ಮಂಟಪದಲ್ಲಿ ಬೆಳಿಗ್ಗೆ 10:30ಕ್ಕೆ ರುದ್ರಪೂಜೆ ಹಾಗೂ ದರ್ಶನ. ಫೆ.28ರಂದು ಬೆಳಿಗ್ಗೆ ನಗರೇಶ್ವರ ದೇವಸ್ಥಾನ ಹಾಗೂ ಸಂಜೆ ಮಾಯಿ ಮಂದಿರದಲ್ಲಿ ದರ್ಶನಕ್ಕೆ ಅವಕಾಶ. ಮಾ.1ರಂದು ಬೆಳಿಗ್ಗೆ ಆದರ್ಶ ನಗರದ ದಾನಮ್ಮ ದೇವಿ ದೇವಸ್ಥಾನದಲ್ಲಿ ವ್ಯವಸ್ಥೆ. ಮಾ.1ರಿಂದ 4ರವರೆಗೆ ನಗರದ ಪಂಡಿತ್ ರಂಗಮಂದಿರ ಸಮೀಪದ 'ಶ್ರೀಜ್ಞಾನ ಕ್ಷೇತ್ರ'ದಲ್ಲಿ ದರ್ಶನ ಪಡೆಯಬಹುದು ಎಂದು ಮಾಹಿತಿ ನೀಡಿದರು.



1924ರಲ್ಲಿ ಕಂಚಿ ಶಂಕರಾಚಾರ್ಯರು ಈ ಅಗ್ನಿಹೋತ್ರಿಗಳಿಗೆ ಈ ಶಿವಲಿಂಗಗಳನ್ನು ನೂರು ವರ್ಷಗಳ ಕಾಲ ಗುಪ್ತವಾಗಿ ಸಂರಕ್ಷಿಸಿ ಗುರುದೇವರಿಗೆ ನೀಡುವಂತೆ ಸೂಚಿಸಿದ್ದರು. ಅದರಂತೆ ಕಳೆದ ಜ.2025ರಲ್ಲಿ ಅಗ್ನಿಹೋತ್ರಿಗಳು ಈ ಶಿವಲಿಂಗಗಳನ್ನು ಗುರುದೇವರಿಗೆ ಹಸ್ತಾಂತರಿಸಿದ್ದು, ಮಹಾಶಿವರಾತ್ರಿಯಂದು ಜ್ಯೋತಿರ್ಲಿಂಗದ ಈ ಭಾಗಗಳನ್ನು ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಒಂದು ಸಾವಿರ ವರ್ಷಗಳ ನಂತರ ಮೊಟ್ಟ ಮೊದಲ ಬಾರಿಗೆ ಸಾರ್ವಜನಿಕರ ವೀಕ್ಷಣೆಗೆ ಮತ್ತು ದರ್ಶನಕ್ಕೆ ಮುಕ್ತಗೊಳಿಸಲಾಗಿದ್ದು, ಈಗಾಗಲೇ ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ್ ಹಾಗೂ ನಾರ್ಥ್ ಇಂಡಿಯಾದಲ್ಲಿ, ಕಳೆದ ಫೆ.19ರಂದು ಬೆಂಗಳೂರಿನಲ್ಲಿ ಜ್ಯೋತಿರ್ಲಿಂಗದ ದರ್ಶನವನ್ನು ಸಾರ್ವಜನಿಕರು ಪಡೆದಿದ್ದಾರೆ ಎಂದು ಶರಣಾನಂದ ಸ್ವಾಮಿ ತಿಳಿಸಿದರು.

ಆಶ್ರಮದ ಪ್ರಮುಖರಾದ ದತ್ತಾತ್ರೇಯ ಚುಂಚೂರ್, ಚನ್ನವೀರ ತಡಕಲ್, ಡಾ.ಕವಿರಾಜ್ ಮೋತಕಪಳ್ಳಿ ಇದ್ದರು.

ಪರವಾನಗಿ ಭೂಮಾಪಕರ ಸಂಘದಿಂದ ಮನವಿ

ಮಾನ್ವಿ: ಪಟ್ಟಣದ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂಮಾಪಕರ ಸಂಘ ಮಾನ್ವಿ ಮತ್ತು ಸಿರವಾರ ವತಿಯಿಂದ ಭೂದಾಖಲೆಗಳ ಸಹಾಯಕ ನಿರ್ದೇಶಕ ಮೊಹಮ್ಮದ್ ನೂರುದ್ದೀನ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮಾನ್ವಿ ತಾ. ಅಧ್ಯಕ್ಷ ಡಿ.ಎಚ್.ಪರಶುರಾಮಪ್ಪ ಮಾತನಾಡಿ, ರಾಜ್ಯ ಸರ್ಕಾರವು 1999-20ನೇ ಸಾಲಿನಲ್ಲಿ ಪರವಾನಗೆ ಭೂಮಾಪಕರುಗಳನ್ನಾಗಿ ನಮ್ಮನ್ನು ನೇಮಕ ಮಾಡಿ ಹುದ್ದೆ ಸೃಜಿಸಿದರೂ ಕೂಡ ಪರವಾನಗಿ ಭೂಮಾಪಕರುಗಳನ್ನು 11 ಇ. ಹಾಗೂ ತತ್ಕಾಲ್ ಪೋಡಿಗೆ ಮಾತ್ರ ಸೀಮಿತ ಗೊಳಿಸಿ ಪ್ರತಿ ಕಡತಕ್ಕೆ ಕೇವಲ 4ನೂರು ರುಗಳನ್ನು ನಿಗದಿಗೊಳಿಸಿ ರೈತರ ಅರ್ಜಿಗಳಿಗೆ ನಮಗೆ ಕೇವಲ 300 ಮಾತ್ರ ಸಂಭವನೆ ದೊರೆಯುತ್ತಿದೆ. ಕಾಲಕ್ಕೆ ತಕ್ಕಂತೆ ಕಾನೂನುಗಳನ್ನು ತಿದ್ದುಪಡಿ ಮಾಡಿ ಸರ್ಕಾರಿ ಭೂಮಾಪಕರು ನಿರ್ವಹಿಸಬೇಕಾದ ಹದ್ದುಬಸ್ತು ಸೇರಿದಂತೆ ರೈತರು ನೀಡಿದ ಕಡತಗಳನ್ನು ಹಿಂಪಡೆಯುವಂತೆ ಒತ್ತಾಯಿಸಿದರು.ಸಿರವಾರ ತಾ.ಅಧ್ಯಕ್ಷರಾದ ಕೃಷ್ಣ ತಪಾಸಕರಾದ ಮೈನುದ್ದೀನ್ , ಗಾಯತ್ರಿ ಪರವಾನಿಗೆ ಭೂಮಾಪಕರಾದ ಓಂಕಾರಮೂರ್ತಿ, ಉದಯಕುಮಾರ್, ಮೊಹಿನುದ್ದೀನ್, ಸಿದ್ದರಾಜಯ್ಯ, ವೀರನಗೌಡ, ವಿಶ್ವನಾಥ, ಪರಮೇಶ, ರಾಜ ಮಹ್ಮದ್, ಮಹಮ್ಮದ್‌ಜಾಫರ್, ಮಹೇಶ್ ಪಾಟೀಲ್, ಸಂತೋಷ, ಮಹಿಬೂಬ್, ರಮೇಶ ಚೌಹಣ್, ಎಚ್.ಸುರೇಶ್, ಟಿ.ಎಮ್.ಇರ್ಫಾನ್ ಇತರರಿದ್ದರು.



ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಬೆಂಗಳೂರು ಚಲೋ

ಸಿಂಧನೂರು: ಅಂಗನವಾಡಿ ಕಾರ್ಯಕರ್ತೆಯರಿಗೆ 15,000 ರೂ.ಹಾಗೂ ಸಹಾಯಕಿಯರಿಗೆ 10,000 ರೂ. ಗೌರವಧನ ಹೆಚ್ಚಿಸಿ ಜಾರಿಗೊಳಿಸಬೇಕು. 2011ರಿಂದ ನಿವೃತ್ತರಾದ ವಯೋವೃದ್ಧ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗ್ರಾಚ್ಯುಟಿ ಸೌಲಭ್ಯ ಕಲ್ಪಿಸಬೇಕು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಾ.2ರಂದು 'ಬೆಂಗಳೂರು ಚಲೋ' ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಶನ್ (ಎಐಟಿಯುಸಿ) ಜಿಲ್ಲಾ ಗೌರವಾಧ್ಯಕ್ಷ ಡಿ.ಎಚ್.ಕಂಬಳಿ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಗನವಾಡಿ ಕೇಂದ್ರದ ಕೆಲಸದ ಜೊತೆಗೆ ಬಲವಂತವಾಗಿ ಬಿ.ಎಲ್.ಓ ಜವಾಬ್ದಾರಿ ಹೊರೆಸುತ್ತಿರುವುದು ಕಾರ್ಯ ನಿರ್ವಹಣೆಗೆ ಅಡಚಣೆಯಾಗುತ್ತಿದೆ ಎಂದು ಹೇಳಿದರು.ಬಿಎಲ್‌ಓ ಜವಾಬ್ದಾರಿ ನಿರಾಕರಿಸುವವರ ಮೇಲೆ ಶಿಸ್ತು ಕ್ರಮ ಜರುಗಿಸುವುದು ಸರಿಯಲ್ಲ ಎಂದು ಆಕ್ಷೇಪಿಸಿದರು. ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ಆರಂಭಿಸಲು ಅವಕಾಶ ನೀಡಿರುವುದರಿಂದ ಅಂಗನವಾಡಿಗಳಿಗೆ ಬರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಆದ್ದರಿಂದ ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್‌ಕೆಜಿ-ಯುಕೆಜಿ ಪ್ರಾರಂಭಿಸಬೇಕು ಎಂದು ಆಗ್ರಹಿಸಿದರು.

ಫೆಡರೇಶನ್ ಜಿಲ್ಲಾ ಕಾರ್ಯಾಧ್ಯಕ್ಷ ಸಂಗಯ್ಯಸ್ವಾಮಿ ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಡಿ.ಎ.30 ರೂ.ಇರುವುದನ್ನು ಬೆಲೆ ಏರಿಕೆಗೆ ಅನುಗುಣವಾಗಿ ಹೆಚ್ಚಿಸಬೇಕು ಹಾಗೂ ನಗರ ಪ್ರದೇಶದವರಿಗೆ ವಿಸ್ತರಿಸಬೇಕು ಎಂದು ಹೇಳಿದರು.



ಮಾತೃವಂದನ ಮತ್ತು ಭಾಗ್ಯಲಕ್ಷ್ಮೀ ಯೋಜನೆಗಳ ಪ್ರೋತ್ಸಾಹಧನ ಬಿಡುಗಡೆ ಮಾಡಬೇಕು. ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಕೇಂದ್ರಗಳಿಗೆ ಬಾಡಿಗೆ ಹಣವನ್ನು ನಿಯಮಿತವಾಗಿ ಬಿಡುಗಡೆ ಮಾಡಬೇಕು.ಅನಾರೋಗ್ಯಕ್ಕೆ ಒಳಗಾದ ಕಾರ್ಯಕರ್ತೆಯರಿಗೆ ಉಚಿತ ಚಿಕಿತ್ಸೆ ಹಾಗೂ ವೇತನ ಸಹಿತ ವೈದ್ಯಕೀಯ ರಜೆ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಮೊಟ್ಟೆ ದರ ಏರಿಕೆಗೆ ಅನುಗುಣವಾಗಿ ಹಣ ಬಿಡುಗಡೆ,ಅನುಕಂಪದ ಆಧಾರದಲ್ಲಿ ನೇಮಕಾತಿ ನಿಯಮ ಸಡಿಲಿಕೆ,ಕೇಂದ್ರ ನಿರ್ವಹಣೆಗೆ ನೀಡುವ 2000 ರೂ.ಸಾದಿಲ್ವಾರು ಹಣ ಬಳಕೆಗೆ ಸ್ಪಷ್ಟ ಮಾರ್ಗಸೂಚಿ ನೀಡುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದರು.

ಜಿಲ್ಲಾ ಘಟಕದ ಅಧ್ಯಕ್ಷೆ ಸುಲೋಚನಾ,ತಾಲೂಕು ಘಟಕದ ಅಧ್ಯಕ್ಷೆ ಗಿರಿಜಮ್ಮ ಪದಾಧಿಕಾರಿಗಳಾದ ಸಾವಿತ್ರಿ ಎಲೆಕೂಡ್ಲಿಗಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ ಕ್ಯಾತ್ನಟ್ಟಿ,ತಿಪ್ಪಯ್ಯ ಶೆಟ್ಟಿ ಸೇರಿದಂತೆ ಇನ್ನಿತರರು ಇದ್ದರು.

ಕಿರುಸುದ್ದಿ

ಅಧ್ಯಕ್ಷರಾಗಿ ವಿಜಯಲಕ್ಷ್ಮೀ ಆಯ್ಕೆ



ಹೂವಿನಹಡಗಲಿ: ಪಟ್ಟಣದ ಪತ್ರಿಕಾ ಭವನದಲ್ಲಿ ರಾಜ್ಯ ರೈತ ಸಂಘದ ಹೂವಿನಹಡಗಲಿ ಬಣದ ವಿಜಯನಗರ ಜಿಲ್ಲಾ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಜಿಲ್ಲಾ ಸಮಿತಿ ರಚನೆ: ಹೊಸಪೇಟೆ ಪ್ರವಾಸಿ ಮಂದಿರದಲ್ಲಿ ರಾಜ್ಯ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಗೌರವಾಧ್ಯಕ್ಷ ಚಾಮರಾಸ್ ಮಾಲಿಪಾಟೀಲ, ಕಾರ್ಯಾಧ್ಯಕ್ಷ ಜೆ.ಎಂ.ವೀರಸಂಗಯ್ಯ, ಕಲ್ಯಾಣ ಕರ್ನಾಟಕ ವಿಭಾಗಿಯ ಉಪಾಧ್ಯಕ್ಷ ಮಲ್ಲಿಕಾರ್ಜುನ ಸತ್ಯಪೇಟೆ, ವಿಭಾಗಿ ಕಾರ್ಯದರ್ಶಿ ಎಂಎಲ್‌ಕೆ ನಾಯ್ಡು, ಸಂಘಟನಾ ಕಾರ್ಯದರ್ಶಿ ಬಿ.ಗೋಣಿಬಸಪ್ಪ, ಮಹಿಳಾ ರಾಜ್ಯಾಧ್ಯಕ್ಷ ನಾಗರತ್ನಮ್ಮ ಪಾಟೀಲ ಅವರ ನೇತೃತ್ವದಲ್ಲಿ ಪದಾಧಿಕಾರಿಗಳನ್ನೂ ರಚನೆ ಮಾಡಲಾಯಿತು. ವಿಜಯನಗರ ಜಿಲ್ಲೆಯ ಅಧ್ಯಕ್ಷ ಅಂಜಿನೇಯಲು ಮಹಿಳಾ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಪಟ್ಟಣದ ಬಿಎಚ್‌ಎಂ.ವಿಜಯಲಕ್ಷ್ಮೀ ಮತ್ತು ಪುರುಷ ರೈತ ಜಿಲ್ಲಾ ಉಪಾಧ್ಯಕ್ಷರಾಗಿ ಕೆ.ಮಂಜುನಾಥ ಮಠ, ಮತ್ತು ಕೆ.ಗನಿಸಾಬ್ ಬಾವಿಹಳ್ಳಿ, ಯುವ ಘಟಕದ ಪ್ರಧಾನ ಕಾರ್ಯದರ್ಶಿ ದುರುಗಪ್ಪ, ಎಚ್.ಹೊಳಗುಂದಿ ಅವರನ್ನು ಆಯ್ಕೆ ಮಾಡಿದ್ದಾರೆ. ತಾಲೂಕು ಅಧ್ಯಕ್ಷ ಗುಜನೂರು ಸಿದ್ದಪ್ಪ, ಪ್ರಧಾನ ಕಾರ್ಯದರ್ಶಿ ಶಿವರಾಜ್ ಎಂ.ಹೊಳಗುಂದಿ ಮತ್ತಿತರರಿದ್ದರು.

ಜಂಬನಗೌಡಗೆ ಡಾಕ್ಟರೇಟ್ ಪದವಿ ಪ್ರದಾನ



ಬಳ್ಳಾರಿ: ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಜಿಲ್ಲೆಯ ಜಂಬನಗೌಡ ಅವರಿಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗಿದೆ. ಹಂಪಿ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಜಂಬನಗೌಡ ಅವರು ಡಾ.ಎಂ.ಮಲ್ಲಿಕಾರ್ಜುನಗೌಡ ಅವರ ಮಾರ್ಗದರ್ಶನದಲ್ಲಿ 'ವಿಜಯ ನಗರ ಸಾಮ್ರಾಜ್ಯ ಕುರಿತು ಕನ್ನಡ ನಾಟಕಗಳ ಅಧ್ಯಯನ' ಎನ್ನುವ ವಿಷಯದ ಮೇಲೆ ಸಮಗ್ರ ಅಧ್ಯಯನ ಮಾಡಿ ಸಲ್ಲಿಸಿದ ಮಹಾ ಪ್ರಬಂಧಕ್ಕೆ ರಾಜ್ಯಪಾಲರು ಕನ್ನಡ ವಿಶ್ವವಿದ್ಯಾಲಯ 34ನೇ ಘಟಿಕೋತ್ಸವದ ನುಡಿ ಹಬ್ಬದಲ್ಲಿ ಪಿಎಚ್‌ಡಿ ಪದವಿ ನೀಡಿ ಗೌರವಿಸಿದ್ದಾರೆ. ಪಿಎಚ್‌ಡಿ ಪದವಿ ಲಭಿಸಿದ ಹಿನ್ನೆಲೆ ವಿವಿಧ ಗಣ್ಯರು ಮತ್ತು ಮಾರ್ಗದರ್ಶಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರು, ಸಹಪಾಠಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಪಿಂಚಣಿ ಹೆಚ್ಚಳಕ್ಕೆ ಹೋರಾಟ

ಗಂಗಾವತಿ: ಸಮೀಪದ ಮರಳಿಯ ಶ್ರೀಗಂಗಾಪರಮೇಶ್ವರಿ ದೇವಸ್ಥಾನದ ಸಮುದಾಯ ಭವನದಲ್ಲಿ ಕೊಪ್ಪಳ ಜಿಲ್ಲೆಯ ಸಭೆ ಜರುಗಿತು.

ರಾಷ್ಟ್ರೀಯ ಸಂಘರ್ಷ ಸಮಿತಿಯ ರಾಜ್ಯ ಕಾರ್ಯಾಧ್ಯಕ್ಷ ವೀರಕುಮಾರಗಡಾದ, ಪಿಂಚಣಿ ಹೆಚ್ಚು ಮಾಡಲು ಸಂಘಟಿತ ಹೋರಾಟದ ಮುಖಾಂತರ ಸಾಧ್ಯ ಎಂದು ತಿಳಿಸಿದರು. ಉಪಾಧ್ಯಕ್ಷರಾದ ಚನ್ನಬಸಯ್ಯ ಅವರು ದಿನಾಂಕ 9, 10 ಹಾಗೂ 11 ಮಾರ್ಚ್‌ನಲ್ಲಿ ದೆಹಲಿಯ ಜಂತರ ಮಂತರದಲ್ಲಿ ನಡೆಯುವ ಹೋರಾಟದಲ್ಲಿ ಪಾಲ್ಗೊಂಡು ಯಶಸ್ವಿ ಮಾಡಬೇಕೆಂದು ಕರೆ ನೀಡಿದರು. ಮಾಹಿತಿ ಸಂಚಾಲಕ ಅನೀಲ ಇನಾಮದಾರ ಅವರು ವಾರ್ಷಿಕ ಚಂದಾ, ಅಜೀವ ಚಂದಾದಾರರಾಗಬೇಕೆಂದು ವಿನಂತಿಸಿದರು.

ಇನ್ನುಳಿದ ಶಾಂತಿನಾಥ ಪಾಟೀಲ, ಗುಂಡಪ್ಪ ತೊಂತನಾಳ, ಎಸ್.ಎಸ್.ಅಲಸುಂಡಿ, ಜಿಲ್ಲಾ ಅಧ್ಯಕ್ಷರಾದ ಮಹಮ್ಮದ್ ಶ್ಯಾಮೀದ, ಮೌನೇಶ್ ಪತ್ತಾರ ಆಗಮಿಸಿದ್ದರು. ಸಕ್ಕರೆ ಕಾರ್ಖಾನೆಯ ನಿವೃತ್ತ ಕಾರ್ಮಿಕರು, ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು, ಸಹಕಾರಿ ಇಲಾಖೆ ಮತ್ತು ಸಾರಿಗೆ ಇಲಾಖೆಯ ನಿವೃತ್ತ ನೌಕರದಾರರು ಭಾಗವಹಿಸಿದ್ದರು.

ರಮೇಶ್ ಕುಲಕರ್ಣಿ, ಮೌನಪ್ಪ ನಾಯಕ, ವೀರಯ್ಯಸ್ವಾಮಿ, ಮುದಗಲ್ ಬಸಪ್ಪ, ಎಂ. ಹೊನ್ನಪ್ಪ, ಬಸಪ್ಪ ಉಮಲೂಟಿ, ಆಲಮಯ್ಯ, ಶಿವರಾಜ್ ಹಾಗೂ ಸುಭಾನಿ ಇವರ ಮುಂದಾಳತ್ವದಲ್ಲಿ ಯಶಸ್ವಿಯಾಗಿ ನಡೆಯಿತು ಎಂದು ಸಂಘಟಕರಾದ ಶಾಂತಿನಾಥ ಪಾಟೀಲ ತಿಳಿಸಿದರು.



ಹನುಮಸಾಗರ: ಸಮೀಪದ ಕಬ್ಬರಗಿ ಗ್ರಾಮದ ಕರಿಯಪ್ಪ ಗೌಡ್ರು ಅವರಿಗೆ ಕನ್ನಡ ವಿಶ್ವವಿದ್ಯಾಲಯ ಹಂಪಿ 34ನೇ ಘಟಿಕೋತ್ಸವದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರಿಂದ ಯುವ ಪ್ರತಿಭೆಯಾದ ಕರಿಯಪ್ಪ ಗೌಡ್ರುಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. ಸಚಿವರಾದ ಎಂ.ಸಿ.ಸುಧಾಕರ್ ಡಿ.ವಿ.ಪರಮಶಿವಮೂರ್ತಿ ಇದ್ದರು. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಸಿ.ಮಹದೇವ ಅವರ ಮಾರ್ಗದರ್ಶನ ನೀಡಿದ್ದಾರೆ.

ಹನುಮಪ್ಪ ತಾತನವರ ದೇವಸ್ಥಾನ ಲೋಕಾರ್ಪಣೆ

ಕುರುಗೋಡು: ಸಮೀಪದ ಹಳೆ ನೆಲ್ಲುಡಿ ಗ್ರಾಮದಲ್ಲಿ ಗುರುವಾರ ಹಂಪಿ ಸಾವಿರ ದೇವರ ಮಠದ ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿ ಹಾಗೂ ಬುಕ್ಕಸಾಗತದ ಕರಿಸಿದ್ದೇಶ್ವರ ವಿಶ್ವರಾಧ್ಯ ಶಿವಾಚಾರ್ಯ ಮಹಾಸ್ವಾಮಿ ದಿವ್ಯ ಸಾನಿಧ್ಯ ಪವಾಡ ಪುರುಷ ಹಾಗೂ ಶಿವ ಶರಣ ಹನುಮಪ್ಪ ತಾತನವರ ನೂತನ ಶಿಲಾಮೂರ್ತಿ ಪ್ರತಿಷ್ಠಾಪನೆ ಜೊತೆಗೆ ದೇವಾಲಯ ಅದ್ದೂರಿಯಾಗಿ ಲೋಕಾರ್ಪಣೆಗೊಂಡಿತು.

ಇಲ್ಲಿನ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದ ಹೋಮ ಹವನ ಸೇರಿದಂತೆ ನಾನಾ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ನೆರವೇರಿದವು.

ನಂತರ ದೇವಸ್ಥಾನ ಆವರಣದಲ್ಲಿ ಧರ್ಮಸಭೆಯಲ್ಲಿ ಶಾಸಕ ಜೆ.ಎನ್.ಗಣೇಶ್ ಉದ್ಘಾಟಿಸಿ ಮಾತನಾಡಿ, ಹನುಮಪ್ಪ ತಾತನ ಪವಾಡ ದೊಡ್ಡದಿದೆ. ಇವರ ಆರಾಧನೆ ಮೂಲಕ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಬೇಕು ಎಂದರು. ಪೂರ್ವದಲ್ಲಿ ಮೂರು ಸಾಮೂಹಿಕ ವಿವಾಹ ವೇಳೆ ಉಭಯ ಶ್ರೀಗಳು ಮಾತನಾಡಿ, ಸತಿಪತಿಗಳು ಸಾಮರಸ್ಯದ ಜೀವನ ನಡೆಸಿ ತಮ್ಮ ಕುಟುಂಬಕ್ಕೆ ಉತ್ತಮ ಮಕ್ಕಳು ಜನನ ನೀಡಿ ಶೈಕ್ಷಣಿಕ ಹಾಗೂ ಸಮಾಜಿಕ ಉತ್ತಮ ಕೊಡಿನೀಡಿರಿ ಎಂದು ಸಲಹೆ ನೀಡಿದರು.ನೆಲ್ಲುಡಿ ಕರಿಬಸವನಗೌಡ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಹಾಗೂ ಜನಪ್ರತಿನಿಧಿಗಳು, ವಿಶೇಷ ಆಹ್ವಾನಿತರು, ಅತಿಥಿಗಳು ಹಾಗೂ ಶಿವಶರಣ ಹನುಮಪ್ಪ ತಾತಾನವರ ದೇವಸ್ಥಾನ ಸೇವಾ ಸಮಿತಿಯವರು, ಸ್ಥಳೀಯ ಮತ್ತು ಸುತ್ತಮುತ್ತಲಿನ ಭಕ್ತರು ಭಾಗವಹಿಸಿದ್ದರು.



ಕುರುಗೋಡು: ಸಮೀಪದ ಹಳೆ ನೆಲ್ಲುಡಿ ಗ್ರಾಮದಲ್ಲಿ ಗುರುವಾರ ಹಂಪಿ ಸಾವಿರ ದೇವರ ಮಠದ ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿ ಹಾಗೂ ಬುಕ್ಕಸಾಗತದ ಕರಿಸಿದ್ದೇಶ್ವರ ವಿಶ್ವರಾಧ್ಯ ಶಿವಾಚಾರ್ಯ ಮಹಾಸ್ವಾಮಿ ದಿವ್ಯ ಸಾನಿಧ್ಯ ಪವಾಡ ಪುರುಷ ಹಾಗೂ ಶಿವ ಶರಣ ಹನುಮಪ್ಪ ತಾತನವರ ನೂತನ ಶಿಲಾಮೂರ್ತಿ ಪ್ರತಿಷ್ಠಾಪನೆ ಜೊತೆಗೆ ದೇವಾಲಯ ಅದ್ದೂರಿಯಾಗಿ ಲೋಕಾರ್ಪಣೆ ಹಿನ್ನೆಲೆ ಸಾಮೂಹಿಕ ಮದುವೆ ನಡೆದವು.

ಹಿಂದೂ ಸಮಾಜೋತ್ಸವ | ಶ್ರೀನಿವಾಸ ನಾಯಕ ಅಭಿಮತ

ನೆಲ, ಜಲದಲ್ಲಿ ದೇವರನ್ನು ಕಾಣುವುದು ಹಿಂದೂ ಸಂಸ್ಕೃತಿ

ಹುಣಸಗಿ: ಇಲ್ಲಿನ ನೆಲ ಮತ್ತು ಜಲದಲ್ಲಿ ದೇವರನ್ನು ಕಾಣುವ ಮೂಲಕ ಜನ್ಮ ಭೂಮಿ ಹಾಗೂ ಗೋಮಾತೆಯನ್ನು ಗೌರವಿಸುವುದನ್ನು ನಮ್ಮ ಸಂಸ್ಕೃತಿ ಪರಂಪರೆಯು ನಮಗೆ ಕಲಿಸಿಕೊಟ್ಟಿದೆ ಎಂದು ಆರ್‌ಎಸ್‌ಎಸ್‌ನ ಕರ್ನಾಟಕ ಉತ್ತರ ಸಹ ಪ್ರಾಂತ ಪ್ರಚಾರಕ ಶ್ರೀನಿವಾಸ ನಾಯಕ ಹೇಳಿದರು.

ಪಟ್ಟಣದ ಕಾಳಿಕಾದೇವಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಹಿಂದೂ ಸಮಾಜೋತ್ಸವದಲ್ಲಿ ಮಾತನಾಡಿದರು.

ಅನಾದಿ ಕಾಲದಿಂದಲೂ ನಾವು ಪ್ರಕೃತಿಯನ್ನು ಆರಾಧಿಸುತ್ತಾ ಬಂದಿದ್ದೇವೆ. ನಮ್ಮ ಜೀವನಕ್ಕೆ ಆಧಾರವಾಗಿರುವ ಎಲ್ಲವನ್ನು ಪೂಜ್ಯ ಭಾವನೆಯಿಂದ ನೋಡುತ್ತೇವೆ. ಮನುಷ್ಯತ್ವದಿಂದ ದೈವತ್ವವನ್ನು ಕಾಣವುದನ್ನು ನಾವು ತಿಳಿಯಬೇಕಿದೆ. ಆದರೆ, ಇಂದಿನ ಯುವಕರಿಗೆ ತಿಳಿವಳಿಕೆ ಕೊರತೆಯಿಂದಾಗಿ ಪಾಶ್ಚಿಮಾತ್ಯಕ್ಕೆ ಮಾರು ಹೋಗುತ್ತಿರುವುದು ಕಳವಳಕಾರಿಯಾಗಿದೆ.

ಸ್ವದೇಶಿ ಚಿಂತನೆಯೊಂದಿಗೆ ನಮ್ಮ ಮಾತೃಭಾಷೆ ಮಹತ್ವ ತಿಳಿದುಕೊಳ್ಳಬೇಕು. ಮಕ್ಕಳಿಗೆ ಮಾತೃಭಾಷೆ ಹಾಗೂ ಇಲ್ಲಿನ ದೇಶಿ ಕ್ರೀಡೆಗಳ ಕುರಿತು ತಿಳಿಸಬೇಕಿದೆ.

ಕೆಲವೇ ಆಟಗಳ ಭರಾಟೆಯಲ್ಲಿ ಸುಮಾರು 3 ಸಾವಿರಕ್ಕೂ ಹೆಚ್ಚು ದೇಶಿ ಕ್ರೀಡೆಗಳು ಕಣ್ಮರೆಯಾಗುತ್ತಿವೆ ಎಂದು ಅಂಶವನ್ನು ಪ್ರಸ್ತಾಪಿಸಿ, ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕುಟುಂಬಗಳು ಬಲಗೊಳ್ಳಬೇಕು. ಅದಕ್ಕಾಗಿ ವಾರಕ್ಕೊಮ್ಮೆಯಾದರೂ ಮನೆಗಳಲಿ ಸತ್ಸಂಗದಂತಹ ಕಾರ್ಯಕ್ರಮಗಳು ನಡೆಯಲಿ ಎಂದು ಹೇಳಿದರು.



> ನಮ್ಮ ಮನೆ, ಸಮಾಜ ಹಾಗೂ ದೇಶದ ಹಿತ ಚಿಂತನೆಯಲ್ಲಿ ತೊಡಗಿಕೊಳ್ಳುವಂತಾಗಲು ಸಾತ್ವಿಕ ಮನಸ್ಸುಗಳೊಂದಿಗೆ ಇಂತಹ ಕಾರ್ಯಕ್ರಮಗಳು ಅಗತ್ಯವಿದೆ. ಇಲ್ಲರೂ ಒಗ್ಗಟ್ಟಿನೊಂದಿಗೆ ಸಶಕ್ತ ಸಮಾಜ ನಿರ್ಮಾಣಕ್ಕೆ ಒತ್ತು ನೀಡೋಣ.
> ■ ಶಿವಮೂರ್ತಿ ಶಿವಾಚಾರ್ಯ, ದೇವಪುರದ ಸಂಸ್ಥಾನ ಹಿರೇಮಠ

ಮುದನೂರುಕಂಠಿಮಠದಸಿದ್ಧಚನ್ನಮಲ್ಲಿಕಾರ್ಜುನ ಸ್ವಾಮೀಜಿ ಹಾಗೂ ಗುಳಬಾಳದ ಮರಿಹುಚ್ಚೇಶ್ವರ ಸ್ವಾಮೀಜಿ ಮಾತನಾಡಿ, ಇಂತಹ ಸಾಮಾಜಿಕ ಹಾಗೂ ದೇಶದ ಚಿಂತನೆಯ ಕಾರ್ಯಕ್ರಮಗಳು ಪಟ್ಟಣಗಳಿಗೆ ಮಾತ್ರ ಸಿಮೀತವಾಗದೇ ಗ್ರಾಮೀಣ ಭಾಗಗಳಲ್ಲಿ ನಡೆಯಬೇಕು. ಅಂದಾಗ ಮಾತ್ರ ಗ್ರಾಮಗಳಲ್ಲಿ ದೇಶಭಕ್ತಿ ಜಾಗೃತವಾಗಲು ಸಾಧ್ಯ ಎಂದರು.

ವಜ್ಜಲ ತಾಂಡಾದ ವಿಠ್ಠಲ ಮಹಾರಾಜ ಹಾಗೂ ಪಟ್ಟಣ ಪಂಚಾಯಿತಿ ಸದಸ್ಯ ಶರಣು ದಂಡಿನ್ ಇದ್ದರು.

ಕಾರ್ಯಕ್ರಮ ಆರಂಭಕ್ಕೂ ಮುನ್ನ ಭಾರತಮಾತೆಯ ಭಾವಚಿತ್ರದ ಮೆರವಣಿಗೆ ನಡೆಯಿತು.

ಬಸವರಾಜ ಮೇಲಿನಮನಿ ನಿರೂಪಿಸಿದರು. ಮಲ್ಲಿಕಾರ್ಜುನ ಗುತ್ತೇದಾರ ಸ್ವಾಗತಿಸಿದರು. ರಮೇಶ ಮೀರಜಕರ್ ವಂದಿಸಿದರು.

ಶ್ರೀಗುರು ಒಪ್ಪತ್ತೇಶ್ವರ ಮಹಾರಥೋತ್ಸವ

ವಿಜಯನಗರ: ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಸಮೀಪದ ಗರಗ ನಾಗಲಾಪುರ ಗ್ರಾಮದ ಐತಿಹಾಸಿಕ ಪವಾಡಪುರುಷ ಮಹಾಶಿವಯೋಗಿ ಶ್ರೀಗುರು ಒಪ್ಪತ್ತೇಶ್ವರ ಮಹಾಸ್ವಾಮಿ ರಥೋತ್ಸವ ಸಾವಿರಾರು ಭಕ್ತ ಸಮೂಹದ ಮಧ್ಯೆ ಅದ್ದೂರಿಯಾಗಿ ನೆರವೇರಿತು.

ಒಪ್ಪತ್ತೇಶ್ವರ ಸ್ವಾಮಿ ಮಠದಿಂದ ಆರಂಭಗೊಂಡ ಮಹಾ ರಥೋತ್ಸವಕ್ಕೆ ಹೊಸಪೇಟೆ ಕೊಟ್ಟೂರು ಸ್ವಾಮಿ ಮಠದ ಶ್ರೀಬಸವಲಿಂಗ ಸ್ವಾಮಿಗಳು,ಮತ್ತು ಒಪ್ಪತ್ತೇಶ್ವರಮಠದನೂತನಪೀಠಾಧಿಪತಿ ನಿರಂಜನ ಪ್ರಭು ಸ್ವಾಮೀಜಿ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಅಲ್ಲಿಂದ ಎದುರು ಬಸವಣ್ಣ ದೇವಸ್ಥಾನದ ವರೆಗೆ ಸಾಗಿತು. ಮಾರ್ಗದುದ್ದಕ್ಕೂ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ತೇರಿಗೆ ಹೂ, ಬಾಳೆಹಣ್ಣು, ಉತ್ತತ್ತಿ ತೂರಿ ಹರಹರ ಮಹದೇವ, ಶ್ರೀಗುರು ಒಪ್ಪತ್ತೇಶ್ವರ ಮಹಾರಾಜ್ ಕೀ ಜೈ ಎಂಬ ಜಯ ಘೋಷ ಮೊಳಗಿಸಿದರು.

ಇದಕ್ಕೂ ಮುನ್ನ ನಡೆದ ಶ್ರೀಗುರು ಒಪ್ಪತ್ತೇಶ್ವರ ಸ್ವಾಮಿಯ ಮುಕ್ತಿ ಬಾವುಟ ಲೀಲಾವ್‌ನಲ್ಲಿ ವೀರನಗೌಡರ ಮಗ ವೆಂಕಟೇಶ್ ಎಂಬುವವರು 1,25,100 ರೂ. ಗೆ ಪಡೆದರು.

ಸೋಮಸಮುದ್ರದ ಸಿದ್ದಲಿಂಗ ಮಹಾಸ್ವಾಮಿಗಳು,ಬೂದಗುಂಪದ ಸಿದ್ದೇಶ್ವರ ಮಹಸ್ವಾಮಿಗಳು,ದರೂರಿನ ಕೊಟ್ಟೂರು ಮಹಾಸ್ವಾಮಿಗಳು, ಶ್ರೀಧರಗಡ್ಡೆಯ ಮರಿ ಕೊಟ್ಟೂರು ದೇಶಿಕರು ಮತ್ತು ರಥೋತ್ಸವದಲ್ಲಿ ಮರಿಯಮ್ಮನಹಳ್ಳಿ, ಹೊಸಪೇಟೆ, ಬಳ್ಳಾರಿ, ಕೊಪ್ಪಳ, ಕೂಡ್ಲಿಗಿ, ಗರಗ,



ಬ್ಯಾಲಕುಂದಿ, ಗೊಲ್ಲರಹಳ್ಳಿ, ಗುಂಡಾ, ಡಣಾಯಕನಕೆರೆ, ಚಿಲಕನಹಟ್ಟಿ, ತಿಮ್ಮಲಾಪುರ, ನಾಗಲಾಪುರ ತಾಂಡ ಸೇರಿದಂತೆ ಇತರೆ ಗ್ರಾಮಗಳ ಸಾವಿರಾರು ಭಕ್ತರು ರಥೋತ್ಸವನ್ನು ಕಣ್ತುಂಬಿಕೊಂಡು, ಧನ್ಯತೆ ಮೆರೆದರು.

ದಿನವಿಡಿ ವಿಶೇಷ ಪೂಜೆ: ಶ್ರೀಗುರು ಒಪ್ಪತ್ತೇಶ್ವರ ಮಹಾಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಒಪ್ಪತ್ತೇಶ್ವರ ಸ್ವಾಮಿ ಮಠದಲ್ಲಿ ಗುರುವಾರ ಬೆಳಗ್ಗೆಯಿಂದಲೇ ಪೂಜಾ ಕೈಂಕರ್ಯಗಳು ಜೋರಾಗಿದ್ದವು. ಬೆಳಗ್ಗೆ ಮಹಾರುದ್ರಾಭಿಷೇಕ, ಷಟ್‌ಸ್ಥಳ ಧ್ವಜಾರೋಹಣ, ತರಹೇವಾರಿ ಪುಷ್ಪಗಳಿಂದ ವಿಶೇಷ ಅಲಂಕಾರ, ಪೂಜೆಗಳುನೆರವೇರಿದವು. ಬೆಳಗ್ಗೆಯಿಂದ ಸಾವಿರಾರು ಭಕ್ತರು ಕುಟುಂಬ ಸಮೇತರಾಗಿ ಮಠಕ್ಕೆ ಆಗಮಿಸಿ ದೇವರ ದರ್ಶನ ಪಡೆದು, ಹಣ್ಣು-ಕಾಯಿ ಅರ್ಪಿಸಿ ಧನ್ಯತೆ ಮೆರೆದರು.

ಕಾಂಗ್ರೆಸ್ ಕಚೇರಿಗಳಂತಾದ ಪುರಸಭೆ, ತಾಪಂ

ಕುರುಗೋಡು: ಪುರಸಭೆ, ತಾಪಂ ಕಾಂಗ್ರೆಸ್ ಕಚೇರಿಯಾಗಿವೆ. ಶಾಸಕ ಗಣೇಶ್ ಅವರ ಕಪಿಮುಷ್ಠಿಯಲ್ಲಿ ಕೆಲಸ ಮಾಡುತ್ತಿವೆ. ಹೊರತು ಜನರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ ಎಂದು ಬಿಜೆಪಿ ಮಂಡಲ ಅಧ್ಯಕ್ಷ ಮದಿರೆ ಕುಮಾರಸ್ವಾಮಿ ಆರೋಪಿಸಿದರು.

> ಬಿಜೆಪಿ ಮಂಡಲ ಅಧ್ಯಕ್ಷ ಮದಿರೆ ಕುಮಾರಸ್ವಾಮಿ ಆರೋಪ

ಪಟ್ಟಣದ ಕಂಪ್ಲಿ ರಸ್ತೆಯಲ್ಲಿರುವ ಬಿಜೆಪಿ ಕಚೇರಿಯಲ್ಲಿ ತಾಲೂಕು ಮಂಡಲದಿಂದ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದರು.

ಪ್ರಚಾರಪ್ರಿಯ ಶಾಸಕ ಗಣೇಶ್ ತರಾತುರಿಯಲ್ಲಿ ಇಂದಿರಾ ಕ್ಯಾಂಟೀನ್, ಸಮುದಾಯ ಆರೋಗ್ಯ ಕೇಂದ್ರದಲ್ಲಿ ಡಯಾಲಿಸಿಸ್ ಘಟಕ ಉದ್ಘಾಟಿಸಿದ್ದಾರೆ. ಹೊರತು ಅಲ್ಲಿ ಸೂಕ್ತ ವ್ಯವಸ್ಥೆ ಇಲ್ಲ. ಜನರು ರಕ್ತ ಶುದ್ದೀಕರಣಕ್ಕಾಗಿ ದೂರದ ಬಳ್ಳಾರಿಗೆ ಹೋಗಿ ಚಿಕಿತ್ಸೆ ಪಡೆಯಬೇಕಿದೆ. ನೂರು ಹಾಸಿಗೆ ಆಸ್ಪತ್ರೆ, ಮಿನಿ ವಿಧಾನಸೌಧ, ತಾಪಂ ಕಚೇರಿ ಕಟ್ಟಡ ಗಣೇಶ್ ಶಾಸಕರಾಗಿ ಏಳು ವರ್ಷ ಕಳೆದರೂ ಉದ್ಘಾಟನೆ ಮಾಡಿಲ್ಲ. ಆದರೆ ಮಾಜಿ ಶಾಸಕ ಸುರೇಶ್ ಬಾಬು ಅವಧಿಯಲ್ಲಿ ಪುರಸಭೆ, ತಾಲೂಕು ಕೇಂದ್ರ, ಸಮುದಾಯ ಆರೋಗ್ಯ ಕಂದ್ರವನ್ನು ಮೇಲ್ದರ್ಜೆಗೆ ಏರಿಸಿದ್ದರು.

ಗಣೇಶ್ ಕೇವಲ ಸುಸಜ್ಜಿತ ರಾಜ್ಯ ಹೆದ್ದಾರಿಗೆ ಡಾಂಬರ್ ಮೇಲೆ ಡಾಂಬರ್ ಹಾಕಿದ್ದೆ ಸಾಧನೆ ಆಗಿದೆ. ಗ್ರಾಮೀಣ ಭಾಗದ ರಸ್ತೆ ಹಾಳಾಗಿದ್ದರೂ ಅವುಗಳ ಅಭಿವೃದ್ಧಿಗೆ ಆಸಕ್ತಿ ಇಲ್ಲ. ರಾಷ್ಟ್ರೀಯ ಜಲಜೀವನ್ ಮಿಷನ್ ಯೋಜನೆ ತಾಲೂಕಿನಲ್ಲಿ ಹಳ್ಳಹಿಡಿದಿದ್ದು ಬೇಸಿಗೆಯಲ್ಲಿ ಕುಡಿವ ನೀರಿನ ಅಭಾವ ಉಂಟಾಗಲಿದೆ ಎಂದು ದೂರಿದರು.

ತಾಪಂ ವಿವಿಧ ಯೋಜನೆಯಿಂದ ಕೈಗೊಂಡಿರುವ ಕಾಮಗಾರಿಯಲ್ಲೂ ಅಕ್ರಮ ನಡೆದಿದೆ. ಈ ಬಗ್ಗೆ ಆರ್ ಟಿ ಐ ಮೂಲಕ ಮಾಹಿತಿ ಕೇಳಿದರೂ ಮಾಹಿತಿ ಅಧಿಕಾರಿ ದಾಖಲೆ ನೀಡುತ್ತಿಲ್ಲ ಎಂದು ಕಿಡಿಕಾರಿದರು.

ಎಸ್ಸಿ ಮೋರ್ಚಾ ಅಧ್ಯಕ್ಷ ಹನುಮಂತಪ್ಪ ಮಾತನಾಡಿ, ವಿವಿಧ ಅಭಿವೃದ್ಧಿ ನಿಗಮದಲ್ಲಿ ಹಣ ಇಲ್ಲದ ಪರಿಣಾಮ ಗಂಗಾ ಕಲ್ಯಾಣ ಸೇರಿ ಇತರ ಯೋಜನೆ ಜನರಿಗೆ ದೊರೆಯುತ್ತಿಲ್ಲ. ಆದರಲ್ಲೂ ವಾಕ್ಮೀಕಿ ಹಗರಣದಿಂದ ಆ ಸಮುದಾಯಕ್ಕೆ ಯಾವುದೇ ಯೋಜನೆ ತಲುಪುತ್ತಿಲ್ಲ ಎಂದು ಆಪಾದಿಸಿದರು.

ಸೋಮಶೇಖರ್ ಗೌಡ, ವಿರೇಶ್ ವಡ್ಡರ್, ವೀರಭದ್ರಗೌಡ, ತಿಪ್ಪೆರುದ್ರ, ಶರತ್ ಗೌಡ, ಗುರು ವಡ್ಡರ್ ಇತರರಿದ್ದರು.



ಕಬ್ಬಿನ ಬಾಕಿ ಹಣ ನೀಡುವಂತೆ ರೈತ ಸಂಘದಿಂದ ಮನವಿ

ವಿಜಯನಗರ: ಮೈಲಾರ ಶುಗರ್ಸ್ ಸಕ್ಕರೆ ಕಾರ್ಖಾನೆ ಬಾಕಿ ಉಳಿಸಿಕೊಂಡಿರುವ ರೈತರಿಗೆ ಕಬ್ಬಿನ ಬಾಕಿ ಹಣವನ್ನು ತಕ್ಷಣ ಕೊಡಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಕೋಡಿಹಳ್ಳಿ ಬಣ) ಒತ್ತಾಯಿಸಿದೆ.

ರೈತ ಸಂಘದ ಪ್ರಮುಖರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ, ಮುಂಡರಗಿ, ಸಿರಗುಪ್ಪ ಇನ್ನುಳಿದ ಸಕ್ಕರೆ ಕಾರ್ಖಾನೆಗಳು ಈಗಾಗಲೇ ರೈತರಿಗೆ ಸಂಪೂರ್ಣ ಹಣ ಪಾವತಿಸಿದ್ದಾರೆ. ಆದರೆ, ಹೊಸಪೇಟೆ ಹಾಗೂ ಸುತ್ತಮುತ್ತ ಗ್ರಾಮಗಳ ರೈತರು ಮೈಲಾರ್ ಶುಗರ್ಸ್ ಬೀರಬ್ಬಿ, ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ್ದು, ಕಳೆದ ನವೆಂಬರ್ ನಿಂದ ಈವರೆಗೂ ಸಕ್ಕರೆ ಕಾರ್ಖಾನೆ ಮಾಲೀಕರು ಕಬ್ಬು ಬೆಳೆಗಾರರಿಗೆ ಕಬ್ಬಿನ ಹಣ ನೀಡಿಲ್ಲ.

ಈ ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ಹಾಗೂ ಸಕ್ಕರೆ ಕಾರ್ಖಾನೆಯ ಅಧಿಕಾರಿಗಳಿಗೆ ವಿಚಾರಿಸಿದರೆ, ರೈತರಿಗೆ ಪೇಮೆಂಟ್ ಮಾಡುತ್ತೇವೆ. ಸರ್ಕಾರದಿಂದ ಇಥೆನಲ್ ಪೇಮೆಂಟ್ ಆಗಿಲ್ಲ ಎಂದು ಉಡಾಫೆಯಿಂದ ಉತ್ತರಿಸುತ್ತಾರೆ. ಮತ್ತೊಂದೆಡೆ ಸಾಲ ಸೋಲ ಮಾಡಿ ಕೃಷಿ ಮಾಡುವ ಸಣ್ಣ



ಹಾಗೂ ಅತೀ ಸಣ್ಣ ಕಬ್ಬು ಬೆಳೆಗಾರರಿಗೆ ತೊಂದರೆಯಾಗುತ್ತಿದೆ ಎಂದು ದೂರಿದರು.

ಕೃಷಿ ಇಲಾಖೆಯಿಂದ ಸೆಣಬಿಗೆ ನೀಡಲಾಗುವ ಸಬ್ಸಿಡಿ ಹಣವೂ ಬಿಡುಗಡೆಯಾಗಿಲ್ಲ. ಈ ಕೂಡಲೇ ಮೈಲಾರ ಶುಗರ್ಸ್ ಬಾಕಿ ಉಳಿಸಿಕೊಂಡಿರುವ ನಾಲ್ಕು ತಿಂಗಳ ಕಬ್ಬಿನ ಹಣ ಹಾಗೂ ಸೆಣಬಿನ ಸಬ್ಸಿಡಿ ಹಣವನ್ನೂ ತಕ್ಷಣ ಬಿಡುಗಡೆ ಮಾಡಬೇಕು. ಇಲ್ಲವೇ, ಮೈಲಾರ ಶುಗರ್ಸ್ ಪರವಾನಗಿಯನ್ನು ರದ್ದುಗೊಳಿಸಬೇಕು ಎಂದು ರೈತ ಮುಖಂಡರು ಒತ್ತಾಯಿಸಿದರು.

ರೈತರ ಪಂಪ್‌ಸೆಟ್‌ಗಳಿಗೆ ಹಗಲು ವೇಳೆ ವಿದ್ಯುತ್ ನೀಡಿ

ಹಗರಿಬೊಮ್ಮನಹಳ್ಳಿ: ತಾಲೂಕಿನ ಹಂಪಾಪಟ್ಟಣ, ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆ ವಿದ್ಯುತ್ ಪೂರೈಕೆಗೆ ಒತ್ತಾಯಿಸಿ ಜೆಸ್ಕಾಂ ಇಲಾಖೆಯ ಅಧಿಕಾರಿ ನಾಗರಾಜ ಅವರಿಗೆ ಮನವಿ ಸಲ್ಲಿಸಿದರು.

ಮೂರು ಪಾಳೆಯದಲ್ಲಿ ವಿದ್ಯುತ್ ಪೂರೈಕೆಯಿಂದ ರೈತರ ಕೃಷಿ ಚಟುವಟಿಕೆಗಳಿಗೆ ತೀವ್ರತರನಾದ ಸಮಸ್ಯೆಯಾಗುತ್ತಿದ್ದು, ರಾತ್ರಿವೇಳೆ ಹೊಲದಲ್ಲಿ ರೈತರು ನೀರು ಹಾಯಿಸಲು ಹೋಗುವ ರೈತರಿಗೆ ಕಾಡು ಪ್ರಾಣಿಗಳ ಆತಂಕ ಕಾಡುತ್ತಿದೆ ಬಿಸಿಲಿನ ತಾಪ ಹೆಚ್ಚಿರುವುದರಿಂದ ಬೆಳೆಗಳ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಹಂತ ಹಂತವಾಗಿ ವಿದ್ಯುತ್ ಪೂರೈಕೆ ಬದಲಾಗಿ ನಿರಂತರವಾಗಿ ಹಗಲು ಹೊತ್ತಿನಲ್ಲಿಯೇ ವಿದ್ಯುತ್ ನೀಡಲು ಮನವಿ ಸಲ್ಲಿಸಿದ ರೈತರು ಅಧಿಕಾರಿಗಳು ತಕ್ಷಣ ಸ್ಪಂದಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಆಗ್ರಹಿಸಿದರು.

ಮುಖಂಡರಾದ ಬುಡ್ಡಿ ಬಸವರಾಜ ಜಿಲ್ಲಾ ರೈತ ಮುಖಂಡರಾದ ಬಂಟರು ಕುಬೇರಪ್ಪ ಶೀಗೆನಹಳ್ಳಿ ಬಸವರಾಜ ದಾದಾಪೀರ್ ಕರ್ನಾಟಕ ರಕ್ಷಣಾ ವೇದಿಕೆ,



ಗೂಳಿ ಕೊಟ್ರೇಶ್, ಕಟ್ಟಡ ಕಾರ್ಮಿಕ ಸಂಘದ ಖಾಜಾಸಾಬ್, ವಿಎಸ್‌ಎಸ್‌ಎನ್ ಹಂಪಾಪಟ್ಟಣ ಅಧ್ಯಕ್ಷ ಗಾಳಮ್ಮನವರ ಹುಲುಗಪ್ಪ, ಯುವ ಮುಖಂಡರಾದ ಬಂಟರ ಸೋಮಣ್ಣ, ಕೇಶವಮೂರ್ತಿ ಟಿ.ನಾಗೇಶ್, ಹಾಲು ಉತ್ಪಾದಕ ಸಂಘದ ಅಧ್ಯಕ್ಷ ಕರಿಬಸಪ್ಪ, ತಿಪ್ಪೆ ಗುಂಡಿ ಗೋಣಿ ಸ್ವಾಮಿ ಇತರರು ಇದ್ದರು.

ಕಾಲೇಜು ಮಂಜೂರಾತಿಗಾಗಿ ಸಿಎಂಗೆ ಪತ್ರ ಚಳವಳಿ

ಹಗರಿಬೊಮ್ಮನಹಳ್ಳಿ: ತಾಲೂಕಿನ ಕಂದಾಯ ಹೋಬಳಿ ಕೇಂದ್ರವಾದ ತಂಬ್ರಹಳ್ಳಿ ಗ್ರಾಮಕ್ಕೆ ಸರ್ಕಾರಿ ಪ್ರಥಮ ದರ್ಜೆ ಡಿಗ್ರಿ ಕಾಲೇಜು ಮಂಜೂರಾತಿಗಾಗಿ ವಿದ್ಯಾರ್ಥಿಗಳು 5ನೇ ಬಾರಿ ಪತ್ರ ಚಳುವಳಿ ಮಾಡಿ ಸರ್ಕಾರದ ಗಮನ ಸೆಳೆಯಲು ಮುಖ್ಯಮಂತ್ರಿಗಳಿಗೆ ಬುಧವಾರ 1 ಸಾವಿರ ಪತ್ರ ಬರೆದು ತಂಬ್ರಹಳ್ಳಿ ಅಂಚೆ ಕಚೇರಿಯ ಬಾಕ್ಸ್‌ಗಳಿಗೆ ಹಾಕಿದರು.

ಈ ಕುರಿತು ಜಿಪಂ ಮಾಜಿ ಸದಸ್ಯ ಅಕ್ಕಿ ತೋಟೇಶ್ ಮಾತನಾಡಿ, ತಂಬ್ರಹಳ್ಳಿ ಕಳೆದ 20 ವರ್ಷಗಳಿಂದ ಪದವಿ ಪೂರ್ವ ಕಾಲೇಜು ಹೊಂದಿರುವ ಶಿಕ್ಷಣ ಕೇಂದ್ರವಾಗಿದೆ ಗ್ರಾಮದಲ್ಲಿ ನಾಡ ಕಚೇರಿ, ರಾಷ್ಟ್ರೀಕೃತ ಮೂರು ಬ್ಯಾಂಕುಗಳು, ಎಪಿಎಂಸಿ ಮಾರುಕಟ್ಟೆ, ಪೊಲೀಸ್ ಠಾಣೆ ಹಾಗೂ ರೈತ ಸಂಪರ್ಕ ಕೇಂದ್ರಗಳಿದ್ದು, ಸುಮಾರು 30 ಹಳ್ಳಿಗಳಿಗೆ ಕೇಂದ್ರಬಿಂದುವಾಗಿದೆ.

ತಂಬ್ರಹಳ್ಳಿ ಸುತ್ತಮುತ್ತ 10 ಕಿಮೀ. ವ್ಯಾಪ್ತಿಯ ಬಾಚಿಗೊಂಡನಹಳ್ಳಿ, ಹಂಪಸಾಗರ ಮತ್ತು ಮೋರಿಗೇರಿ ಗ್ರಾಮಗಳಲ್ಲಿ ಪದವಿ ಪೂರ್ವ ಕಾಲೇಜುಗಳು ಹಾಗೂ ಮೂರು ಐಟಿಐ ತರಬೇತಿ ಕಾಲೇಜುಗಳಿದ್ದು, ಒಟ್ಟಾರೆ 400-500 ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುತ್ತಿದ್ದಾರೆ. ಜೊತೆಗೆ 150 ವಿದ್ಯಾರ್ಥಿನಿಯರ ಮೆಟ್ರಿಕ್ ನಂತರದ ಬಿಸಿಎಂ ವಸತಿ ನಿಲಯವೂ ಇದೆ. ಆದರೆ ಪದವಿ ಕಾಲೇಜು ಇಲ್ಲದ ಕಾರಣ ಅನೇಕ ಬಡ ವಿದ್ಯಾರ್ಥಿಗಳು, ವಿಶೇಷವಾಗಿ ಬಾಲಕಿಯರು, ಪದವಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ವಿಷಾದಿಸಿದರು.

ಪಂಚಮಸಾಲಿ ಸಮಾಜದ ಮುಖಂಡ ಅಕ್ಕಿ ಶಿವಕುಮಾರ್, ಸಹಕಾರ ಸಂಘದ ಅಧ್ಯಕ್ಷ ಕೆ.ಮಾಬುಸಾಬ್, ಗೌರಜ್ಜನವರ ಬಸವರಾಜಪ್ಪ, ನಿವೃತ್ತ ಇಒ ಟಿ. ವೆಂಕೋಬಪ್ಪ, ಹ್ಯಾಟಿ ಆನಂದರೆಡ್ಡಿ, ಮರಿಯಮ್ಮನಹಳ್ಳಿ ಶಂಕರ್, ಪಟ್ಟಣಶೆಟ್ಟಿ ಸುರೇಶ್, ಕೆಎಚ್ ಎಂ.ಕೊಟ್ರಯ್ಯ, ಎಚ.ಬಿ.ಬಸವನಗೌಡ, ಕಡ್ಡಿ ಚನ್ನಬಸಪ್ಪ, ಗ್ಯಾರಂಟಿ ಯೋಜನೆ ಸದಸ್ಯ ಜಿ.ಗಿರೀಶ್, ರೆಡ್ಡಿ ಬಸವಲಿಂಗನಗೌಡ, ಮೈನಳ್ಳಿ ಸುರೇಶ್, ರಮೇಶ ಪೂಜಾರ್, ಎಬಿಟಿ ಕಾಲೇಜು ವಿದ್ಯಾರ್ಥಿಗಳು, ಉಪನ್ಯಾಸಕರು, ಸಿಬ್ಬಂದಿ ಪಾಲ್ಗೊಂಡಿದ್ದರು.



ಆಲ್ಬಮ್ ಸಾಂಗ್ ಬಿಡುಗಡೆ

ಬಳ್ಳಾರಿ: ಚಲನಚಿತ್ರ ಹಾಗೂ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಹಣದ ಕೊರತೆಯಿಂದ ಅನೇಕ ಪ್ರತಿಭಾವಂತ ಯುವಕರು, ಕಲಾವಿದರು ಜಿಲ್ಲೆಯಲ್ಲಿ ಮುಂದೆ ಬರುತ್ತಿಲ್ಲ. ಆದರೆ, ಉತ್ತಮ ಕಥೆಗಳನ್ನು ಸಿದ್ಧಪಡಿಸಿಕೊಂಡು ಬಂದಲ್ಲಿ ಅಂತಹ ಚಿತ್ರಗಳ ನಿರ್ಮಾಣಕ್ಕೆ ನಾನಾಗಲಿ ಅಥವಾ ಇತರ ನಿರ್ಮಾಪಕರ ಸಹಕಾರದ ಮೂಲಕ ಹಣಕಾಸಿನ ನೆರವು ಒದಗಿಸಲಾಗುವುದು ಎಂದು ಇಲ್ಲಿನ ಜಿ.ಕೆ.ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಜಿ.ಕೆ.ಸ್ವಾಮಿ ಅವರು ಭರವಸೆ ನೀಡಿದರು.

ನಗರದ ಇನ್‌ಫೆಂಟ್ರೀ ರಸ್ತೆಯ ಫಂಕ್ಷನ್ ಹಾಲ್‌ನಲ್ಲಿ ಶ್ರೀಗಾಡ್ಸ್ ಕ್ರಿಯೇಷನ್ಸ್ ವತಿಯಿಂದ ನಿರ್ಮಿಸಿದ ಬಳ್ಳಾರಿ ಶ್ರೀದುರ್ಗಮ್ಮ ದೇವಿ ಆಲ್ಬಮ್ ಸಾಂಗ್‌ಅನ್ನ ಬುಧವಾರ ಬಿಡುಗಡೆಗೊಳಿಸಿ ಮಾತನಾಡಿದರು. ಈ ಆಲ್ಬಮ್ ಸಾಂಗ್ ಗೆ ಅಲಿ ಯಾಸಿನ್ ಹಾಗೂ ಅಜಿತ್ ಕುಮಾರ್ ಅವರು ನಿರ್ದೇಶನ ನೀಡಿದ್ದು, ಆನಂದ್ ರೆಡ್ಡಿ ಹಾಗೂ ರಘು ಅವರು ಛಾಯಾಗ್ರಹಣ ಮಾಡಿದ್ದಾರೆ. ಕಾವೇರಿ ರಮೇಶ್ ಪಾಟೀಲ್ ಅವರ ಗೀತೆ ರಚನೆಗೆ ಬಿಜೆಎನ್ ಎಸ್‌ಬಬ್ಲೂ ಹಾಗೂ ನವೀನ್ ನೃತ್ಯ ನಿರ್ದೇಶನ ಮಾಡಿದ್ದಾರೆ. ಕಲಾವಿದರಾದ ರಾಣಿ ಹಾಗು ಪ್ರಶಿತಾ ಅಭಿನಯಿಸಿದ್ದಾರೆ. ನೇಗಿಲ ಒಡೆಯ ಚಿತ್ರದ ನಿರ್ದೇಶಕ ಎನ್.ಕೃಷ್ಣ ಮೋಹನ್ ಶೆಟ್ಟಿ, ಜಯಣ್ಣ, ಹೇಮಂತ್ ರಾಜ್ ಸೇರಿದಂತೆ ತಂಡದ ಎಲ್ಲ ಸದಸ್ಯರು, ವಿವಿಧ ಗಣ್ಯರು ಉಪಸ್ಥಿತರಿದ್ದರು.



ಸಕ್ಕರೆ ಕಾರ್ಖಾನೆ ಪುನರಾರಂಭಕ್ಕೆ ಆಗ್ರಹ

ಬೀದರ: ಸಂಯುಕ್ತ ಕಿಸಾನ್ ಮೋರ್ಚಾ ಬೀದರ ವತಿಯಿಂದ ರಾಜ್ಯ ಸರ್ಕಾರಕ್ಕೆ ಬಹಿರಂಗ ಪತ್ರ ಬಿಡುಗಡೆ ಮಾಡಿ, ಬೀದರ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಸರ್ಕಾರ ವಹಿಸಿಕೊಂಡು ಪುನರಾರಂಭಿಸುವಂತೆ ಹಾಗೂ ರೈತರ ಎಲ್ಲಾ ಸಾಲಗಳನ್ನು ಸಂಪೂರ್ಣ ಮನ್ನಾ ಮಾಡುವಂತೆ ಒತ್ತಾಯಿಸಲಾಗಿದೆ.

ಬೀದರ ಸಹಕಾರ ಸಕ್ಕರೆ ಕಾರ್ಖಾನೆ ಜಿಲ್ಲೆಯ ರೈತರ ಜೀವನಾಡಿಯಾಗಿದ್ದು, ಸುಮಾರು 25 ಸಾವಿರಕ್ಕೂ ಹೆಚ್ಚು ರೈತರು ಷೇರು ಪಡೆದಿದ್ದಾರೆ ಎಂದು ತಿಳಿಸಲಾಗಿದೆ. ಕಾರ್ಖಾನೆ ಮುಚ್ಚಿರುವುದರಿಂದ ರೈತರು, ಕಾರ್ಮಿಕರು ಹಾಗೂ ಅವರ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದು, ಸುಮಾರು ಸಾವಿರ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಕಾರ್ಮಿಕರಿಗೆ



ಸುಮಾರು ರೂ.32.99 ಕೋಟಿ ಸಂಬಳ ಬಾಕಿ ಹಾಗೂ ರೂ.2 ಕೋಟಿ ಉಪದಾನ ಹಣ ಪಾವತಿಸಬೇಕಿದೆ ಎಂದು ಹೇಳಲಾಗಿದೆ.

ಈ ಹಿನ್ನೆಲೆಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ರಾಜ್ಯ ಸರ್ಕಾರಕ್ಕೆ ಎರಡು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿದೆ: ಬೀದರ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಸರ್ಕಾರ ವಹಿಸಿಕೊಂಡು 2026-27 ಹಂಗಾಮಿನಲ್ಲಿ (ಅಕ್ಟೋಬರ್ 2026) ಪ್ರಾರಂಭಿಸಲು ಬಜೆಟ್‌ನಲ್ಲಿ ಹಣ ಕಾಯ್ದಿರಿಸುವುದು. ಕರ್ನಾಟಕದ ಎಲ್ಲಾ ರೈತರ ಎಲ್ಲಾ ತರಹದ ಸಾಲಗಳನ್ನು ಸಂಪೂರ್ಣ ಮನ್ನಾ ಮಾಡುವುದು.

ಶಿವರಾಯ ಮುದಾಳೆ, ಮಲ್ಲಿಕಾರ್ಜುನ ಸ್ವಾಮಿ, ಮಾರುತಿ ಬೌದ್ಧೆ, ಬಾಬುರಾವ ಹೊನ್ನಾ, ನಾಗಶೆಟ್ಟಿ ಲಂಜವಾಡ, ಬಸವರಾಜ ಅಷ್ಟೂರೆ, ವಿಠಲರೆಡ್ಡಿ, ಅರುಣ ಪಾಟೀಲ್, ಶಾಂತಮ್ಮ ಮೂಲಗೆ, ವೀರಶೆಟ್ಟಿ ವಟಂಬೆ, ಮಹೇಶ ನಾಡಗೌಡ, ನಜೀರ ಅಹ್ಮದ, ಎಂ.ಡಿ.ಖಮರ ಪಟೇಲ್, ನನ್ನೆಸಾಬ್ ಎಂ.ಡಿ.ಶಫಾಯತ್ ಅಲಿ, ಜಯಶೀಲ ಕುಮಾರ, ಸೂರ್ಯಕಾಂತ, ಕೋಂಡಿಬಾ ಪಾಂಡ್ರೆ ಇದ್ದರು.